ಮಂಗಳೂರು
ಸೋಮವಾರ, 11 ಮೇ 2026
ಸಂಪುಟ 48, ಸಂಚಿಕೆ 53, ಪುಟಗಳು 12+6
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ
₹5
REG.No.MNG /121/2024-26 Posted at kodialbail P.O / RNI:29813/78/ Daily
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ
ಹೊಸ ದಿಗಂತ
ಲೋಕಹಿತಂ ಮಮ ಕರಣೀಯಂ



ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಕೃಷ್ಣ ಪಕ್ಷ, ತಿಥಿ: ನವಮಿ, ನಕ್ಷತ್ರ: ಶತಭಿಷೆ

ದಿನದ ಮಾತು

ಶೂರನು ಮಿತ ಭಾಷಿಯಾಗಿರಬೇಕು. ಶಕ್ತಿವಂತನು ಕ್ಷಮಾಶೀಲನಾಗಿರಬೇಕು .

▲ಭರ್ತೃಹರಿ

ಕಾಳಿ ಮಾತೆ ಕೊನೆಗೂ ಕಣ್ಣು ತೆರೆದಳು

ನೇರ ನೋಟ

• ದು.ಗು. ಲಕ್ಷ್ಮಣ

• ಪುಟ ೬

ಕೈ ಆಡಳಿತದಲ್ಲಿ ಖಜಾನೆ ಲೂಟಿ | ಮುಗಿಯದ ಕುರ್ಚಿ ಕಿತ್ತಾಟ | ಬೆಂಗಳೂರಲ್ಲಿ ಪ್ರಧಾನಿಗೆ ಸನ್ಮಾನ

ಕಾಂಗ್ರೆಸ್‌ಗಿಲ್ಲ ನೈತಿಕತೆ: ಮೋದಿ

• **ಬೆಂಗಳೂರು:** ತಮಿಳುನಾಡಿನಲ್ಲಿ ಸರ್ಕಾರ ರಚಿಸಲು ಬಿಜೆಪಿ ಬಿಡುತ್ತಿಲ್ಲ ಎಂದು ಟೀಕಿಸುವ ಕಾಂಗ್ರೆಸ್‌ಗೆ ಕೇರಳದಲ್ಲಿ ಬಹುಮತ ಇದ್ದರೂ ಸರ್ಕಾರ ರಚನೆ ಮಾಡಲು ಸಾಧ್ಯವಾಗುತ್ತಿಲ್ಲ ಎಂದು ಪ್ರಧಾನಿ ನರೇಂದ್ರ ಮೋದಿ ಕಾಂಗ್ರೆಸ್ ವಿರುದ್ಧ ನೇರ ವಾಗ್ದಾಳಿ ನಡೆಸಿದರು.

ಪಶ್ಚಿಮ ಬಂಗಾಳ, ಅಸ್ಸಾಂ ಮತ್ತು ಪುದುಚೇರಿ ರಾಜ್ಯಗಳಲ್ಲಿ ಜಯಭೇರಿ ಬಾರಿಸಿದ ಬಳಿಕ ಮೊದಲ ಬಾರಿಗೆ ಕರ್ನಾಟಕಕ್ಕೆ ಆಗಮಿಸಿದ ಪ್ರಧಾನಿ ಮೋದಿ ಅವರಿಗೆ ಭಾನುವಾರ ಎಚ್‌ಎಎಲ್ ವಿಮಾನ ನಿಲ್ದಾಣದ ಬಳಿ ರಾಜ್ಯ ಬಿಜೆಪಿ ಸಲ್ಲಿಸಿದ ಅಭಿನಂದನೆ ಸ್ವೀಕರಿಸಿ ಮಾತನಾಡಿದರು. ರಾಜ್ಯದಲ್ಲಿಯೂ ಸಿಎಂ ಕುರ್ಚಿಗಾಗಿ ಕಿತ್ತಾಟ ಆರಂಭವಾಗಿದೆ. ಕೇರಳದಲ್ಲಿಯೂ ಕುರ್ಚಿಗಾಗಿ ಕಿತ್ತಾಟ ನಡೆಯುತ್ತಿದೆ. ಹೀಗಾಗಿ, ಕಾಂಗ್ರೆಸ್‌ಗೆ ಬಿಜೆಪಿ ಬಗ್ಗೆ ಮಾತನಾಡಲು ಯಾವುದೇ ನೈತಿಕತೆ ಇಲ್ಲ ಎಂದು ಹರಿಹಾಯ್ದರು. ➡ಪುಟ ೪





ಮೇ 10 ಸರ್ವಶ್ರೇಷ್ಠ ದಿನ

1857ರಲ್ಲಿ ಇದೇ ದಿನ ಸ್ವಾತಂತ್ರ್ಯ ಸಂಗ್ರಾಮದ ಮೊದಲ ಸಮರ ನಡೆದಿತ್ತು. ಬಳಿಕ ಶೌರ್ಯ ಮತ್ತು ಸಾಮರ್ಥ್ಯದಿಂದ ದೇಶದ ಗುಲಾಮಿತನವನ್ನು ದೂರ ಮಾಡಲಾಯಿತು. ಆಪರೇಷನ್ ಸಿಂದೂರದ ವರ್ಷವನ್ನು ನೆನಪಿಸಿಕೊಳ್ಳಲಾಗಿದೆ. ಗುಜರಾತ್‌ನ ಸೋಮನಾಥ ಮಂದಿರದ ಪುನರ್ ನಿರ್ಮಾಣದ ಉತ್ಸವ ನಡೆಯಲಿದೆ. ಸೋಮವಾರ (ಮೇ 11)ಅಲ್ಲಿಗೆ ತೆರಳುವುದಾಗಿ ಹೇಳಿದರು. ಎಲ್ಲರ ಜತೆ ಎಲ್ಲರ ವಿಕಾಸವೇ ನಮ್ಮ ಮಂತ್ರ ಎಂದ ಅವರು, ಇದೇ ಕಾರಣಕ್ಕೆ ನಮಗೆ 3ನೇ ಬಾರಿ ದೇಶದಲ್ಲಿ ಆಡಳಿತದ ಅವಕಾಶ ಸಿಕ್ಕಿದೆ. ಕಾಂಗ್ರೆಸ್ ಹಾಗಲ್ಲ ಎಂದ ಅವರು, ಕಾಂಗ್ರೆಸ್ ಆಡಳಿತಕ್ಕೆ ಬಂದ ಕೆಲವೇ ಸಮಯದಲ್ಲಿ ವಿಶ್ವಾಸದ್ರೋಹದಿಂದ ಆಡಳಿತ ವಿರೋಧಿ ಅಲೆ ಆರಂಭವಾಗುತ್ತದೆ ಎಂದರು.

> ದೇಶದ ಜನರು ಸ್ಥಿರತೆಯ ಮಂತ್ರ ಜಪಿಸುತ್ತಿದ್ದಾರೆ. ಹಗರಣಗಳು ಬೇಡ; ಸಮಸ್ಯೆಗಳಿಗೆ ಪರಿಹಾರ ಬೇಕು. ರಾಷ್ಟ್ರವಾದದ ರಾಜನೀತಿಯನ್ನು ಜನತೆ ಬಯಸುತ್ತಿದ್ದಾರೆ. ಬಿಜೆಪಿಯ ರಾಷ್ಟ್ರನೀತಿಯೊಂದಿಗೆ ಜನತೆ ನಡೆಯುತ್ತಿದ್ದಾರೆ. ಕರ್ನಾಟಕವು ಬಿಜೆಪಿ ಆಡಳಿತ ಬಯಸುತ್ತಿದೆ.
>
> ■ ನರೇಂದ್ರ ಮೋದಿ, ಪ್ರಧಾನ ಮಂತ್ರಿ

ಕೇರಳದಲ್ಲಿಯೂ ಅಧಿಕಾರಕ್ಕೆ ಬರುತ್ತೇವೆ: ಮೋದಿ ವಿಶ್ವಾಸ

ಪಶ್ಚಿಮ ಬಂಗಾಲದಲ್ಲಿ 10 ವರ್ಷದ ಹಿಂದೆ 3 ಶಾಸಕರಿದ್ದದ್ದು ಈಗ 200ಕ್ಕೂ ಹೆಚ್ಚಾಗಿದೆ. ಕೇರಳಂನಲ್ಲಿ 3 ಶಾಸಕರಿದ್ದಾರೆ. ಮುಂದೆ ಬಿಜೆಪಿ– ಎನ್‌ಡಿಎ ಶಾಸಕರ ಸಂಖ್ಯೆ ಮುಂದೆ ಬಹುಮತದತ್ತ ಮುನ್ನಡೆಯಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು. ರಾಜ್ಯದ ವಿಕಾಸದ ಜತೆ ದೇಶದ ವಿಕಾಸವನ್ನು ನಾವು ಬಯಸುತ್ತೇವೆ. 40 ವರ್ಷದ ಹಿಂದೆ 400ಕ್ಕೂ ಹೆಚ್ಚು ಸಂಸದರಿದ್ದ ಕಾಂಗ್ರೆಸ್ ಪಕ್ಷ ಹೀನಾಯ ಸೋಲು ಕಾಣುತ್ತಿದೆ. ಆದರೂ, ಅವರ ಅಹಂಕಾರವು ಮಿತಿ ಮೀರಿದೆ. ಸಂವಿಧಾನ, ಪ್ರಜಾಪ್ರಭುತ್ವ, ಸಾಂವಿಧಾನಿಕ ಪ್ರಕ್ರಿಯೆಯನ್ನು ಕಡೆಗಣಿಸುತ್ತಾರೆ ಎಂದು ಪ್ರಧಾನಿ ಟೀಕಿಸಿದರು. ಕಾರ್ಯಕ್ರಮದಲ್ಲಿ ಮೋದಿಯವರಿಗೆ ಮೈಸೂರಿನ ಶಾಲು, ಮೈಸೂರು ಪೇಟ ಹಾಗೂ ಯಲಹಂಕ ಶಾಸಕ ವಿಶ್ವನಾಥ್ ವರು 13 ಕೆ.ಜಿ. ತೂಕದ ಮೋದಿಯವರ ಬೆಳ್ಳಿಯ ಪುತ್ಥಳಿ ನೀಡಿ ಗೌರವಿಸಲಾಯಿತು.

ಸಮಾಜ ಜಾಗೃತಿಗೊಳ್ಳಲಿ: ಪ್ರಧಾನಿ ಮೋದಿ

• ಪುಟ ೫

ಮಹಿಳೆಯರಿಗೆ ಕಾಂಗ್ರೆಸ್ ವಿಶ್ವಾಸದ್ರೋಹ

ತಮಿಳುನಾಡಿನಲ್ಲಿ ಡಿಎಂಕೆ ಜೊತೆಗೆ ಇದ್ದ ಕಾಂಗ್ರೆಸ್ ಪಕ್ಷವು ಇದೀಗ ಆಡಳಿತದ ಲಾಲಸೆಯಿಂದ ಡಿಎಂಕೆಯ ಮೈತ್ರಿ ತೊರೆದು ಟಿವಿಕೆ ಜತೆಗೂಡಿದೆ ಎಂದು ಟೀಕಿಸಿದರು. ಕಾಂಗ್ರೆಸ್ ಪಕ್ಷವು ಮಹಿಳಾ ಮೀಸಲಾತಿ ವಿಚಾರದಲ್ಲಿ ತಾಯಂದಿರು, ಸೋದರಿಯರಿಗೆ ವಿಶ್ವಾಸದ್ರೋಹ ಮಾಡಿದೆ ಎಂದು ಆಕ್ಷೇಪಿಸಿದರು. ಕಾಂಗ್ರೆಸ್ ನಾರಿ ವಿರೋಧಿ ಪಕ್ಷವಾಗಿ ಹೊರಹೊಮ್ಮಿದೆ ಎಂದು ಟೀಕಿಸಿದರು. ಕಾಂಗ್ರೆಸ್ಸನ್ನು ಮಹಿಳೆಯರು ಎಂದೂ ಕ್ಷಮಿಸುವುದಿಲ್ಲ ಎಂದು ಪ್ರಧಾನಿ ಮೋದಿ ನುಡಿದರು. ಬಿಜೆಪಿಗೆ ದೇಶಹಿತವೇ ಸರ್ವಪ್ರಥಮ ಎಂದ ಅವರು, ಯುದ್ಧದಿಂದ ಭಾರತದ ಮೇಲೂ ಪರಿಣಾಮ ಆಗಿದೆ; ನಾವು ಸಂಯಮದಿಂದ ಕೆಲಸ ಮಾಡಬೇಕೆಂದು ಜನರಿಗೆ ಮನವಿ ಮಾಡಿದರು. ಕೋವಿಡ್ ಸಂದರ್ಭದಲ್ಲಿ ನಾವು ಸಂಯಮದಿಂದ ಇದ್ದೆವು. ಅದೇ ಮಾದರಿಯಲ್ಲಿ ನಾವು ಈ ಸಂಕಷ್ಟದಿಂದ ಹೊರಬರಲಿದ್ದೇವೆ ಎಂದು ವಿಶ್ವಾಸ ವ್ಯಕ್ತಪಡಿಸಿದರು. ➡ಪುಟ ೪

ಆತಂಕ ಮೂಡಿಸಿದ ಜಿಲೆಟಿನ್ ಕಡ್ಡಿ: ಓರ್ವ ಸೆರೆ

• **ಬೆಂಗಳೂರು:** ಪ್ರಧಾನಿ ನರೇಂದ್ರ ಮೋದಿ ಬೆಂಗಳೂರಿಗೆ ಭೇಟಿಯ ಹಿನ್ನೆಲೆಯಲ್ಲಿ ಹೈ ಅಲರ್ಟ್ ಘೋಷಿಸಲಾಗಿದ್ದರೂ, ಅವರ ಸಂಚಾರದ ಮಾರ್ಗದಲ್ಲೇ ಜಿಲೆಟಿನ್ ಕಡ್ಡಿಗಳು ಪತ್ತೆಯಾಗಿರುವುದು ತೀವ್ರ ಆತಂಕಕ್ಕೆ ಕಾರಣವಾಗಿದೆ. ನಗರದ ಹೊರವಲಯದ ಕಗ್ಗಲಿಪುರ ಪೊಲೀಸ್ ಠಾಣಾ ವ್ಯಾಪ್ತಿಯ ತಾತಗುಣಿ ಎಂಬಲ್ಲಿ ಈ ಸ್ಫೋಟಕ ವಸ್ತುಗಳು ಪತ್ತೆಯಾಗಿದ್ದು, ಮುನ್ನೆಚ್ಚರಿಕಾ ಕ್ರಮವಾಗಿ ಪೊಲೀಸರು ತನಿಖೆಯನ್ನು ಚುರುಕುಗೊಳಿಸಿ, ಓರ್ವ ಆರೋಪಿಯನ್ನು ವಶಕ್ಕೆ ಪಡೆದು ತನಿಖೆ ಕೈಗೊಂಡಿದ್ದಾರೆ. ➡ಪುಟ ೪

ಕೆಲಸ ಮಾಡಲು ನಾವು ಇರೋದು: ಪ್ರಧಾನಿ

• **ಬೆಂಗಳೂರು:** ಆರ್ಟ್ ಆಫ್ ಲಿವಿಂಗ್‌ನ ಭೇಟಿ ಸ್ಮೃತಿ ಪಟಲದಲ್ಲಿ ಸದಾ ಇರಲಿದೆ. ರವಿಶಂಕರ್ ಗುರೂಜೀ ಅವರು ನನ್ನ ಬಗ್ಗೆ ಬಹಳ ಹೇಳಿದ್ದಾರೆ. ಆದರೆ ನನಗೆ ಈ ಮೂಲಕ ಹೊಗಳಿದ್ದು ಎಂದೆನಿಸಬಹುದು, ಆದರೆ ಅದು ನನಗೆ ಕೆಲಸ ಹೇಳಿದ್ದು. ಕೆಲಸಕ್ಕೆ ನಾವು ಇರೋದು ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದರು.ನಗರದ ಕನಕಪುರ ರಸ್ತೆಯಲ್ಲಿರುವ ಆರ್ಟ್ ಆಫ್ ಲಿವಿಂಗ್‌ನಲ್ಲಿ ನಡೆದ ಧ್ಯಾನ ಕೇಂದ್ರ ಉದ್ಘಾಟನೆ ಹಾಗೂ ಆರ್ಟ್ ಆಫ್ ಲಿವಿಂಗ್‌ನ 40ನೇ ವರ್ಷಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ನಿಮಗಾಗಿ, ನಿಮ್ಮಿಂದ ಇದೆಲ್ಲಾ ಎಂದರು. ನಾನು ಮತ್ತೊಮ್ಮೆ ಇಲ್ಲಿಗೆ ಬರುತ್ತೇನೆ. ಸೇವಾಭಾವದಿಂದ ಕೆಲಸ ಮಾಡಿದರೆ ಖಂಡಿತ ಒಳ್ಳೆಯ ಪರಿಣಾಮ ತರಲಿದೆ. ನಾವೆಲ್ಲಾ ಕಮಲದ ಅಡಿಯಲ್ಲಿ ಇದ್ದೇವೆ. ಬೆಂಗಳೂರಿನ ವಾತಾವರಣ ಸ್ವಲ್ಪ ವಿಶೇಷವಾಗಿದೆ, ಸಾಂಸ್ಕೃತಿಕ, ಆಧ್ಯಾತ್ಮಿಕ ಚಿಂತನೆಗಳನ್ನು ಸಹ ಈ ನೆಲ ನೀಡಿದೆ ಎಂದರು

ಕಿರುಸುದ್ದಿ

ತೈಲೋತ್ಪನ್ನಗಳ ಬಳಕೆಗಿರಲಿ ಮಿತಿ: ಪ್ರಧಾನಿ ಮೋದಿ ಕರೆ

• **ಹೈದರಾಬಾದ್:** ಪಶ್ಚಿಮ ಏಷ್ಯಾದಲ್ಲಿನ ಸಂಘರ್ಷದ ಹಿನ್ನೆಲೆಯಲ್ಲಿ ಪೆಟ್ರೋಲಿಯಂ ಉತ್ಪನ್ನಗಳನ್ನು ಮಿತವಾಗಿ ಬಳಸುವಂತೆ ಪ್ರಧಾನಿ ನರೇಂದ್ರ ಮೋದಿ ಭಾನುವಾರ ಕರೆನೀಡಿದ್ದಾರೆ. ತೆಲಂಗಾಣದಲ್ಲಿ ವಿವಿಧ ಅಭಿವೃದ್ಧಿ ಯೋಜನೆ ಉದ್ಘಾಟಿಸಿ ಮಾತನಾಡಿದ ಅವರು, ವಿದೇಶಿ ವಿನಿಮಯ ಉಳಿಸಲು ಮತ್ತು ಜಾಗತಿಕ ಯುದ್ಧದ ಪರಿಣಾಮ ಕಡಿಮೆ ಮಾಡಲು ಆಮದು ಮಾಡಿಕೊಳ್ಳುವ ಪೆಟ್ರೋಲ್ ಮತ್ತು ಡೀಸೆಲ್‌ನ್ನು ಅಗತ್ಯವಿದ್ದಾಗ ಮಾತ್ರ ಬಳಸಬೇಕು. ಭಾರತದ ಇಂಧನ ಭದ್ರತೆಗಾಗಿ ಸೌರಶಕ್ತಿ, ಎಥೆನಾಲ್ ಮಿಶ್ರಣ, ಎಲ್‌ಪಿಜಿ ವ್ಯಾಪ್ತಿ ಮತ್ತು ಸಿಎನ್‌ಜಿ ಬಳಕೆಗೆ ಹೆಚ್ಚಿನ ಒತ್ತು ನೀಡಲಾಗುತ್ತಿದೆ ಎಂದರು.

• ಪುಟ 0೭

ದಿತ್ವಾ: ಲಂಕೆಗೆ ಭಾರತದ ನೆರವು ಕಾರ್ಯ ಚುರುಕು

• ಪುಟ 0೭

ಇರಾನ್‌ಗೆ ರಷ್ಯಾದಿಂದ ಅತ್ಯಾಧುನಿಕ ಡ್ರೋನ್!

• ಪುಟ 0೭

ಚಂದ್ರಬಾಬು, ಪವನ್ ಮನೆಗೆ ಮೋದಿ ಭೇಟಿ

• ಪುಟ 0೭

ಪಾಕ್‌ನಲ್ಲಿ ಉಗ್ರರ ದಾಳಿ; 21 ಭದ್ರತಾ ಸಿಬ್ಬಂದಿ ಬಲಿ

• ಪುಟ 0೭

ಡಾ.ನಾರಾಯಣ್ ಹೊಸ್ಮನೆ ಅಮೆರಿಕದ ಶ್ರೇಷ್ಠ ವಿಜ್ಞಾನಿ

• ಪುಟ 0೫

ಯಾವ ಕುರ್ಚಿಗಳೂ ಅಲ್ಲಾಡುತ್ತಿಲ್ಲ: ಡಿಕೆಶಿ

• ಪುಟ 0೫



ಆರ್ಥಿಕ ಸಂಕಷ್ಟದ ಹಾದಿ

ತಮಿಳುನಾಡಿನ ಸಾಲದ ಪರಂಪರೆ ಮತ್ತು ವಿಜಯ್ ಜನಕಲ್ಯಾಣದ ಟರೆ

• ಪುಟ 0೭

ಸುದ್ದಿ ಸಮಗ್ರ

ಮುಖ್ಯಮಂತ್ರಿಯಾಗಿ ಜೋಸೆಫ್ ವಿಜಯ್ ಪ್ರಮಾಣವಚನ ಸ್ವೀಕಾರ

ತ.ನಾಡಲ್ಲಿ ವಿಜಯ ಯುಗ ಆರಂಭ

• **ಚೆನ್ನೈ:** ನಟನೆಯಿಂದ ರಾಜಕೀಯಕ್ಕೆ ಪ್ರವೇಶಿಸಿರುವ ಸಿ. ಜೋಸೆಫ್ ವಿಜಯ್ ತಮಿಳುನಾಡಿನ ಮುಖ್ಯಮಂತ್ರಿಯಾಗಿ ಭಾನುವಾರ ಪ್ರಮಾಣವಚನ ಸ್ವೀಕರಿಸಿದರು. ಈ ಸಂದರ್ಭದಲ್ಲಿ ಅವರು ರಾಜ್ಯದಲ್ಲಿ ಜಾತ್ಯತೀತ ಮತ್ತು ಸಾಮಾಜಿಕ ನ್ಯಾಯದ ಹೊಸ ಯುಗವನ್ನು ಆರಂಭಿಸುವ ಭರವಸೆ ನೀಡಿದರು.ಚೆನ್ನೈನ ಜವಾಹರಲಾಲ್ ನೆಹರು ಕ್ರೀಡಾಂಗಣದಲ್ಲಿ ನಡೆದ ಅದ್ದೂರಿ ಸಮಾರಂಭದಲ್ಲಿ ರಾಜ್ಯಪಾಲ ರಾಜೇಂದ್ರ ವಿಶ್ವನಾಥ್ ಅರ್ಲೇಕರ್ ವಿಜಯ್ ಅವರಿಗೆ ಅಧಿಕಾರ ಗೌಪ್ಯತೆಯ ಪ್ರಮಾಣವಚನ ಬೋಧಿಸಿದರು. ಈ ಸಮಾರಂಭದಲ್ಲಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಸೇರಿದಂತೆ ಹಿರಿಯ ರಾಜಕೀಯ ಮುಖಂಡರು ಮತ್ತು ವಿಜಯ್ ಅವರ ಲಕ್ಷಾಂತರ ಅಭಿಮಾನಿಗಳು ಭಾಗವಹಿಸಿದ್ದರು. ➡ಪುಟ ೪

ವಿಜಯ್‌ಗೆ ಪ್ರಧಾನಿ ಮೋದಿ ಶುಭ ಹಾರೈಕೆ

• ಪುಟ ೪



9 ಶಾಸಕರು ಸಚಿವರಾಗಿ ಪ್ರಮಾಣ

ವಿಜಯ್ ಅವರೊಂದಿಗೆ ಅವರ ಆಪ್ತ ಬಳಗದ ಯುವ ಮತ್ತು ಅನುಭವಿ ನಾಯಕರ ಮಿಶ್ರಣವಿರುವ ಸಚಿವ ಸಂಪುಟ ಅಸ್ತಿತ್ವಕ್ಕೆ ಬಂದಿದೆ. ಸಚಿವರಾಗಿ ಬಸ್ಸಿ ಎನ್. ಆನಂದ್, ಆದವ್ ಅರ್ಜುನ, ಕೆ.ಎ. ಸೆಂಗೋಟ್ಟಯನ್, ಕೆ.ಜಿ. ಅರುಣ್‌ರಾಜ್, ಪಿ. ವೆಂಕಟರಮಣನ್, ಸಿ.ಟಿ.ಆರ್. ನಿರ್ಮಲ್ ಕುಮಾರ್, ಎ. ರಾಜಮೋಹನ್, ಕೀರ್ತನಾ ಮತ್ತು ಕೆ.ಟಿ. ಪ್ರಭು ಪ್ರಮಾಣವಚನ ಸ್ವೀಕರಿಸಿದರು.

ಶ್ವಾಸಕೋಶ ಸೋಂಕಿನಿಂದ ಆಸ್ಪತ್ರೆಗೆ ದಾಖಲಾಗಿದ್ದ ಸುಧಾಕರ್

ಸಾಂಖ್ಯಿಕ ಸಚಿವ ಸುಧಾಕರ್ ಇನ್ನಿಲ್ಲ

• **ಬೆಂಗಳೂರು:** ತೀವ್ರ ಅನಾರೋಗ್ಯಕ್ಕೆ ಒಳಗಾಗಿ ಬೆಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಸಚಿವ ಡಿ. ಸುಧಾಕರ್ (62) ಅವರು ಭಾನುವಾರ ಬೆಳಗ್ಗೆ 3.15ರ ವೇಳೆಗೆ ವಿಧಿವಶರಾದರು. ಶ್ವಾಸಕೋಶದ ಸೋಂಕಿನಿಂದ ಬಳಲುತ್ತಿದ್ದ ಅವರು ಕೆಲದಿನಗಳಿಂದ ಐಸಿಯುನಲ್ಲೇ ಇದ್ದರು. ಭಾನುವಾರ ಬೆಳಗ್ಗೆ ಚಿಕಿತ್ಸೆಗೆ ಸ್ಪಂದಿಸದೆ ಕೊನೆಯುಸಿರೆಳೆದರು. ಮಂಡಿ ಚಿಪ್ಪು ಶಸ್ತ್ರಚಿಕಿತ್ಸೆಗಾಗಿ ಯಶವಂತಪುರದ ಮಣಿಪಾಲ ಆಸ್ಪತ್ರೆಗೆ ದಾಖಲಾಗಿದ್ದ ಅವರಿಗೆ ಶ್ವಾಸಕೋಶದ ಸೋಂಕು ತಗುಲಿತ್ತು. ಯಶವಂತಪುರ ಆಸ್ಪತ್ರೆಯಿಂದ ಎಲೆಕ್ಟ್ರಾನಿಕ್ ಸಿಟಿಯಲ್ಲಿರುವ ಕಿಮ್ಸ್ ಆಸ್ಪತ್ರೆಗೆ ಅವರನ್ನು ಸ್ಥಳಾಂತರಿಸಲಾಗಿತ್ತು. ತಜ್ಞ ವೈದ್ಯರ ಸತತ ಚಿಕಿತ್ಸೆ ನಂತರವೂ ಅವರು ಚೇತರಿಸಿಕೊಂಡಿರಲಿಲ್ಲ. ➡ಪುಟ ೪



ರಾಜಕೀಯ ಕ್ಷೇತ್ರಕ್ಕೆ ದೊಡ್ಡ ನಷ್ಟ: ಸಿಎಂ ಸಿದ್ದರಾಮಯ್ಯ

• ಪುಟ ೪

ಇಂದು ಅಂತ್ಯಕ್ರಿಯೆ

ಸೋಮವಾರ ಮಧ್ಯಾಹ್ನ 12ರಿಂದ 2ರವರೆಗೆ ಹಿರಿಯೂರಿನ ನೆಹರೂ ಮೈದಾನದಲ್ಲಿ ಸಾರ್ವಜನಿಕ ದರ್ಶನಕ್ಕೆ ಅವಕಾಶ ಕಲ್ಪಿಸಿದ್ದು, ಚಳ್ಳಕೆರೆಯ ಸ್ವಗೃಹದಲ್ಲಿ ಪೂಜೆ ವಿಧಿ-ವಿಧಾನಗಳನ್ನು ನಡೆಸಿದ ನಂತರ ಡಿ. ಸುಧಾಕರ್ ಕ್ರೀಡಾಂಗಣದಲ್ಲಿ ಸಾರ್ವಜನಿಕ ದರ್ಶನ ವ್ಯವಸ್ಥೆ ಮಾಡಲಾಗಿದೆ. ಮಧ್ಯಾಹ್ನ 3 ರಿಂದ 4 ಗಂಟೆವರೆಗೆ ಅಂತ್ಯಕ್ರಿಯೆ ವಿಧಿ-ವಿಧಾನಗಳು ನಡೆಯಲಿವೆ. ಅಂತಿಮ ಸಂಸ್ಕಾರದ ವೇಳೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಭಾಗಿಯಾಗಲಿದ್ದಾರೆ. ಸಕಲ ಸರ್ಕಾರಿ ಗೌರವಗಳೊಂದಿಗೆ ಅಂತ್ಯಕ್ರಿಯೆ ನೆರವೇರಿಸಲು ಸರ್ಕಾರ ಆದೇಶಿಸಿದೆ.

ಗದ್ದುಗೆಯೇರಲು ಮತ್ತೆ ಎನ್ಡಿಎ ಸಜ್ಜು, ನಾಳೆ ಹಿಮಂತ ಪ್ರಮಾಣ

- ಅಸ್ಸಾಂನಲ್ಲಿ 3ನೇ ಬಾರಿ ಎನ್‌ಡಿಎ ಅಧಿಕಾರಕ್ಕೆ
- ಬಿಜೆಪಿ ಶಾಸಕಾಂಗ ಪಕ್ಷದ ನಾಯಕರಾಗಿ ಹಿಮಂತ ಬಿಸ್ವಾ

• **ಗುವಾಹಟಿ:** ಅಸ್ಸಾಂನಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ಮೈತ್ರಿಕೂಟಕ್ಕೆ ಭರ್ಜರಿ ಜಯ ದೊರಕಿದ ಹಿನ್ನೆಲೆಯಲ್ಲಿ ರಾಜ್ಯಪಾಲ ಲಕ್ಷ್ಮಣ ಪ್ರಸಾದ್ ಆಚಾರ್ಯ ಅವರು ಬಿಜೆಪಿ ಶಾಸಕಾಂಗ ಪಕ್ಷದ ನಾಯಕರಾಗಿ ಆಯ್ಕೆಯಾದ ಹಿಮಂತ ಬಿಸ್ವಾ ಶರ್ಮಾ ಅವರಿಗೆ ಹೊಸ ಸರ್ಕಾರ ರಚಿಸಲು ಭಾನುವಾರ ಆಹ್ವಾನ ನೀಡಿದ್ದಾರೆ. ಇದರೊಂದಿಗೆ ಅಸ್ಸಾಂನಲ್ಲಿ ಎನ್‌ಡಿಎ ಸತತ ಮೂರನೇ ಬಾರಿ ಅಧಿಕಾರಕ್ಕೆ ಬರಲು ಸಜ್ಜಾಗಿದೆ. ➡ಪುಟ ೪

ಚಿರತೆ ದಾಳಿ: ಬಾಲಕ ಸಾವು

• **ಹನೂರು (ಚಾಮರಾಜನಗರ):** ಮಲೆ ಮಹದೇಶ್ವರ ಬೆಟ್ಟದಿಂದ ನಾಗಮಲೆಗೆ ತೆರಳುತ್ತಿದ್ದ ಬೆಂಗಳೂರು ಮೂಲದ ಬಾಲಕ ಚಿರತೆ ದಾಳಿಗೆ ಬಲಿಯಾಗಿದ್ದಾನೆ. ಹರ್ಷಿತ್ (10) ಮೃತಪಟ್ಟ ಬಾಲಕ. ನಾಗಮಲೆಗೆ ಹೋಗುತ್ತಿದ್ದ ಭಕ್ತರ ಗುಂಪಿನ ಮೇಲೆ ಭಾನುವಾರ ಬೆಳಗ್ಗೆ ಚಿರತೆ ದಾಳಿ ಮಾಡಿ ಬಾಲಕನನ್ನು ಪೊದೆಗೆ ಎಳೆದುಕೊಂಡು ಹೋಗಿದೆ. ಹನೂರು ತಾಲೂಕಿನ ಮಲೆ ಮಹದೇಶ್ವರ ಬೆಟ್ಟಕ್ಕೆ ಆಗಮಿಸಿ ಮಾದಪ್ಪನ ದರ್ಶನ ಪಡೆದ ಬಾಲಕ ಪೋಷಕರೊಂದಿಗೆ ಸಾಗುತ್ತಿದ್ದಾಗ ಚಿರತೆ ದಾಳಿ ನಡೆಸಿದೆ.

• ಪುಟ ೪

ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ
ಸೋಮವಾರ, 11 ಮೇ 2026
ಮಂಗಳೂರು



ಆಪರೇಷನ್ ಸಿಂದೂರ್: ಇದು ಕೇವಲ ಸೈನ್ಯ ಕಾರ್ಯಾಚರಣೆ ಅಲ್ಲ

ಭಾರತವು 2025ರ ಮೇ ತಿಂಗಳಲ್ಲಿ ನಡೆಸಿದ ಆಪರೇಷನ್ ಸಿಂದೂರ್ ಕೇವಲ ಒಂದು ಮಿಲಿಟರಿ ಕಾರ್ಯಾಚರಣೆಯಾಗಿರಲಿಲ್ಲ; ಅದು ಪಾಕಿಸ್ತಾನದ ಸೇನಾ ಶಕ್ತಿ, ಆರ್ಥಿಕ ಬೆನ್ನೆಲುಬು, ರಾಜಕೀಯ ಸ್ಥಿರತೆ ಮತ್ತು ಅಂತಾರಾಷ್ಟ್ರೀಯ ಪ್ರತಿಷ್ಠೆಯನ್ನು ಏಕಕಾಲದಲ್ಲಿ ಧ್ವಂಸಗೊಳಿಸಿದ ಐತಿಹಾಸಿಕ ಹೊಡೆತವಾಗಿತ್ತು. ಒಂದು ವರ್ಷ ಕಳೆದ ನಂತರ ತಿರುಗಿ ನೋಡಿದರೆ, ಪಾಕಿಸ್ತಾನ ಆರ್ಥಿಕವಾಗಿ, ರಾಜತಾಂತ್ರಿಕವಾಗಿ ಮತ್ತು ಆಂತರಿಕ ಭದ್ರತೆಯ ನೆಲೆಯಲ್ಲಿ ಚೇತರಿಸಿಕೊಳ್ಳಲಾಗದ ಬಿಕ್ಕಟ್ಟಿನ ಸುಳಿಗೆ ಸಿಲುಕಿದೆ.

▸ ಅಜಿತ್ ಶೆಟ್ಟಿ ಹೆರಂಜೆ

ಸೇನಾ ಮೂಲಸೌಕರ್ಯದ ವಿನಾಶ ಮತ್ತು ಆರ್ಥಿಕ ಸಂಕಟ



ಆಪರೇಷನ್ ಸಿಂದೂರ್ ಕಾರ್ಯಾಚರಣೆಯಲ್ಲಿ ಪಾಕಿಸ್ತಾನದ 11 ಪ್ರಮುಖ ವಾಯುನೆಲೆಗಳು ಭಾರತದ ಗುರಿಯಾದವು. ಅದರಲ್ಲಿ ರಾವಲ್ಪಿಂಡಿಯ ನೂರ್ ಖಾನ್, ಸರ್ಗೋಧಾ ಮತ್ತು ಜೇಕಬಾಬಾದ್ ವಾಯುನೆಲೆಗಳ ರನ್‌ವೇಗಳು, ಹ್ಯಾಂಗರ್‌ಗಳು ಹಾಗೂ ರಡಾರ್ ವ್ಯವಸ್ಥೆಗಳು ಸಂಪೂರ್ಣ ಧ್ವಂಸಗೊಂಡವು. ಭಾರತದ ವಾಯುಪಡೆ ಪಾಕ್ ವಾಯುಪ್ರದೇಶದೊಳಗೆ 150ರಿಂದ 200 ಕಿಮೀ ನುಗ್ಗಿ ದಾಳಿ ನಡೆಸಿತು ಎಂದು ಉಪಗ್ರಹ ಚಿತ್ರಗಳ ಮೂಲಕ ದೃಢಪಡಿಸಿದೆ. ಸರ್ಗೋಧಾ ನೆಲೆಯಲ್ಲಿದ್ದ ಪ್ರಮುಖ ಕಮಾಂಡ್ ಆ್ಯಂಡ್ ಕಂಟ್ರೋಲ್ ಸೆಂಟರ್ ಸಂಪೂರ್ಣ ನಾಶವಾಗಿರುವುದು ಪಾಕಿಸ್ತಾನದ ಸಮರ ಸನ್ನದ್ಧತೆಯನ್ನು ನಿರ್ನಾಮ ಮಾಡಿತ್ತು. ಅಂತಾರಾಷ್ಟ್ರೀಯ ರಕ್ಷಣಾ ವಿಶ್ಲೇಷಣಾ ಸಂಸ್ಥೆ Observer Research Foundation (ORF) ಅಂದಾಜಿನ ಪ್ರಕಾರ, ಈ ದಾಳಿಯಿಂದ ಉಂಟಾದ ನೇರ ನಷ್ಟ ಸುಮಾರು 1.5 ಬಿಲಿಯನ್ ಡಾಲರ್ (ಅಂದಾಜು ಪಾಕಿಸ್ತಾನದ 41,800 ಕೋಟಿ ರೂಪಾಯಿ). ನಾಶವಾದ 13 ಯುದ್ಧ ವಿಮಾನಗಳ ಮೌಲ್ಯವು ಪಾಕ್ ವಾರ್ಷಿಕ ರಕ್ಷಣಾ ಬಜೆಟ್‌ನ ಬಹುಪಾಲನ್ನು ನುಂಗಿ ಹಾಕಿದೆ. ಧ್ವಂಸವಾದ ವಿಮಾನಗಳಲ್ಲಿ ಅಮೆರಿಕ ನಿರ್ಮಿತ ಎಫ್–16 ಮತ್ತು ಚೀನಾ–ಪಾಕ್ ಜಂಟಿ ನಿರ್ಮಿತ ಜೆಎಫ್–17 ಎರಡೂ ಸೇರಿವೆ. ಈಗಾಗಲೇ 138 ಬಿಲಿಯನ್ ಡಾಲರ್ ವಿದೇಶಿ ಸಾಲದ ಹೊರೆ ಹೊತ್ತಿರುವ ಪಾಕಿಸ್ತಾನಕ್ಕೆ ಈ ನಷ್ಟ ಭರಿಸಲು ಹಣದ ಮೂಲವೇ ಇಲ್ಲದಾಗಿದೆ. ಐಎಂಎಫ್ ಮತ್ತು ವಿಶ್ವ ಬ್ಯಾಂಕ್ ಸಾಲ ನೀಡಲು ಕಠಿಣ ಷರತ್ತುಗಳನ್ನು ವಿಧಿಸಿರುವ ಕಾರಣ, ಸರ್ಕಾರ ಸೈನ್ಯದ ಮರುನಿರ್ಮಾಣಕ್ಕಾಗಿ ಸಾಮಾನ್ಯ ಜನರ ಸಬ್ಸಿಡಿಗಳಿಗೆ ಕತ್ತರಿ ಹಾಕಿದೆ. ಪಾಕ್ ವಿದೇಶಾಂಗ ಸಚಿವ ಇಶಾಕ್ ದಾರ್ ಸ್ವತಃ ಒಪ್ಪಿಕೊಂಡಂತೆ, ಈ ನಷ್ಟ ಸರಿಪಡಿಸಲು ಕನಿಷ್ಠ 5ರಿಂದ 8 ವರ್ಷಗಳು ಬೇಕು.

ಸೈನಿಕರ ಮನೋಬಲ ಕುಸಿತ ಮತ್ತು ಸೇನಾ ಬಜೆಟ್ ಹೊಡೆತ

ಸೇನಾ ಮೂಲಸೌಕರ್ಯಗಳ ಮರುನಿರ್ಮಾಣಕ್ಕೆ ಬಿಲಿಯನ್ ಗಟ್ಟಲೆ ಡಾಲರ್ ಸುರಿಯಬೇಕಾಗಿ ಬಂದ ಪಾಕಿಸ್ತಾನಕ್ಕೆ, ತನ್ನ ಸೈನಿಕರ ಹೊಟ್ಟೆ ತುಂಬಿಸುವುದು ಮತ್ತು ಸರಿಯಾದ ವೇತನ ನೀಡುವುದೇ ದೊಡ್ಡ ಸವಾಲಾಗಿ ಪರಿಣಮಿಸಿದೆ. ಸೇನಾ ಇತಿಹಾಸದಲ್ಲೇ ಮೊದಲ ಬಾರಿಗೆ ಸೈನಿಕರ ವೇತನ ಮತ್ತು ಭತ್ಯೆಗಳಿಗೆ ಕತ್ತರಿ ಬಿದ್ದಿದೆ. ದಿ ಎಕ್ಸ್‌ಪ್ರೆಸ್ ಟ್ರಿಬ್ಯೂನ್ ವರದಿ ಪ್ರಕಾರ, ಹಣದುಬ್ಬರ ಶೇ. 7.2ಕ್ಕೆ ಏರಿದ್ದರಿಂದ ಸೈನಿಕರ ನೈಜ ಖರೀದಿ ಸಾಮರ್ಥ್ಯ ಗಣನೀಯವಾಗಿ ಕುಸಿದಿದೆ. ಗಡಿ ಭಾಗದ ಮುಂಚೂಣಿ ನೆಲೆಗಳಲ್ಲಿರುವ ಸೈನಿಕರಿಗೆ ದಿನಬಳಕೆಯ ಆಹಾರ, ಇಂಧನ ಮತ್ತು ವೈದ್ಯಕೀಯ ಕಿಟ್‌ಗಳ ಪೂರೈಕೆ ಶೇ.30ರಷ್ಟು ಕಡಿತಗೊಂಡಿದೆ. ಸಾರಿಗೆ ವೆಚ್ಚದ ಏರಿಕೆ ಮತ್ತು ಬಜೆಟ್ ಕೊರತೆಯಿಂದ ಸೇನಾ ವಾಹನಗಳಿಗೆ ಇಂಧನ ತುಂಬಿಸಲೂ ಪರದಾಡುವ ಸ್ಥಿತಿ ನಿರ್ಮಾಣವಾಗಿದೆ. ಹಸಿವು ಮತ್ತು ಆರ್ಥಿಕ ಅಭದ್ರತೆಯಲ್ಲಿರುವ ಸೈನಿಕರು ಕರ್ತವ್ಯಕ್ಕಿಂತ ಕುಟುಂಬದ ಉಳಿವಿಗೆ ಹೆಚ್ಚು ಚಿಂತಿಸುತ್ತಿರುವ ಪರಿಸ್ಥಿತಿ ಪಾಕ್ ರಕ್ಷಣಾ ವ್ಯವಸ್ಥೆಯ ಆಂತರಿಕ ಪತನಕ್ಕೆ ಕನ್ನಡಿ ಹಿಡಿಯುತ್ತಿದೆ.

ಬದಲಾದ ರಕ್ಷಣಾ ಸಮೀಕರಣ

ಆಪರೇಷನ್ ಸಿಂದೂರ್ ಸಂದರ್ಭದಲ್ಲಿ ಭಾರತ ಪಾಕ್ ನೆಲದೊಳಗೆ ಆಳವಾಗಿ ನುಗ್ಗಿ ದಾಳಿ ನಡೆಸಿದಾಗ, ಚೀನಾ ಕೇವಲ ರಾಜತಾಂತ್ರಿಕ ಹೇಳಿಕೆಗಳಿಗೆ ಸೀಮಿತವಾಗಿ, ನೇರ ಮಿಲಿಟರಿ ನೆರವು ನೀಡದೇ ಇದ್ದುದು ಪಾಕಿಸ್ತಾನಕ್ಕೆ ದೊಡ್ಡ ಆಘಾತ ನೀಡಿತು. ಎಂಪಿ–ಐಡಿಎಸ್‌ಎ ವರದಿಯಂತೆ, ಚೀನಾ ನೆರವು ಕಾಗದದ ಮೇಲೆ ಮಾತ್ರ ಇತ್ತೇ ಹೊರತು ನೆಲದ ಮೇಲಲ್ಲ. ಪಾಕ್ ಸೇನೆ ಸಂಪೂರ್ಣ ಒಂಟಿಯಾಗಿ ಹೋರಾಡಬೇಕಾದ ಪರಿಸ್ಥಿತಿ ಬಂದಾಗ ನಿಜವಾದ ಮಿತ್ರ ಯಾರೆಂಬ ಸತ್ಯ ಬೆಳಕಿಗೆ ಬಂದಿತು.



ಕಾರ್ಯಾಚರಣೆಯ ನಂತರ ಪಾಕಿಸ್ತಾನಕ್ಕೆ ಚೀನಾ ನೀಡುತ್ತಿದ್ದ ಅತ್ಯಾಧುನಿಕ ಮಿಲಿಟರಿ ತಂತ್ರಜ್ಞಾನ ವರ್ಗಾವಣೆಯಲ್ಲಿ ಗಣನೀಯ ಕಡಿತವಾಗಿದೆ. ಎಫ್–16 ಮತ್ತು ಜೆಎಫ್–17 ವಿಮಾನಗಳ ನಿರ್ವಹಣೆಗೆ ಬೇಕಾದ ಚೀನೀ ನಿರ್ಮಿತ ಕ್ಷಿಪಣಿ ತಂತ್ರಜ್ಞಾನ ಪೂರೈಕೆ ಈಗ ಮಂದಗತಿಯಲ್ಲಿದ್ದು, ಪಾಕ್ ಸೈನ್ಯ ತಾಂತ್ರಿಕವಾಗಿ ಇನ್ನಷ್ಟು ದುರ್ಬಲಗೊಂಡಿದೆ. ಮೇ 2026ರ ಹೊತ್ತಿಗೆ ಪಾಕಿಸ್ತಾನದ ಮೇಲಿನ ಚೀನಾ ಸಾಲ 29 ಬಿಲಿಯನ್ ಡಾಲರ್ ದಾಟಿದ್ದು, ಹೊಸ ಹೂಡಿಕೆಗಿಂತ ಹಳೆ ಸಾಲ ಮರುಪಾವತಿಗೆ ಒತ್ತಡ ಹೇರುತ್ತಿದೆ. ಕಜಕಿಸ್ತಾನದಲ್ಲಿ ಚೀನಾದ ಮೂಲಸೌಕರ್ಯಗಳ ಮೇಲಿನ ದಾಳಿಗಳಲ್ಲಿ ಪಾಕ್ ಪ್ರೇರಿತ ಉಗ್ರ ಗುಂಪುಗಳ ಪರೋಕ್ಷ ಸಂಬಂಧ ಇದೆ ಎಂಬ ಶಂಕೆ ಎದ್ದಾಗಿನಿಂದ ಎರಡೂ ದೇಶಗಳ ನಡುವೆ ಶೀತಲ ಸಮರ ಆರಂಭವಾಗಿದೆ. ಅತ್ಯಂತ ಅವಮಾನಕರ ಬೆಳವಣಿಗೆ ಎಂದರೆ, ದಿ ಸ್ಟೇಟ್ಸ್‌ಮನ್ ವರದಿ ಪ್ರಕಾರ ಚೀನಾ ಗ್ವಾಡರ್‌ನಲ್ಲಿ ತನ್ನ ಪ್ರಜೆಗಳ ರಕ್ಷಣೆಗಾಗಿ ಪಾಕ್ ಸೇನೆಯ ಬದಲು ತನ್ನದೇ ಖಾಸಗಿ ಭದ್ರತಾ ಪಡೆಗಳನ್ನು ನಿಯೋಜಿಸುವ ಇಂಗಿತ ವ್ಯಕ್ತಪಡಿಸಿತ್ತು. ನಂತರ ಪರಿಸ್ಥಿತಿ ಕೈ ಮೀರಿದ ಕಾರಣ ಗ್ವಾಡರ್ ಬಂದರು ಯೋಜನೆಯಿಂದಲೇ ಚೀನಾ ಸಂಪೂರ್ಣ ಹೊರ ನಡೆಯಿತು. ಇದು ಪಾಕ್ ಆರ್ಥಿಕ ಸ್ಥಿತಿಗೆ ಕೊನೆಯ ಪೆಟ್ಟಿನಂತಾಗಿದೆ. ಒಟ್ಟಾರೆ, ಚೀನಾ ಪಾಕಿಸ್ತಾನವನ್ನು ಕೇವಲ ಆರ್ಥಿಕ ಹೊರೆಯಾಗಿ ನೋಡಲು ಆರಂಭಿಸಿದ್ದು, ದಕ್ಷಿಣ ಏಷ್ಯಾದ ರಾಜಕೀಯ ಸಮೀಕರಣ ಬದಲಾಗುತ್ತಿದೆ. ಇದಕ್ಕಿಂತ ದೊಡ್ಡ ಅವಮಾನ ಯಾವುದು? ದಶಕಗಳ ಮಿತ್ರ ರಾಷ್ಟ್ರವೇ ನಿನ್ನ ಸೇನೆಯನ್ನು ನಂಬದೆ, ನಿನ್ನ ನೆಲದಲ್ಲಿ ತನ್ನದೇ ಭದ್ರತಾ ಪಡೆ ನಿಯೋಜಿಸುತ್ತೇನೆ ಎಂದು ಹೇಳಿದಾಗ, ಪಾಕ್ ಸಾರ್ವಭೌಮತ್ವ ಕೇವಲ ಕಾಗದದ ಮೇಲಿನ ಮಾತಾಗಿ ಉಳಿಯಿತು.

ಸೇನೆಯ ಆಂತರಿಕ ಬಿರುಕು: ಜನರಲ್ ಮುನೀರ್, ಐಎಸ್‌ಐ ಮತ್ತು ಎಂಐ ಸಂಘರ್ಷ

ಆಪರೇಷನ್ ಸಿಂದೂರ್ ನಂತರ ಅದರ ಹಿಂದಿನಿಂದಲೂ ಇದ್ದ ಆಂತರಿಕ ಅಸಮಧಾನ ಜೋರಾಗಿ ಕೇಳುತ್ತಿದೆ. ಕಾರ್ಯಾಚರಣೆ ನಡೆಯುತ್ತಿದ್ದ ಸಂದರ್ಭದಲ್ಲಿ, ಸೇನಾ ಮುಖ್ಯಸ್ಥ ಜನರಲ್ ಆಸಿಮ್ ಮುನೀರ್ ರಾವಲ್ಪಿಂಡಿಯ ಜಿಎಚ್ ಕ್ಯುನ ಸುರಕ್ಷಿತ ಭೂಗತ ಬಂಕರ್‌ನಲ್ಲಿ ಅಡಗಿಕೊಂಡಿದ್ದರು ಎಂಬ ವಿಷಯ ಇಂಟರ್ನ್ಯಾಷನಲ್ ಇನ್‌ಸ್ಟಿಟ್ಯೂಟ್ ಫಾರ್ ಸ್ಟ್ರಾಟೆಜಿಕ್ ಸ್ಟಡೀಸ್(ಐಐಎಸ್‌ಎಸ್) ವರದಿ ಮಾಡಿದೆ. ಯುದ್ಧ ಸಂದರ್ಭದಲ್ಲಿ ಮುಂಚೂಣಿಯಲ್ಲಿ ನಿಂತು ಮಾರ್ಗದರ್ಶನ ನೀಡಬೇಕಿದ್ದ ಮುನೀರ್ ಸಂಪರ್ಕಕ್ಕೆ ಸಿಗದೆ ಇದ್ದ ನಡವಳಿಕೆ ಅಧಿಕಾರಿಗಳಲ್ಲಿ ತೀವ್ರ ಆಕ್ರೋಶ ಹುಟ್ಟಿಸಿತು. ಈ ವೈಫಲ್ಯ ಮುಚ್ಚಿಕೊಳ್ಳಲು ಮುನೀರ್ ನಂತರ ಸುಳ್ಳು ವಿಜಯೋತ್ಸವದ ಕಥೆ ಹೆಣೆದ ಮತ್ತು ತನಗೆ ನಿಷ್ಠರಾದ ಅಧಿಕಾರಿಗಳಿಗೆ ಅಕ್ರಮ ಪದೋನ್ನತಿ ನೀಡಿದ.



ಭಾರತದ ದಾಳಿಯ ಬಗ್ಗೆ ಮುನ್ಸೂಚನೆ ನೀಡಲು ಐಎಸ್‌ಐ ವಿಫಲವಾಗಿದ್ದರಿಂದ ಮುನೀರ್ ಅದರ ಮೇಲಿನ ವಿಶ್ವಾಸ ಕಳೆದುಕೊಂಡ. ಬದಲಿಗೆ ಮಿಲಿಟರಿ ಇಂಟೆಲಿಜೆನ್ಸ್ (ಎಂಐ) ಅನ್ನು ತನ್ನ ವೈಯಕ್ತಿಕ ಕಾವಲುಪಡೆಯಂತೆ ಬಳಸಿಕೊಳ್ಳಲು ಆರಂಭಿಸಿದ. ಐಎಸ್‌ಐ ಪ್ರಮುಖ ಅಧಿಕಾರಿಗಳನ್ನು ವರ್ಗಾಯಿಸಿ ಅವರ ಸ್ಥಾನಗಳಲ್ಲಿ ತನಗೆ ನಿಷ್ಠರಾದ ಎಂಐ ಅಧಿಕಾರಿಗಳನ್ನು ನೇಮಿಸುವ ಶುದ್ಧೀಕರಣ ಪ್ರಕ್ರಿಯೆ ಆರಂಭವಾಗಿದ್ದು, ಇದು ಜಿಎಚ್‌ಕ್ಯು ಒಳಗೆ ದೊಡ್ಡ ಮಟ್ಟದ ಅಸ್ಥಿರತೆ ಸೃಷ್ಟಿಸಿದೆ ಎಂದು ಮನಿ ಕಂಟ್ರೋಲ್ ವರದಿ ಮಾಡಿದೆ. ಗುಪ್ತಚರ ಮಾಹಿತಿ ಸರಿಯಾಗಿ ಹಂಚಿಕೆಯಾಗದ ಕಾರಣ UUP ಮತ್ತು ಬಲೂಚ್ ಉಗ್ರ ಗುಂಪುಗಳು ಈ ಬಿರುಕಿನ ಲಾಭ ಪಡೆಯುತ್ತಿದ್ದು, ದೇಶದ ಆಂತರಿಕ ಭದ್ರತೆ ಮತ್ತಷ್ಟು ದುರ್ಬಲವಾಗಿದೆ. ತನ್ನ ಅಧಿಕಾರ ಉಳಿಸಿಕೊಳ್ಳಲು ಮತ್ತು ಸಂಭಾವ್ಯ ಪೊಲಿಟಿಕಲ್ ಕೂ (ರಾಜಕೀಯ ದಂಗೆ) ತಡೆಯಲು ಮುನೀರ್ ನವೆಂಬರ್ 2025ರಲ್ಲಿ 27ನೇ ಸಂವಿಧಾನ ತಿದ್ದುಪಡಿ ಜಾರಿಗೆ ತಂದು ತನಗೆ ತಾನೇ ಫೀಲ್ಡ್ ಮಾರ್ಷಲ್ ಪಟ್ಟ ನೀಡಿಕೊಂಡು ಆಜೀವ ಶಿಕ್ಷೆಯಿಂದ ವಿನಾಯಿತಿ ಪಡೆದ ಎಂದು ಬಿಸಿಸಿಐ ನ್ಯೂಸ್ ಮತ್ತು ದಿ ಗಾರ್ಡಿಯನ್ ವರದಿ ಮಾಡಿವೆ.



ಇದಕ್ಕೂ ಮೀರಿ, ಚೀಫ್ ಆಫ್ ಡಿಫೆನ್ಸ್ ಫೋರ್ಸಸ್ (ಸಿಡಿಎಫ್) ಎಂಬ ಸಂಪೂರ್ಣ ಹೊಸ ಹುದ್ದೆ ಸೃಷ್ಟಿಸಿಕೊಂಡು ನೌಕಾಪಡೆ ಮತ್ತು ವಾಯುಪಡೆಯ ಮೇಲೂ ಏಕವ್ಯಕ್ತಿ ಹಿಡಿತ ಸಾಧಿಸಿದ್ದು. ಈ ಸರ್ವಾಧಿಕಾರಿ ಧೋರಣೆ ಹಿರಿಯ ಕಮಾಂಡರ್‌ಗಳಲ್ಲಿ ತೀವ್ರ ಅಸಮಾಧಾನ ಮೂಡಿಸಿದ್ದು, ಅನೇಕ ಅಧಿಕಾರಿಗಳು ಮುನೀರ್ ಮಾನಸಿಕವಾಗಿ ಅಸ್ಥಿರ ಎಂದು ಗುಟ್ಟಾಗಿ ಮಾತನಾಡಿಕೊಳ್ಳುತ್ತಿದ್ದಾರೆ.



ದಿ ಸ್ಟೇಟ್ಸ್‌ಮನ್ ವರದಿ ಪ್ರಕಾರ, ಪಾಕ್ ಸೈನ್ಯ ಇಂದು ಮುನೀರ್ ಬಣ ಮತ್ತು ಸಾಂಪ್ರದಾಯಿಕ ಐಎಸ್‌ಐ ಬಣ ಎಂದು ಎರಡಾಗಿ ವಿಭಜಿತವಾಗಿದ್ದು, ಈ ಆಂತರಿಕ ಕಲಹ ಎಷ್ಟರ ಮಟ್ಟಿಗೆ ಬೆಳೆದಿದೆ ಎಂದರೆ ಪಾಕ್ ಪರಮಾಣು ಶಸ್ತ್ರಾಸ್ತ್ರಗಳ ಭದ್ರತೆ ಬಗ್ಗೆ ಜಾಗತಿಕ ಮಟ್ಟದಲ್ಲೂ ಆತಂಕ ಶುರುವಾಗಿದೆ. ಒಆರ್‌ಎಫ್ ವಿಶ್ಲೇಷಣೆಯಂತೆ, ಪಾಕಿಸ್ತಾನ ಸೌಮ್ಯ ಸರ್ವಾಧಿಕಾರದಿಂದ ಸಂಪೂರ್ಣ ಮಿಲಿಟರಿ ಸ್ಟೇಟ್ ಆಗಿ ಬದಲಾಗಿದೆ.

ಅಮೆರಿಕದ ಚದುರಂಗ: ಗಾಜಾ ಶಾಂತಿಪಡೆ ಮತ್ತು ಸಾರ್ವಭೌಮತ್ವದ ಹರಾಜು

ಆಪರೇಷನ್ ಸಿಂದೂರ್ ನಂತರ ಅಮೆರಿಕ ಪಾಕಿಸ್ತಾನವನ್ನು ತನ್ನ ಕಾಲಾಳಿನಂತೆ ಬಳಸಿಕೊಳ್ಳಲು ಮುಂದಾಗಿದೆ. ನವೆಂಬರ್ 2025ರಲ್ಲಿ ಅಮೆರಿಕ ಮಂಡಿಸಿದ ಗಾಜಾ ಶಾಂತಿ ಯೋಜನೆಯ ಅಡಿಯಲ್ಲಿ, ಗಾಜಾದಲ್ಲಿ ಸ್ಥಿರತೆ ತರಲು ಪಾಕ್ ಸೈನ್ಯವನ್ನು ಶಾಂತಿಪಡೆಯಾಗಿ (ಐಎಸ್‌ಎಫ್) ನಿಯೋಜಿಸುವ ಪ್ರಸ್ತಾವ ಮಂಡಿಸಲಾಯಿತು. ಇದರ ಪರಿಣಾಮವಾಗಿ ಆಸಿಮ್ ಮುನೀರ್ ಅಮೆರಿಕದ ಒತ್ತಡಕ್ಕೆ ಮಣಿದು ತನ್ನ ದೇಶದ ಜನರ ಇಚ್ಛೆಗೆ ವಿರುದ್ಧವಾಗಿ ನಡೆದುಕೊಳ್ಳಬೇಕಾಯಿತು. ಇದು ವಿರೋಧ ಪಕ್ಷಗಳಿಗೆ ದೊಡ್ಡ ಅಸ್ತ್ರವನ್ನು ನೀಡಿತು. ಪಾಕ್ ರಾಜಕೀಯ ವಲಯದಲ್ಲಿ ಅಮೆರಿಕದ ಪ್ರಭಾವ ಎಷ್ಟು ಗಾಢವಾಗಿದೆ ಎಂದರೆ, ಪ್ರಧಾನಿ ಮತ್ತು ಸೇನಾ ಮುಖ್ಯಸ್ಥರ ಆಯ್ಕೆ ಇಸ್ಲಾಮಾಬಾದ್‌ಗಿಂತ ವಾಷಿಂಗ್ಟನ್‌ನಲ್ಲಿ ನಿರ್ಧಾರವಾಗುತ್ತದೆ ಎಂಬ ಭಾವನೆ ಜನರಲ್ಲಿ ಬೇರೂರಿದೆ. ಅದಕ್ಕಾಗಿಯೇ ಜನ ಸಾಮಾನ್ಯರು ಅಮೆರಿಕ ಜೊ ಯಾರ್ ಹೈ ದೇಶ್ ಕಾ ಗದ್ದಾರ್ ಹೈ (ಅಮೆರಿಕದ ಮಿತ್ರ ದೇಶದ್ರೋಹಿ) ಎಂದು ಬೀದಿ ಬೀದಿಗಳಲ್ಲಿ ಮುನೀರ್ ವಿರುದ್ಧ ಘೋಷಣೆ ಕೂಗುತ್ತಿದ್ದಾರೆ.

ಶಿಯಾ–ಸುನ್ನಿ ಧ್ರುವೀಕರಣ: ಒಳ ಉರಿಯುತ್ತಿರುವ ಕೆಂಡ



ಇರಾನ್ ಮತ್ತು ಪಾಕಿಸ್ತಾನ ನಡುವಿನ ಸಂಘರ್ಷ ಮತ್ತು ಅಮೆರಿಕ ಒತ್ತಡ ದೇಶದ ಒಳಗೆ ತೀವ್ರ ಶಿಯಾ–ಸುನ್ನಿ ಧ್ರುವೀಕರಣಕ್ಕೆ ಕಾರಣವಾಗಿದೆ. ಒಟ್ಟು ಜನಸಂಖ್ಯೆಯ ಶೇ.15ರಿಂದ 20ರಷ್ಟಿರುವ ಶಿಯಾ ಸಮುದಾಯ ಇರಾನ್ ಅನ್ನು ತನ್ನ ಆಧ್ಯಾತ್ಮಿಕ ಕೇಂದ್ರವಾಗಿ ಕಾಣುತ್ತದೆ. ಇರಾನ್ ಮೇಲೆ ಅಂತಾರಾಷ್ಟ್ರೀಯ ಒತ್ತಡ ಮತ್ತು ದಾಳಿಗಳು ನಡೆದಾಗ ಪಾಕ್ ಶಿಯಾ ಸಮುದಾಯ ದೊಡ್ಡ ಪ್ರಮಾಣದಲ್ಲಿ ಬೀದಿಗಿಳಿಯುತ್ತಿದೆ. ಇದನ್ನು ಬಳಸಿಕೊಳ್ಳುವ ಸುನ್ನಿ ಉಗ್ರಗಾಮಿ ಗುಂಪುಗಳು ಇದನ್ನು ಇರಾನ್ ಪ್ರಭಾವದ ವಿಸ್ತರಣೆ ಎಂದು ಬಿಂಬಿಸಿ ಗುಂಪು ಘರ್ಷಣೆ ಮತ್ತು ಅಸ್ಥಿರತೆಗೆ ದಾರಿ ಮಾಡಿಕೊಡುತ್ತಿದ್ದಾರೆ. ಈ ಉದ್ವಿಗ್ನ ಸ್ಥಿತಿಯಲ್ಲಿ, ಆಸಿಮ್ ಮುನೀರ್ ಶಿಯಾ ಧರ್ಮಗುರುಗಳ ಸಭೆಯಲ್ಲಿ ಇರಾನ್ ಬಗ್ಗೆ ಅಷ್ಟು ಪ್ರೀತಿ ಇದ್ದರೆ ಅಲ್ಲಿಗೇ ಹೋಗಿ ಎಂದು ನೀಡಿದ ಹೇಳಿಕೆ ಬೆಂಕಿಗೆ ತುಪ್ಪ ಸುರಿದಂತಾಗಿದೆ. ಶಿಯಾ ನಿಷ್ಠೆಯನ್ನೇ ಪ್ರಶ್ನಿಸುವ ಈ ಹೇಳಿಕೆ ಸಮಾಜದಲ್ಲಿ ಆಳವಾದ ವಿಭಜನೆ ಸೃಷ್ಟಿಸಿದೆ. ಸೌದಿ ಅರೇಬಿಯಾ (ಸುನ್ನಿ ಪರ) ಮತ್ತು ಇರಾನ್ (ಶಿಯಾ ಪರ) ನಡುವಿನ ಪ್ರಾದೇಶಿಕ ಪೈಪೋಟಿ ಪಾಕ್ ನೆಲದಲ್ಲಿ ಪರೋಕ್ಷ ಯುದ್ಧಕ್ಕೆ ದಾರಿ ಮಾಡಿಕೊಡದಂತೆ ತಡೆಯಬೇಕಾದ ಗಂಭೀರ ಸವಾಲನ್ನು ಆಡಳಿತ ಎದುರಿಸುತ್ತಿದೆ.



ಇಸ್ಲಾಮಿಕ್ ಉಗ್ರವಾದ: ತಿರುಗಿ ಕಚ್ಚಿದ ಹಾವು

ಧಾರ್ಮಿಕ ನೆಲೆಯಲ್ಲೂ ಪರಿಸ್ಥಿತಿ ಜ್ವಲನಬಿಂದುವಿನಲ್ಲಿದೆ. ಗಾಜಾ ಮತ್ತು ಇಸ್ರೇಲ್ ಸಂಘರ್ಷದಲ್ಲಿ ಪಾಕಿಸ್ತಾನ ಮೃದು ಧೋರಣೆ ಅನುಸರಿಸಲು ಅಮೆರಿಕ ಒತ್ತಡ ಹಾಕಿರುವುದು ಟಿಎಲ್‌ಪಿ(ಟಿಎಲ್‌ಪಿ) ಮತ್ತು ಜಮಾತ್–ಎ–ಇಸ್ಲಾಮಿಯಂತಹ ಕಟ್ಟರ್ ಸಂಘಟನೆಗಳನ್ನು ಕೆರಳಿಸಿದೆ. ಮುಸ್ಲಿಂ ಉಮ್ಮಾವನ್ನು ಅಮೆರಿಕಕ್ಕೆ ಅಡವಿಡಲಾಗಿದೆ ಎಂಬ ಮತೀಯ ಪ್ರಚೋದನೆ ಯುವಜನರನ್ನು ಉಗ್ರವಾದದತ್ತ ಸೆಳೆಯುತ್ತಿದೆ. ದಶಕಗಳ ಕಾಲ "Bleed India with a Thousand Cuts' ನೀತಿ ಅನುಸರಿಸಿ ಉಗ್ರರ ಮೂಲಕ ಭಾರತವನ್ನು ದುರ್ಬಲಗೊಳಿಸಲು ನೋಡಿದ ಪಾಕಿಸ್ತಾನಕ್ಕೆ, ಆಪರೇಷನ್ ಸಿಂದೂರ್ ಅದೇ ಭಾಷೆಯಲ್ಲಿ ಉತ್ತರ ಕೊಟ್ಟಿತು. ಪಾಕಿಸ್ತಾನದೊಳಗೆ ಆಗಲೇ ಪಂಜಾಬ್ ಪ್ರಾಂತ್ಯದ ಹಿಡಿತದಿಂದ ರೋಸಿ ಹೋಗಿದ್ದ ಉಳಿದ ರಾಜ್ಯಗಳು ತಿರುಗಿ ಬಿದ್ದಿದ್ದ ಸಂದರ್ಭದಲ್ಲಿ ಭಾರತ ನೇರವಾಗಿ ಪಂಜಾಬ್ ಕೇಂದ್ರಿತ ದಾಳಿ ನಡೆಸಿತು. ಪಾಕ್ ಸೈನ್ಯ ಭಾರತ ಪಾಕಿಸ್ತಾನದ ಮೇಲೆ ದಾಳಿ ನಡೆಸಿದೆ ಎಂದು ಘೋಷಿಸಿದಾಗ, ತಾನೇ ಸಾಕಿ ಬೆಳೆಸಿದ ಟಿಟಿಪಿ ಇದು ಪಾಕಿಸ್ತಾನದ ಮೇಲಿನ ದಾಳಿಯಲ್ಲ, ಪಂಜಾಬಿ ಸೈನ್ಯದ ಮೇಲಿನ ದಾಳಿ ಎಂದು ಹೇಳುವ ಮೂಲಕ ಪಾಕಿಸ್ತಾನದ ಆಂತರಿಕ ವಿದ್ರೋಹದ ಕುರುಹನ್ನು ಜಗಜ್ಜಾಹೀರು ಮಾಡಿತು. ಪಾಕಿಸ್ತಾನ ಒಂದು ಕಾಲದಲ್ಲಿ ಅಮೆರಿಕ ವಿರುದ್ಧ ಹೋರಾಡಲು ಸಾಕಿ ಬೆಳೆಸಿದ ತೆಹ್ರಿಕ್–ಎ–ತಾಲಿಬಾನ್ ಪಾಕಿಸ್ತಾನ್ (ಟಿಟಿಪಿ) ಈಗ ಪಾಕ್ ಸೈನ್ಯವನ್ನೇ ಅಮೆರಿಕದ ಏಜೆಂಟ್ ಎಂದು ಕರೆದು ಸೈನಿಕರ ಮೇಲೆ ಆತ್ಮಾಹುತಿ ದಾಳಿ ನಡೆಸುತ್ತಿದೆ. ಪಾಕ್ ತಾನೇ ಸಾಕಿದ ಹಾವು ತಿರುಗಿ ಕಚ್ಚಿದ ಪರಿಸ್ಥಿತಿ ಇದಾಗಿದ್ದು, ಅಮೆರಿಕದೊಂದಿಗಿನ ಪ್ರತಿ ಹೊಂದಾಣಿಕೆ ದೇಶದ ಒಳಗೆ ಮತ್ತಷ್ಟು ಅಂತರ್ಯುದ್ಧದಂತಹ ಸ್ಥಿತಿ ಸೃಷ್ಟಿಸುತ್ತಿದೆ. ಡಾಲರ್ ನೆರವು ಪಡೆಯುತ್ತಿದ್ದರೂ ಒಳಗಿನಿಂದ ರಾಜಕೀಯ ನೈತಿಕತೆ ಮತ್ತು ಸಾಮಾಜಿಕ ಶಾಂತಿಯನ್ನು ಶಾಶ್ವತವಾಗಿ ಕಳೆದು ಕೊಳ್ಳುತ್ತಿದೆ.

ಸೌದಿ-ಯುಎಇ ಪೈಪೋಟಿ, ಭಾರತದ ಕಾರ್ಯತಂತ್ರ

ಸೌದಿ ಅರೇಬಿಯಾ ಮತ್ತು ಯುಎಇ ನಡುವಿನ ಪ್ರಾದೇಶಿಕ ಪೈಪೋಟಿಯಲ್ಲಿ ಪಾಕಿಸ್ತಾನವು ಇಕ್ಕಟ್ಟಿಗೆ ಸಿಲುಕಿ ಎರಡೂ ಕಡೆಯಿಂದ ನಷ್ಟ ಅನುಭವಿಸುತ್ತಿದೆ. 2025ರ ಸೆಪ್ಟೆಂಬರ್‌ನಲ್ಲಿ ಪಾಕ್ ಸೌದಿ ಅರೇಬಿಯಾದೊಂದಿಗೆ ಪರಸ್ಪರ ರಕ್ಷಣಾ ಒಪ್ಪಂದಕ್ಕೆ ಸಹಿ ಹಾಕಿ, ಸೌದಿಗೆ ಭೀತಿ ಎದುರಾದರೆ ತನ್ನ ಸೈನ್ಯವನ್ನು ನಿಯೋಜಿಸಲು ಒಪ್ಪಿಕೊಂಡಿತು. ಈ ನಡೆಯನ್ನು ಯುಎಇ ತನ್ನ ವಿರುದ್ಧ ಸೌದಿ ಪರ ಒಲವು ಎಂದು ಭಾವಿಸಿ ತಕ್ಷಣ ಸುಮಾರು 3.5 ಬಿಲಿಯನ್ ಡಾಲರ್ ಸಾಲವನ್ನು ಮರುಪಾವತಿಸಲು ಒತ್ತಡ ಹೇರಿತು. ಅಷ್ಟೇ ಅಲ್ಲ, ಎತಿಹಾದ್ ಏರ್ವೇಸ್‌ನಂತಹ ಯುಎಇ ಸಂಸ್ಥೆಗಳಿಂದ ಪಾಕ್ ಉದ್ಯೋಗಿಗಳನ್ನು ಭದ್ರತಾ ಕಾರಣ ನೀಡಿ ಕೆಲಸದಿಂದ ತೆಗೆದು ಕಠಿಣ ಸಂದೇಶವನ್ನು ರವಾನಿಸಿತು. ಸೌದಿ ಕೈಹಿಡಿದಿದ್ದರೂ ಹಳೆಯ ಮಿತ್ರ ಯುಎಇ ತಿರುಗಿ ನೋಡದ ಸ್ಥಿತಿ ಬಂದಿದೆ.

ಈ ಸಂದರ್ಭವನ್ನು ಭಾರತ ಅತ್ಯಂತ ಚಾಣಾಕ್ಷತನದ ಕಾರ್ಯತಂತ್ರ ಸಮತೋಲನ (Strategic Balancing) ತಂತ್ರದಿಂದ ಬಳಸಿಕೊಳ್ಳುತ್ತಿದೆ. ಸೌದಿ–ಪಾಕ್ ರಕ್ಷಣಾ ಒಪ್ಪಂದಕ್ಕೆ ಪ್ರತಿಯಾಗಿ ಭಾರತ ಯುಎಇ ಜೊತೆಗಿನ ರಕ್ಷಣಾ ಮತ್ತು ಆರ್ಥಿಕ ಸಂಬಂಧವನ್ನು ಗಾಢಗೊಳಿಸಿತು. ಇದರಿಂದ ಯುಎಇ ಅರಬ್ಬಿ ಸಮುದ್ರ ಮತ್ತು ಹಿಂದೂ ಮಹಾಸಾಗರದ ಪ್ರಮುಖ ಭದ್ರತಾ ಪಾಲುದಾರನಾಗಿ ಭಾರತವನ್ನು ನೋಡಲು ಆರಂಭಿಸಿದೆ. ಏಕಕಾಲದಲ್ಲಿ ಭಾರತ ಇಂಡಿಯಾ–ಸೌದಿ ಸ್ಟ್ರಾಟೆಜಿಕ್ ಪಾರ್ಟ್ನರ್‌ಶಿಪ್ ಕೌನ್ಸಿಲ್ ಮೂಲಕ ಇಂಧನ ಮತ್ತು ಹೂಡಿಕೆ ಸಂಬಂಧವನ್ನು ಬಲಪಡಿಸಿ, ಪಾಕ್ ಮೇಲಿನ ಸೌದಿ ಮಿಲಿಟರಿ ಬೆಂಬಲ ಭಾರತದ ಹಿತಾಸಕ್ತಿಗೆ ವಿರೋಧವಾಗದಂತೆ ರಾಜತಾಂತ್ರಿಕ ಒತ್ತಡವನ್ನು ಬಳಸುತ್ತಿದೆ.



ಭಾರತ ಇಸ್ರೇಲ್ ಮತ್ತು ಯುಎಇ ಜೊತೆಗೂಡಿ ಹೊಸ ಪ್ರಾದೇಶಿಕ ಅಕ್ಷವನ್ನು ಸೃಷ್ಟಿಸಿ ಸೌದಿ–ಪಾಕ್–ಟರ್ಕಿ ಮೈತ್ರಿಕೂಟಕ್ಕೆ ಪ್ರಬಲ ಪ್ರತ್ಯುತ್ತರ ನೀಡುತ್ತಿದ್ದು, ಗಲ್ಫ್ ಪ್ರದೇಶದಲ್ಲಿ ಭಾರತದ ಪ್ರಭಾವ ಹೆಚ್ಚಾಗಿ ಪಾಕ್ ರಾಜತಾಂತ್ರಿಕವಾಗಿ ಮೂಲೆಗುಂಪಾಗುತ್ತಿದೆ. ಪಾಕಿಸ್ತಾನ ಒಂದೊಂದಾಗಿ ಮಿತ್ರರನ್ನು ಕಳೆದುಕೊಳ್ಳುತ್ತಿದ್ದ ಅದೇ ಹೊತ್ತಿಗೆ, ಭಾರತ ಅದೇ ಮಿತ್ರರನ್ನು ತನ್ನ ಕಡೆಗೆ ಸೆಳೆದುಕೊಳ್ಳುತ್ತಿತ್ತು. ಯುಎಇ ಪಾಕಿಸ್ತಾನದ ಸಾಲವನ್ನು ವಾಪಸ್ ಕೇಳುತ್ತಿದ್ದ ಅದೇ ಸಮಯದಲ್ಲಿ ಭಾರತದೊಂದಿಗೆ ರಕ್ಷಣಾ ಒಪ್ಪಂದವನ್ನು ಬಲಪಡಿಸಿಕೊಳ್ಳುತ್ತಿತ್ತು. ಸೌದಿ ಪಾಕ್ ಸೈನ್ಯಕ್ಕೆ ಹಣ ಕೊಡುತ್ತಿದ್ದರೂ, ಭಾರತದೊಂದಿಗೆ ಇಂಧನ ಮತ್ತು ಹೂಡಿಕೆ ಸಂಬಂಧವನ್ನು ಮತ್ತಷ್ಟು ಗಟ್ಟಿಯಾಗಿಸಿಕೊಳ್ಳುತ್ತಿತ್ತು. ಪಾಕಿಸ್ತಾನ ಡಾಲರ್‌ಗಾಗಿ ಸೈನ್ಯ ಮಾರಿಕೊಂಡು ತಾತ್ಕಾಲಿಕವಾಗಿ ಉಸಿರಾಡುತ್ತಿದ್ದರೆ, ಭಾರತ ಅದೇ ಕೊಲ್ಲಿ ರಾಷ್ಟ್ರಗಳ ನಡುವೆ ದೀರ್ಘಕಾಲಿಕ ಪ್ರಭಾವವನ್ನು ಬೆಳೆಸಿಕೊಳ್ಳುತ್ತಿತ್ತು.

ಒಟ್ಟಾರೆ ಸೈನ್ಯ ಒಡೆದಿದೆ, ಆರ್ಥಿಕತೆ ಕುಸಿದಿದೆ, ಚೀನಾ ದೂರ ಸರಿದಿದೆ, ಅಮೆರಿಕದ ಕಾಲಡಿಯಲ್ಲಿ ಸ್ವಾಭಿಮಾನ ಅಡವಿಟ್ಟಿದೆ, ತಾನೇ ಸಾಕಿದ ಉಗ್ರರು ತಿರುಗಿ ಕಚ್ಚುತ್ತಿದ್ದಾರೆ, ಮಿತ್ರ ರಾಷ್ಟ್ರಗಳು ಭಾರತದ ಕಡೆ ಸರಿಯುತ್ತಿವೆ. ಒಳಗಡೆ ಗೃಹಯುದ್ಧ ಮತ್ತು ಅರಾಜಕತೆ ಮಿತಿ ಮೀರಿದೆ, ಗಡಿಯಾಚೆ ಅಫ್ಘಾನಿಸ್ತಾನ ಹೊಂಚು ಹಾಕಿ ಕುಳಿತಿದೆ. ಇತಿಹಾಸದಲ್ಲಿ ಅನೇಕ ರಾಷ್ಟ್ರಗಳು ಯುದ್ಧದಲ್ಲಿ ಸೋತು ಮತ್ತೆ ಎದ್ದಿವೆ. ಆದರೆ ತನ್ನ ಸೈನ್ಯ, ತನ್ನ ಜನ, ತನ್ನ ಮಿತ್ರರು ಮತ್ತು ತನ್ನ ಆತ್ಮ? ಎಲ್ಲವನ್ನೂ ಒಂದೇ ಸಲ ಕಳೆದುಕೊಂಡ ರಾಷ್ಟ್ರ ಮತ್ತೆ ಏಳುವುದು ಸುಲಭವಲ್ಲ. ಪಾಕಿಸ್ತಾನ ಇಂದು ಅಂತಹ ಹಂತದಲ್ಲಿದೆ.

ಕಿರುಸುದ್ದಿ

ಹೊಳೆಯಲ್ಲಿ ಸ್ನಾನಕ್ಕಿಳಿದ ಇಬ್ಬರು ಮಕ್ಕಳಿಗೆ ನೀರು ನಾಯಿ ಕಚ್ಚಿ ಗಾಯ: ಆಸ್ಪತ್ರೆಗೆ

ಕಾಸರಗೋಡು: ಕರಿಚ್ಚೇರಿ ಹೊಳೆಯ ನೀಟಂಗೋಟ್ ನದಿಯಲ್ಲಿ ಸ್ನಾನ ಮಾಡುತ್ತಿದ್ದ ಇಬ್ಬರು ಮಕ್ಕಳಿಗೆ ನೀರುನಾಯಿ ಕಚ್ಚಿದೆ. ನೀರುನಾಯಿಯ ಕಡಿತದಿಂದ ಗಾಯಗೊಂಡ ಅವರನ್ನು ಕಾಸರಗೋಡು ಆಸ್ಪತ್ರೆಗೆ ದಾಖಲಿಸಲಾಗಿದೆ. ಪರಂಬ ಮುಂಜತ್ ಅಶೋಕ್‌ರವರ ಪುತ್ರ ಕರಿಚ್ಚೇರಿ ಶಾಲೆಯ 7ನೇ ತರಗತಿ ವಿದ್ಯಾರ್ಥಿ ಆರವ್. ಇದೇ ಸ್ಥಳದ ಜನಾರ್ದನನ್ ಎಂಬವರ ಪುತ್ರ ಚಟ್ಟಂಚಾಲ್ ಶಾಲೆಯ 10ನೇ ತರಗತಿ ವಿದ್ಯಾರ್ಥಿ ಕಣ್ಣನ್ ಎಂಬವರಿಗೆ ನೀರುನಾಯಿ ಕಚ್ಚಿದೆ.

ಬೈಕ್ – ಬಸ್ ಡಿಕ್ಕಿ ಹೊಡೆದು ಸಾರಣೆ ಕಾರ್ಮಿಕ ಮೃತ್ಯು

ಕಾಞಂಗಾಡು: ಅಂಬಲತ್ತರೆ ಪೊಲೀಸ್ ಸ್ಟೇಷನ್ ವ್ಯಾಪ್ತಿಯ ಇರಿಯದಲ್ಲಿ ಬಸ್– ಬೈಕ್ ಡಿಕ್ಕಿ ಹೊಡೆದು ಸಂಭವಿಸಿದ ಅಪಘಾತದಲ್ಲಿ ಮೂರನೇಮೈಲ್ ಪುದಂಗಾನಂ ವಟ್ಟಕ್ಕಯ ನಿವಾಸಿ ನಾರಾಯಣನ್ ಎಂಬವರ ಪುತ್ರ ರಾಘವನ್ (49)ಮೃತಪಟ್ಟಿದ್ದಾರೆ. ಕಾಞಂಗಾಡು – ಪಾಣತ್ತೂರು ರಾಜ್ಯ ಹೆದ್ದಾರಿಯ ಇರಿಯ ಬಂಗ್ಲಾವ್ ಸಮೀಪದಲ್ಲಿ ಅಪಘಾತ ಸಂಭವಿಸಿದೆ. ರಾಘವನ್ ಚಲಾಯಿಸಿದ ಬೈಕ್ ಹಾಗೂ ಖಾಸಗಿ ಬಸ್ ಡಿಕ್ಕಿ ಹೊಡೆದು ಅಪಘಾತ ಉಂಟಾಯಿತು. ರಾಘವನ್ ಅವರನ್ನು ಕೂಡಲೇ ಆಸ್ಪತ್ರೆಗೆ ಕೊಂಡೊಯ್ಯಲಾಯಿತ್ತಾದರೂ ಪ್ರಾಣ ಉಳಿಸಲು ಸಾಧ್ಯವಾಗಲಿಲ್ಲ. ಸಾರಣೆ ಕಾರ್ಮಿಕರಾಗಿದ್ದಾರೆ. ಕೆಲಸ ಮುಗಿಸಿ ಮನೆಗೆ ಹಿಂತಿರುಗುವ ಮಧ್ಯೆ ಅಪಘಾತ ಸಂಭವಿಸಿದೆ. ಖಾಸಗಿ ಬಸ್ ಚಾಲಕನ ವಿರುದ್ಧ ಅಂಬಲತ್ತರೆ ಪೊಲೀಸರು ಕೇಸು ದಾಖಲಿಸಿಕೊಂಡಿದ್ದಾರೆ.

ವಡೇರಹೋಬಳಿ: ಪಾಳು ಬಾವಿಗೆ ಬಿದ್ದಿದ್ದ ಗೂಳಿಯ ರಕ್ಷಣೆ

ಕುಂದಾಪುರ: ವಡೇರಹೋಬಳಿ ಗ್ರಾಮದ ಗದ್ದೆಯಲ್ಲಿರುವ ಪಾಳು ಬಿದ್ದ ಬಾವಿಗೆ ಬಿದ್ದಿದ್ದ ಗೂಳಿಯೊಂದನ್ನು ಕುಂದಾಪುರ ಅಗ್ನಿಶಾಮಕ ಠಾಣೆ ಸಿಬ್ಬಂದಿಗಳು ರಕ್ಷಣೆ ಮಾಡಿದ್ದಾರೆ. ಸುಮಾರು 4 ಅಡಿ ಅಗಲ ಹಾಗೂ 25 ಅಡಿ ಆಳವಿರುವ ಇಕ್ಕಟ್ಟಾದ ಬಾವಿಗೆ ಬಿದ್ದ ಗೂಳಿಯನ್ನು ರಕ್ಷಣಾ ಉಪಕರಣಗಳನ್ನು ಬಳಸಿ, ಸಾರ್ವಜನಿಕರ



ಸಹಕಾರದೊಂದಿಗೆ ಸುರಕ್ಷಿತವಾಗಿ ಮೇಲಕ್ಕೆತ್ತಿ ರಕ್ಷಿಸಲಾಯಿತು. ಕಾರ್ಯಾಚರಣೆಯಲ್ಲಿ ಅಗ್ನಿಶಾಮಕ ಠಾಣೆಯ ಠಾಣಾಧಿಕಾರಿ ವಿ. ಸುಂದರ್, ಸಹಾಯಕ ಠಾಣಾಧಿಕಾರಿ ಕೆ. ಎಲ್. ಹೊಸರತ್ತಿ, ಪ್ರಮುಖ ಫೈರ್ ಫೈಟರ್ ಸಿಬ್ಬಂದಿಗಳಾದ ಬಾಲಕೃಷ್ಣ, ಸತೀಶ್ ಶೆಣೈ, ಅಭಿಷೇಕ್ ಢಂಗ, ರಿಯಾಜ ಪಟೇಲ ಹಾಗೂ ಅಗ್ನಿಶಾಮಕ ಚಾಲಕ ಬಸವರಾಜ ಹಳ್ಳದಗೆಣ್ಣೂರ ಪಾಲ್ಗೊಂಡಿದ್ದರು.

ಸಿಪಿಎಂ – ಲೀಗ್ ನಡುವೆ ಘರ್ಷಣೆ: ಕೇಸು ದಾಖಲು

ಕಾಸರಗೋಡು: ಪಳ್ಳಿಕೆರೆ ಚೇಟುಕುಂಡು ಸಮೀಪ ಸಿಪಿಎಂ ಮತ್ತು ಮುಸ್ಲಿಂಲೀಗ್ ನಡುವೆ ಘರ್ಷಣೆ ನಡೆದಿದ್ದು, ಮುಸ್ಲಿಂಲೀಗ್‌ನ ಇಬ್ಬರು ಗಾಯಗೊಂಡಿದ್ದಾರೆ. ಕೆ.ವಿ. ಮುಹಮ್ಮದ್ ಅರ್ಷಾದ್ (30) ಮತ್ತು ತೌಸೀಫ್ (30) ಗಾಯಗೊಂಡವರು. ಘಟನೆಗೆ ಸಂಬಂಧಿಸಿ ಸಿಪಿಎಂ ಕಾರ್ಯಕರ್ತರಾದ ಸಲ್ಮಾನ್, ಫರ್ಹಾನ್, ಫರ್ವೀಸ್, ಸುಹೈಫ್, ಶವೇಸ್ ಎಂಬವರ ವಿರುದ್ಧ ಬೇಕಲ ಪೊಲೀಸರು ಕೇಸು ದಾಖಲಿಸಿಕೊಂಡಿದ್ದಾರೆ.

ಬಸ್ ನಿಲ್ದಾಣದ ಸಮೀಪ ಮಟ್ಕಾ ಜುಗಾರಿ: ಓರ್ವನ ಸೆರೆ

ಬ್ರಹ್ಮಾವರ: ಬ್ರಹ್ಮಾವರ ಬಸ್ ನಿಲ್ದಾಣದ ಸಮೀಪ ಮೇ 8ರಂದು ರಾತ್ರಿ ವೇಳೆ ಮಟ್ಕಾ ಜುಗಾರಿ ಆಟ ನಡೆಸುತ್ತಿದ್ದ ಓರ್ವ ಆರೋಪಿಯನ್ನು ಬ್ರಹ್ಮಾವರ ಪೊಲೀಸರು ವಶಕ್ಕೆ ಪಡೆದುಕೊಂಡಿದ್ದಾರೆ. ಆರೋಪಿಯನ್ನು ಚಂದ್ರಶೇಖರ ಎಂದು ಗುರುತಿಸಲಾಗಿದೆ.

ಈತ ಮಟ್ಕಾ ಜುಗಾರಿ ಬಗ್ಗೆ ಸಂಗ್ರಹಿಸಿದ ಹಣವನ್ನು ಮಲ್ಪೆಯ ಕಿಶೋರ್ ಎಂಬಾತನಿಗೆ ನೀಡುವುದಾಗಿ ತಿಳಿಸಿದ್ದಾನೆ. ಚಂದ್ರಶೇಖರ್‌ನಿಂದ 740ರೂ. ನಗದು ವಶಪಡಿಸಿಕೊಳ್ಳಲಾಗಿದೆ. ಈ ಬಗ್ಗೆ ಬ್ರಹ್ಮಾವರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಕಟೀಲು ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನದ ಆವರಣದಲ್ಲಿರುವ ಸರಸ್ವತಿ ಸದನದಲ್ಲಿ ಭಾನುವಾರ ನಡೆದ 'ಕಟೀಲು ಕಲಾ ಉತ್ಸವ'ದಲ್ಲಿ ಕಟೀಲು ಪ್ರತಿಷ್ಠಾನದ ವಿದ್ಯಾರ್ಥಿಗಳಿಂದ ಭರತ ನಾಟ್ಯ ಪ್ರದರ್ಶನಗೊಂಡಿತು.

ಉಡುಪಿ ಜಿಲ್ಲೆಯಲ್ಲಿ ಗಾಳಿ ಮಳೆ: ಕಾರ್ಕಳ, ಹೆಬ್ರಿಯಲ್ಲಿ ಅಪಾರ ನಷ್ಟ

ಉಡುಪಿ: ಶುಕ್ರವಾರ ಸಂಜೆಯ ಬಳಿಕ ಬೀಸಿದ ಭಾರೀ ಗಾಳಿ-ಮಳೆಗೆ ಕಾರ್ಕಳ ಮತ್ತು ಹೆಬ್ರಿ ತಾಲೂಕುಗಳ ಅಲ್ಲಲ್ಲಿ ಹಾನಿ ಸಂಭವಿಸಿರುವ ವರದಿ ಬಂದಿದೆ. ಕಾರ್ಕಳದ ಮಾಧವ ಎಂಬವರ ಮನೆಯ ಮೇಲೆ ಮರ ಬಿದ್ದು ಭಾಗಶ: ಹಾನಿಯಾಗಿದ್ದು ಸುಮಾರು 10,000ರೂ.ಗಳ ನಷ್ಟ ಅಂದಾಜಿಸಲಾಗಿದೆ.

ಮರ ಉರುಳಿ ಜಾನುವಾರು ಸಾವು

ಹೆಬ್ರಿ ತಾಲೂಕು ಮುದ್ರಾಡಿ ಗ್ರಾಮದಲ್ಲಿ ಬೀಸಿದ ಗಾಳಿಗೆ ಮರವೊಂದು ಉರುಳಿ ಬಿದ್ದು ಪೂರ್ಣಿಮಾ ಎಂಬವರ ಜಾನುವಾರು ಮೃತಪಟ್ಟಿದೆ ಎಂದು ಹೆಬ್ರಿ ತಹಶೀಲ್ದಾರರು ತಿಳಿಸಿದ್ದಾರೆ. ಅದೇ ರೀತಿ ಹೆಬ್ರಿಯ ಅಮಿತಾ ಭಟ್ ಎಂಬವರ ಮನೆ ಮಳೆಯ ಆರ್ಭಟದಿಂದ ಭಾಗಶ: ಹಾನಿಗೊಂಡಿದ್ದು 25 ಸಾವಿರ ರೂ.ಗಳ ನಷ್ಟದ ಅಂದಾಜು ಮಾಡಲಾಗಿದೆ. ಶುಕ್ರವಾರ ಸಂಜೆ ಕಾಪುವಿನಲ್ಲಿ ಧಾರಾಕಾರ ಮಳೆ ಸುರಿದಿದೆ. ಅಲ್ಲಿ 32.4 ಮಿ.ಮೀ. ನಷ್ಟು ಮಳೆಯಾದರೆ, ಹೆಬ್ರಿಯಲ್ಲಿ 12.7 ಮಿ.ಮೀ.ನಷ್ಟು ಮಳೆ ಸುರಿದಿದೆ. ಉಳಿದಂತೆ ಉಡುಪಿ ಜಿಲ್ಲೆಯ ಕಾರ್ಕಳದಲ್ಲಿ 6.7 ಮಿ.ಮೀ ರಷ್ಟು ಪ್ರಮಾಣದಲ್ಲಿ ಮಳೆಯಾದ ಬಗ್ಗೆ ವರದಿ ಬಂದಿದೆ.

ವಿವಿಧ ಕಡೆ ತೋಟಗಾರಿಕಾ ಬೆಳೆಗಳಿಗೂ ಅಪಾರ ಹಾನಿ

ಗಾಳಿಗೆ ಹೆಬ್ರಿ ಮತ್ತು ಕಾರ್ಕಳ ತಾಲೂಕಿನಲ್ಲಿ ತೋಟಗಾರಿಕಾ ಬೆಳೆಗಳಿಗೂ ಹಾನಿಯಾಗಿದ್ದು, ಹೆಬ್ರಿಯ ಗಾಲ್ವಿನ್ ಸುಧೀರ್ ಎಂಬವರ ತೋಟಗಾರಿಕಾ ಬೆಳೆಗೆ 20 ಸಾವಿರ ನಷ್ಟವಾದರೆ, ಕಾರ್ಕಳ ತಾಲೂಕಿನ ಕಡ್ತಲದ ಆನಂದ ನಾಯಕ್ ಎಂಬವರ ತೋಟಗಾರಿಕಾ ಬೆಳೆಗೆ 10 ಸಾವಿರದಷ್ಟು ನಷ್ಟ ಸಂಭವಿಸಿದೆ.



ಇನ್ನಷ್ಟು ಬಿಗಿಯಾಗಲಿದೆ ಎರಡು ಧಾರ್ಮಿಕ ಶ್ರದ್ಧಾ ಕೇಂದ್ರಗಳ ನಡುವಣ ಸಂಪರ್ಕ ಕೊಂಡಿ

ಸೌಹಾರ್ದ ಬೆಸೆಯಲು ಸೇತುವೆ ಸಜ್ಜು!

ದಿಗಂತ ವಿಶೇಷ

ಬಂಟ್ವಾಳ: ತಾಲೂಕಿನ ಎರಡು ಧಾರ್ಮಿಕ ಕ್ಷೇತ್ರಗಳಾದ ಕಡೇಶ್ವಾಲ್ಯ ಶ್ರೀ ಲಕ್ಷ್ಮೀನರಸಿಂಹ ದೇವಸ್ಥಾನ ಹಾಗೂ ಅಜಿಲಮೊಗರು ಮಸೀದಿ ಸಂಪರ್ಕಿಸಲು ನೇತ್ರಾವತಿ ನದಿಗೆ ನಿರ್ಮಾಣಗೊಳ್ಳುತ್ತಿರುವ 'ಸೌಹಾರ್ದ ಸೇತುವೆ' ಕಾಮಗಾರಿ ಮತ್ತೆ ಆರಂಭಗೊಂಡು ಭರದಿಂದ ಸಾಗುತ್ತಿದ್ದು, ಶೀಘ್ರವೇ ಈ ಭಾಗದ ಜನತೆಯ ಕನಸು ನನಸಾಗುವ ಹಂತ ತಲುಪಿದೆ.

ಕಡೇಶಿವಾಲಯ ಭಾಗದಲ್ಲಿ ಉಳಿದುಹೋಗಿದ್ದ ಎರಡು ಫೌಂಡೇಶನ್ ಸಹಿತ ಪಿಲ್ಲರ್ ಕಾಮಗಾರಿ ಈಗ ಸಂಪೂರ್ಣಗೊಂಡು ಸೇತುವೆ ನಿರ್ಮಾಣವೂ ನಡೆಯುತ್ತಿದ್ದು, ಕಾಮಗಾರಿಯು ಅಂತಿಮ ಹಂತ ತಲುಪಿದೆ. ಸೇತುವೆ ಮೇಲಿನ ಗರ್ಡರ್‌ಗಳನ್ನೂ ಅಳವಡಿಸಲಾಗಿದ್ದು, ಮಳೆಗಾಲಕ್ಕೆ ಮೊದಲು ಸೇತುವೆಯನ್ನು ಲೋಕಾರ್ಪಣೆಗೊಳಿಸಲು ಸಿದ್ಧತೆ ಮಾಡಲಾಗುತ್ತಿದೆ. ಈ ಸೌಹಾರ್ದ ಸೇತುವೆ ಎರಡು ಧಾರ್ಮಿಕ ಶ್ರದ್ಧ ಕೇಂದ್ರಗಳ ನಡುವೆ ಪ್ರಮುಖ ಸಂಪರ್ಕ ಕೊಂಡಿಯಾಗಲಿದೆ.

2017ರಲ್ಲಿ ಕಾಮಗಾರಿಗೆ ಶಂಕುಸ್ಥಾಪನೆ

ನೇತ್ರಾವತಿ ನದಿಗೆ ಸೇತುವೆ, ಸಂಪರ್ಕ ರಸ್ತೆಯ ಯೋಜನೆಗೆ ನೀಲನಕಾಶೆ ಸಿದ್ಧಗೊಂಡು 2017ರಲ್ಲಿ ಕಾಮಗಾರಿಗೆ ಶಂಕುಸ್ಥಾಪನೆಯಾಗಿತ್ತು. ಆಗ ಸಚಿವರಾಗಿದ್ದ ಬಿ. ರಮಾನಾಥ ರೈ ಪರಿಕಲ್ಪನೆಯಲ್ಲಿ ಎರಡು ಧಾರ್ಮಿಕ ಕ್ಷೇತ್ರ ಸಂಪರ್ಕಿಸುವ ನಿಟ್ಟಿನಲ್ಲಿ ಸೌಹಾರ್ದ ಸೇತುವೆ ಯೋಜನೆಗೆ ರಾಜ್ಯ ರಸ್ತೆ ಅಭಿವೃದ್ಧಿ ನಿಗಮದಿಂದ 19.84 ಕೋಟಿ ರೂಪಾಯಿ ಅನುದಾನ ಮಂಜೂರುಗೊಂಡಿತ್ತು.



ಕಾಡಿತ್ತು ಕೋವಿಡ್

ಅಜಿಲಮೊಗರಿನಿಂದ ಕಡೇಶ್ವಾಲ್ಯಕ್ಕೆ ಒಟ್ಟು 312 ಮೀ. ಉದ್ದ ಮತ್ತು 10.50 ಮೀ. ಅಗಲದ ಸೇತುವೆ ಜತೆಗೆ ಒಟ್ಟು 378 ಮೀ. ಉದ್ದದ ಸಂಪರ್ಕ ರಸ್ತೆ ಕಾಮಗಾರಿ ಚೆನ್ನೈನ ಎಸ್‌ಪಿಎಲ್ ಕಂಪನಿ ಗುತ್ತಿಗೆ ವಹಿಸಲಾಗಿತ್ತು. ಎಸ್‌ಪಿಎಲ್ ಸಂಸ್ಥೆಗೆ 2019ರಲ್ಲೇ ಟೆಂಡರ್ ಆಗಿದ್ದು, 24 ತಿಂಗಳಲ್ಲಿ ಕಾಮಗಾರಿ ಪೂರ್ತಿಗೊಳಿಸುವುದಾಗಿ ಸಂಸ್ಥೆ ಮಾತು ಕೊಟ್ಟಿತ್ತು. 2021ರಲ್ಲಿ ಕಾಮಗಾರಿ ಪೂರ್ಣಗೊಳಿಸುವ ಒಪ್ಪಂದ ಆಗಿತ್ತಾದರೂ ಕೋವಿಡ್ ಸಂದರ್ಭ ಕಾರ್ಮಿಕರ ಕೊರತೆಯಿಂದಾಗಿ ಕಾಮಗಾರಿ ಆಮೆಗತಿಯಲ್ಲಿ ಸಾಗಿತ್ತು. ಬಳಿಕ ಮುಂದಿನ ಎರಡು ವರ್ಷದಲ್ಲಿ ಕಾಮಗಾರಿ ಪೂರ್ಣಗೊಳಿಸುವುದಾಗಿ ಗುತ್ತಿಗೆ ಸಂಸ್ಥೆ ಭರವಸೆ ನೀಡಲಾಗಿತ್ತಾದರೂ ಆಗಿರಲಿಲ್ಲ.

ಕಾಯುತ್ತಿದ್ದಾರೆ ಜನತೆ

ನೇತ್ರಾವತಿ ನದಿಯಲ್ಲಿ ನೀರು ಇಳಿಮುಖ ವಾದ ಕಾರಣ ಸೇತುವೆ ಪಕ್ಕ ನದಿಗೆ ಮಣ್ಣು ತುಂಬಿ ತಾತ್ಕಾಲಿಕ ರಸ್ತೆ ನಿರ್ಮಿಸಲಾಗಿದೆ. ಇದರಿಂದ ಕಾಮಗಾರಿಯ ಸಾಮಗ್ರಿಗಳನ್ನು ತ್ವರಿತವಾಗಿ ಸಾಗಾಟ ಮಾಡಲು ಅನುಕೂಲ ವಾಗುವುದರ ಜತೆಗೆ ಅಜಿಲಮೊಗರು– ಕಡೇಶ್ವಾಲ್ಯ ಸಂಪರ್ಕವೂ ಸಾಧ್ಯವಾಗಿದೆ. ಪ್ರಸ್ತುತ ಸಾರ್ವಜನಿಕರು ಸೇತುವೆ ಸಂಪೂರ್ಣ ಗೊಳ್ಳುವುದನ್ನೇ ಎದುರು ನೋಡುತ್ತಿದ್ದಾರೆ.

ಅಜಿಲಮೊಗರು ಮಸೀದಿಗೆ ಬಂಟ್ವಾಳ– ಮಣಿಹಳ್ಳ– ಸರಪಾಡಿ– ಅಲ್ಲಿಪಾದೆ ರಸ್ತೆ ಮೂಲಕ ಸಾಗಬೇಕು. ಕಡೇಶ್ವಾಲ್ಯ ಕ್ಷೇತ್ರಕ್ಕೆ ಬಿ.ಸಿ. ರೋಡ್– ಉಪ್ಪಿನಂಗಡಿ ರಾಷ್ಟ್ರೀಯ ಹೆದ್ದಾರಿ ಮಧ್ಯೆ ಗಡಿಯಾರ ರಸ್ತೆ ಮೂಲಕ ಸುತ್ತು ಬಳಸಿ ಪ್ರಯಾಣಿಸಬೇಕಾಗುತ್ತದೆ. ಸೇತುವೆ ನಿರ್ಮಾಣವಾದರೆ ಬಳಿಕ ಬಂಟ್ವಾಳ ತಾಲೂಕಿನ ನಾವೂರು, ಮಣಿನಾಲ್ಕೂರು, ಸರಪಾಡಿ, ಕಡೇಶ್ವಾಲ್ಯ, ಬುಡೋಳಿ, ಬರಿಮಾರು ಹಾಗೂ ಪುತ್ತೂರು ತಾಲೂಕಿನ ಉಪ್ಪಿನಂಗಡಿ ಮತ್ತು ಬೆಳ್ತಂಗಡಿ ತಾಲೂಕಿನ ತೆಕ್ಕಾರು, ಬಾರ್ಯ, ತಣ್ಣೀರುಪಂತ ಮತ್ತಿತರ ಪ್ರದೇಶಗಳಿಗೆ ತ್ವರಿತವಾಗಿ ತೆರಳಲು ಅನುಕೂಲವಾಗಲಿದೆ.

ಕಾಮಗಾರಿ ವೇಗಕ್ಕಾಗಿ ನಿರಂತರ ಸ್ಥಳೀಯರು ಒತ್ತಡ ಹೇರಿದ್ದರು

ಕಾಮಗಾರಿ ಪೂರ್ಣಗೊಳಿಸುವ ನಿಟ್ಟಿನಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ದಿನೇಶ್ ಗುಂಡೂರಾವ್ ಅವರಿಗೆ ಸ್ಥಳೀಯರು ಮನವಿ ಸಲ್ಲಿಸಿದ ಹಿನ್ನಲೆಯಲ್ಲಿ ಅವರ ಸೂಚನೆಯಂತೆ ಈ ಹಿಂದೆ ಜಿಲ್ಲಾಧಿಕಾರಿಯಾಗಿದ್ದ



ಮುಲ್ಲೈ ಮುಗಿಲನ್ ಅವರು ಸ್ಥಳ ಪರಿಶೀಲಿಸಿ ಸಂಬಂಧಪಟ್ಟ ಇಲಾಖೆಗೆ ಕಾಮಗಾರಿ ಪೂರ್ಣಗೊಳಿಸಲು ಸೂಚಿಸಿದ್ದರೂ ಫಲಕಾರಿಯಾಗಿರಲಿಲ್ಲ, ಜಿಲ್ಲಾಧಿಕಾರಿಯಾಗಿದ್ದ ಮುಲ್ಲೈ ಮುಗಿಲನ್ ಅವರು ವರ್ಗಾವಣೆಯಾದ ಬಳಿಕ, ಇತ್ತ ಸೌಹಾರ್ದ ಸೇತುವೆಯ ಕಾಮಗಾರಿ ಸ್ಥಗಿತಗೊಂಡಿತ್ತು. ಸ್ಥಳೀಯ ರೈತರು, ಗ್ರಾಮಸ್ಥರು ಸೇತುವೆ ಕಾಮಗಾರಿ ಪೂರ್ಣಗೊಳಿಸುವ ನಿಟ್ಟಿನಲ್ಲಿ ಅಧಿಕಾರಿಗಳು, ಜನಪ್ರತಿನಿಧಿಗಳಿಗೆ ನಿರಂತರ ಒತ್ತಡ ಹೇರಿದ ಪರಿಣಾಮವಾಗಿ ಸೇತುವೆ ಕಾಮಗಾರಿ ಮರು ಆರಂಭಗೊಂಡು ಅಂತಿಮ ಹಂತ ತಲುಪಿದೆ.

ಶಾಲಾ ಕಾಲೇಜುಗಳಿಗೆ ಬೇಸಿಗೆ ರಜೆ: ಕುಕ್ಕೆಯಲ್ಲಿ ಭಕ್ತ ಪ್ರವಾಹ



ಸುಬ್ರಹ್ಮಣ್ಯ: ಶಾಲಾ ಕಾಲೇಜುಗಳಿಗೆ ಬೇಸಿಗೆ ರಜಾ ಹಿನ್ನೆಲೆಯಲ್ಲಿ ರವಿವಾರ ಕುಕ್ಕೆ ಸುಬ್ರಹ್ಮಣ್ಯದಲ್ಲಿ ವಾಹನ ದಟ್ಟನೆಯೊಂದಿಗೆ ಭಕ್ತ ಸಮೂಹವೇ ಆಗಮಿಸಿತ್ತು.

ಕಾಶಿ ಕಟ್ಟೆಯಿಂದಲೇ ಟ್ರಾಫಿಕ್

ರಾಜ್ಯ, ಅನ್ಯ ರಾಜ್ಯದ ವಿವಿಧ ಮೂಲಗಳಿಂದ ಭಕ್ತಾದಿಗಳ ವಾಹನಗಳು ಕಾಶಿ ಕಟ್ಟೆಯಿಂದಲೇ ನಿಧಾನವಾಗಿ ಚಲಿಸಿ ಕುಕ್ಕೆ ರಥಬೀದಿ ಸರ್ಕಲ್‌ನಿಂದ ಅಲ್ಲಲ್ಲಿ ಪಾರ್ಕಿಂಗ್ ಪ್ರದೇಶಗಳಿಗೆ ತೆರಳಿದವು. ಕ್ಷೇತ್ರದಲ್ಲಿರುವ ಎಲ್ಲಾ ಪಾರ್ಕಿಂಗ್ ಪ್ರದೇಶಗಳು ವಾಹನಗಳಿಂದ ಭರ್ತಿಯಾಗಿತ್ತು. ವಾಹನ ದಟ್ಟಣೆಯನ್ನು ನಿಯಂತ್ರಿಸುವಲ್ಲಿ ದೇವಳದ ಭದ್ರತಾ ಸಿಬ್ಬಂದಿ ಹಾಗೂ ಪೊಲೀಸ್ ಸಿಬ್ಬಂದಿ ಶ್ರಮಿಸಿದರು.

ಕುಕ್ಕೆ ದೇವಳದ ಹೊರಾಂಗಣಗಳಲ್ಲಿ ಪೂರ್ತಿ ಭಕ್ತಾದಿಗಳು ತುಂಬಿಕೊಂಡಿದ್ದರು.

ರೇಷನಿಂಗ್ ಬಳಿಕ ತಡವಾಗಿ ತಲುಪುತ್ತಿರುವ ನೀರು | ಪ್ರೆಶರ್ ಕೊರತೆಯಿಂದ ಸಾಕಾಗುತ್ತಿಲ್ಲ ನೀರು

ಅತ್ತಾವರದ ಕೆಲ ಪ್ರದೇಶಗಳಲ್ಲಿ ನೀರಿನ ಕೊರತೆ

ಹರೀಶ ಕುಲ್ಕುಂದ

ದಿಗಂತ ವಾಟರ್ ಚೆಕ್

ಮಂಗಳೂರು: ನಮ್ಮಲ್ಲಿ ಕೆಲ ಪ್ರದೇಶಗಳಿಗೆ ಒಂದು ದಿನ ನೀರು ಬರದಿದ್ದರೆ ಮತ್ತೆ ನೀರು ತಲುಪಬೇಕಾದರೆ ಮೂರು ದಿನಗಳು ಬೇಕಾಗುತ್ತವೆ. ಪ್ರತಿದಿನ ಬಂದರೆ ಮಾತ್ರ ನಮಗೆ ನೀರು ತಲುಪುತ್ತದೆ. ನೀರು ಪೂರೈಕೆಗೆ ಮಂಗಳೂರು ಮಹಾನಗರ ಪಾಲಿಕೆ ರೇಷನಿಂಗ್ ವ್ಯವಸ್ಥೆ ಜಾರಿಗೊಳಿಸಿದ ಬಳಿಕ ನೀರಿನ ಸಮಸ್ಯೆ ಕಾಣಿಸಿಕೊಂಡಿದೆ.

ಈ ಮಾತುಗಳ ಮೂಲಕ ನೀರು ಪೂರೈಕೆಯ ರೇಷನಿಂಗ್ ವ್ಯವಸ್ಥೆಗೆ ವಿರೋಧ ವ್ಯಕ್ತಪಡಿಸಿದ್ದಾರೆ ಅತ್ತಾವರ ವಾರ್ಡ್‌ನ ಜನತೆ.

ಅತ್ತಾವರ ಉಮಾಮಹೇಶ್ವರ ದೇವಸ್ಥಾನ, ಮಣಿಪಾಲ್ ಸ್ಕೂಲ್, ಅತ್ತಾವರ ಬಾಬುಗುಡ್ಡೆ, ನಂದಿಗುಡ್ಡೆ, ಮಾರ್ನಮಿಕಟ್ಟೆ, ಜಪ್ಪು ಅಂಡರ್ ಪಾಸ್, ಜಪ್ಪು ಪಟ್ನ ಏರಾಡಿ, ನಂದಾ ಗ್ಯಾರೇಜ್, ವಿಷ್ಣುಮೂರ್ತಿ ದೇವಸ್ಥಾನ ಪ್ರದೇಶಗಳನ್ನು ಒಳಗೊಂಡಿರುವ ಅತ್ತಾವರ ವಾರ್ಡ್‌ನಲ್ಲಿ ಸ್ವಲ್ಪಮಟ್ಟಿಗೆ ನೀರಿನ ಸಮಸ್ಯೆಯಿದೆ.

ಅತ್ತಾವರ 7ನೇ ಕ್ರಾಸ್, ಗ್ರಾಮ ಸಂಘ, ಬಾಬುಗುಡ್ಡೆ ನಾಲ್ಕನೇ ಕ್ರಾಸ್ ಪ್ರದೇಶಗಳಲ್ಲಿ ನೀರಿನ ಕೊರತೆ ಉಂಟಾಗಿದೆ. ಇಲ್ಲಿ ಮನಪಾ ಪೈಪ್‌ಲೈನ್‌ನಲ್ಲಿ ಪ್ರೆಶರ್ ಇಲ್ಲದೆ ಜನರಿಗೆ ಅಗತ್ಯ ಇರುವಷ್ಟು ಪ್ರಮಾಣದಲ್ಲಿ ನೀರು ಲಭ್ಯವಾಗುತ್ತಿಲ್ಲ. ರೇಷನಿಂಗ್ ಆರಂಭಗೊಂಡ ಬಳಿಕ ಈ ಸಮಸ್ಯೆ ಹೆಚ್ಚಾಗಿದೆ. ದಿನ ಬಿಟ್ಟು ದಿನ ನೀರು ಬರುತ್ತಿರುವ ಕಾರಣ ಈ ಪ್ರದೇಶಗಳಿಗೆ ನೀರು ತಲುಪುವಾಗ ತಡವಾಗುತ್ತಿದೆ. ಎರಡು ದಿನಕ್ಕೊಮ್ಮೆ ನೀರು ನೀಡುತ್ತಿರುವುದರಿಂದ ಜನರು ಹೆಚ್ಚಿನ ಪ್ರಮಾಣದಲ್ಲಿ ನೀರು ಸಂಗ್ರಹಣೆ ಮಾಡುತ್ತಿದ್ದಾರೆ. ಇದರಿಂದಾಗಿ ಪೈಪ್‌ಲೈನ್‌ನ ಕೊನೆಯ ಸ್ಥಳಗಳಿಗೆ ನೀರು ತಲುಪುತ್ತಿಲ್ಲ ಎಂದು ಸ್ಥಳೀಯರು ಅಳಲು ತೋಡಿಕೊಂಡಿದ್ದಾರೆ.

ಅತ್ತಾವರ ವಾರ್ಡ್‌ಗೆ ಪಡೀಲು ಹಾಗೂ ಬೆಂದೂರುವೆಲ್ ಟ್ಯಾಂಕ್‌ನಿಂದ ನೀರು ಸರಬರಾಜು ಆಗುತ್ತಿದೆ. ಪಡೀಲ್ ಟ್ಯಾಂಕ್‌ನಿಂದ ಮಹಾಕಾಳಿಪಡ್ಪು ಒಂದು ಭಾಗ, ಜಪ್ಪುಕುಡುಪಾಡಿ, ವಿಷ್ಣುಮೂರ್ತಿ ದೇವಸ್ಥಾನ ಪ್ರದೇಶಗಳಿಗೆ ನೀರು ಬರುತ್ತಿದೆ. ಬೆಂದೂರುವೆಲ್ ಟ್ಯಾಂಕ್‌ನಿಂದ ಅತ್ತಾವರ ಪ್ರದೇಶಕ್ಕೆ ನೀರು ಪೂರೈಸಲಾಗುತ್ತಿದೆ. ಇಲ್ಲಿ ರಾತ್ರಿ 12ರಿಂದ ಮರುದಿನ ಬೆಳಗ್ಗೆ 11ರವರೆಗೆ ಹಾಗೂ ಎರಡು ದಿನಕ್ಕೊಮ್ಮೆ ಸಂಜೆ ನೀರು ಬಿಡಲಾಗುತ್ತಿತ್ತು. ರೇಷನಿಂಗ್ ಆರಂಭಗೊಂಡ ಬಳಿಕ ರಾತ್ರಿ 11–12ರಿಂದ ಮರುದಿನ ಸಂಜೆವರೆಗೆ ನೀರು ಒದಗಿಸಲಾಗುತ್ತಿದೆ.

ಈ ವಾರ್ಡ್‌ನಲ್ಲಿ ಟ್ಯಾಂಕರ್ ಮೂಲಕ ನೀರು ನೀಡಬೇಕಾದ ಅನಿವಾರ್ಯತೆ ಇದುವರೆಗೆ ಉಂಟಾಗಿಲ್ಲ. ಇಲ್ಲಿ ಸಾರ್ವಜನಿಕ ಕೊಳವೆಬಾವಿಗಳು ಇಲ್ಲ. ಮಾರ್ನಮಿಕಟ್ಟೆಯಲ್ಲಿ ಎರಡು, ಬಾಬುಗುಡ್ಡೆ ಬಳಿ ಒಂದು ಸರಕಾರಿ ಬಾವಿ ಇದೆ. ಬಾವಿಗಳು ಸುಸ್ಥಿತಿಯಲ್ಲಿದ್ದು, ಅವಶ್ಯಕತೆ ಉಂಟಾದರೆ ನೀರು ಬಳಸಬಹುದು.

ಅತ್ತಾವರ ವಾರ್ಡ್‌ನಲ್ಲಿ ಜಲಸಿರಿ ಯೋಜನೆ ಕಾಮಗಾರಿ ಶೇ.80ರಷ್ಟು ಪೂರ್ಣಗೊಂಡಿದೆ. ಆದರೆ, ಕೆಲ ಪ್ರದೇಶದಲ್ಲಿ ಪೈಪ್‌ಲೈನ್ ಅಳವಡಿಕೆಗೆ ತೆಗೆದ ಗುಂಡಿಗಳನ್ನು ಸಮರ್ಪಕವಾಗಿ ಮುಚ್ಚಿಲ್ಲ. ಕೆಲವು ಕಡೆಗಳಲ್ಲಿ ನೀರಿನ ಸಂಪರ್ಕ ಒದಗಿಸಲಾಗಿದೆ. ನಂದಿಗುಡ್ಡದಲ್ಲಿ ಟ್ಯಾಂಕ್ ನಿರ್ಮಾಣಗೊಂಡಿದೆ.



ಅತ್ತಾವರ ಬಾಬುಗುಡ್ಡೆ ಒಳರಸ್ತೆಗೆ ಕಾಂಕ್ರೀಟ್ ಅಳವಡಿಸಲಾಗಿದೆ.

ಕೃತಕ ನೆರೆ ತಪ್ಪಿಸಿ: ಆಗ್ರಹ

ಅತ್ತಾವರ ವಾರ್ಡ್‌ನ ಚಿಂತನ ರೋಡ್, ಕೆಎಂಸಿ ಬಳಿ, ಏರಾಡಿ, ಜಪ್ಪು ಪಟ್ನ ಮುಂತಾದ ಸ್ಥಳಗಳಲ್ಲಿ ರಾಜಕಾಲುವೆಗಳಿವೆ. ಕೆಎಂಸಿ ಮಣಿಪಾಲ್ ಸ್ಕೂಲ್, ಕುಡುಪಾಡಿ ಭಾಗ, ವಿಷ್ಣುಮೂರ್ತಿ ದೇವಸ್ಥಾನ ಬಳಿಕ ಮಳೆಗಾಲದಲ್ಲಿ ಕೃತಕ ನೆರೆ ಸೃಷ್ಟಿಯಾಗುತ್ತದೆ. ಕೆಎಂಸಿ ಭಾಗದಲ್ಲಿ ಕಳೆದ ವರ್ಷ ಮೂರ್‍ನಾಲ್ಕು ಬಾರಿ ಪ್ರವಾಹ ಉಂಟಾಗಿತ್ತು. ಕುಡುಪಾಡಿ ಪ್ರದೇಶದಲ್ಲಿ ಮನೆಗಳಿಗೆ ನೀರು ನುಗ್ಗುತ್ತದೆ. ಕೃತಕ ನೆರೆ ತಡೆಗೆ ಅಲ್ಲಲ್ಲಿ ತಡೆಗೋಡೆ ನಿರ್ಮಿಸಲಾಗಿದೆ. ಈ ಬಾರಿ ರಾಜಕಾಲುವೆಗಳ ಹೂಳು ತೆಗೆಯುವ ಕೆಲಸ ಇನ್ನೂ ಆರಂಭಗೊಂಡಿಲ್ಲ. ತಕ್ಷಣ ಹೂಳು ತೆಗೆಯುವ ಮೂಲಕ ಕೃತಕ ನೆರೆ ತಪ್ಪಿಸಬೇಕು ಎಂಬುದು ಸ್ಥಳೀಯರ ಆಗ್ರಹ.

ಡ್ರೈನೇಜ್ ಸಮಸ್ಯೆ ಬಗೆಹರಿಸಿ

ಅತ್ತಾವರ ವಾರ್ಡ್‌ನಲ್ಲಿ ಡ್ರೈನೇಜ್ ಸಮಸ್ಯೆ ಬಹಳಷ್ಟಿದೆ. ಕೆಎಂಸಿ ಬಳಿ ತೋಡಿನಲ್ಲಿ ಒಳಚರಂಡಿ ತ್ಯಾಜ್ಯ ಹರಿಯುತ್ತಿದೆ. ಮಾರ್ನಮಿಕಟ್ಟೆ ಬಳಿ ಯುಜಿಡಿ ಲೈನ್ ಹಳೆಯದಾಗಿದ್ದು, ಒಳಚರಂಡಿ ನೀರು ಸೋರಿಕೆ ಆಗುತ್ತಿದೆ. ಮಾರ್ನಮಿಕಟ್ಟೆ, ಬಾಬುಗುಡ್ಡೆ ಮುಂತಾದ ಕಡೆಗಳಿಂದ ರಾಜಕಾಲುವೆಗೆ ಒಳಚರಂಡಿ ನೀರು ಸೇರುತ್ತಿದೆ. ಈ ಸಮಸ್ಯೆಗಳನ್ನು ಬಗೆಹರಿಸಬೇಕು ಎಂದು ಸ್ಥಳೀಯರು ಒತ್ತಾಯಿಸಿದ್ದಾರೆ.

ಅತ್ತಾವರ ವಾರ್ಡ್‌ನಲ್ಲಿ ನೀರಿನ ಸಮಸ್ಯೆ ಅಷ್ಟಾಗಿ ಇರಲಿಲ್ಲ. ಆದರೆ, ರೇಷನಿಂಗ್ ವ್ಯವಸ್ಥೆ ಜಾರಿಗೊಂಡ ಬಳಿಕ ಕೆಲ ಪ್ರದೇಶಗಳಿಗೆ ನೀರು ತಡವಾಗಿ ತಲುಪುತ್ತಿರುವುದರಿಂದ ಸಮಸ್ಯೆಯಾಗಿದೆ. ಅಗತ್ಯ ಇರುವಷ್ಟು ನೀರು ಸಂಗ್ರಹಿಸಿಟ್ಟುಕೊಳ್ಳುವಷ್ಟರಲ್ಲಿ ನೀರು ಪೂರೈಕೆ ಬಂದ್ ಆಗುತ್ತಿದೆ. ಅತ್ತಾವರ ಕೆಎಂಸಿ ಬಳಿ ಹಾಗೂ ವಿವಿಧ ಪ್ರದೇಶಗಳಲ್ಲಿ ಕೃತಕ ನೆರೆ ತಪ್ಪಿಸಲು ತಡೆಗೋಡೆ ನಿರ್ಮಿಸಲಾಗಿದ್ದು, ಇನ್ನೂ ಕೆಲವು ಕಡೆಗಳಲ್ಲಿ ತಡೆಗೋಡೆ ಆಗಬೇಕಿದೆ. ಮಾರ್ನಮಿಕಟ್ಟೆ, ಬಾಬುಗುಡ್ಡೆ ಮುಂತಾದ ಕಡೆ ಒಳಚರಂಡಿ ನೀರು ಸೋರಿಕೆ ತಡೆಗೆ ಒಂದೂವರೆ ಕಿ.ಮೀ. ಪ್ರದೇಶದಲ್ಲಿ ಹೊಸ ಯುಜಿಡಿ ಲೈನ್ ನಿರ್ಮಿಸಲು ಎನ್‌ಜಿಟಿ ಪರಿಹಾರ ನಿಧಿಯಲ್ಲಿ ಅನುದಾನ ಮೀಸಲಿರಿಸಿದ್ದು, ಟೆಂಡರ್ ಆಗಿದೆ. ಮಹಾಕಾಳಿಪಡ್ಪು ಅಂಡರ್‌ಪಾಸ್ ರಸ್ತೆ, ಮಣಿಪಾಲ್ ಸ್ಕೂಲ್ ರಸ್ತೆ, ಬಾಬುಗುಡ್ಡೆ, ಮಾರ್ನಮಿಕಟ್ಟೆ ಎರಡನೇ ಕ್ರಾಸ್ ರಸ್ತೆ, ಗ್ರಾಮ ಸಂಘ ಮುಂತಾದ ಕಡೆಗಳಲ್ಲಿ ಶಾಸಕರ ಸಹಕಾರದೊಂದಿಗೆ ರಸ್ತೆ ಅಭಿವೃದ್ಧಿಪಡಿಸಲಾಗಿದೆ. ಬಾಬುಗುಡ್ಡೆ –ಮಾರ್ನಮಿಕಟ್ಟೆ ರಸ್ತೆ ಮಹಾತ್ಮಾಗಾಂಧಿ ನಗರವಿಕಾಸ ಯೋಜನೆ 2ರಡಿ ಅಭಿವೃದ್ಧಿ ಆಗಲಿದೆ. ಬಾಬುಗುಡ್ಡದಲ್ಲಿ ಕುದ್ಮುಲ್ ರಂಗರಾವ್ ಸಭಾಭವನ ಕಾಮಗಾರಿ ಅಂತಿಮ ಹಂತದಲ್ಲಿದೆ. ಕುದ್ಮುಲ್ ರಂಗರಾವ್ ಸ್ಮಾರಕ ಅಭಿವೃದ್ಧಿ ಕಾರ್ಯ ಆಗಬೇಕಿದೆ.



■ **ಶೈಲೇಶ್ ಶೆಟ್ಟಿ**, ಅತ್ತಾವರ ವಾರ್ಡ್ ನಿಕಟಪೂರ್ವ ಕಾರ್ಪೋರೇಟರ್

ಎಂಸಿಸಿ ಬ್ಯಾಂಕಿನಲ್ಲಿ 114ನೇ ಸಂಸ್ಥಾಪಕರ ದಿನಾಚರಣೆ | ರೂ.13 ಕೋಟಿ ಲಾಭ

'ವಿದ್ಯಾಧನ ಶಿಕ್ಷಣ ಯೋಜನೆ' ಉದ್ಘಾಟನೆ

ಮಂಗಳೂರು: ಎಂಸಿಸಿ ಬ್ಯಾಂಕ್ ಲಿಮಿಟೆಡ್ ತನ್ನ 114ನೇ ಸಂಸ್ಥಾಪಕರ ದಿನಾಚರಣೆಯನ್ನು ಆಡಳಿತ ಕಚೇರಿ ಆವರಣದಲ್ಲಿ ಭವ್ಯವಾಗಿ ಆಚರಿಸಿತು. ಕಾರ್ಯಕ್ರಮದಲ್ಲಿ ಬ್ಯಾಂಕಿನ ಸಂಸ್ಥಾಪಕರಾದ ದಿ. ಪಿ.ಎಫ್.ಎಕ್ಸ್. ಸಲ್ಡಾನ್ಹ ಅವರ ದೂರದೃಷ್ಟಿಯ ಸೇವೆಯನ್ನು ಸ್ಮರಿಸಲಾಯಿತು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಬ್ಯಾಂಕ್‌ನ ಅಧ್ಯಕ್ಷ ಸಹಕಾರ ರತ್ನ ಅನಿಲ್ ಲೋಬೊ, 2018ರಲ್ಲಿ ಹೊಸ ಆಡಳಿತ ಮಂಡಳಿ ಅಧಿಕಾರ ವಹಿಸಿಕೊಂಡ ನಂತರ ಬ್ಯಾಂಕ್ ವೃತ್ತಿಪರತೆಯೊಂದಿಗೆ ಗಮನಾರ್ಹ ಬೆಳವಣಿಗೆ ಸಾಧಿಸಿದೆ. 24 ವರ್ಷಗಳ ಬಳಿಕ ಶಾಖೆಗಳ ಸಂಖ್ಯೆ 16ರಿಂದ 21ಕ್ಕೆ ಏರಿಕೆಯಾಗಿದೆ. ಬ್ಯಾಂಕಿನ ಒಟ್ಟು ವ್ಯವಹಾರ ರೂ.500 ಕೋಟಿಯಿಂದ ರೂ.1,525 ಕೋಟಿಗೆ ಏರಿಕೆಯಾಗಿದ್ದು, ಠೇವಣಿಗಳು ರೂ.300 ಕೋಟಿಯಿಂದ ರೂ.875 ಕೋಟಿಗೆ ಹೆಚ್ಚಳವಾಗಿವೆ. ಬ್ಯಾಂಕ್ ರೂ.13 ಕೋಟಿ ಲಾಭ ದಾಖಲಿಸಿದೆ. ಪ್ರಸ್ತುತ ಇರುವ 21 ಶಾಖೆಗಳನ್ನು ಈ ಆರ್ಥಿಕ ವರ್ಷದಲ್ಲಿ 25ಕ್ಕೆ ವಿಸ್ತರಿಸಲಾಗುವುದು ಎಂದು ತಿಳಿಸಿದರು.

ಅತಿಥಿಯಾಗಿದ್ದ ಸೇಂಟ್ ಅಲೋಶಿಯಸ್ ಡೀಮ್ಡ್ ಟು ಬಿ ಯುನಿವರ್ಸಿಟಿ ಉಪಕುಲಪತಿ ರೆ. ಡಾ. ಪ್ರವೀಣ್ ಮಾರ್ಟಿಸ್ ಮಾತನಾಡಿ, ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣಕ್ಕಾಗಿ ನೆರವಾಗುವ 'ವಿದ್ಯಾಧನ ವಿದ್ಯಾರ್ಥಿ ಕ್ರೆಡಿಟ್ ಯೋಜನೆ'ಯನ್ನು ಪ್ರಶಂಸಿಸಿದರು.

ಕರ್ನಾಟಕ ಬ್ಯಾಂಕ್‌ನ ಮಾಜಿ ಮಹಾಪ್ರಬಂಧಕಿ ಡಾ. ಮೀರಾ ಅರನ್ಹಾ ಅವರು 'ವಿದ್ಯಾಧನ ಶಿಕ್ಷಣ ಯೋಜನೆ'ಯನ್ನು ಉದ್ಘಾಟಿಸಿದರು. ಮಂಗಳೂರು ಧರ್ಮಪ್ರಾಂತ್ಯದ ಸಾರ್ವಜನಿಕ ಸಂಪರ್ಕಾಧಿಕಾರಿ ರಾಯ್ ಕ್ಯಾಸ್ತಲಿನೊ, ಕೆಸಿಸಿಐ ಮಾಜಿ ಅಧ್ಯಕ್ಷ ಐಸಾಕ್ ವಾಸ್ ಮುಖ್ಯ ಅತಿಥಿಗಳಾಗಿದ್ದರು. ಬ್ಯಾಂಕಿನ ಮಹಾಪ್ರಬಂಧಕ ಸುನಿಲ್ ಮಿನೇಜಸ್ ಉಪಸ್ಥಿತರಿದ್ದರು. ಐಸಾಕ್ ವಾಸ್ ಅವರು ಸಂಪಾದಕರಾದ ಡಾ.ಜೆರಾಲ್ಡ್ ಪಿಂಟೊ ಅವರೊಂದಿಗೆ ಬ್ಯಾಂಕಿನ ಬುಲೆಟಿನ್ ಬಿಡುಗಡೆ ಮಾಡಿದರು. ಹೊಸದಾಗಿ ಅರ್ಹತೆ ಪಡೆದ ಚಾರ್ಟರ್ಡ್ ಅಕೌಂಟೆಂಟ್ಸ್‌ಗಳಾದ ಸಿಎ ಮ್ಯೂರಿಯಲ್ ಮಸ್ಕರೇನ್ಹಾಸ್ ಹಾಗೂ ಸಿಎ ಜಾಯ್ಸನ್ ಡಿಸೋಜ ಅವರನ್ನು ಸನ್ಮಾನಿಸಲಾಯಿತು. ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಹೆನ್ರಿ ಮೆಂಡೋನ್ಸಾ (ಎಚ್.ಎಂ.ಪೆರ್ನಾಲ್), ಕಿತ್ತೂರು ರಾಣಿ ಚೆನ್ನಮ್ಮ ಪ್ರಶಸ್ತಿ ಪುರಸ್ಕೃತೆ ರಿಶೆಲ್ ಫೆರ್ನಾಂಡಿಸ್ ಹಾಗೂ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಡಾ. ಜೋಸೆಫ್ ಲೋಬೊ, ಝೇವಿಯರ್ ಡಿಸೋಜ ಮತ್ತು ಪ್ರೇಮ್ ಜೆ.ಮೊರಾಸ್ ಅವರನ್ನು ಗೌರವಿಸಲಾಯಿತು.

ನಿರ್ದೇಶಕರಾದ ರೋಶನ್ ಡಿಸೋಜಾ ಹಾಗೂ ಅನಿಲ್ ಪತ್ರಾವೊ ಅವರನ್ನು ಅವರ ಜನ್ಮದಿನದ ಅಂಗವಾಗಿ ಸನ್ಮಾನಿಸಲಾಯಿತು. ಬ್ಯಾಂಕಿನ ಹೊಸ ಲೋಗೋ ವಿನ್ಯಾಸಗೊಳಿಸಿದ ಬನ್ನು ಫೆರ್ನಾಂಡಿಸ್ ಹಾಗೂ ಪಿಎಫ್‌ಎಕ್ಸ್ ಮೆಮೋರಿಯಲ್ ಆಡಿಟೋರಿಯಂ ವಿನ್ಯಾಸಗೊಳಿಸಿದ ವಾಸ್ತುಶಿಲ್ಪಿ ದೀಪಕ್ ಡಿಸೋಜಾ ಅವರನ್ನು ಗೌರವಿಸಲಾಯಿತು. ಜೇಸನ್ ಶಿರ್ತಾಡಿ ಕಾರ್ಯಕ್ರಮ ನಿರೂಪಿಸಿದರು.

ನಿರ್ದೇಶಕರಾದ ಆಂಡ್ರೂ ಡಿಸೋಜಾ, ಹೆರಾಲ್ಡ್ ಮೊಂತೇರೊ, ಅನಿಲ್ ಪತ್ರಾವೊ, ಡೇವಿಡ್ ಡಿಸೋಜಾ, ಜೆ.ಪಿ.ರೊಡ್ರಿಗಸ್, ರೋಶನ್ ಡಿಸೋಜಾ, ಮೆಲ್ವಿನ್‌ವಾಸ್, ವಿನ್ಸೆಂಟ್ ಲಸ್ರಾದೊ, ಸುಶಾಂತ್ ಸಾಲ್ಡಾನ್ಹಾ, ಐರಿನ್ ರೆಬೆಲ್ಲೊ, ಆಲ್ವಿನ್‌ಪಿ. ಮೊಂತೇರೊ, ಫೆಲಿಕ್ಸ್ ಡಿಕ್ರೂಜ್, ಡಾ. ಜೆರಾಲ್ಡ್ ಪಿಂಟೊ, ಸಿ.ಜಿ. ಪಿಂಟೊ ಉಪಸ್ಥಿತರಿದ್ದರು.



ರಾಮ ಬಾಣ



ಕಾಂಗ್ರೆಸ್‌ನಲ್ಲಿ ಭ್ರಷ್ಟಾಚಾರ: ವಿಜಯೇಂದ್ರ

ಬೆಂಗಳೂರು: ಕರ್ನಾಟಕ ರಾಜ್ಯದಲ್ಲಿ ನಾವೆಲ್ಲ ಒಟ್ಟಾಗಿ, ಒಂದುಗೂಡಿ ಮುಂದಿನ ದಿನಗಳಲ್ಲಿ ಈ ಹಿಂದೂವಿರೋಧಿ-ಭ್ರಷ್ಟಾಚಾರದಲ್ಲಿ ಮುಳುಗಿರುವ ಕಾಂಗ್ರೆಸ್ ಸರಕಾರವನ್ನು ಬುಡಸಮೇತ ಕಿತ್ತು ಹಾಕುವ ಕೆಲಸ ಮಾಡಬೇಕಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಮತ್ತು ಶಾಸಕ ಬಿ.ವೈ. ವಿಜಯೇಂದ್ರ ಅವರು ತಿಳಿಸಿದ್ದಾರೆ.

ಪಶ್ಚಿಮ ಬಂಗಾಳ, ಅಸ್ಸಾಂ ಮತ್ತು ಪುದುಚೇರಿ ರಾಜ್ಯಗಳಲ್ಲಿ ಜಯಭೇರಿ ಬಾರಿಸಿದ ಬಳಿಕ ಕರ್ನಾಟಕಕ್ಕೆ ಆಗಮಿಸಿದ ನರೇಂದ್ರ ಮೋದಿ ಅವರನ್ನು ಹೆಚ್‌ಎಎಲ್ ವಿಮಾನ ನಿಲ್ದಾಣದ ಬಳಿ ಅಭಿನಂದಿಸುವ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಬಿಜೆಪಿಗೆ ಪಶ್ಚಿಮ ಬಂಗಾಲದಲ್ಲಿ ಮೊದಲ ಬಾರಿಗೆ ಐತಿಹಾಸಿಕ ಗೆಲುವು ಲಭಿಸಿದೆ. ಇದಕ್ಕಾಗಿ ಮೋದಿಜೀ ಅವರಿಗೆ ಅಭಿನಂದನೆಗಳು ಎಂದು ತಿಳಿಸಿದರು. ಪಶ್ಚಿಮ ಬಂಗಾಲದ ಮಾದರಿಯಲ್ಲಿ ಕರ್ನಾಟಕದಲ್ಲಿ ಪ್ರಧಾನಿಯವರ ಅವರ ಮಾರ್ಗದರ್ಶನದಲ್ಲಿ ಬಿಜೆಪಿಯನ್ನು ಬಹುಮತದೊಂದಿಗೆ ಅಧಿಕಾರಕ್ಕೆ ತರುವುದಾಗಿ ಅವರು ಮೋದಿಯವರಿಗೆ ವಾಗ್ದಾನ ಮಾಡಿದರು. ಪಶ್ಚಿಮ ಬಂಗಾಲದ ಜಯದ ರೂವಾರಿ ಮೋದಿಜೀ ಅವರನ್ನು ಅಭಿನಂದಿಸಿದರು.



> ಮೋದಿ ಅವರ ಆಡಳಿತದಲ್ಲಿ ಹಿಂದುತ್ವಕ್ಕೆ ಹೆಚ್ಚಿನ ಬೆಲೆ ಬಂದಿದೆ. ಅವರ ಪರಿಶ್ರಮಕ್ಕೆ ನಾವೆಲ್ಲ ಋಣಿಯಾಗಿರಬೇಕು. ದೇಶ ಎಂದೂ ಕಾಣದ ಬಿಕ್ಕಟ್ಟನ್ನು ಇಂದು ಕಾಣ್ತ ಇದ್ದೇವೆ. ಇಂತಹುದರಲ್ಲಿ ದೇಶವನ್ನು ಸಮರ್ಥವಾಗಿ ಮುನ್ನಡೆಸುತ್ತಿದ್ದಾರೆ.
> ■ ಛಲವಾದಿ ನಾರಾಯಣಸ್ವಾಮಿ, ವಿಪಕ್ಷ ನಾಯಕ

ರಾಜ್ಯದಲ್ಲಿ ಬಾಂಗ್ಲಾದವರು: ಆರ್.ಅಶೋಕ ಆರೋಪ



ಬೆಂಗಳೂರು: ಪಶ್ಚಿಮ ಬಂಗಾಲವು ಬಾಂಗ್ಲಾದೇಶದ ಅಕ್ರಮ ನುಸುಳುಕೋರರಿಗೆ ಹೆಬ್ಬಾಗಿಲಾಗಿತ್ತು. ಆ ಹೆಬ್ಬಾಗಿಲನ್ನು ಒಡೆದು ದೇಶವನ್ನು ರಕ್ಷಿಸುವ ಕೆಲಸವನ್ನು ಬಿಜೆಪಿ ಮಾಡಲಿದೆ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಹೇಳಿದರು. ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಬಂಗಾಲವನ್ನು ಬಾಂಗ್ಲಾದೇಶದವರು ಗೇಟ್ ವೇ ಆಫ್ ಇಂಡಿಯಾ ರೀತಿ ಬಳಸುತ್ತಿದ್ದರು. ಪಶ್ಚಿಮ ಬಂಗಾಳಕ್ಕೆ ಬಂದು ದೇಶದ ವಿವಿಧೆಡೆ ಹರಡುತ್ತಿದ್ದರು. ಅವರಿಗೆ ಆಧಾರ್ ಕಾರ್ಡ್, ರೇಷನ್ ಕಾರ್ಡ್ ನೀಡುತ್ತಿದ್ದ ಮಮತಾ ಬ್ಯಾನರ್ಜಿ ಅವರು, ಎಲ್ಲಾದರೂ ಹೋಗಿ ಎನ್ನುತ್ತಿದ್ದರು. ಕರ್ನಾಟಕದಲ್ಲಿ ಹತ್ತು ಲಕ್ಷಕ್ಕೂ ಹೆಚ್ಚು ಬಾಂಗ್ಲಾದವರಿದ್ದಾರೆ. ಬೆಂಗಳೂರಿನಲ್ಲಿ ಸಾಕಷ್ಟು ಬಾಂಗ್ಲಾ ಕ್ಯಾಂಪ್‌ಗಳಿವೆ. ಇಲ್ಲಿನ ಕಾಂಗ್ರೆಸ್ ಸರ್ಕಾರಕ್ಕೆ ಬಾಂಗ್ಲಾದವರು ಬೇಕು. ಅವರು ಇವರಿಗೆ ನೆಂಟರ ರೀತಿ ಆಗಿದ್ದಾರೆ. ಯಾಕೆ ಎಂದರೆ ಅವರ ಓಟು ಬೇಕು. ಈ ಸರ್ಕಾರ ಓಟಿಗಾಗಿ ಕಣ್ಣು ಮುಚ್ಚಿಕೊಂಡು ಕೂತಿದೆ ಎಂದರು.

ಕಿಡಿ ನುಡಿ
◆ ವಾಸುದೇವರಾವ್ ಕಕ್ಕೆನೇಜಿ

◈ 0 ಜಗತ್ತಿಗೆ ಈಗ ಬೇಕಿರುವುದು ಯುದ್ಧವಲ್ಲ, ಬುದ್ಧ - ಮಲ್ಲಿಕಾರ್ಜುನ ಖರ್ಗೆ
- ಇದು ಬುದ್ಧನ ಕಾಲವಲ್ಲ, ಯುದ್ಧದ ಕಾಲ.ಬುದ್ಧನಿರುತ್ತಿದ್ದರೂ ಆತನನ್ನು ಉಳಿಸಲು ಯುದ್ಧ ಮಾಡಬೇಕಾಗುತ್ತಿತ್ತು!

ದಿನ ಭವಿಷ್ಯ

ಮೇಷ ನಿಮ್ಮ ಕಾರ್ಯದಲ್ಲಿ ದಿನವಿಡೀ ವ್ಯಸ್ತ. ಬೇರೆ ವಿಷಯದಲ್ಲಿ ಮನಸ್ಸು ತೊಡಗದು. ಅಪಥ್ಯ ಆಹಾರ ಸೇವಿಸಿ ಹೊಟ್ಟೆ ಕೆಡುವ ಸಾಧ್ಯತೆ.

ವೃಷಭ ಆಪ್ತ ಬಳಗದ ಜತೆ ಕಾಲ ಕಳೆಯುವ ಅವಕಾಶ. ಮಾತಿನಲ್ಲಿ ಕಟುಮಾತು ನುಸುಳದಂತೆ ನೋಡಿಕೊಳ್ಳಿ. ಸಂಬಂಧ ಕೆಡದಂತೆ ಎಚ್ಚರವಿರಲಿ.

ಮಿಥುನ ನೀವು ಇಚ್ಛಿಸದ ಬೆಳವಣಿಗೆ ನಡೆದೀತು. ಬೇಸರ ಪಡುತ್ತಾ ಕೂರದಿರಿ. ಪರಿಸ್ಥಿತಿಗೆ ಒಗ್ಗಿಕೊಳ್ಳುವುದು ಮುಖ್ಯ. ಧನವ್ಯಯ ಹೆಚ್ಚಲಿದೆ.

ಕಟಕ ದೈಹಿಕ ಕ್ಷಮತೆ ಕಾಯ್ದುಕೊಳ್ಳಿ. ಹೆಚ್ಚುವರಿ ಆದಾಯದ ದಾರಿ ಹೊಳೆಯಲಿದೆ. ಕೌಟುಂಬಿಕ ಉದ್ವಿಗ್ನತೆ ಶಮನಕ್ಕೆ ಗಮನ ಕೊಡಿ.

ಸಿಂಹ ಸಂಗಾತಿ ಜತೆ ಸಂಘರ್ಷ ನಡೆದೀತು. ಪರಸ್ಪರ ಗೌರವವಿದ್ದರೆ ಪ್ರೀತಿ ಬೆಳೆಯುವುದು. ಉದ್ಯೋಗದ ಅವಕಾಶ ಹೆಚ್ಚಲಿದೆ. ಧನವ್ಯಯ.

ಕನ್ಯಾ ಸಂಗಾತಿ ಜತೆ ಅಹಂ ಬಿಡಿ. ನಿಮ್ಮದೇ ನಿಲುವು ಹೇರಬೇಡಿ. ಸಂಬಂಧ ಕೆಡಬಹುದು. ಹಣ ಗಳಿಕೆ ಹೆಚ್ಚಳವಾಗದು. ಇದ್ದುದರಲ್ಲಿ ತೃಪ್ತಿಯಿರಲಿ.

ತುಲಾ ಬಿಡುವಿಲ್ಲದ ಕೆಲಸ, ಒತ್ತಡ, ಹೊಣೆ ಹೆಚ್ಚಳ. ನಿಮ್ಮ ಆಕಾಂಕ್ಷೆ ಈಡೇರಿಸಲು ಹೆಚ್ಚು ಪ್ರಯತ್ನ ಅಗತ್ಯ. ಕೌಟುಂಬಿಕ ಸಾಮರಸ್ಯ.

ವೃಶ್ಚಿಕ ಕುಟುಂಬದ ಜತೆ ಪ್ರಯಾಣ ಸಾಧ್ಯತೆ. ವೃತ್ತಿ ಕೆಲಸ ಮುಗಿಸಿರಿ. ನಿಮ್ಮ ಕಟು ಮಾತಿನಿಂದ ಆಪ್ತರು ದೂರವಾದಾರು. ಹೆಚ್ಚು ಹಣ ಗಳಿಕೆ ಅವಕಾಶ.

ಧನು ನಿಮ್ಮ ಮನಸ್ಥಿತಿ. ಇತರರ ಜತೆ ಹಂಚಿಕೊಳ್ಳಲು ಬಯಸುವಿರಿ. ಆದರೆ ಸೂಕ್ತ ಸ್ಪಂದನೆ ದೊರಕದು. ದಂಪತಿ ಮಧ್ಯೆ ವಿರಸ ಮೂಡೀತು. ಹೊಂದಾಣಿಕೆಯಿರಲಿ.

ಮಕರ ಇಂದು ಪ್ರಮುಖ ಬೆಳವಣಿಗೆ ಸಂಭವ. ಅನವಶ್ಯ ವಾಗ್ವಾದದಿಂದ ಆದಷ್ಟು ದೂರವಿರಿ. ಪ್ರತಿ ವಿಷಯದಲ್ಲಿ ಸಂಯಮ ಅತ್ಯವಶ್ಯ.

ಕುಂಭ ವೃತ್ತಿಯ ಒತ್ತಡ ಎಂದಿಗಿಂತ ಹೆಚ್ಚು. ಏಕಾಗ್ರತೆ ಕಳಕೊಳ್ಳದಿರಿ. ವೈವಾಹಿಕ ಬದುಕಲ್ಲಿ ಒಡಕು ಮೂಡದಂತೆ ಎಚ್ಚರಿಕೆ ವಹಿಸಿರಿ.

ಮೀನ ಏಕತಾನತೆಯ ಕೆಲಸ ನಿಮ್ಮ ಉತ್ಸಾಹ ಕುಗ್ಗಿಸುವುದು. ಮನಸ್ಸು ಉಲ್ಲಸಿತಗೊಳಿಸುವ ಹವ್ಯಾಸ ಬೆಳೆಸಿಕೊಳ್ಳಿ. ಬಂಧುಗಳ ಸಹಕಾರ.

ರಾಹುಕಾಲ: 7.30-9.00
ಗುಳಿಕಕಾಲ: 1.30-3.00
ಅದೃಷ್ಟ ಸಂಖ್ಯೆ: 3,7,5,2

ಜನಸೇವೆಯಲ್ಲಿ ಅಪಾರ ಕಾಳಜಿ ಮತ್ತು ಬದ್ಧತೆಯಿದ್ದ ವ್ಯಕ್ತಿ ಸುಧಾಕರ್
ಹುಟ್ಟೂರಲ್ಲಿ ಅಂತ್ಯಕ್ರಿಯೆ

ಚಿತ್ರದುರ್ಗ: ರಾಜ್ಯದ ಯೋಜನೆ ಮತ್ತು ಸಾಂಖಿಕ ಇಲಾಖೆ ಸಚಿವ ಡಿ. ಸುಧಾಕರ್ (65 ವರ್ಷ) ಅವರು ಭಾನುವಾರ ಬೆಳಗ್ಗೆ 3.15 ಕ್ಕೆ ನಿಧನರಾಗಿದ್ದಾರೆ. ಮೃತರು ಪತ್ನಿ ಹರ್ಷಿಣಿ ಸುಧಾಕರ್, ಓರ್ವ ಪುತ್ರ ಹಾಗೂ ಓರ್ವ ಪುತ್ರಿಯನ್ನು ಅಗಲಿದ್ದಾರೆ.

ಕಳೆದ ಕೆಲ ದಿನಗಳಿಂದ ಅನಾರೋಗ್ಯದಿಂದ ಬಳಲುತ್ತಿದ್ದ ಅವರು ಬೆಂಗಳೂರಿನ ಕಿಮ್ಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿ ದ್ದರು. ಆದರೆ ಚಿಕಿತ್ಸೆ ಫಲಿಸದೆ ಭಾನುವಾರ ನಿಧನರಾಗಿದ್ದಾರೆ.

ಹಿರಿಯೂರು ಕ್ಷೇತ್ರದ ಶಾಸಕರಾಗಿದ್ದು, ಚಿತ್ರದುರ್ಗ ಜಿಲ್ಲಾ ಉಸ್ತುವಾರಿ ಸಚಿವರು ಕೂಡ ಆಗಿದ್ದರು. ಮೊಣಕಾಲು ಶಸ್ತ್ರಚಿಕಿತ್ಸೆಗೆಂದು ಬೆಂಗಳೂರಿನ ಮಣಿಪಾಲ್ ಆಸ್ಪತ್ರೆಗೆ ದಾಖಲಾಗಿದ್ದರು. ಆದರೆ ಶಸ್ತ್ರಚಿಕಿತ್ಸೆ ನಂತರ ಶ್ವಾಸಕೋಶದಲ್ಲಿ ಸೋಂಕು ಕಾಣಿಸಿಕೊಂಡು ಆರೋಗ್ಯ ಸ್ಥಿತಿ ಚಿಂತಾಜನಕವಾಗಿತ್ತು. ಬಳಿಕ ಅವರನ್ನು ಮಣಿಪಾಲ್ ಆಸ್ಪತ್ರೆಯಿಂದ ಬೆಂಗಳೂರಿನ ಎಲೆಕ್ಟ್ರಾನಿಕ್ ಸಿಟಿಯಲ್ಲಿರುವ ಕಿಮ್ಸ್ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಐಸಿಯುನಲ್ಲಿಯೇ ಚಿಕಿತ್ಸೆ ಪಡೆಯುತ್ತಿದ್ದ ಅವರ ಸುದೀರ್ಘ ಚಿಕಿತ್ಸೆಯ ಬಳಿಕವೂ ಚಿಕಿತ್ಸೆ ಫಲಕಾರಿಯಾಗದೆ ಭಾನುವಾರ ಬೆಳಗ್ಗೆ ಕೊನೆಯುಸಿರೆಳೆದಿದ್ದಾರೆ.

ಅಂತ್ಯಕ್ರಿಯೆ: ಸಚಿವ ಸುಧಾಕರ್ ಅವರ ಪಾರ್ಥಿವ ಶರೀರವನ್ನು ಸೋಮವಾರ ಮಧ್ಯಾಹ್ನ 12 ಗಂಟೆಯಿಂದ ಸಂಜೆ 4 ಗಂಟೆಯವರೆಗೆ ಹಿರಿಯೂರಿನ ನೆಹರೂ ಮೈದಾನದಲ್ಲಿ ಸಾರ್ವಜನಿಕ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿದೆ. ನಂತರ ಚಳ್ಳಕೆರೆ ಯ ಸ್ವಗೃಹದಲ್ಲಿ ಪೂಜೆ ವಿಧಿ-ವಿಧಾನಗಳನ್ನು ನೆರವೇರಿಸಿ ಡಿ. ಸುಧಾಕರ್ ಕ್ರೀಡಾಂಗಣದಲ್ಲಿ ಸಾರ್ವಜನಿಕ ದರ್ಶನಕ್ಕೆ ಅವಕಾಶ ಕಲ್ಪಿಸಲಾಗಿದೆ. ಸೋಮವಾರ ಮೇ. 11 ರಂದು ಮಧ್ಯಾಹ್ನ 3ರಿಂದ 4 ಗಂಟೆಗೆ ಅಂತ್ಯಕ್ರಿಯೆ ವಿಧಿ-ವಿಧಾನಗಳು ನಡೆಯಲಿವೆ.

ಡಿ.ಸುಧಾಕರ್ ಅವರ ರಾಜಕೀಯ ಹಾದಿ



1961ರ ಮಾರ್ಚ್ 28ರಂದು ಜನಿಸಿದ ಡಿ.ಸುಧಾಕರ್ ಸಾಮಾನ್ಯ ಕುಟುಂಬ ಹಿನ್ನೆಲೆಯಿಂದ ರಾಜಕೀಯ ಕ್ಷೇತ್ರಕ್ಕೆ ಬಂದವರು. ಸಹಕಾರ ಕ್ಷೇತ್ರದ ಮೂಲಕ ಜನಸೇವೆ ಆರಂಭಿಸಿದ ಅವರು, ಬಳಿಕ ಚಿತ್ರದುರ್ಗ ಜಿಲ್ಲೆಯ ಪ್ರಭಾವಿ ನಾಯಕರಾಗಿ ಬೆಳೆದರು. ಕಳೆದ ಎರಡು ದಶಕಗಳ ಕಾಲ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ (DCC Bank) ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿ ಸಾವಿರಾರು ರೈತರು, ಮಹಿಳಾ ಸಂಘಗಳು ಹಾಗೂ ಬಡ ಕುಟುಂಬಗಳಿಗೆ ನೆರವಾದರು. ಸಹಕಾರ ಕ್ಷೇತ್ರದಲ್ಲಿ ಕಟ್ಟಿಕೊಂಡ ಜನಬೆಂಬಲವೇ ಅವರನ್ನು ಚುನಾವಣಾ ರಾಜಕೀಯಕ್ಕೆ ಕರೆತಂದಿತು. 2004ರಲ್ಲಿ ಕಾಂಗ್ರೆಸ್ ಪಕ್ಷದಿಂದ ಚಳ್ಳಕೆರೆ ಕ್ಷೇತ್ರದಿಂದ ಮೊದಲ ಬಾರಿಗೆ ಶಾಸಕರಾಗಿ ಆಯ್ಕೆಯಾಗುವ ಮೂಲಕ ವಿಧಾನಸಭೆಗೆ ಪ್ರವೇಶಿಸಿದರು. ನಂತರ ಚಳ್ಳಕೆರೆ ಎಸ್‌ಟಿ ಮೀಸಲು ಕ್ಷೇತ್ರವಾದ ಕಾರಣ 2008ರಲ್ಲಿ ಹಿರಿಯೂರು ಕ್ಷೇತ್ರದ ಪಕ್ಷೇತರ ಶಾಸಕರಾಗಿ ಆಯ್ಕೆಯಾದರು. ಬಿಜೆಪಿ ನೇತೃತ್ವದ ಬಿಎಸ್‌ವೈ ಸಂಪುಟದಲ್ಲಿ ಸಮಾಜ ಕಲ್ಯಾಣ, ಮುಜರಾಯಿ ಇಲಾಖೆಯ ಸಚಿವರಾಗಿಯೂ ಕೆಲಸ ಮಾಡಿದ್ದಾರೆ. ಬಂಧೀಖಾನೆ, ಯುವಜನಸೇವೆಯ ಸಚಿವರಾಗಿದ್ದರು. ರಾಯಚೂರು ಜಿಲ್ಲಾ ಉಸ್ತುವಾರಿ ಸಚಿವರಾಗಿಯೂ ಸೇವೆ ಸಲ್ಲಿಸಿದ್ದಾರೆ. 2013ರಲ್ಲಿ ಪುನಃ ಕಾಂಗ್ರೆಸ್ ಪಕ್ಷಕ್ಕೆ ಮರಳಿ, ಹಿರಿಯೂರು ಕ್ಷೇತ್ರದಿಂದ ಜೆಡಿಎಸ್‌ನ ಎ. ಕೃಷ್ಣಪ್ಪ ವಿರುದ್ಧ ಗೆಲುವು ಸಾಧಿಸಿದ್ದರು. 2018ರಲ್ಲಿ ಹಿರಿಯೂರು ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿ ಪೂರ್ಣಿಮಾ ಶ್ರೀನಿವಾಸ್ ವಿರುದ್ಧ ಸೋಲು ಕಂಡಿದ್ದರು. 2023ರಲ್ಲಿ ಕಾಂಗ್ರೆಸ್ ಪಕ್ಷದಿಂದ ಶಾಸಕರಾಗಿ, ಈಗ ಸಚಿವರಾಗಿ ಚಿತ್ರದುರ್ಗ ಜಿಲ್ಲಾ ಉಸ್ತುವಾರಿಯಾಗಿದ್ದರು. ಚಿತ್ರದುರ್ಗ ಡಿಸಿಸಿ ಬ್ಯಾಂಕ್ ಅಧ್ಯಕ್ಷರಾಗಿಯೂ ಕಾರ್ಯನಿರ್ವಹಿಸಿದ್ದರು.

ಬಿಜೆಪಿ ನಾಯಕರ ಸಂತಾಪ

ಬೆಂಗಳೂರು: ರಾಜ್ಯದ ಯೋಜನೆ ಮತ್ತು ಸಾಂಖ್ಯಿಕ ಇಲಾಖೆಯ ಸಚಿವ ಹಾಗೂ ಚಿತ್ರದುರ್ಗ ಜಿಲ್ಲಾ ಉಸ್ತುವಾರಿ ಸಚಿವ ಡಿ. ಸುಧಾಕರ್ ಅವರ ನಿಧನಕ್ಕೆ ಬಿಜೆಪಿ ನಾಯಕರು ಸಂತಾಪ ವ್ಯಕ್ತಪಡಿಸಿದ್ದಾರೆ. ವಿಧಾನಸಭೆ ಪ್ರತಿಪಕ್ಷ ನಾಯಕ ಆರ್. ಅಶೋಕ ಮತ್ತು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರು ಸುಧಾಕರ್ ಅವರ ನಿಧನಕ್ಕೆ ತೀವ್ರ ಸಂತಾಪ ವ್ಯಕ್ತಪಡಿಸಿ, ಅವರ ಆತ್ಮಕ್ಕೆ ಭಗವಂತ ಚಿರಶಾಂತಿ ನೀಡಲಿ ಹಾಗೂ ಅವರ ಕುಟುಂಬಸ್ಥರಿಗೆ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿ ಕೊಡಲಿ ಎಂದು ಪ್ರಾರ್ಥಿಸುವುದಾಗಿ ತಿಳಿಸಿದ್ದಾರೆ.ಅನಾರೋಗ್ಯದಿಂದ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಸುಧಾಕರ್ ಅವರು ಗುಣಮುಖರಾಗುತ್ತಾರೆಂಬ ಪ್ರಾರ್ಥನೆ ಫಲಿಸಲಿಲ್ಲ. ಸಾರ್ವಜನಿಕ ಜೀವನದಲ್ಲಿ ಜನಪರ ಸೇವೆಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ತಮ್ಮದೇ ಆದ ಪ್ರಭಾವ ಬೆಳೆಸಿಕೊಂಡಿದ್ದರು. ಅವರ ಅಗಲಿಕೆಯ ನೋವನ್ನು ಸಹಿಸಿಕೊಳ್ಳುವ ಶಕ್ತಿಯನ್ನು ಭಗವಂತ ಅವರ ಕುಟುಂಬ ಮತ್ತು ಅಭಿಮಾನಿಗಳಿಗೆ ಕರುಣಿಸಲಿ, ಅವರ ಆತ್ಮಕ್ಕೆ ಚಿರಶಾಂತಿ ನೀಡಲಿ ಎಂದು ಸಂಸದ ಬಸವರಾಜ ಬೊಮ್ಮಾಯಿ ತಿಳಿಸಿದ್ದಾರೆ.

ಸಾಂಖ್ಯಿಕ ಸಚಿವ ಸುಧಾಕರ್ ಇನ್ನಿಲ್ಲ

ಪುಟ ೧➡ ನಾಲ್ಕು ಬಾರಿ ಶಾಸಕರಾಗಿ, ಎರಡು ಬಾರಿ ಸಚಿವರಾಗಿದ್ದ ಸುಧಾಕರ್ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಸಂಪುಟದಲ್ಲಿ ರಾಜ್ಯ ಯೋಜನಾ ಮತ್ತು ಸಾಂಖ್ಯಿಕ ಸಚಿವ ಹಾಗೂ ಚಿತ್ರದುರ್ಗ ಜಿಲ್ಲಾ ಉಸ್ತುವಾರಿಯಾಗಿದ್ದರು. ಮೃತ ಸುಧಾಕರ್ ಅವರಿಗೆ ಪತ್ನಿ, ಪುತ್ರ, ಪುತ್ರಿ ಇದ್ದಾರೆ. ಡಿ. ಸುಧಾಕರ್ ಗೌರವಾರ್ಥವಾಗಿ ಸೋಮವಾರ ಚಿತ್ರದುರ್ಗ ಜಿಲ್ಲೆಯ ಸಾರ್ವಜನಿಕ ಸರ್ಕಾರಿ ಕಚೇರಿಗಳಿಗೆ ಮತ್ತು ಎಲ್ಲಾ ಶಾಲಾ ಕಾಲೇಜುಗಳಿಗೆ (ಅನುದಾನ ಪಡೆಯುವ ಎಲ್ಲಾ ವಿದ್ಯಾ ಸಂಸ್ಥೆಗಳಿಗೂ ಸೇರಿದಂತೆ) ಸರ್ಕಾರಿ ಸ್ವಾಮ್ಯದ ಅಂಗ ಸಂಸ್ಥೆಗಳು ಒಳಗೊಂಡಂತೆ ಸಾರ್ವಜನಿಕ ರಜೆ ಘೋಷಿಸಿದ್ದು, ರಾಜ್ಯಾದ್ಯಂತ 3 ದಿನ ಶೋಕಾಚರಣೆ ಇರಲಿದೆ.

ಗಣ್ಯರ ಸಂತಾಪ

ರಾಜ್ಯಪಾಲ ಥಾವರ್ ಚಂದ್ ಗೆಹಲೋತ್ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ವಿಧಾನ ಸಭಾಧ್ಯಕ್ಷ ಯು.ಟಿ ಖಾದರ್ ಸೇರಿದಂತೆ ಸಚಿವರು, ವಿರೋಧ ಪಕ್ಷದ ನಾಯಕರು ಸೇರಿದಂತೆ ಅನೇಕರು ಸುಧಾಕರ್ ಅವರನ್ನು ಸ್ಮರಿಸಿ ಸಂತಾಪ ವ್ಯಕ್ತಪಡಿಸಿದ್ದಾರೆ.

ರಾಜಕೀಯ ಕ್ಷೇತ್ರಕ್ಕೆ ದೊಡ್ಡ ನಷ್ಟ: ಸಿದ್ದರಾಮಯ್ಯ

ಬೆಂಗಳೂರು: ಸಚಿವ ಸುಧಾಕರ್ ಅವರ ಅಗಲಿಕೆಯಿಂದ ರಾಜಕೀಯ ಕ್ಷೇತ್ರಕ್ಕೆ ದೊಡ್ಡ ನಷ್ಟವುಂಟಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಸದಾಶಿವ ನಗರದಲ್ಲಿರುವ ಸಚಿವ ಸುಧಾಕರ್ ಅವರ ನಿವಾಸದಲ್ಲಿ ಭಾನುವಾರ ಅಂತಿಮ ದರ್ಶನ ಪಡೆದು ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಸುಧಾಕರ್ ಅವರ ಆತ್ಮಕ್ಕೆ ಚಿರಶಾಂತಿ ದೊರಕಲಿ ಹಾಗೂ ಕುಟುಂಬದವರಿಗೆ ಅವರ ಸಾವಿನ ದುಃಖವನ್ನು ಭರಿಸುವ ಶಕ್ತಿಯನ್ನು ಭಗವಂತ ನೀಡಲಿ ಎಂದು ಪ್ರಾರ್ಥಿಸುವುದಾಗಿ ಹೇಳಿದರು. ಎರಡನೇ ಬಾರಿಗೆ ಮಂತ್ರಿಯಾಗಿದ್ದ ಸುಧಾಕರ್ ಅವರು ಅತ್ಯಂತ ಜನಪ್ರಿಯ ವ್ಯಕ್ತಿ. ಸಮಾಜ ಕಲ್ಯಾಣ ಸಚಿವರಾಗಿಯೂ ಕೆಲಸ ಮಾಡಿದ್ದಾರೆ. ಸಹಕಾರ ಕ್ಷೇತ್ರದಲ್ಲಿಯೂ ಸಾಕಷ್ಟು ಕೊಡುಗೆ ನೀಡಿರುವ ಅವರು ಡಿಸಿಸಿ ಬ್ಯಾಂಕ್ ಅಧ್ಯಕ್ಷರೂ ಆಗಿದ್ದರು. ಅಪೆಕ್ಸ್ ಬ್ಯಾಂಕ್ ನಿರ್ದೇಶಕರಾಗಿಯೂ ಕಾರ್ಯನಿರ್ವಹಿಸಿದ್ದರು. ಸುಧಾಕರ್ ಅವರ ಚಿಕ್ಕಪ್ಪ ಜಯಣ್ಣ ಕೂಡ ಶಾಸಕರಾಗಿದ್ದರು. ರಾಜಕೀಯ ಕ್ಷೇತ್ರದಲ್ಲಿ ಅಪಾರ ಜನಪ್ರಿಯತೆ ಗಳಿಸಿಕೊಂಡಿದ್ದರು. ಚಳ್ಳಕೆರೆ ಎಸ್‌ಟಿ ಮೀಸಲು ಕ್ಷೇತ್ರವಾದ್ದರಿಂದ ಹಿರಿಯೂರಿನಿಂದ ಸ್ಪರ್ಧಿಸಿ ಗೆದ್ದಿದ್ದರು. ರೈತರ ಹಾಗೂ ಬಡವರ ಪರವಾಗಿ ಸಾಕಷ್ಟು ಕೆಲಸ ಮಾಡಿದ್ದು, ಜನಪ್ರಿಯ ವ್ಯಕ್ತಿಯಾಗಿದ್ದರು ಎಂದು ಸಿಎಂ ಹೇಳಿದರು.



ಗದ್ದುಗೆಯೇರಲು ಮತ್ತೆ ಎನ್ಡಿಎ ಸಜ್ಜು, ನಾಳೆ ಹಿಮಂತ ಪ್ರಮಾಣ

ಪುಟ ೧➡ ಬಿಜೆಪಿ ಶಾಸಕಾಂಗ ಪಕ್ಷದ ನಾಯಕರಾಗಿ ಅವಿರೋಧ ಆಯ್ಕೆಯಾದ ಬಳಿಕ ಹಿಮಂತ ಬಿಸ್ವಾ ಶರ್ಮಾ ಅವರು ಮೈತ್ರಿಕೂಟದ ನಾಯಕರೊಂದಿಗೆ ಲೋಕಭವನಕ್ಕೆ ತೆರಳಿ ಸರ್ಕಾರ ರಚನೆಗೆ ಹಕ್ಕು ಮಂಡಿಸಿದರು. ಬಳಿಕ ರಾಜ್ಯಪಾಲರು ಅವರನ್ನು ಸರ್ಕಾರ ರಚಿಸಲು ಆಹ್ವಾನಿಸಿದರು ಎಂದು ಲೋಕಭವನ ಪ್ರಕಟಣೆ ತಿಳಿಸಿದೆ.

ಮೇ 12ರಂದು ಗುವಾಹಟಿಯ ಖಾನಾಪಾರದಲ್ಲಿರುವ ವೆಟರ್ನರಿ ಕಾಲೇಜು ಮೈದಾನದಲ್ಲಿ ಪ್ರಮಾಣವಚನ ಸ್ವೀಕಾರ ಸಮಾರಂಭ ನಡೆಯಲಿದ್ದು, ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ, ರಕ್ಷಣಾ ಸಚಿವ ರಾಜನಾಥ್ ಸಿಂಗ್ ಹಾಗೂ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನವೀನ್ ಸೇರಿದಂತೆ ಹಲವು ಗಣ್ಯರು ಭಾಗವಹಿಸುವ ಸಾಧ್ಯತೆಯಿದೆ.

126 ಸದಸ್ಯರ ಅಸ್ಸಾಂ ವಿಧಾನಸಭೆಯಲ್ಲಿ ಬಿಜೆಪಿ 82 ಸ್ಥಾನಗಳನ್ನು ಗೆದ್ದಿದ್ದು, ಮೈತ್ರಿಕೂಟದ ಅಂಗಪಕ್ಷಗಳಾದ ಎಜಿಪಿ ಮತ್ತು ಬಿಪಿಎಫ್ ತಲಾ 10 ಸ್ಥಾನಗಳಲ್ಲಿ ಜಯ ಗಳಿಸಿವೆ. ಒಟ್ಟಾರೆ ಎನ್‌ಡಿಎ 102 ಸ್ಥಾನಗಳನ್ನು ಪಡೆದು ಭಾರೀ ಬಹುಮತ ಸಾಧಿಸಿದೆ.

2021ರಲ್ಲಿ ಮೊದಲ ಬಾರಿ ಮುಖ್ಯಮಂತ್ರಿಯಾದ ಹಿಮಂತ ಬಿಸ್ವಾ ಶರ್ಮಾ, ಅಸ್ಸಾಂನಲ್ಲಿ ಸತತ ಎರಡು ಅವಧಿಗೆ ಮುಖ್ಯಮಂತ್ರಿಯಾಗುತ್ತಿರುವ ಮೊದಲ ಕಾಂಗ್ರೆಸ್ಸೇತರ ನಾಯಕ ಎಂಬ ಹೆಗ್ಗಳಿಕೆಗೆ ಪಾತ್ರರಾಗುತ್ತಿದ್ದಾರೆ.

ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನವೀನ್ ಅವರು ಮಾತನಾಡಿ, ಪ್ರಧಾನಿ ಮೋದಿ ಅವರ ಅಭಿವೃದ್ಧಿ ಕಾರ್ಯಗಳಿಗೆ ಜನರು ಮತ್ತೊಮ್ಮೆ ಬೆಂಬಲ ಸೂಚಿಸಿರುವುದೇ ಈ ಫಲಿತಾಂಶ ಎಂದು ಹೇಳಿದರು. ಮುಂದಿನ ಐದು ವರ್ಷಗಳಲ್ಲಿ ಕೇಂದ್ರ ಸರ್ಕಾರದ ವಿವಿಧ ಯೋಜನೆಗಳನ್ನು ಅಸ್ಸಾಂನಲ್ಲಿ ಪರಿಣಾಮಕಾರಿಯಾಗಿ ಜಾರಿಗೊಳಿಸಲಾಗುವುದು ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದರು.

ಚಿರತೆ ದಾಳಿ: ಬಾಲಕ ಸಾವು

ಪುಟ ೧➡ ಭಾನುವಾರ ಬೆಳಗ್ಗೆ ನಾಗಮಲೆಗೆ ತೆರಳುವ ವೇಳೆ ಈ ಘಟನೆ ನಡೆದಿದೆ. ಚಿರತೆ ಬಾಲಕನ ಮೇಲೆ ಎರಗಿ ಬಹಳ ದೂರ ಎಳೆದೊಯ್ದಿದೆ. ಸುಮಾರು ಅರ್ಧ ತಾಸಿನ ಬಳಿಕ ಬಾಲಕನ ಮೃತದೇಹ ಕಾಡಿನೊಳಗೆ ಬಂಡೆಯ ಸಿಕ್ಕಲಿನಲ್ಲಿ ಪತ್ತೆಯಾಗಿದೆ. ಸುದ್ದಿ ತಿಳಿದ ಅರಣ್ಯ ಇಲಾಖೆ ಸಿಬ್ಬಂದಿ ಸ್ಥಳಕ್ಕೆ ಆಗಮಿಸಿ ಹಿರಿಯ ಅಧಿಕಾರಿಗಳಿಗೆ ಮಾಹಿತಿ ನೀಡಿದ್ದಾರೆ.

ಈ ಮೊದಲು ಭಕ್ತರು ನಾಗಮಲೆಗೆ ತೆರಳಲು ಅರಣ್ಯ ಇಲಾಖೆಯವರು ಬೆಳಗ್ಗೆ 7 ಗಂಟೆ ನಂತರ ಪ್ರವೇಶ ರಸೀತಿ ನೀಡುತ್ತಿದ್ದರು. ಆದರೆ ಭಾನುವಾರ 6 ಗಂಟೆಗೆ ರಸೀದಿ ನೀಡಿರುವುದೇ ಈ ದುರ್ಘಟನೆಗೆ ಕಾರಣವಾಗಿದೆ. ಬಾಲಕನ ಸಾವಿಗೆ ಅರಣ್ಯ ಇಲಾಖೆಯವರೇ ನೇರ ಹೊಣೆ ಎಂದು ಸಾರ್ವಜನಿಕರು ದೂರಿದ್ದಾರೆ.

ಕಾಮೆಡ್-ಕೆ ಪರೀಕ್ಷೆ ಸುಗಮ

ಬೆಂಗಳೂರು: ಕಾಮೆಡ್ -ಕೆ ಪರೀಕ್ಷೆಯು ಕರ್ನಾಟಕದ ಖಾಸಗಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಪ್ರವೇಶ ಪಡೆಯಲು ಪ್ರಮುಖ ಪ್ರವೇಶ ಪರೀಕ್ಷೆ ಯಶಸ್ವಿಯಾಗಿ ನಡೆದಿದೆ. ಎರಡೂ ಪರೀಕ್ಷೆಗಳನ್ನು ಪ್ರತ್ಯೇಕ ಮೆರಿಟ್ ಪಟ್ಟಿಗಳೊಂದಿಗೆ ಒಂದೇ ಪರೀಕ್ಷೆಯ ರೂಪದಲ್ಲಿ ನಡೆಸಲಾಗಿದೆ. ಶೇ.85ರಷ್ಟು ಹಾಜರಾತಿ ದಾಖಲಾಗಿದೆ.

ಕರ್ನಾಟಕದ 150ಕ್ಕೂ ಹೆಚ್ಚು ಇಂಜಿನಿಯರಿಂಗ್ ಕಾಲೇಜುಗಳಲ್ಲಿನ ಸುಮಾರು 20 ಸಾವಿರ ಸೀಟುಗಳಿಗೆ ಪ್ರವೇಶ ಪಡೆಯಲು ನಡೆಸಲಾಗುವ ಕಾಮೆಡ್ ಕೆ ಯುಜಿಇಟಿ -2026 ಹಾಗೂ ಯುನಿ ಗೇಜ್-2026 ಪ್ರವೇಶ ಪರೀಕ್ಷೆ, ಎರಡು ಅವಧಿಗಳಲ್ಲಿ ನಡೆದ ಈ ಪರೀಕ್ಷೆಯಲ್ಲಿ ದೇಶದ ವಿವಿಧ ಭಾಗದಿಂದ ಅಭ್ಯರ್ಥಿಗಳು ಭಾಗವಹಿಸಿದ್ದರು. ಒಟ್ಟು ಎರಡು ಅವಧಿಗಳಲ್ಲಿ ನಡೆದ ಈ ಆನ್‌ಲೈನ್ ಪರೀಕ್ಷೆಯು ಅತ್ಯಂತ ವ್ಯವಸ್ಥಿತವಾಗಿ ನಡೆದಿದ್ದು, ಮೊದಲ ಅಧಿವೇಶನದಲ್ಲಿ ದೇಶಾದ್ಯಂತ ಶೇ.84.47 ಹಾಜರಾತಿ ಮತ್ತು ಎರಡನೇ ಅಧಿವೇಶನದಲ್ಲಿ ದೇಶಾದ್ಯಂತ ಶೇ. 85.20 ಹಾಜರಾತಿ ದಾಖಲಾಗಿದೆ. ಉಳಿದಂತೆ ಮೊದಲ ಅಧಿವೇಶನದಲ್ಲಿ ಕರ್ನಾಟಕದಲ್ಲಿ ಶೇ.87.72, ಬೆಂಗಳೂರಿನಲ್ಲಿ ಶೇ.89.71, ಎರಡನೇ ಅಧಿವೇಶನದಲ್ಲಿ ಕರ್ನಾಟಕದಲ್ಲಿ ಶೇ.88.27 ಮತ್ತು ಬೆಂಗಳೂರಿನಲ್ಲಿ ಶೇ.89.46 ಹಾಜರಾತಿ ದಾಖಲಾಗಿದೆ.

ನಾಳೆ ಜಿಕೆವಿಕೆ ಘಟಿಕೋತ್ಸವ

ಬೆಂಗಳೂರು: ಕೃಷಿ ವಿಶ್ವವಿದ್ಯಾಲಯ ಜಿಕೆವಿಕೆಯ 60ನೇ ಘಟಿಕೋತ್ಸವವನ್ನು ಮೇ 12ರಂದು ಬೆಳಗ್ಗೆ 11.30ಕ್ಕೆ ಜಿಕೆವಿಕೆ ಆವರಣ ಡಾ.ಬಾಬು ರಾಜೇಂದ್ರ ಪ್ರಸಾದ್ ಅಂತಾರಾಷ್ಟ್ರೀಯ ಸಭಾಂಗಣದಲ್ಲಿ ಆಯೋಜಿಸಲಾಗಿದೆ ಎಂದು ವಿಶ್ವವಿದ್ಯಾಲಯದ ಕುಲಪತಿ ಡಾ.ಎಸ್ .ವಿ.ಸುರೇಶ ತಿಳಿಸಿದರು.

ಈ ಕುರಿತು ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯಪಾಲ ಥಾವರ ಚಂದ್ ಗೆಹಲೋತ್ ಅಅವರು ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದು, ಕೃಷಿ ಸಚಿವ ಚೆಲುವರಾಯಸ್ವಾಮಿ, ವಿಶ್ವವಿದ್ಯಾಲಯ ಅನುದಾನ ಆಯೋಗದ ಮಾಜಿ ಅಧ್ಯಕ್ಷ ಡಾ.ಎಂ. ಜಗದೀಶ್ ಕುಮಾರ್ ಸೇರಿದಂತೆ ಇತರರು ಭಾಗವಹಿಸಲಿದ್ದಾರೆ ಎಂದರು.

55 ವಿದ್ಯಾರ್ಥಿಗಳಿಗೆ 140 ಚಿನ್ನದ ಪದಕ: ಈ ಘಟಿಕೋತ್ಸವದಲ್ಲಿ ಒಟ್ಟು 1,115 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಗುತ್ತಿದ್ದು, 2024-25ನೇ ಶೈಕ್ಷಣಿಕ ವರ್ಷದಲ್ಲಿ 747 ಪದವಿ, 260 ಸ್ನಾತಕೋತ್ತರ ಹಾಗೂ 108 ಡಾಕ್ಟರೇಟ್ ವಿದ್ಯಾರ್ಥಿಗಳು ವಿದ್ಯಾಭ್ಯಾಸ ಪೂರ್ಣಗೊಳಿಸಿದ್ದಾರೆ. ಶೈಕ್ಷಣಿಕ ಸಾಧನೆಯಲ್ಲಿ ಮಿಂಚಿದ 55 ವಿದ್ಯಾರ್ಥಿಗಳಿಗೆ ಒಟ್ಟು 140 ಚಿನ್ನದ ಪದಕಗಳು ಮತ್ತು ಪ್ರಶಸ್ತಿ ಪತ್ರಗಳನ್ನು ಪ್ರದಾನ ಮಾಡಲಾಗುತ್ತಿದೆ ಎಂದು ವಿವರಿಸಿದರು.

ಗೌರವ ಡಾಕ್ಟರೇಟ್

ಕೃಷಿ ಕ್ಷೇತ್ರದಲ್ಲಿ ಸೇವೆಗೈದ ಜಿ.ವಿ.ಕೆ ನಾಯ್ಡು, ಶ್ರೀಕಂಠ, ಎಚ್.ಕೆ ಹಾಗೂ ಅರವಿಂದ್ ಟಿ.ಎಂ. ರವರಿಗೆ ಕೃಷಿ ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್ ಪದವಿಯನ್ನು ನೀಡಿ ಗೌರವಿಸಲಾಗುವುದು.

ಸ್ನಾತಕೋತ್ತರ ಪದವಿ

ಸ್ನಾತಕೋತ್ತರ ವಿಭಾಗದಲ್ಲಿ ಒಟ್ಟು 68 ವಿದ್ಯಾರ್ಥಿಗಳು ತೇರ್ಗಡೆಹೊಂದಿದ್ದು, ಅತ್ಯುತ್ತಮ ಸಾಧನೆ ತೋರಿದ್ದಾರೆ. ಕೃಷಿ ಅರ್ಥಶಾಸ್ತ್ರ ವಿಭಾಗದ ಕೃಷ್ಣಪ್ರಿಯಾ ಆರ್. ಶೇ.96.11 ಅಂಕಗಳೊಂದಿಗೆ 8 ಚಿನ್ನದ ಪದಕಗಳನ್ನು ಪಡೆದುಕೊಂಡಿದ್ದು, ಕೃಷಿ ಸಂಶೋಧನೆ ಮತ್ತು ಆಡಳಿತ ಕ್ಷೇತ್ರದಲ್ಲಿ ಮುಂದಿನ ಸಾಧನೆಗೆ ಭರವಸೆ ಮೂಡಿಸಿದ್ದಾರೆ. ಪ್ರೇಮ್ ಕುಮಾರ್ ಕೆ.ಎಫ್ ಅವರಿಗೆ 15 ಚಿನ್ನದ ಪದಕ. (ಫೋಟೊ ಇದೆ- ಪ್ರೇಮ್ ಜಿಕೆವಿಕೆ) ಮಾಲೂರು ತಾಲೂಕಿನ ಕುಡಿಯನೂರು ಗ್ರಾಮದ ಪ್ರೇಮ್ ಕುಮಾರ್ ಕೆ.ಎಫ್. ಅವರು ಜಿಕೆವಿಕೆಯಲ್ಲಿ ಬಿಎಸ್‌ಸಿ (ಆನರ್ಸ್) ಕೃಷಿ ವಿಭಾಗದಲ್ಲಿ ಶೇ.91.02 ಅಂಕಗಳೊಂದಿಗೆ ಮೊದಲ ಸ್ಥಾನ ಪಡೆದು 15 ಚಿನ್ನದ ಪದಕಗಳನ್ನು ತನ್ನದಾಗಿಸಿಕೊಂಡಿದ್ದಾರೆ.

ಕಾಂಗ್ರೆಸ್‌ಗಿಲ್ಲ ನೈತಿಕತೆ: ಮೋದಿ

ಪುಟ ೧➡ ಕೇರಳದಲ್ಲೂ ಆಡಳಿತದ ವಿಚಾರದಲ್ಲಿ ಸಮಸ್ಯೆ ಇದೆ ಎಂದ ಅವರು, ಹಿಮಾಚಲ ಪ್ರದೇಶದಲ್ಲಿ ಸರಕಾರಿ ನೌಕರರರಿಗೆ ವೇತನ ಕೊಡಲೂ ಸಾಧ್ಯವಾಗುತ್ತಿಲ್ಲ. ತೆಲಂಗಾಣದಲ್ಲಿ ರೈತರು ಆತ್ಮಹತ್ಯೆ ಮಾಡಿಕೊಳ್ಳುವಂತಾಗಿದೆ. ಕಾಂಗ್ರೆಸ್ ಆಡಳಿತದಲ್ಲಿ ಖಜಾನೆ ಲೂಟಿ ಆಗುತ್ತಿದೆ. ಕಾಂಗ್ರೆಸ್ ಪ್ರಾದೇಶಿಕ ಪಕ್ಷವಾಗುತ್ತಿದೆ ಎಂದು ವಾಗ್ದಾಳಿ ಮಾಡಿದರು.

ಮಹಿಳೆಯರಿಗೆ ಕಾಂಗ್ರೆಸ್ ವಿಶ್ವಾಸದ್ರೋಹ

ಪುಟ ೧➡ ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ, ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ಕೇಂದ್ರ ಸಚಿವರಾದ ಶೋಭಾ ಕರಂದ್ಲಾಜೆ, ವಿ. ಸೋಮಣ್ಣ, ರಾಜ್ಯ ಉಸ್ತುವಾರಿ ಡಾ. ರಾಧಾಮೋಹನ್ ದಾಸ್ ಅಗರ್‌ವಾಲ್, ಸಂಸದ ಬಸವರಾಜ ಬೊಮ್ಮಾಯಿ, ವಿರೋಧ ಪಕ್ಷದ ನಾಯಕರಾದ ಆರ್. ಅಶೋಕ್, ಛಲವಾದಿ ನಾರಾಯಣಸ್ವಾಮಿ, ಸಂಸದ ಪಿ.ಸಿ. ಮೋಹನ್, ಶಾಸಕಿ ಮಂಜುಳಾ ಇದ್ದರು.

ಆತಂಕ ಮೂಡಿಸಿದ ಜಿಲೆಟಿನ್ ಕಡ್ಡಿ: ಓರ್ವ ಸೆರೆ

ಪುಟ ೧➡ ಭಾನುವಾರ ಬೆಳಗ್ಗೆ ಪ್ರಧಾನಿ ಮೋದಿ ಎಚ್‌ಎಎಲ್ ಕಾರ್ಯಕ್ರಮ ಮುಗಿಸಿ, ಕನಕಪುರ ರಸ್ತೆಯಲ್ಲಿರುವ ಆರ್ಟ್ ಆಫ್ ಲಿವಿಂಗ್ ಕೇಂದ್ರಕ್ಕೆ ತೆರಳುವ ಕಾರ್ಯಕ್ರಮವಿತ್ತು. ಈ ಮಾರ್ಗದ ಸಮೀಪದಲ್ಲೇ ಇರುವ ತಾತಗುಣಿ ಬಳಿ ರಸ್ತೆಯಿಂದ ಸುಮಾರು 40 ರಿಂದ 50 ಮೀಟರ್ ದೂರದಲ್ಲಿ ಜಿಲೆಟಿನ್ ಕಡ್ಡಿಗಳು ಪತ್ತೆಯಾಗಿದ್ದವು.

ಬೆದರಿಕೆ ಕರೆಮಾಡಿದ್ದ ಆರೋಪಿಯ ವಶ: ಈ ಸ್ಫೋಟಕಗಳ ಪತ್ತೆಗೂ ಮುನ್ನ ಕೋರಮಂಗಲ ಪೊಲೀಸರಿಗೆ ಬೆದರಿಕೆ ಕರೆಯೊಂದು ಬಂದಿತ್ತು. ಎಚ್‌ಎಎಲ್ ಹಾಗೂ ಆರ್ಟ್ ಆಫ್ ಲಿವಿಂಗ್ ಬಳಿ ಸ್ಫೋಟ ನಡೆಸುವುದಾಗಿ ವ್ಯಕ್ತಿಯೊಬ್ಬ ಎಚ್ಚರಿಕೆ ನೀಡಿದ್ದನು. ತಕ್ಷಣ ಕಾರ್ಯಾಚರಣೆ ನಡೆಸಿದ ಪೊಲೀಸರು, ಕರೆ ಮಾಡಿದ ಸುಮಾರು 40 ವರ್ಷ ವಯಸ್ಸಿನ ಕೋರಮಂಗಲ ನಿವಾಸಿ ಎನ್ನಲಾದ ವ್ಯಕ್ತಿಯನ್ನು ವಶಕ್ಕೆ ಪಡೆದಿದ್ದಾರೆ. ಈತನೇ ಸ್ಫೋಟಕಗಳನ್ನು ಅಲ್ಲಿಟ್ಟಿದ್ದನೇ ಅಥವಾ ಕೇವಲ ಮಾಹಿತಿ ನೀಡಿದ್ದನೇ ಎಂಬ ಬಗ್ಗೆ ವಿಚಾರಣೆ ಮುಂದುವರೆದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಕನ್ನಡದಲ್ಲಿಯೇ ಭಾಷಣ ಆರಂಭಿಸಿದ ಮೋದಿ

ನಿಮಗೆಲ್ಲ ನನ್ನ ನಮಸ್ಕಾರಗಳು ಎಂದು ಕನ್ನಡದಲ್ಲೇ ಭಾಷಣ ಆರಂಭಿಸಿದ ಪ್ರಧಾನಿಯವರು, ನಾನು ಕರ್ನಾಟಕಕ್ಕೆ ಬಹಳ ಬಾರಿ ಬಂದಿದ್ದೇನೆ. ವಿಮಾನನಿಲ್ದಾಣದಲ್ಲಿ ಆಯೋಜಿಸಿದ ದೊಡ್ಡ ಕಾರ್ಯಕ್ರಮವಿದು ಎಂದು ಮೆಚ್ಚುಗೆ ಸೂಚಿಸಿದರು. ಇಲ್ಲಿ ಕೇಸರಿಯಷ್ಟೇ ಕಾಣುತ್ತಿದೆ. ಬಿಜೆಪಿ ಕಾರ್ಯಕರ್ತರಷ್ಟೇ ಇಷ್ಟು ಬೇಗ ಇಂಥ ಕಾರ್ಯಕ್ರಮಕ್ಕೆ ದೊಡ್ಡ ಸಂಖ್ಯೆಯಲ್ಲಿ ಬರಲು ಸಾಧ್ಯ ಎಂದರು. ಮಾತೆ ಅಣ್ಣಮ್ಮನಿಗೆ ಪ್ರಣಾಮಗಳು. ಕೆಂಪೇಗೌಡರಿಗೆ ನಮನಗಳು ಎಂದು ತಿಳಿಸಿದ ಅವರು, ಬಂಗಾಲದ ಬಿಜೆಪಿ ಗೆಲುವು ಕಾರ್ಯಕರ್ತರ ಶ್ರಮದ ಪರಿಣಾಮ ಎಂದು ವಿಶ್ಲೇಷಿಸಿದರು. ಬಂಗಾಲದಲ್ಲಿ ಮೊದಲ ಬಾರಿ ಬಿಜೆಪಿಗೆ ಇಷ್ಟು ದೊಡ್ಡ ಆಶೀರ್ವಾದ ಲಭಿಸಿದೆ. ಗುಜರಾತ್‌ನ ಸ್ಥಳೀಯ ಸಂಸ್ಥೆ ಚುನಾವಣೆಯಲ್ಲೂ ದಾಖಲೆ ಗೆಲುವು ಲಭಿಸಿದೆ ಎಂದು ವಿವರಿಸಿದರು. ಇದು ಹೊಸ ಇತಿಹಾಸ ಬರೆಯುವ ಘಟನೆಗಳು ಎಂದು ಪ್ರಧಾನಿ ಮೋದಿಯವರು ವಿಶ್ಲೇಷಿಸಿದರು.

> ತಾತಗುಣಿ ಬಳಿ ಜಿಲೆಟಿನ್ ಕಡ್ಡಿಗಳು ಸಿಕ್ಕಿರುವುದು ದೃಢಪಟ್ಟಿದೆ. ಬಂಧಿತ ಆರೋಪಿಯೇ ಈ ಕೃತ್ಯ ಎಸಗಿದ್ದಾನೆಯೇ ಅಥವಾ ಇದರ ಹಿಂದೆ ಬೇರೆ ಜಾಲವಿದೆಯೇ ಎಂಬ ಬಗ್ಗೆ ತನಿಖೆ ನಡೆಯುತ್ತಿದೆ. ಪ್ರಧಾನಿಯವರ ಕಾರ್ಯಕ್ರಮದ ಹಾದಿಯಲ್ಲಿ ಇಂತಹ ವಸ್ತುಗಳು ಪತ್ತೆಯಾಗಿರುವುದನ್ನು ಗಂಭೀರವಾಗಿ ಪರಿಗಣಿಸಲಾಗಿದೆ.
> ■ ಎಸ್. ಗಿರೀಶ್, ಡಿಐಜಿ (ಕೇಂದ್ರ ವಲಯ)

> ಪ್ರಧಾನಮಂತ್ರಿ ನರೇಂದ್ರ ಮೋದಿ ಜೀ ಅವರ ಶಬ್ದಕೋಶದಲ್ಲಿ ಅಸಾಧ್ಯ ಎಂಬ ಮಾತೇ ಇಲ್ಲ. ಪ್ರಧಾನಿ ಮೋದಿ ಅವರು ಪ್ರಚಾರಕ್ಕಾಗಿ ತೆರಳುವ ಸ್ಥಳದಲ್ಲಿ ಗೆಲುವು ಶತಸ್ಸಿದ್ಧ ಎಂಬುದು ದೇಶಕ್ಕೇ ಗೊತ್ತಾಗಿದೆ.
> ■ ಬಿ.ವೈ.ವಿಜಯೇಂದ್ರ, ಬಿಜೆಪಿ ರಾಜ್ಯಾಧ್ಯಕ್ಷ

ತ.ನಾಡಲ್ಲಿ ವಿಜಯ ಯುಗ ಆರಂಭ

ಪುಟ ೧➡ 234 ಸದಸ್ಯ ಬಲದ ತಮಿಳುನಾಡು ವಿಧಾನಸಭೆಯಲ್ಲಿ ವಿಜಯ್ ನೇತೃತ್ವದ ತಮಿಳಗ ವೆಟ್ರಿ ಕಳಗಂ (ಟಿವಿಕೆ) ಬಹುಮತಕ್ಕೆ ಅಗತ್ಯ ಸ್ಥಾನ ಗಳಿಸದಿದ್ದರೂ, ಕಾಂಗ್ರೆಸ್, ವಿಸಿಕೆ, ಸಿಪಿಐ, ಸಿಪಿಐ (ಎಂ) ಮತ್ತು ಐಯುಎಂಎಲ್ ಪಕ್ಷಗಳ ಬೆಂಬಲದೊಂದಿಗೆ ಒಟ್ಟು 120 ಶಾಸಕರ ಬಲದೊಂದಿಗೆ ಮ್ಯಾಜಿಕ್ ನಂಬರ್(118) ಪಡೆದಿದೆ.

ಮೊದಲ 3 ಆದೇಶ

ಅಧಿಕಾರ ವಹಿಸಿಕೊಂಡ ತಕ್ಷಣ ಮುಖ್ಯಮಂತ್ರಿ ವಿಜಯ್ ಮೂರು ಪ್ರಮುಖ ಆದೇಶಗಳಿಗೆ ಸಹಿ ಹಾಕಿದ್ದಾರೆ. ಪ್ರತಿ ಮನೆಗೆ 200 ಯೂನಿಟ್ ಉಚಿತ ವಿದ್ಯುತ್ ನೀಡುವುದು, ಮಹಿಳೆಯರ ಸುರಕ್ಷತೆಗಾಗಿ ವಿಶೇಷ ಕಾರ್ಯಪಡೆ ರಚನೆ ಮತ್ತು ಮಾದಕದ್ರವ್ಯ ಪಿಡುಗು ತಡೆಗಟ್ಟಲು ಕಾರ್ಯಪಡೆ ರಚಿಸಲು ಮೊದಲ ಆದ್ಯತೆ ನೀಡಿದ್ದಾರೆ.

ರಾಷ್ಟ್ರೀಯ ಪಕ್ಷಗಳಿಗೆ ಸವಾಲು

ಆರು ದಶಕಗಳ ನಂತರ ಕಾಂಗ್ರೆಸ್ ಪಕ್ಷ ತಮಿಳುನಾಡಿನಲ್ಲಿ ಸರ್ಕಾರದ ಭಾಗವಾಗಿರುವುದು ಈ ಬಾರಿಯ ವಿಶೇಷ. ನಿರ್ಗಮಿತ ಡಿಎಂಕೆ ಸರ್ಕಾರ ರಾಜ್ಯದ ಮೇಲೆ 10 ಲಕ್ಷ ಕೋಟಿ ರೂ.ಗಳ ಸಾಲದ ಹೊರೆ ಹೊರಿಸಿದೆ ಎಂದು ವಿಜಯ್ ಆರೋಪಿಸಿದ್ದಾರೆ. ವಿಜಯ್ ಅವರ ಈ ರಾಜಕೀಯ ಏಳಿಗೆ, 2029ರ ಲೋಕಸಭಾ ಚುನಾವಣೆಯ ಮುನ್ನ ರಾಷ್ಟ್ರೀಯ ಪಕ್ಷಗಳ ಮೇಲೆ ಮಹತ್ವದ ಪ್ರಭಾವ ಬೀರುವ ನಿರೀಕ್ಷೆಯಿದೆ.

ವಿಜಯ್‌ಗೆ ಮೋದಿ ಶುಭ ಹಾರೈಕೆ

ತಮಿಳುನಾಡಿನ ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡಿರುವ ತಿರು ಸಿ. ಜೋಸೆಫ್ ವಿಜಯ್ ಅವರಿಗೆ ಹಾರ್ದಿಕ ಅಭಿನಂದನೆಗಳು. ಅವರ ಈ ಅಧಿಕಾರಾವಧಿಯು ಅತ್ಯುತ್ತಮವಾಗಿರಲಿ ಹಾಗೂ ಯಶಸ್ವಿಯಾಗಲಿ ಎಂದು ಶುಭ ಹಾರೈಸುತ್ತೇನೆ. ತಮಿಳುನಾಡಿನ ಜನರ ಜೀವನಮಟ್ಟವನ್ನು ಸುಧಾರಿಸಲು ಮತ್ತು ಅಭಿವೃದ್ಧಿಗಾಗಿ ಕೇಂದ್ರ ಸರ್ಕಾರವು ತಮಿಳುನಾಡು ಸರ್ಕಾರದೊಂದಿಗೆ ನಿರಂತರವಾಗಿ ಪಾಲುದಾರಿಕೆಯಲ್ಲಿ ಕೆಲಸ ಮಾಡಲಿದೆ ಎಂದು ಪ್ರಧಾನಿ ಮೋದಿಯವರು ತಮ್ಮ ಸಂದೇಶದಲ್ಲಿ ತಿಳಿಸಿದ್ದಾರೆ.

ಬೇಕಾದಂತೆ ಬರೆಸಿದ ಸಾಹಿತ್ಯವೂ ಇದೆ



ಶಿವಮೊಗ್ಗ ಸಾಹಿತ್ಯ ಹಬ್ಬದಲ್ಲಿ ಚಿಂತಕರ ಅಭಿಮತ

ಶಿವಮೊಗ್ಗ: ಸಾಮಾಜಿಕ ಸ್ವಾಸ್ಥ್ಯ ಕಾಪಾಡುವ ಸಾಹಿತ್ಯ ಇದ್ದಂತೆ ಸಾಮಾಜಿಕ ಸ್ವಾಸ್ಥ್ಯ ಹಾಳು ಮಾಡುವ ಸಾಹಿತ್ಯವೂ ಇತಿಹಾಸದಲ್ಲಿ ದಾಖಲಾಗಿದೆ ಎಂದು ಚಿಂತಕ ಹಾಗೂ ಅಂಕಣಕಾರ ರೋಹಿತ್ ಚಕ್ರತೀರ್ಥ ಹೇಳಿದರು.

ಅಭಿವ್ಯಕ್ತಿ ಟ್ರಸ್ಟ್ ನಗರದ ಕರ್ನಾಟಕ ಸಂಘದಲ್ಲಿ ಭಾನುವಾರ ಆಯೋಜಿಸಿದ್ದ ಶಿವಮೊಗ್ಗ ಸಾಹಿತ್ಯ ಹಬ್ಬದಲ್ಲಿ ಕಲೆ ಮತ್ತು ಸಾಹಿತ್ಯದಿಂದ ಸಾಮಾಜಿಕ ಸ್ವಾಸ್ಥ್ಯ ಕುರಿತು ಮಾತನಾಡಿ, ಸಾಹಿತ್ಯವನ್ನು ಹೀಗೆಯೇ ಬರೆಯಬೇಕೆಂದು ಬರಹಗಾರರ ಮೇಲೆ ಒತ್ತಡ ಹಾಕಿ ಬರೆಸುತ್ತಿದ್ದ ಕಾಲವೂ ಇತ್ತು. ಇದಕ್ಕೆ ಸಾಕಷ್ಟು ನಿದರ್ಶನಗಳು ನಮ್ಮ ಮುಂದಿವೆ ಎಂದರು.

1829ರಿಂದ ಚರ್ಚ್ ಮಿಷನರಿಗಳು ಭಾರತದಲ್ಲಿ ಆರಂಭವಾದವು. ಆಗಿನಿಂದಲೂ ಸಾಕಷ್ಟು ಸಾಹಿತ್ಯವನ್ನು ಬೇಕಾದಂತೆ ಬರೆಸಿಕೊಂಡು ಬರಲಾಗಿದೆ. ಅದಕ್ಕೆ ನಿದರ್ಶನವೆಂದರೆ 1829ರಲ್ಲಿ ಮಲಯಾಳಿಯಲ್ಲಿ ಬಂದ ಸರಸ್ವತಿ ವಿಜಯಂ ಕಾದಂಬರಿ. ಅದರಲ್ಲಿ ಮಹಿಳೆಯನ್ನು ತುಂಬಾ ಕಷ್ಟಪಡುವುದನ್ನು ಚಿತ್ರಿಸಲಾಗಿದೆ. ಆಕೆ ಮತಾಂತರವಾದ ಮೇಲೆ ಸುಖವಾಗಿದ್ದಳೆಂದು ಕೊನೆಯಲ್ಲಿ ಚಿತ್ರಿಸಲಾಗಿದೆ. ಇದು ದುಡ್ಡು ಕೊಟ್ಟು ಬರೆಸಿದ್ದ ಕಾದಂಬರಿ ಎಂದರು. ರಷ್ಯಾ, ಚೀನಾದಲ್ಲಿನ ಮಾರ್ಕ್ಸ್ ವಾದದ ಸಾಹಿತ್ಯ, ಭಾರತದಲ್ಲಿನ ನಕ್ಸಲಿಯರ ಸಾಹಿತ್ಯ, ಜರ್ಮನಿಯಲ್ಲಿ ಯಹೂದಿಗಳ ವಿರುದ್ಧ ಬಂದ ಸಾಹಿತ್ಯ, ಹೀಗೆ ವಿಶ್ವದ ಬೇರೆ ಬೇರೆ ಭಾಗಗಳಲ್ಲಿ ಒಂದು ಸಿದ್ಧಾಂತರ ಪರವಾಗಿ ಬಂದ ಸಾಹಿತ್ಯ ಸಾಮಾಜಿಕ ಸ್ವಾಸ್ಥ್ಯ ಕೆಡಿಸಿವೆ ಎಂದರು.

ಸಹನಾ ವಿಜಯಕುಮಾರ್ ಮಾತನಾಡಿ, ಸ್ವಾಸ್ಥ್ಯ ಎನ್ನುವುದು ಆನಂದದ ಕಲ್ಪನೆಯಾಗಿದೆ. ಸಮಾಜ ಆನಂದವಾಗಿದ್ದಾಗ ಸ್ವಷ್ಟವಾಗಿದೆ ಎನ್ನಲಾಗುತ್ತದೆ. ಟಾಲ್‌ಸ್ಟಾಯ್, ದಾಸ್ತೋವಸ್ಕಿ, ಅಲೆಕ್ಸಾಂಡರ್ ಮೊದಲಾದವರ ಸಾಹಿತ್ಯದಲ್ಲಿಯೂ ಸ್ವಾಸ್ಥ್ಯದ ಕಲ್ಪನೆ ಬೇರೆಯಾಗಿತ್ತು ಎಂದರು.

ಸ್ವಾಸ್ಥ್ಯದಲ್ಲಿ ಆನಂದದ ಕಲ್ಪನೆ ಇಂದು ಹೋಗಿದೆ. ಕಾನೂನು ಪಾಲನೆ ಮಾಡಿದರೆ ಸಮಾಜದ ಸ್ವಾಸ್ಥ್ಯವಾಗಿರುತ್ತದೆ ಎಂಬ ಮನಸ್ಥಿತಿಗೆ ಬಂದಿದ್ದೇವೆ. ಹೀಗಾಗಿ ಕಾನೂನು ಪಾಲನೆಯಲ್ಲಿ ಸಮಾಜದ ಸ್ವಾಸ್ಥ್ಯವಿದೆ ಎಂದರು. ಎಂ.ಆರ್. ದತ್ತಾತ್ರಿ ಮಾತನಾಡಿ, ಮನುಷ್ಯ ಮನುಷ್ಯನನ್ನು ಕೊಲ್ಲದ ಸಮಾಜ ಹೆಚ್ಚು ಸ್ವಾಸ್ಥ್ಯವಾಗಿರುತ್ತದೆ. ಇದನ್ನು ಶಿಲಾಯುಗದಲ್ಲಿ ನಾವು ಕಾಣುತ್ತೇವೆ. ಆದರೆ ಅಕ್ಷರ ಕಲಿತಂತೆಲ್ಲಾ ಮನುಷ್ಯ ರಾಕ್ಷಸನಾಗಿರುವುದನ್ನು ಕಾಣುತ್ತೇವೆ. ನಮ್ಮ ಅಗತ್ಯಗಳು ಬೇರೆ ಬೇರೆ ರೀತಿಯಲ್ಲಿ ವ್ಯಕ್ತವಾಗುತ್ತಾ ಹೋದಂತಲ್ಲ ಸ್ವಾಸ್ಥ್ಯದ ಕಲ್ಪನೆಯೂ ಬೇರೆಯಾಗಿರುವುದನ್ನು ಗುರುತಿಸಬಹುದಾಗಿದೆ ಎಂದರು. ಹಿರಿಯ ವಿದ್ವಾಂಸ ಡಾ. ಶಾಂತರಾಮ ಪ್ರಭು ಅವರಿಗೆ ಶಿವಮೊಗ್ಗ ಲಿಟ್‌ಫೆಸ್ಟ್ ವಾರ್ಷಿಕ ಪುರಸ್ಕಾರ ನೀಡಲಾಯಿತು. ಡಾ. ಅಜಕ್ಕಳ ಗಿರೀಶ್ ಭಟ್ ಸಮನ್ವಯಕಾರರಾಗಿದ್ದರು.

ಕುವೆಂಪು ಅವರದ್ದು ವರ್ಣನಾತ್ಮಕ ಕಾದಂಬರಿ



ಶಿವಮೊಗ್ಗ: ಕುವೆಂಪು ಅವರದ್ದು ವರ್ಣನಾತ್ಮಕ ಕಾದಂಬರಿ. ಕಲಾತ್ಮಕ, ವಿಚಾರ ಸೇರಿದ ಕಾದಂಬರಿ ಭೈರಪ್ಪನವರದ್ದು. ಅನಕೃ, ಕಾರಂತರ ಇಬ್ಬರ ಕಾದಂಬರಿಗಳಲ್ಲಿ ರಸ ಕಡಿಮೆ ಅಂತ ಭೈರಪ್ಪನವರ ಅಭಿಪ್ರಾಯ. ರಸ ಪ್ರಧಾನವಾದದ್ದು ಕಡಿಮೆಯಾಗುತ್ತಿತ್ತು ಎನ್ನಬಹುದೇನೋ ಎಂದು ಕಾದಂಬರಿಕಾರ ಡಾ. ಅಜಕ್ಕಳ ಗಿರೀಶ್ ಭಟ್ ಹೇಳಿದರು.

ನಗರದ ಕರ್ನಾಟಕ ಸಂಘದಲ್ಲಿ ಅಭಿವ್ಯಕ್ತಿ ಟ್ರಸ್ಟ್ ವತಿಯಿಂದ ಹಮ್ಮಿಕೊಂಡಿದ್ದ ಶಿವಮೊಗ್ಗ ಸಾಹಿತ್ಯ ಹಬ್ಬದಲ್ಲಿ ಭಾನುವಾರ ಭೈರಪ್ಪನವರ ಸಾಹಿತ್ಯ ಕನ್ನಡ ಓದುಗ ವಲಯವನ್ನು ಉಳಿಸಿ ಬೆಳೆಸಿದ ಪರಿ ಕುರಿತು ಮಾತನಾಡಿದರು.

50ರ ಕೊನೆ 60ರ ದಶಕದ ಆರಂಭ ಭೈರಪ್ಪನವರು ಬರೆಯಲು ಆರಂಭಿಸಿದ್ದು. ಪ್ರಗತಿಶೀಲ ಚಳವಳಿಯ ಕಾಲ. ಅದು ಹೆಚ್ಚು ಕಾಲ ಉಳಿಯಲಿಲ್ಲ. ನಂತರದ್ದು ನವ್ಯ ಕಾಲಘಟ್ಟ. ವಿಶ್ವವಿದ್ಯಾಲಯದ ಪ್ರಾಧ್ಯಾಪಕರ ಬರವಣಿಗೆಗಳು ಕಂಡು ಬಂದಿತು. ಇದು ಸಾಮಾನ್ಯರ ಮೇಲೆ ಹೆಚ್ಚು ಪ್ರಭಾವ ಮಾಡಲಿಲ್ಲ. ಪಬ್ಲಿಕ್ ಲೈಬ್ರರಿಯಿಂದ ತಂದು ಕಾದಂಬರಿ ಓದುವ ಕಾಲವದು. ಈ ರೀತಿ ಜನರನ್ನು ಭೈರಪ್ಪನವರ ಕಾದಂಬರಿಗಳು ತಲುಪಿದ್ದವು. ಭಾವದೊಂದಿಗೆ ವಿಚಾರಗಳನ್ನು ಬೆರೆಸಿದ ಕಾದಂಬರಿಗಳನ್ನು ಜನಪ್ರಿಯಗೊಳಿಸಿದ ಕೀರ್ತಿ ಭೈರಪ್ಪನವರದ್ದು. ಸಂಸ್ಕಾರ ಮತ್ತು ವಂಶವೃಕ್ಷ ಒಂದೇ ಸಮಯಕ್ಕೆ ಬಂದು ಜನಪ್ರಿಯವಾದವು ಎಂದರು. ಆದಿತ್ಯವಾರದ ದಿನಪತ್ರಿಕೆಯ ಭೈರಪ್ಪನವರ ವಿಮರ್ಶೆ ಓದುಗರನ್ನು ಸೃಷ್ಟಿಸುತ್ತಿತ್ತು. ವಿಚಾರವನ್ನು ಕಲಾತ್ಮಕವಾಗಿ ಹೇಳಿದರೆ ಜನರಿಗೆ ತಲುಪುತ್ತದೆ. ಭೈರಪ್ಪನವರ ಕಾದಂಬರಿಯಲ್ಲಿ ಸಮಷ್ಟಿಯ ದೃಷ್ಟಿ ಇದ್ದವು. ಒಬ್ಬ ರಚನಾತ್ಮಕ ಕಾದಂಬರಿಕಾರನಾಗಿ ತಮ್ಮ ಸ್ವಾತಂತ್ರವನ್ನೂ ಉಳಿಸಿಕೊಂಡರು. 4 ತಲೆಮಾರುಗಳು ಇವರ ಕಾದಂಬರಿಗಳನ್ನು ಓದಿದ್ದಾರೆ ಎಂದು ಹೇಳಿದರು.

ಕಾದಂಬರಿಕಾರ ಎಮ್.ಆರ್. ದತ್ತಾತ್ರಿ ಮಾತನಾಡಿ, ಕತೆ ಬರೆಯಲು ಹೇಳಿಕೊಟ್ಟಿದ್ದು ಮಾಸ್ತಿಯವರು, ಇದಕ್ಕೆ ಚಾರ ಸೇರಿಸಿದ್ದು ಕಾರಂತರು. ಪಾತ್ರದ ಆಳಕ್ಕೆ ಇಳಿಯುವುದು ಯಶವಂತ ಚಿತ್ತಾಲರು. ಇವು ಮೂರೂ ಸೇರಿದ್ದು ಭೈರಪ್ಪನವರದ್ದು. 50 ರಿಂದ 80ರ ಕಾಲಘಟ್ಟವು ಸ್ಥಿತ್ಯಂತರ ಕಾಲಘಟ್ಟ. ಆ ಕಾಲದಲ್ಲಿ ಧೀರ ಸಾಹಿತ್ಯ ರಚನೆ ಭೈರಪ್ಪನವರದ್ದು ಎಂದರು. ಬಹಳಷ್ಟು ಸಿಕ್ಕುಗಳಿದ್ದ ತಲೆಮಾರು. ಓದುಗರ ಸಂಖ್ಯೆ ಜಾಸ್ತಿಯಾದುದು 80ರ ದಶಕ. 90ರ ದಶಕ ಎಂಜಿನಿಯರ್‌ಗಳನ್ನು ತಯಾರು ಮಾಡಿತು. ಯಾವುದೂ ಬಲವಂತವಾಗಿ ಹೇರಿದ್ದಲ್ಲ, ಯೂನಿವರ್ಸಿಟಿಗಳಿಂದ ಬಂದ ಓದುಗರಲ್ಲ. ಯಾವ ಕೃತಿ ಶುದ್ಧವಾಗಿ ಮನುಷ್ಯ ಭಾವಗಳನ್ನು ಕೇಂದ್ರದಲ್ಲಿಟ್ಟುಕೊಳ್ಳುತ್ತದೆಯೋ ಅಂತ ಕೃತಿ ಯಾವತ್ತಿಗೂ ಜನರನ್ನು ಮುಟ್ಟುತ್ತೆ, ಇನ್ನೂ ಬಹುಕಾಲವೂ ಇರುತ್ತೆ ಎಂದು ತಿಳಿಸಿದರು.

ಸಮನ್ವಯಕಾರರಾದ ಸಹನಾ ವಿಜಯ್ ಕುಮಾರ್ ಇದ್ದರು.

ಕಿರುಸುದ್ದಿ

ಹೊಸ್ಮನೆ ಅಮೆರಿಕದ ಶ್ರೇಷ್ಠ ವಿಜ್ಞಾನಿ

ಗೋಕರ್ಣ: ಇಲ್ಲಿನ ರಥಬೀದಿ ನಿವಾಸಿಯಾಗಿದ್ದ ಹಾಲಿ ಅಮೆರಿಕದಲ್ಲಿರುವ ಖ್ಯಾತ ವಿಜ್ಞಾನಿ ಡಾ.ನಾರಾಯಣ ಹೊಸ್ಮನೆಯವರು ಅಮೆರಿಕದ ಶ್ರೇಷ್ಠ ವಿಜ್ಞಾನಿ ಎಂದು ಘೋಷಿಸಲಾಗಿದೆ. ಎಂಭತ್ತರ ದಶಕದಲ್ಲಿ ಅಮೆರಿಕಕ್ಕೆ ತೆರಳಿದ ಇವರು ಕ್ಯಾನ್ಸರ್ ರೋಗಕ್ಕೆ ಪ್ರತಿಬಂಧಕವಾಗಿ ಬೋರಾನ್ (ರಸಾಯನ ಶಾಸ್ತ್ರ) ಬಳಕೆ ಕುರಿತಾದ ಸಂಶೋಧನೆ ನಡೆಸಿ ಯಶಸ್ವಿಯಾಗಿದ್ದು, ಜಾಗತಿಕ ಮಟ್ಟದಲ್ಲಿ ಗುರುತಿಸಿಕೊಂಡಿದ್ದಾರೆ. ಈಗಾಗಲೇ ವಿಶ್ವಮಟ್ಟದ ಹಲವು ಗೌರವ ದೊರೆತಿದೆ. ಹಾಲಿ ಉತ್ತರ ಇಲಿಯಾನ ವಿಶ್ವವಿದ್ಯಾಲಯದಲ್ಲಿ 50 ವರ್ಷಗಳಿಂದ ವಿಶೇಷ ಸಂಶೋಧಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.



ಅಕಾಡೆಮಿಕ್ ಫ್ಲಾಟ್ ಫಾರ್ಮ ಫಾರ್ ರಿಸರ್ಚ(ಅಮೆರಿಕಾದ ಸಂಶೋಧಕರ ಅಕಾಡೆಮಿ)ನವರು ಬಿಡುಗಡೆ ಮಾಡಿದ 2026 ರ್‍ಯಾಂಕಿಂಗ್ ಪಟ್ಟಿಯಲ್ಲಿ ರಸಾಯನ ಶಾಸ್ತ್ರ ವಿಭಾಗದ ವಿಜ್ಞಾನಿಯಾಗಿ ಮಾಡಿದ ಸಂಶೋಧನಾ ಸಾಧನೆಗೆ ಈ ಗೌರವ ದೊರೆತಿದೆ. ಇಲ್ಲಿನ ಹೊಸ್ಮನೆ ವೈದಿಕ ಮನೆತನದಲ್ಲಿ ಜನಿಸಿದ ನಾರಾಯಣವರಿಗೆ ಚಾಮಿ ಎಂದೇ ಆತ್ಮೀಯವಾಗಿ ಕರೆಯುತ್ತಾರೆ. ಇವರು ಕಲಿತ ಇಲ್ಲಿನ ಕೆನರಾ ಪ್ರಸಾರಕ ಮಂಡಳಿಯ ಭದ್ರಕಾಳಿ ಪ್ರೌಢಶಾಲೆಯ ಅಭಿವೃದ್ಧಿಗೆ ಶ್ರೀ ಚಾಮೀ ವಿದ್ಯಾವಾಹಿನಿ ಟ್ರಸ್ಟ್ ರಚಿಸಿ ಕೊಡುಗೆ ನೀಡುತ್ತಿರುವುದನ್ನ ಇಲ್ಲಿ ಸ್ಮರಿಸಬಹುದಾಗಿದ್ದು, ತೀರ ಬಡತನಲ್ಲಿ ಕಷ್ಟದಿಂದ ವಿದ್ಯಭ್ಯಾಸ ಮಾಡಿ ಜಗತ್ತು ಗುರುತಿಸುವ ಮಟ್ಟಕ್ಕೆ ಬೆಳೆದು ಪುಣ್ಯ ಕ್ಷೇತ್ರದ ಹಿರಿಮೆ ಹೆಚ್ಚಿಸಿದ ಡಾ. ನಾರಾಯಣ ಹೊಸ್ಮನೆಯವರಿಗೆ ಶ್ರೀಚಾಮಿ ವಿದ್ಯಾವಾಹಿನಿ ಟ್ರಸ್ಟ್‌ನ ಪದಾಧಿಕಾರಿಗಳು ಸದಸ್ಯರು ಸೇರಿದಂತೆ ಅನೇಕರು ಹರ್ಷ ವ್ಯಕ್ತಪಡಿಸಿದ್ದಾರೆ.

ಯಾವ ಕುರ್ಚಿಗಳೂ ಅಲ್ಲಾಡುತ್ತಿಲ್ಲ: ಡಿಕೆಶಿ

ಮಸ್ಕಿ: ರಾಜ್ಯದಲ್ಲಿ ಮುಖ್ಯಮಂತ್ರಿ ಕುರ್ಚಿ ಅಲುಗಾಡುತ್ತಿದೆ ಎಂಬ ಪ್ರಧಾನಿ ನರೇಂದ್ರ ಮೋದಿ ಅವರ ಹೇಳಿಕೆಗೆ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ಅವರು ತಿರುಗೇಟು ನೀಡಿದ್ದಾರೆ. ಮಸ್ಕಿ ಸಮೀಪದ ಮುದಗಲ್‌ನಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಪ್ರಧಾನಮಂತ್ರಿಯವರ ಕಣ್ಣಿಗೆ ಏನೇನು ಕಾಣುತ್ತಿದೆಯೋ ನಮಗೆ ಗೊತ್ತಿಲ್ಲ. ಯಾವ ಕುರ್ಚಿಗಳೂ ಅಲ್ಲಾಡುತ್ತಿಲ್ಲ, ಎಲ್ಲಾ ಕುರ್ಚಿಗಳೂ ಗಟ್ಟಿಯಾಗಿವೆ ಎಂದು ಸ್ಪಷ್ಟಪಡಿಸಿದರು. ಇದೇ ಸಂದರ್ಭದಲ್ಲಿ ಸಚಿವ ಡಿ.ಸುಧಾಕರ್ ಅವರ ಅಕಾಲಿಕ ನಿಧನಕ್ಕೆ ಡಿ.ಕೆ. ಶಿವಕುಮಾರ್ ಅವರು ತೀವ್ರ ಸಂತಾಪ ಸೂಚಿಸಿದರು. ಸುಧಾಕರ್ ಅವರು ಮಂಡಿ ನೋವಿನ ಶಸ್ತ್ರಚಿಕಿತ್ಸೆಯ ನಂತರ ಚೇತರಿಸಿಕೊಳ್ಳಬೇಕಿತ್ತು. ಆದರೆ, ಲಂಗ್ಸ್ ಇನ್ಫೆಕ್ಷನ್‌ನಿಂದಾಗಿ ಅವರನ್ನು ಉಳಿಸಿಕೊಳ್ಳಲು ಸಾಧ್ಯವಾಗಲಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು. ಸುಧಾಕರ್ ಅವರು ನನಗೆ ವೈಯಕ್ತಿಕವಾಗಿ ಬಹಳ ಆತ್ಮೀಯರು. ಸಹಕಾರ ಕ್ಷೇತ್ರದಲ್ಲಿ ಡಿಸಿಸಿ ಬ್ಯಾಂಕ್ ಅಧ್ಯಕ್ಷರಾಗಿ, ಅಪೆಕ್ಸ್ ಬ್ಯಾಂಕ್ ನಿರ್ದೇಶಕರಾಗಿ ಹಲವು ವರ್ಷ ಸೇವೆ ಸಲ್ಲಿಸಿದ್ದರು. ಚಿತ್ರದುರ್ಗ ಜಿಲ್ಲೆಯಲ್ಲಿ ಅಪ್ಪರ್ ಭದ್ರಾ ಯೋಜನೆ ಜಾರಿಗೆ ತರುವಲ್ಲಿ ಎಲ್ಲಾ ಶಾಸಕರನ್ನು ಒಗ್ಗೂಡಿಸಿ ಕೆಲಸ ಮಾಡಿದ್ದರು. ಅವರೊಬ್ಬ ದೊಡ್ಡ ಹೃದಯವಂತ ನಾಯಕ. ರಾಮಲಿಂಗಾರೆಡ್ಡಿ ಅವರಿಗಾಗಿ ಒಂದು ಖಾತೆಯನ್ನು ಬಿಟ್ಟುಕೊಟ್ಟು ತ್ಯಾಗ ಮಾಡಿದ್ದರು.



ಇಂದು ತಂತ್ರಜ್ಞಾನ, ಆರ್ಥಿಕತೆಯಲ್ಲಿ ಬದಲಾವಣೆ: ಪ್ರಧಾನಿ ಮೋದಿ

ಸಮಾಜ ಜಾಗೃತಿಗೊಳ್ಳಲಿ

ಬೆಂಗಳೂರು: ಭಾರತದ ಹಲವು ಧಾರ್ಮಿಕ ಆಂದೋಲನಗಳು ಮಾನವ ಸೇವೆಯನ್ನು ಪುರಸ್ಕರಿಸಿದೆ. ಯಾವುದೇ ಅಭಿಯಾನಗಳು ಸಫಲವಾಗಲು ಸಮಾಜವನ್ನು ಜಾಗೃತಿ ಮಾಡುವುದು ಅಗತ್ಯ. ಇಂದು ಯುವಶಕ್ತಿಯ ಬಗ್ಗೆ ಹೆಚ್ಚು ಗಮನ ಹರಿಸುವ ಅಗತ್ಯವಾಗಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಅಭಿಪ್ರಾಯ ವ್ಯಕ್ತಪಡಿಸಿದರು.

ನಗರದ ಕನಕಪುರ ರಸ್ತೆಯಲ್ಲಿರುವ ಆರ್ಟ್ ಆಫ್ ಲೀವಿಂಗ್‌ನಲ್ಲಿ ನಡೆದ ಧ್ಯಾನ ಕೇಂದ್ರ ಉದ್ಘಾಟನೆ ಹಾಗೂ ಆರ್ಟ್ ಆಫ್ ಲೀವಿಂಗ್‌ನ 40ನೇ ವರ್ಷಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಇಂದು ತಂತ್ರಜ್ಞಾನ ಮತ್ತು ಆರ್ಥಿಕತೆಯಲ್ಲಿ ಬದಲಾವಣೆ ಆಗುತ್ತಿದೆ. ಭಾರತವು ಬದಲಾವಣೆಯಲ್ಲಿ ಭಾಗಿ ಮಾತ್ರ ಆಗಿಲ್ಲ, ಬಲವಾದ ನಾಯಕತ್ವವನ್ನು ಹೊಂದಿದೆ. ನಮ್ಮ ಬದಲಾವಣೆಗೆ ಯುವಶಕ್ತಿ ಮತ್ತು ಆರ್ಟ್ ಆಫ್ ಲೀವಿಂಗ್ ನಂತಹ ಸಂಸ್ಥೆ ಕಾರಣ ಎಂದರು. ಯುವ ಶಕ್ತಿ ಮಾನಸಿಕವಾಗಿ ಶಾಂತವಾಗಿರಬೇಕು. ಸಾಮಾಜಿಕವಾಗಿ ಜವಾಬ್ದಾರಿ ಇರಬೇಕು. ಈ ಧ್ಯಾನ ಕೇಂದ್ರ ಶಾಂತಿ ನೀಡುವ ಕೇಂದ್ರ ಆಗಲಿದೆ.

ಜಲ ಸಂರಕ್ಷಣೆಯ ಮಹತ್ವ ಅರಿಯಬೇಕು: ಮೋದಿ

ಕರೆ: ಭಾರತದ ಭೂಮಿಯನ್ನು ರಾಸಾಯನಿಕದಿಂದ ರಕ್ಷಿಸಬೇಕಿದೆ. ನೀರಿನ ರಕ್ಷಣೆ ಮತ್ತು ಉಪಯೋಗ ತಿಳಿಸಬೇಕಾಗಿದೆ. ಜಲಸಂರಕ್ಷಣೆಗೆ ಇದು ಸೂಕ್ತ ಕಾಲ. ಪ್ರಕೃತಿಯೊಂದಿಗೆ ಸಹಭಾಗಿತ್ವದಲ್ಲಿ ಸಾಗಬೇಕಿದೆ. ದೇಶದ ಸಮಗ್ರ ಅಭಿವೃದ್ಧಿಗೆ ಸಾಮೂಹಿಕ ಭಾಗಿತ್ವ ಇರಬೇಕು ಎಂದರು ಕರೆನೀಡಿದರು.

ದೂರದಲ್ಲಿ ನೆಲೆಸಿರುವ ವ್ಯಕ್ತಿಗಳನ್ನು ತಕ್ಷಣವೇ ಸಂಪರ್ಕಿಸುವ ತಂತ್ರಜ್ಞಾನದ ಶಕ್ತಿಯನ್ನು ಶ್ಲಾಘಿಸಿದ ಪ್ರಧಾನಮಂತ್ರಿಯವರು, ಇದರೊಂದಿಗೆ ಜನರು ತಮ್ಮನ್ನು ತಾವು ಅರಿತುಕೊಳ್ಳುವ ಸಾಮರ್ಥ್ಯವನ್ನು ಬಲಪಡಿಸಿಕೊಳ್ಳುವುದೂ ಅಷ್ಟೇ ಅಗತ್ಯ ಎಂದು ಅವರು ಒತ್ತಿಹೇಳಿದರು.

ನೂತನವಾಗಿ ಉದ್ಘಾಟನೆಗೊಂಡ ಧ್ಯಾನ ಮಂದಿರವು ಸಾವಿರಾರು ಜನರಿಗೆ ಶಾಂತಿ ಮತ್ತು ಸಾಂತ್ವನದ ತಾಣವಾಗಿ ಕಾರ್ಯನಿರ್ವಹಿಸಲಿದೆ ಎಂಬ ವಿಶ್ವಾಸ ವ್ಯಕ್ತಪಡಿಸಿದ ಪ್ರಧಾನಮಂತ್ರಿಯವರು, ಸಮಾಜವು ಈಗಾಗಲೇ ರಾಷ್ಟ್ರದ ಬಗ್ಗೆ ತನ್ನ ಕರ್ತವ್ಯಗಳನ್ನು ಶ್ಲಾಘನೀಯವಾಗಿ ನಿರ್ವಹಿಸುತ್ತಿದೆ ಎಂದು ಒಪ್ಪಿಕೊಂಡರು. ಇದರೊಂದಿಗೆ ಸಮಗ್ರ ರಾಷ್ಟ್ರೀಯ ಅಭಿವೃದ್ಧಿಗಾಗಿ ಕೆಲವು ಪ್ರಮುಖ ಮನವಿಗಳನ್ನು ಅವರ ಮುಂದಿಡಲು ಬಯಸುವುದಾಗಿ ತಿಳಿಸಿದರು.

ತಾಯಿಯ ಹೆಸರಲ್ಲಿ ಒಂದು ಗಿಡ ನೆಡಿ: ಮೋದಿ

ಕರೆ: ಏಕ್ ಪೇಡ್ ಮಾ ಕೆ ನಾಮ್ (ತಾಯಿಯ ಹೆಸರಲ್ಲಿ ಒಂದು ಗಿಡ) ಅಭಿಯಾನವನ್ನು ವ್ಯಾಪಕವಾಗಿ ವಿಸ್ತರಿಸಲು ಪ್ರೋತ್ಸಾಹಿಸಿದ ಪ್ರಧಾನಮಂತ್ರಿಯವರು, ಪರಿಸರ ಸಂರಕ್ಷಣೆಯನ್ನು ಉತ್ತಮ ಜೀವನದ ತತ್ವಕ್ಕೆ ನೇರವಾಗಿ ಜೋಡಿಸಿದರು.



> ನೂತನ ಶಿಕ್ಷಣ ನೀತಿ ತಂದು ಪರಿವರ್ತನೆ ತರಲಾಗಿದೆ. ಪರೀಕ್ಷಾ ಪೇ ಚರ್ಚೆ ಮಾಡಿ ತಂದೆ ತಾಯಿಗಿಂತ ಹೆಚ್ಚು ಕಾಳಜಿ ಮಾಡಿದ್ದೀರಾ ನಿಮ್ಮ ನೇತೃತ್ವದಲ್ಲಿ ದೇಶ ಮುಂದುವರಿಯಲಿ.
>
> ■ **ಶ್ರೀಶ್ರೀ ರವಿಶಂಕರ್ ಗುರೂಜಿ**, ಆರ್ಟ್ ಆಫ್ ಲೀವಿಂಗ್ ಸಂಸ್ಥಾಪಕರು

ಸ್ವಚ್ಛತೆಗೆ ಒತ್ತು ನೀಡಿದ್ದು ಮೋದಿ: ರವಿಶಂಕರ್ ಗುರೂಜಿ

ಬೆಂಗಳೂರು: ಈ ದೇಶಕ್ಕೆ ಸ್ವಚ್ಛ ಸುರಕ್ಷಿತ ದೇಶಕ್ಕೆ ಪರಿಕಲ್ಪನೆ ನೀಡಿದ್ದು ಪ್ರಧಾನಿ ನರೇಮದ್ರ ಮೋದಿಯವರು, ಹಿಂಸಾ ಮುಕ್ತ ದೇಶಕ್ಕೆ ತಾವು ಆದ್ಯತೆ ನೀಡಿದ್ದೀರಿ ಎಂದು ಆರ್ಟ್ ಆಫ್ ಲೀವಿಂಗ್‌ನ ಶ್ರೀ ರವಿಶಂಕರ್ ಗುರೂಜಿ ಹೇಳಿದರು. ಪ್ರಧಾನಿ ಮೋದಿಯವರ ಜತೆಗೆ ಧ್ಯಾನ ಕೇಂದ್ರ ಉದ್ಘಾಟನೆ, ಹಾಗೂ ಆರ್ಟ್ ಆಫ್ ಲೀವಿಂಗ್‌ನ 40ನೇ ವರ್ಷಾಚರನೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಭಾರತವೂ ಯಾವತ್ತೂ ಬದಲಾಗಲ್ಲ ಎಂಬ ಭಾವನೆ ಇತ್ತು ಎಂದರು.

ಎಸ್‌ಐಆರ್ ಬಗ್ಗೆ ಕಾಂಗ್ರೆಸ್ ಎಚ್ಚರಿಕೆ

ಬೆಂಗಳೂರು: ಎಸ್‌ಐಆರ್ ಪ್ರಕ್ರಿಯೆ ಬಗ್ಗೆ ದೇಶದಾದ್ಯಂತ ಗೊಂದಲವಿದ್ದು, ಮತಪಟ್ಟಿ ಪರಿಷ್ಕರಣೆ ವೇಳೆ ಕೆಲ ಸಮುದಾಯಗಳ ಮತಗಳನ್ನು ಉದ್ದೇಶ ಪೂರ್ವಕವಾಗಿ ತೆಗೆದುಹಾಕುವ ಆರೋಪ ಗಳ ಬಗ್ಗೆ ಕಾಂಗ್ರೆಸ್ ಎಚ್ಚರಿಕೆಯಿಂದ ಕೆಲಸ ಮಾಡಲಿದೆ ಎಂದು ಸಚಿವ ಕೆ.ಎಚ್. ಮುನಿಯಪ್ಪ ಹೇಳಿದರು.



ನಗರದಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಹಣಬಲ, ತೋಳ್ಬಲ ಅಥವಾ ತಿರುಚಿದ ಕ್ರಮಗಳಿಂದ ಜನರ ತೀರ್ಪು ಬದಲಾಗಬಾರದು ಈ ಬಾರಿ ಸರ್ಕಾರ ಮತ್ತು ಕಾಂಗ್ರೆಸ್ ಪಕ್ಷ ವಿಶೇಷ ಎಚ್ಚರಿಕೆ ವಹಿಸಲಿದೆ ಎಂದು ಸಚಿವರು, ಮಮತಾ ಬ್ಯಾನರ್ಜಿ ಅವರನ್ನು ಉಲ್ಲೇಖಿಸಿದ, ಲಕ್ಷಾಂತರ ಮತಗಳನ್ನು ಮತಪಟ್ಟಿಯಿಂದ ತೆಗೆದು ಹಾಕುವಂತಹ ಘಟನೆಗಳು ಪ್ರಜಾಪ್ರಭುತ್ವಕ್ಕೆ ಧಕ್ಕೆ ತರುತ್ತವೆ ಎಂದು ಆತಂಕ ವ್ಯಕ್ತಪಡಿಸಿದರು.

ಕೇರಳದಲ್ಲಿ ಶೇ.100ರಷ್ಟು ಶಿಕ್ಷಣ ಪ್ರಮಾಣ ಇರುವುದರಿಂದ ಅಲ್ಲಿ ಇಂತಹ ಅಕ್ರಮಗಳಿಗೆ ಅವಕಾಶ ಕಡಿಮೆ. ರಾಜ್ಯದ ಜನರು ಅತ್ಯಂತ ವಿದ್ಯಾವಂತರಾಗಿದ್ದು, ಸಾಮಾನ್ಯ ಕಾರ್ಮಿಕರೂ ಉನ್ನತ ಶಿಕ್ಷಣ ಪಡೆದವರಾಗಿರುವುದರಿಂದ ಮತದಾರರ ಹಕ್ಕುಗಳ ಬಗ್ಗೆ ಹೆಚ್ಚಿನ ಜಾಗೃತಿ ಇದೆ ಎಂದು ಹೇಳಿದರು.

ಮುಂದಿನ ತಿಂಗಳಿನಿಂದ ಆಹಾರ ಕಿಟ್



ಮುಂದಿನ ತಿಂಗಳಿನಿಂದ ಆಹಾರ ಕಿಟ್ ನೀಡಲಾಗುವುದು ಕಿಟ್‌ನಲ್ಲಿ ಬೇಳೆ, ಎಣ್ಣೆ, ಸಕ್ಕರೆ ಸೇರಿ ಇತರೆ ಪದಾರ್ಥಗಳು ಇರಲಿವೆ. 5 ಅಕ್ಕಿ ಬೆಲೆ ಎಷ್ಟಾಗುತ್ತದೆ ಅಷ್ಟು ಮೊತ್ತದಲ್ಲಿ ಆಹಾರ ಕಿಟ್ ನೀಡಲಾಗುವುದು. ಪ್ರೋಟಿನ್ ನೀಡುವುದರಿಂದ ಮನೆವರಿಗೂ ಅನಕೂಲ ಆಗಲಿದೆ ಎಂದು ಹೇಳಿದರು. ವಾಣಿಜ್ಯ ಗ್ಯಾಸ್‌ಗಳ ವಿಷಯದಲ್ಲಿ ಸ್ವಲ್ಪ ಸಮಸ್ಯೆಯಾಗಿದೆ. ಕೇಂದ್ರ ಸರ್ಕಾರ ಮುಂದಾಲೋಚನೆ ವಹಿಸಬೇಕಿತ್ತು. ಪರ್ಯಾಯ ವ್ಯವಸ್ಥೆ ಕಲ್ಪಿಸಬೇಕಿತ್ತು. ಕೇಂದ್ರ ಇದರಲ್ಲಿ ವಿಫಲವಾಗಿದೆ ಎಂದಾರೋಪಿಸಿದರು.

ಜನತೆಗೆ ಕೃತಜ್ಞತೆ ಸಮರ್ಪಿಸುವೆ

ಬೆಂಗಳೂರು: ಚಿತ್ರದುರ್ಗದಲ್ಲಿ ನಡೆದ ಐತಿಹಾಸಿಕ ಬಿಎಸ್‌ವೈ ಅಭಿಮಾನೋತ್ಸವದಲ್ಲಿ ಹರಿದು ಬಂದ ಜನಸಾಗರ ಯಡಿಯೂರಪ್ಪ ಅವರ ಬಗೆಗಿರುವ ಅಭಿಮಾನದ ಅಲೆಯ ಸದ್ದು ಮೊಳಗಿಸಿ ಚಾರಿತ್ರಿಕ ನೆನಪಿಗೆ ಸಾಕ್ಷಿಯಾಯಿತು. ಅಭಿಮಾನದ ಜನತೆಗೆ ಹೃದಯತುಂಬಿ ಸಾಷ್ಟಾಂಗ ನಮನದ ಕೃತಜ್ಞತೆ ಸಮರ್ಪಿಸುವೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ತಿಳಿಸಿದ್ದಾರೆ.

ಕಾರ್ಯಕ್ರಮದ ಯಶಸ್ಸಿಗೆ ಕಾರಣೀಕರ್ತರಾದ ಜನತೆ, ನಾಯಕರು ಮತ್ತು ಕಾರ್ಯಕರ್ತರಿಗೆ ಕೃತಜ್ಞತಾ ಪತ್ರ ಬರೆದಿರುವ ಅವರು, ಬಿರುಬಿಸಿಲನ್ನು ಲೆಕ್ಕಿಸದೆ ನಾಡಿನ ಮೂಲೆ ಮೂಲೆಗಳಿಂದ ಧಾವಿಸಿ ಬಂದು ಯಡಿಯೂರಪ್ಪ ಅವರನ್ನು ತಮ್ಮ ಆದರಾಭಿಮಾನಗಳ ಮಡಿಲಲ್ಲಿ ತೋಯಿಸಿದ ಜನರ ಪ್ರೀತಿಗೆ ಬೆಲೆ ಕಟ್ಟಲಾಗದು ಎಂದಿದ್ದಾರೆ. ಅಭಿಮಾನೋತ್ಸವ ಹಬ್ಬಕ್ಕೆ ಸಾಕ್ಷಿಯಾಗಲು ಬಂದು ಯಡಿಯೂರಪ್ಪ ಅವರಿಗೆ ಆತ್ಮೀಯ ಶುಭಹಾರೈಕೆಗಳನ್ನು ಸಲ್ಲಿಸಿ, ಕಾರ್ಯಕ್ರಮ ಉದ್ಘಾಟಿಸಿದ ದೇಶ ಕಂಡ ದಿಟ್ಟೆದೆಯ ಗೃಹ ಸಚಿವ ಹಾಗೂ ಪಕ್ಷ ಸಂಘಟನೆಗೆ ನಿತ್ಯ ಚೈತನ್ಯ ಶಕ್ತಿಯಾಗಿರುವ ಅಮಿತ್ ಶಾ ಅವರಿಗೆ ಕೃತಜ್ಞತಾಪೂರ್ವಕ ಅಭಿನಂದನೆ ಸಲ್ಲಿಸಿದ್ದಾರೆ.



ಯಡಿಯೂರಪ್ಪ ಅವರಿಗೆ ಗೌರವಾಭಿಮಾನದ ಹಾರೈಕೆಯ ಮಾತುಗಳನ್ನಾಡಿ ತಮ್ಮ ಒಡನಾಟದ ದಿನಗಳನ್ನು ನೆನಪಿಸಿಕೊಂಡು ಅವರೊಬ್ಬ ಶಕ್ತಿ ಎಂದು ಹಾರೈಸಿದ ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ಸಂಸದ ಬಸವರಾಜ ಬೊಮ್ಮಾಯಿ ಅವರ ಆದಿಯಾಗಿ ಮಾಜಿ ಮುಖ್ಯಮಂತ್ರಿಗಳು, ಕೇಂದ್ರ ಸಚಿವರು, ಸಂಸದರು, ಪ್ರತಿಪಕ್ಷದ ನಾಯಕರಾದ ಆರ್.ಅಶೋಕ, ಛಲವಾದಿ ನಾರಾಯಣ ಸ್ವಾಮಿ ಸೇರಿದಂತೆ ಭಾಗವಹಿಸಿದ ಎಲ್ಲ ಶಾಸಕರು, ಮಾಜಿ ಶಾಸಕರು ಹಾಗೂ ಪ್ರಮುಖರೂ ಸೇರಿದಂತೆ ಇತರ ಎಲ್ಲಾ ಗಣ್ಯರಿಗೂ ಕೃತಜ್ಞತೆ ಸಲ್ಲಿಸುವೆ. ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಬಿ.ಎಲ್.ಸಂತೋಷ್ ಹಾಗೂ ಕರ್ನಾಟಕ ರಾಜ್ಯದ ಉಸ್ತುವಾರಿ ರಾಧಾ ಮೋಹನ್ ದಾಸ್ ಅಗರ್ವಾಲ್ ಅವರೂ ಸೇರಿದಂತೆ ಪಕ್ಷದ ಪ್ರಮುಖರು, ಪದಾಧಿಕಾರಿಗಳು ಹಾಗೂ ಕಾರ್ಯಕರ್ತರೆಲ್ಲರಿಗೂ ಹೃದಯತುಂಬಿ ಕೃತಜ್ಞತೆ ಸಲ್ಲಿಸುವುದಾಗಿ ತಿಳಿಸಿದ್ದಾರೆ.

ಭದ್ರತಾ ಲೋಪ: ಬಿವೈವಿ

ದೇಶದ ಪ್ರಧಾನಮಂತ್ರಿಗಳ ನಿಗದಿತ ಸಂಚಾರದ ರಸ್ತೆಯಲ್ಲೇ ಜಿಲೆಟಿನ್ ಕಡ್ಡಿಗಳು ಪತ್ತೆಯಾಗಿರುವುದು ಗಂಭೀರ ಭದ್ರತಾ ಲೋಪ ಮಾತ್ರವಲ್ಲ, ಇದು ಕಾನೂನು ಸುವ್ಯವಸ್ಥೆ ಹೊಣೆ ಹೊತ್ತಿರುವ ರಾಜ್ಯದ ಕಾಂಗ್ರೆಸ್ ಸರ್ಕಾರದ ಅಕ್ಷಮ್ಯ ಮತ್ತು ಗಂಭೀರ ವೈಫಲ್ಯ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಆಕ್ಷೇಪಿಸಿದ್ದಾರೆ. ಸಾಮಾಜಿಕ ಜಾಲತಾಣದಲ್ಲಿ ಈ ಕುರಿತು ಖಂಡಿಸಿರುವ ಅವರು, ಕಾಂಗ್ರೆಸ್ ಸರ್ಕಾರದ ಆಳ್ವಿಕೆಯಲ್ಲಿ ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ, ಭದ್ರತೆ ಸಂಪೂರ್ಣ ಕುಸಿದಿದೆ ಎಂದರು.

ಕುರ್ಚಿಗಾಗಿ ಗುದ್ದಾಟ ಸಹಜ: ಜಾರಕಿಹೊಳಿ

ಹಾವೇರಿ: ಕರ್ನಾಟಕ ರಾಜ್ಯದ ಕುರ್ಚಿ ಕಿತ್ತಾಟದ ಬಗ್ಗೆ ಮೋದಿಯವರು ರಾಜಕೀಯವಾಗಿ ಹೇಳುವುದು ಸ್ವಾಭಾವಿಕ. ರಾಜ್ಯದಲ್ಲಿ ಕುರ್ಚಿ ಗುದ್ದಾಟ ಇರುವುದೇ ಅಲ್ವಾ...? ಮೋದಿಯವರು ಮಾಡುವಂತಹ ವರ್ಕಿಂಗ್ ಸ್ಟೈಲ್ ಬೇರೆಯಾಗಿದೆ. ಬಂಗಾಳ ಮತ್ತು ಮಹಾರಾಷ್ಟ್ರದಲ್ಲಿ ಯಾವ ರೀತಿ ಅಧಿಕಾರಕ್ಕೆ ಬಂದರು ಅಂತ ಗೊತ್ತಿದೆ ಎಂದು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಹೇಳಿದರು.



ಭಾನುವಾರ ಹಾವೇರಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನರೇಂದ್ರ ಮೋದಿ ಅವರ ವರ್ಕಿಂಗ್ ಸ್ಟೈಲ್ ಬೇರೆ, ಆದರೆ, ಕಾಂಗ್ರೆಸ್ ಪಕ್ಷದ ವರ್ಕಿಂಗ್ ಸ್ಟೈಲ್ ಬೇರೆ. ಅವರು ಹೇಳಿದಂತೆ ನಾವು ಹೇಳಲು ಆಗಲ್ಲ ಎಂದರು. ಪ್ರಧಾನಿ ನರೇಂದ್ರ ಮೋದಿ ಅವರು ಬಂದಾಗ ಭದ್ರತಾ ವೈಫಲ್ಯದ ಬಗ್ಗೆ ಮಾತನಾಡಿದ ಅವರು, ಆ ರೀತಿಯಲ್ಲ ಆಗಲ್ಲ. ಪೊಲೀಸರು ಭದ್ರತೆಯಲ್ಲಿ ಇರುತ್ತಾರೆ. ಅವರೇ ಎಲ್ಲ ನೋಡಿಕೊಳ್ಳುತ್ತಾರೆ. ಎಲ್ಲೋ ಆಗಿದ್ದಕ್ಕೂ, ಪ್ರಧಾನ ಮಂತ್ರಿಗೆ ಹೋಲಿಸಲು ಆಗುವುದಿಲ್ಲ. ಪ್ರಧಾನ ಮಂತ್ರಿ, ಪ್ರಧಾನ ಮಂತ್ರಿನೇ, ಭದ್ರತೆ ಜವಾಬ್ದಾರಿ ನಮ್ಮದು ಅಷ್ಟೇಯಲ್ಲ. ಸೆಂಟ್ರಲ್ ಅವರದ್ದು ಇರುತ್ತದೆ. ಅದೇನೂ ಆತಂಕ ಪಡುವಂತಹ ಅವಶ್ಯಕತೆ ಇಲ್ಲ ಎಂದರು.

ತಮಿಳುನಾಡಿನಲ್ಲಿ ಟಿವಿಕೆ ಅಧಿಕಾರದ ಗದ್ದುಗೆ ಏರಿರುವ ಕುರಿತು ಮಾತನಾಡಿದ ಅವರು, ತಮಿಳುನಾಡಿನಲ್ಲಿ ಸೆಕ್ಯುಲರ್ ಪಾರ್ಟಿ ಅಧಿಕಾರದ ಚುಕ್ಕಾಣಿ ಹಿಡಿದಿರುವುದು ಬಹಳ ಸಂತೋಷ. ಆ ಹಿನ್ನೆಲೆಯಲ್ಲಿ ನಾವೆಲ್ಲರೂ ಬೆಂಬಲ ಮಾಡಿದ್ದೇವೆ. ಗ್ಯಾರಂಟಿ ಬಗ್ಗೆ ಬಿಜೆಪಿಯವರು ಟೀಕೆ ಮಾಡುತ್ತಾರೆ. ಬಿಜೆಪಿ ಅಧಿಕಾರ ಇರುವ ಬೇರೆ ರಾಜ್ಯದಲ್ಲಿ ನಮ್ಮದೇ ಗ್ಯಾರಂಟಿ ಕಾಪಿ ಮಾಡಿ, ಅದನ್ನೇ ಜಾರಿಗೊಳಿಸುತ್ತಾರೆ ಎಂದು ಜಾರಕಿಹೊಳಿ ಹೇಳಿದರು.

ಗ್ರಾಮ ಸಭೆಯಲ್ಲಿ ಫಲಾನುಭವಿಗಳ ಆಯ್ಕೆಯಾಗಲಿ

ಬೆಂಗಳೂರು: ಸರ್ಕಾರದ, ಸಂಘ-ಸಂಸ್ಥೆಗಳ ಮತ್ತು ಪಂಚಾಯತ್ ಕಾರ್ಯಕ್ರಮಗಳ ಫಲಾನುಭವಿಗಳ ಆಯ್ಕೆ ಗ್ರಾಮ ಸಭೆಯಲ್ಲಿಯೇ ಆಗಬೇಕೆಂದು 14ನೇ ಹಣಕಾಸು ಆಯೋಗ ಕೇಂದ್ರ ಸರ್ಕಾರಕ್ಕೆ ವರದಿ ಸಲ್ಲಿಸಿದೆ ಎಂದು ರಾಜ್ಯ ವಿಕೇಂದ್ರೀಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿಯ ಉಪಾಧ್ಯಕ್ಷ ಹಾಗೂ ಮಾಜಿ ಶಾಸಕ ಡಿ.ಆರ್.ಪಾಟೀಲ್ ತಿಳಿಸಿದ್ದಾರೆ.

ಕರ್ನಾಟಕ ಪಂಚಾಯತ್‌ರಾಜ್ ಪರಿಷತ್ ಭಾನುವಾರ ಗಾಂಧಿ ಭವನದಲ್ಲಿ ಆಯೋಜಿಸಿದ್ದ 16ನೇ ಹಣಕಾಸು ಆಯೋಗ ಮತ್ತು 5ನೇ ರಾಜ್ಯ ಹಣಕಾಸು ಆಯೋಗಗಳ ವರದಿಗಳ ಕುರಿತು ವಿಚಾರ ಸಂಕಿರಣದಲ್ಲಿ ಅವರುಜ ಮಾತನಾಡಿದರು. 14ನೇ ಹಣಕಾಸು ಆಯೋಗದ ಶಿಫಾರಸ್ಸಿನ ಅನ್ವಯ ಗ್ರಾಮ ಪಂಚಾಯತ್‌ಗಳು ಮುಂದಿನ ವರ್ಷದಿಂದ ಜನಸಂಖ್ಯೆಗೆ ಅನುಗುಣವಾಗಿ ವಾರ್ಷಿಕ 488 ರೂ. ತಲಾ ವರಮಾನ ಪಡೆಯಲಿವೆ. ಇದೇ ರೀತಿ ರಾಜ್ಯ ಹಣಕಾಸು ಆಯೋಗವು ಹೆಚ್ಚುವರಿ ಹಣಕಾಸು ನೆರವು ನೇರವಾಗಿ ಗ್ರಾಮ ಪಂಚಾಯತ್‌ಗೆ ಸಿಗುವಂತೆ ಶಿಫಾರಸ್ಸು ಮಾಡಬೇಕು ಎಂದು ಸಲಹೆ ನೀಡಿದರು.

ಮಾಜಿ ಮುಖ್ಯಮಂತ್ರಿ ವೀರಪ್ಪ ಮೊಯ್ಲಿ ಮಾತನಾಡಿ, ಗ್ರಾಮ ಸಭೆಗಳು ಪಂಚಾಯತ್ ವ್ಯವಸ್ಥೆಗೆ ಭದ್ರ ಅಡಿಪಾಯವಾಗಿವೆ ಎಂದರು.

ಪರರಿಗಾಗಿ ಬದುಕುವ ಬದುಕೇ ನಿಜವಾದ ಬದುಕು

ಮೇಘಾ ಪ್ರಮೋದ್

ಸೇವಾಗಾಥ
ಕಥೆ-5

ಹದಿನೇಳನೇ ವಯಸ್ಸು ಪ್ರಪಂಚವನ್ನು ತೋರೆಯುವ ವಯಸ್ಸೇನಲ್ಲ, ಆದರೆ ಹದಿನೇಳರ ಹರೆಯದಲ್ಲೇ, ಆ ಧೀರ ಬಾಲಕ ಯಮನಿಗೂ ಸವಾಲು ಹಾಕಿದ್ದ. 07-08-2005ರಂದು, ಮಾರುತಿನಗರದಿಂದ ಮನೋಜ್ ಚೌಹಾಣನ ಶವಯಾತ್ರೆ ಹೊರಟಾಗ ಇಂದೋರ್ ನಗರವೇ ಆ ಸ್ವಯಂಸೇವಕನಿಗಾಗಿ ಕಣ್ಣೀರು ಸುರಿಸಿತ್ತು. ಕೇವಲ ಬಿದಿರುಕೋಲು ಹಾಗೂ ತಗಡಿನ ಡಬ್ಬಗಳನ್ನು ಬಳಸಿ 18 ಕಂದಮ್ಮಗಳನ್ನು ಅಕ್ಷರಶಃ ಸಾವಿನ ದವಡೆಯಿಂದ ಮನೋಜ ಬಿಡಿಸಿಕೊಂಡು ಬಂದಿದ್ದ. ಈಗ, ಹಾಗೆ ಬದುಕುಳಿದಿದ್ದ ಪುಟ್ಟಮಕ್ಕಳ ಹೆತ್ತವರ ದುಃಖವೂ ಕಟ್ಟೆಯೊಡೆದಿತ್ತು. ಎರಡು ದಿನಗಳ ಕಾಲ ಮಾರುತಿನಗರದಲ್ಲಿ ಯಾರಿಗೂ ಊಟ ಸೇರಲಿಲ್ಲ.

ಬಣ್ಣಬಣ್ಣದ ಕನಸುಗಳಿಂದ ತನ್ನ ಸುಂದರ ಬದುಕನ್ನು ಸಿಂಗರಿಸಬೇಕಿದ್ದ ಹದಿಹರೆಯದ ಮನೋಜ, ಆ ಹದಿನೆಂಟು ಜೀವಗಳನ್ನು ಕಾಪಾಡಿ, ಯೌವನದ ಹೊಸ್ತಿಲಲ್ಲೇ ಚಿರನಿದ್ರೆಗೆ ಜಾರಿದ್ದ. ಗಣರಾಜ್ಯೋತ್ಸವ ಸಮಾರಂಭದಲ್ಲಿ ಮರಣೋತ್ತರ ಶೌರ್ಯಪ್ರಶಸ್ತಿ ಪಡೆದ ಮನೋಜನ ಬಲಿದಾನವು, ಇಂದಿನ ಯುವಕರಿಗೆ ದೇಶಕ್ಕಾಗಿ ಬದುಕುವ ಪ್ರೇರಣೆ ನೀಡುತ್ತಿದೆ.



21 ವರ್ಷಗಳ ಹಿಂದಿನ ಕಥೆಯಿದು. 01-08-2005ರಂದು ಇಂದೋರಿನಲ್ಲಿ ಧಾರಾಕಾರವಾಗಿ ಸುರಿದ ಮಳೆಯಿಂದಾಗಿ, ತಗ್ಗು ಪ್ರದೇಶಗಳಿಗೆ ಒಮ್ಮೆಲೇ ನೀರು ನುಗ್ಗಿತು. ಮಾರುತಿನಗರವು ಬಾಣಗಂಗಾ ಪ್ರದೇಶದ ಸಾವೇರ್ ರಸ್ತೆಬದಿಯ ತಗ್ಗು ಪ್ರದೇಶಗಳಲಲ್ಲಿರುವ ಒಂದು ಸೇವಾ ಬಸ್ತಿ. ಅಲ್ಲಿನ ಮನೆಗಳಿಗೆ ನೀರು ನುಗ್ಗಿದ ರಭಸಕ್ಕೆ ಕೊಚ್ಚಿ ಹೋಗುತ್ತಿದ್ದ ಹಾಸಿಗೆ, ಪಾತ್ರೆಪಗಡಗಳ ಕೈಬಿಟ್ಟ ಜನರು, ತಂತಮ್ಮ ಚಿಕ್ಕಮಕ್ಕಳನ್ನು ಉಳಿಸಿಕೊಳ್ಳಲು ಹೆಣಗತೊಡಗಿದರು. ಸರ್ಕಾರೀ ವ್ಯವಸ್ಥೆಗಳು ಸಹಾಯಕ್ಕೆ ಧಾವಿಸುವ ಮುನ್ನವೇ, ಅಲ್ಲಿನ ನಿತ್ಯಶಾಖೆಯ ಹೊಣೆ ಹೊತ್ತಿದ್ದ ಮನೋಜ ರಕ್ಷಣಾ ಕಾರ್ಯಕ್ಕೆ ಧುಮುಕಿದ್ದ. ಬಬನ್ ಪಾಂಡೆ, ಸುರೇಶ್ ಬಾಥಾ ಮುಂತಾದವರೂ ಮನೋಜನೊಂದಿಗೆ ಕೈಜೋಡಿಸಿದರು. ಒಂದಿಷ್ಟು ಖಾಲಿ ಟಿನ್ನುಗಳು, ಬಿದಿರಿನ ದಂಡಗಳು ಹಾಗೂ ಟ್ಯೂಬುಗಳನ್ನು ಸಂಗ್ರಹಿಸಿದ ಈ ಯುವಕರ ಟೋಳಿ ಸಂತ್ರಸ್ತರ ಜೀವವುಳಿಸುವ ಕೆಲಸದಲ್ಲಿ ಮುಳುಗಿತು.

ಇಂದೋರಿನ ಜನತೆಯ ಹೃದಯಸಿಂಹಾಸನದಲ್ಲಿ ಮನೋಜ

2007ರ ಗಣರಾಜ್ಯೋತ್ಸವದಂದು ಭಾರತೀಯ ಬಾಲಕಲ್ಯಾಣ ಪರಿಷತ್ತು ಮನೋಜ ಚೌಹಾಣನಿಗೆ ಅಪ್ರತಿಮ ಶೌರ್ಯಪ್ರಶಸ್ತಿ ನೀಡುವ ನಿರ್ಣಯ ಕೈಗೊಂಡಾಗ ಮನೋಜ ಕಾಲವಾಗಿ ಎರಡು ವರ್ಷಗಳೇ ಕಳೆದಿದ್ದವು. ಆ ಪ್ರಶಸ್ತಿಗಾಗಿ ರಾಷ್ಟ್ರಪತಿಗಳಿಗೆ ಅರ್ಜಿ ಸಲ್ಲಿಸಿದ್ದ ನಗರದ ಪ್ರಸಿದ್ಧ ಚಾರ್ಟರ್ಡ್ ಅಕೌಂಟೆಂಟ್ ರಾಧೇಶ್ಯಾಮ್ ಸೋಮಾನೀ ಮತ್ತು ಡಾ. ಶೈಲೇಂದ್ರ ಜೈನ್ಮನೋಜನ ಬಗ್ಗೆ "ಗಣರಾಜ್ಯೋತ್ಸವದಂದು ಮನೋಜ ಅಂಬಾರಿಯ ಮೇಲೆ ಕೂರದಿದ್ದರೂ, ಇಂದೋರಿನ ಜನತೆಯ ಹೃದಯಸಿಂಹಾಸನದಲ್ಲಿ ಶಾಶ್ವತವಾಗಿ ನೆಲೆಸಿದ್ದಾನೆ. ಎಂದು ಹೇಳುತ್ತ ಗದ್ಗದಿತರಾಗುತ್ತಾರೆ.

ಜಲಾವೃತಗೊಂಡ ಮನೆಗಳಿಂದ ಪುಟ್ಟ ಪುಟ್ಟ ಕಂದಮ್ಮಗಳನ್ನು ಹೊತ್ತುಕೊಂಡು ಸುರಕ್ಷಿತ ತಾಣಕ್ಕೆ ತಲುಪಿಸುತ್ತಿದ್ದ ಮನೋಜನ ಮನದಲ್ಲಿ ಆರ್ ಎಸ್ ಎಸ್ ನ ನಗರ ಸಂಪರ್ಕ ಪ್ರಮುಖರಾದ ಡಾ. ಆನಂದ್ ಪ್ರಕಾಶ್ ಮಿಶ್ರಾರ ಎಚ್ಚರಿಕೆ ಮಾರ್ದನಿಸುತ್ತಿತ್ತು. ಮನೋಜಾ, ನಿನ್ನ ಹೃದಯದ ಕವಾಟಗಳ ಪರಿಸ್ಥಿತಿ ಹದಗೆಟ್ಟಿದೆ, ನೀರಿಗಿಳಿಯಲೇಬೇಡ ಮತ್ತು ಸುಸ್ತಾಗುವಷ್ಟು ಶ್ರಮ ಪಡಬೇಡ. ಹೃದಯದ ಮೇಲೆ ಒತ್ತಡ ಬಿದ್ದರೆ, ಪ್ರಾಣಕ್ಕೇ ಎರವಾಗಬಹುದು, ಮಗೂ ಎಂದಿದ್ದರು. ಪದೇ ಪದೇ ನೆನಪಾಗುತ್ತಿದ್ದ ಈ ಮಾತುಗಳನ್ನು ಮರೆಯಲೋ ಎಂಬಂತೆ, ಮನೋಜ ತಾನು ನಿತ್ಯಶಾಖೆಯಲ್ಲಿ ಹೇಳುತ್ತಿದ್ದ ಸೇವಾ ಹೈ ಯಜ್ಞ ಕುಂಡ್ ಸಮಿಧಾ ಸಮ್ ಹಮ್ ಜಲೇಎಂಬ ಹಾಡನ್ನೇ ಜೋರಾಗಿಹಾಡುತ್ತಲೇಇದ್ದ.

ಹೀಗೆ, ಸಂತ್ರಸ್ತ ಕುಟುಂಬಗಳ ರಕ್ಷಣಾಕಾರ್ಯದಲ್ಲಿ, ಮುಂಜಾವಿನ 4 ಗಂಟೆಯಿಂದ ಮಧ್ಯರಾತ್ರಿ 12ರವರೆಗೆ ಅವಿಶ್ರಾಂತವಾಗಿ ಮನೋಜ ದುಡಿದಿದ್ದ. ಆ ಭಯಂಕರ ಮೃತ್ಯುಕೂಪದಿಂದ ಎಲ್ಲರನ್ನೂ ಪಾರು ಮಾಡುವ ಹೊತ್ತಿಗೆ ಈ ರಾಷ್ಟ್ರಭಕ್ತ ನವತರುಣನ ಶ್ವಾಸಕೋಶಗಳಲ್ಲಿ ನೀರು ತುಂಬಲಾರಂಭಿಸಿತ್ತು. ಅದನ್ನೂ ನಿರ್ಲಕ್ಷಿಸುತ್ತ, ಸಂತ್ರಸ್ತರಿಗಾಗಿ ಅಗತ್ಯ ವಸ್ತುಗಳ ಪಟ್ಟಿ ಮಾಡಿದ ಮನೋಜ, ಅವುಗಳ ವಿಲೇವಾರಿ ಮಾಡುತ್ತ ಮರುದಿನವಿಡೀ ಓಡಾಡಿದ.

ಕೇಶವ ನಗರದ ಅಂದಿನ ನಗರ ಕಾರ್ಯವಾಹರಾದ ಅನೀಲ್ ಪಂಚವಾಲ ಜೀ ಹೇಳುವಂತೆ– ಆ ವಿಪರೀತ ದಣಿವನ್ನು ಮನೋಜನ ಶರೀರ ತಾಳದಾಯಿತು. ಆಸ್ಪತ್ರೆಗೇ ದಾಖಲಿಸಬೇಕಾಯಿತು. ಎರಡು ದಿನಗಳ ಕಾಲ ಚಿಕಿತ್ಸೆ ನೀಡಿದರೂ ಫಲಕಾರಿಯಾಗಲಿಲ್ಲ. ನ್ಯುಮೋನಿಯಾ ಉಲ್ಬಣಿಸಿ ಮನೋಜ ಕೊನೆಯುಸಿರೆಳೆದ.ಎಂದು.

ದಿವ್ಯಾಂಗರಾಗಿದ್ದ ತಂದೆ ಉಮ್ರಾವ್ ಸಿಂಗ್ ಚೌಹಾಣ್, ಮಾನಸಿಕ ದೌರ್ಬಲ್ಯದಿಂದ ಬಳಲುತ್ತಿದ್ದ ಸೋದರ ಸೋನು ಮತ್ತು ಬಿಕ್ಕಳಿಸಿ ಅಳುತ್ತಿದ್ದ ತಾಯಿಯನ್ನು ಮನೋಜ ಬಿಟ್ಟಗಲಿದಾಗ ಇಡೀ ಮಾರುತಿನಗರಕ್ಕೆ ಎರಡು ದಿನ ಸೂತಕ ಆವರಿಸಿತ್ತು.

ಆ ಹುಡುಗ ಆಪದ್ಬಾಂಧವನಂತೆ ಬಂದು, ತನ್ನ ಪ್ರಾಣ ಪಣಕ್ಕಿಟ್ಟು, 7 ವರ್ಷದ ನನ್ನ ಮೊಮ್ಮಗನನ್ನು ನೀರಿನ ಸುಳಿಯಿಂದ ಬಿಡಿಸಿ ತಂದ ಎನ್ನುತ್ತ ಕಣ್ಣೀರಾಗುತ್ತಾರೆ ಮಾರುತಿನಗರದ ನಿವಾಸಿ ಲಕ್ಷ್ಮೀದೇವಿ. ಅಂತ್ಯಕಾಲದಲ್ಲಿಯೂ ಸಂತ್ರಸ್ತರ ಹೆಸರು ಮತ್ತು ಅವರ ಅಗತ್ಯ ವಸ್ತುಗಳ ಪಟ್ಟಿ ಮನೋಜನ ಕಿಸೆಯಲ್ಲಿ ದೊರಕಿತ್ತು.

ಸಂಪಾದಕೀಯ

ಸಂಕಷ್ಟದ ಕಾಲದಲ್ಲಿ ಸಂಯಮವೇ ದೇಶಸೇವೆ

ಜಾಗತಿಕ ಯುದ್ಧ ಪರಿಸ್ಥಿತಿಯಿಂದ ಉಂಟಾಗಿರುವ ಆರ್ಥಿಕ ಅಸ್ಥಿರತೆ ವಿಶ್ವದ ಅನೇಕ ರಾಷ್ಟ್ರಗಳಂತೆ ಭಾರತಕ್ಕೂ ಸವಾಲಾಗಿ ಪರಿಣಮಿಸಿದೆ. ಇಂಧನ, ರಸಗೊಬ್ಬರ ಮತ್ತು ಅವಶ್ಯಕ ವಸ್ತುಗಳ ಬೆಲೆ ಏರಿಕೆಯಿಂದ ಸಾಮಾನ್ಯ ಜನರ ಬದುಕಿನ ಮೇಲೂ ಒತ್ತಡ ಹೆಚ್ಚುತ್ತಿದೆ. ಇಂತಹ ಸಂದರ್ಭದಲ್ಲಿ ಪ್ರಧಾನಿ ಮೋದಿ ನೀಡಿರುವ 'ಪೆಟ್ರೋಲ್- ಡೀಸೆಲ್ ಮಿತ ಬಳಕೆ' ಕರೆ ಕೇವಲ ರಾಜಕೀಯ ಘೋಷಣೆಯಲ್ಲ, ಅದು ಕಾಲದ ಅಗತ್ಯವೂ ಹೌದು.

ಭಾರತದ ಇಂಧನ ಅವಲಂಬನೆ ಬಹುಪಾಲು ಆಮದುಮೇಲೆ ನಿಂತಿದೆ. ಹೀಗಾಗಿ ಜಾಗತಿಕ ಯುದ್ಧ ಅಥವಾ ಪೂರೈಕೆ ಸರಪಳಿ ವ್ಯತ್ಯಯ ಉಂಟಾದಾಗ ಅದರ ನೇರ ಪರಿಣಾಮ ದೇಶದ ಆರ್ಥಿಕತೆಯ



ಮೇಲೆ ಬೀಳುವುದು ಸಹಜ. ಈ ಹಿನ್ನೆಲೆಯಲ್ಲಿ ಮೆಟ್ರೋ, ಕಾರ್ ಪೂಲಿಂಗ್, ವಿದ್ಯುತ್ ವಾಹನಗಳು ಹಾಗೂ ವರ್ಕ್ ಫ್ರಮ್ ಹೋಮ್ ಪದ್ಧತಿಗೆ ಉತ್ತೇಜನ ನೀಡುವ ಮಾತು ಪ್ರಸ್ತುತ ಸಂದರ್ಭದಲ್ಲಿ ಸೂಕ್ತವಾಗಿದೆ.

ಇದರ ಜೊತೆಗೆ, ಸರ್ಕಾರವೂ ಪರ್ಯಾಯ ಇಂಧನ ಮೂಲಗಳ ಅಭಿವೃದ್ಧಿಗೆ ಇನ್ನಷ್ಟು ಒತ್ತು ನೀಡಬೇಕಾಗಿದೆ. ಸೌರಶಕ್ತಿ, ಜೈವಿಕ ಇಂಧನ ಮತ್ತು ವಿದ್ಯುತ್ ವಾಹನಗಳ ಮೂಲಸೌಕರ್ಯ ವಿಸ್ತರಣೆ ವೇಗಗೊಳ್ಳಬೇಕು. ದೀರ್ಘಾವಧಿಯಲ್ಲಿ ಇಂತಹ ಕ್ರಮಗಳೇ ದೇಶದ ಇಂಧನ ಸ್ವಾವಲಂಬನೆಯನ್ನು ಬಲಪಡಿಸಬಲ್ಲವು. ಕೇವಲ ಸಂಕಷ್ಟದ ಸಮಯದಲ್ಲಿ ಮಾತ್ರವಲ್ಲ, ಶಾಶ್ವತ ಜೀವನಶೈಲಿಯ ಭಾಗವಾಗಿಯೂ ಇಂಧನ ಸಂರಕ್ಷಣೆ ರೂಪುಗೊಳ್ಳಬೇಕಿದೆ.

ಇಂದಿನ ಯುವಜನತೆ ಹಾಗೂ ನಗರ ಮಧ್ಯಮವರ್ಗದಲ್ಲಿ ಅನಗತ್ಯ ಬಳಕೆ ಮತ್ತು ಪ್ರದರ್ಶನದ ಜೀವನಶೈಲಿ ಹೆಚ್ಚುತ್ತಿರುವುದು ವಾಸ್ತವ. ದೇಶ ಸಂಕಷ್ಟ ಎದುರಿಸುತ್ತಿರುವ ಸಂದರ್ಭದಲ್ಲಿಯೂ ಮಿತವ್ಯಯದ ಮನೋಭಾವ ಬೆಳೆಯುವುದು ಅಗತ್ಯವಾಗಿದೆ. ವೈಯಕ್ತಿಕ ಸೌಕರ್ಯಕ್ಕಿಂತ ರಾಷ್ಟ್ರದ ಹಿತ ದೊಡ್ಡದು ಎಂಬ ಅರಿವು ಸಮಾಜದಲ್ಲಿ ಬಲಪಡಬೇಕಿದೆ.

ವಿದೇಶಿ ವಿನಿಮಯ ಉಳಿಸುವ ನಿಟ್ಟಿನಲ್ಲಿ ಅನಗತ್ಯ ಚಿನ್ನ ಖರೀದಿ ಮತ್ತು ವಿದೇಶ ಪ್ರವಾಸವನ್ನು ನಿಯಂತ್ರಿಸುವ ಸಲಹೆಯೂ ಗಮನಾರ್ಹ. ಸ್ವದೇಶಿ ಉತ್ಪನ್ನಗಳ ಬಳಕೆ, ನೈಸರ್ಗಿಕ ಕೃಷಿಗೆ ಉತ್ತೇಜನ ಮತ್ತು ಖಾದ್ಯ ಎಣ್ಣೆ ಬಳಕೆ ಕಡಿಮೆ ಮಾಡುವ ಸಲಹೆಗಳು ಆತ್ಮನಿರ್ಭರ ಭಾರತದ ಪರಿಕಲ್ಪನೆಗೆ ಪೂರಕವಾಗಿವೆ.

ಸಂಕಷ್ಟದ ಸಂದರ್ಭಗಳಲ್ಲಿ ಸರ್ಕಾರದ ಕ್ರಮಗಳಷ್ಟೇ ಸಾಕಾಗುವುದಿಲ್ಲ, ಜನರ ಸಹಭಾಗಿತ್ವವೂ ಅಗತ್ಯ. ದೇಶದ ಆರ್ಥಿಕ ಶಕ್ತಿಯನ್ನು ಕಾಪಾಡಲು ಪ್ರತಿಯೊಬ್ಬ ನಾಗರಿಕನೂ ಜವಾಬ್ದಾರಿಯುತ ಜೀವನಶೈಲಿಯನ್ನು ಅಳವಡಿಸಿಕೊಳ್ಳುವ ಸಮಯ ಇದು. ಸಂಯಮ ಮತ್ತು ಸ್ವಾವಲಂಬನೆಯ ಮನೋಭಾವವೇ ಇಂತಹ ಕಾಲಘಟ್ಟದಲ್ಲಿ ನಿಜವಾದ ದೇಶಸೇವೆ.

ಕಾಳಿ ಮಾತೆ ಕೊನೆಗೂ ಕಣ್ಣು ತೆರೆದಳು

ಪಶ್ಚಿಮ ಬಂಗಾಳದಲ್ಲಿ ಇದುವರೆಗೂ ಮರೀಚಿಕೆಯಾಗಿದ್ದ ಜನರ ನೆಮ್ಮದಿ, ಕಾನೂನು ಮತ್ತು ಸುವ್ಯವಸ್ಥೆ, ಅಭಿವೃದ್ಧಿಗಳಿಗೆ ಚಾಲನೆ ದೊರೆಯಬೇಕು.

ನೇರ ನೋಟ
ದು.ಗು. ಲಕ್ಷ್ಮಣ
dugulakshman@yahoo.com



ಪರಿವರ್ತನೆ ಅನ್ನುವುದು ಯುಗಕ್ಕೊಮ್ಮೆ ಆಗುತ್ತದೆ ಎಂದು ಹೇಳುವುದುಂಟು. ಯಾವುದೇ ಪರಿವರ್ತನೆ ಅಷ್ಟು ಸುಲಭವಾಗಿ ಪ್ರಾಪ್ತವಾಗದು ಎಂಬುದು ಈ ಮಾತಿನ ಒಳಾರ್ಥ. ಭಾರತದಂತ ಬೃಹತ್ ಸಂಕೀರ್ಣ ದೇಶದಲ್ಲಿ ಪರಿವರ್ತನೆ ತರುವುದು ಸುಲಭ ಸಾಧ್ಯವೇನೂ ಅಲ್ಲ. ಬಾಬರ್ ಎಂಬ ಆಕ್ರಮಣಕೋರ ಹಾಳುಗೆಡವಿದ ಅಯೋಧ್ಯೆ ಶ್ರೀರಾಮ ಮಂದಿರವನ್ನು ಮರು ಸ್ಥಾಪಿಸುವುದಕ್ಕೆ 500 ವರ್ಷಗಳೇ ಬೇಕಾಯಿತು. ಭ್ರಷ್ಟಾಚಾರ, ದುರಾಡಳಿತದಿಂದ ಜಡ್ಡುಗಟ್ಟಿದ್ದ ಕೇಂದ್ರದ ಕಾಂಗ್ರೆಸ್ ಸರ್ಕಾರಕ್ಕೆ ಅಂತ್ಯ ಹಾಡಿ, ಪರಿವರ್ತನೆ ತರಲು 50ಕ್ಕಿಂತ ಹೆಚ್ಚು ವರ್ಷ ಕಾಯಬೇಕಾಯಿತು. ಭ್ರಷ್ಟಾಚಾರ, ದುರಾಡಳಿತ, ಮಹಿಳೆಯರ ಮೇಲೆ ಅವ್ಯಾಹತ ಅತ್ಯಾಚಾರ, ಭಯಗ್ರಸ್ತ ಬಂಗಾಳದಲ್ಲಿ ಪರಿವರ್ತನೆ ತರುವುದಕ್ಕೂ ಬರೋಬ್ಬರಿ 79 ವರ್ಷವೇ ಬೇಕಾಯಿತು. ಸ್ವಾತಂತ್ರ್ಯ ಬಂದ ಆರಂಭದಲ್ಲಿದ್ದ ಕಾಂಗ್ರೆಸ್ ಸರ್ಕಾರದ ದುರಾಡಳಿತಕ್ಕೆ 1977ರಲ್ಲಿ ಸಿಪಿಎಂ ಅಂತ್ಯ ಹಾಡಿ 34 ವರ್ಷ ಆಡಳಿತ ನಡೆಸಿದರೂ ಬಂಗಾಳ ಬದಲಾಗಲಿಲ್ಲ. ಇನ್ನಷ್ಟು ಅಧಃಪತನ ಕಂಡಿತು. ಅಲ್ಲೊಂದು 'ಪರಿಬೊರ್ತನ್' ತರಲು ಹೊರಟ ಮಮತಾ ದೀದಿ ನೇತೃತ್ವದ ತೃಣಮೂಲ ಕಾಂಗ್ರೆಸ್ (ಟಿಎಂಸಿ) ಸತತ 15 ವರ್ಷ ಅಧಿಕಾರದಲ್ಲಿದ್ದರೂ ಆ ರಾಜ್ಯವನ್ನು 'ಬೀಮಾರು' ರಾಜ್ಯವಾಗಿ ಪ್ರಪಾತಕ್ಕೆ ದೂಡಿದ ಕೀರ್ತಿ ಆಕೆಗೇ ಸಲ್ಲಬೇಕು. ಈಗ ಆಕೆಯ ದುರಾಡಳಿತ ಕೊನೆಗೊಂಡು ಕಮಲ ಪಡೆಯ ಆಡಳಿತ ಆರಂಭವಾಗಿದೆ. ಬಿಜೆಪಿಯ ಸುವೇಂದು (ಶುಭೇಂದು) ಅಧಿಕಾರಿ ಪ. ಬಂಗಾಳದ ಮುಖ್ಯಮಂತ್ರಿಯಾಗಿ ಶನಿವಾರ (ಮೇ 9) ಅಧಿಕಾರ ವಹಿಸಿಕೊಂಡು ಇನ್ನೊಂದು 'ಪರಿಬೊರ್ತನ್'ಗೆ ಸಜ್ಜಾಗಿದ್ದಾರೆ. ಸುವೇಂದು ಹೆಸರಿಗೆ ತಕ್ಕಂತೆ ಬಂಗಾಳಕ್ಕೆ ಶುಭ ತರಲಿದ್ದಾರೆಯೇ? ಎಂಬುದು ಪ್ರಾಜ್ಞರ ಸದ್ಯದ ಕುತೂಹಲ.

ಬಂಗಾಳದಲ್ಲಿ ಚುನಾವಣಾ ಕಾಲದಿಂದಲೇ ಸದ್ದಿಲ್ಲದ ಪರಿವರ್ತನೆಯೊಂದು ಕಂಡು ಬರುತ್ತಿದೆ. 2021ರ ವಿಧಾನಸಭಾ ಚುನಾವಣೆಯ ಸಂದರ್ಭದಲ್ಲಿ ಸುಮಾರು 300 ಕಡೆ ಹಿಂಸಾಚಾರ, 58 ಸಾವುಗಳು ವರದಿಯಾಗಿದ್ದವು. ಆದರೆ ವರದಿಯಾಗದ ಚುನಾವಣೋತ್ತರ ಹಿಂಸಾಚಾರವನ್ನೂ ಪರಿಗಣಿಸಿದರೆ 321 ಮಂದಿ ಬಿಜೆಪಿ ಕಾರ್ಯಕರ್ತರೇ ಟಿಎಂಸಿ ಗೂಂಡಾಗಳಿಂದ ಹತ್ಯೆಗೀಡಾಗಿದ್ದರು. ಆ ಚುನಾವಣೆಯಲ್ಲಿ ಮತದಾರರೇ ಓಟು ಹಾಕುವಂತಿರಲಿಲ್ಲ. ಅವರ ಪರವಾಗಿ ವೋಟ್ ಹಾಕಿದವರು ಟಿಎಂಸಿ ಗೂಂಡಾ ಕಾರ್ಯಕರ್ತರು. ಕಮ್ಯುನಿಸ್ಟ್ ಆಡಳಿತವಿದ್ದ ಕಾಲದಿಂದ ಬಂಗಾಳದಲ್ಲೊಂದು ಕ್ರೂರ ನಿಯಮವಿತ್ತು. 'ಮತ ಚಲಾಯಿಸಿ. ಆದರೆ ಅವು ನಮಗೇ ಬೀಳಬೇಕು. ಒಂದು ವೇಳೆ ಬೇರೆಯವರಿಗೆ ಹಾಕಿದರೆ ನೀವು ಯಾರಿಗೆ ವೋಟ್ ಹಾಕಿದಿರಿ ಎಂಬುದು ನಮಗೆ ತಿಳಿಯುತ್ತದೆ. ನಮಗೆ ಮತ ಬೀಳದಿದ್ದರೆ ನಿಮ್ಮ ಗ್ರಹಚಾರ ನೆಟ್ಟಗಿರು ವುದಿಲ್ಲ'- ಇದು ಕಮ್ಯುನಿಸ್ಟ್ ಮತ್ತು ಟಿಎಂಸಿ ಆಡಳಿತ ಕಾಲದ ಅಲಿಖಿತ ಕ್ರೂರ ನಿಯಮ. ಹೀಗಿರುವಾಗ ಮತದಾರರು ಮತಗಟ್ಟೆಗೆ ಧೈರ್ಯವಾಗಿ ಹೇಗೆ ಹೋಗಲು ಸಾಧ್ಯ? ಒಂದು ವೇಳೆ ಹೋದರೂ ತನಗಿಷ್ಟವಾದವರಿಗೆ ನಿರ್ಭಯವಾಗಿ ಮತ ಚಲಾಯಿಸುವುದಾದರೂ ಹೇಗೆ? ಪ್ರಜಾಪ್ರಭುತ್ವ ನಾಶವಾಗುವುದು ಕಾನೂನು ಬದಲಾವಣೆಯಿಂದ ಅಲ್ಲ. ಬದಲಿಗೆ ಹೀಗೆ ಜನರ ವರ್ತನೆಯಲ್ಲಿ ಬದಲಾವಣೆ ತರುವ ಮೂಲಕ. ಸಿಪಿಎಂ, ಟಿಎಂಸಿ 49 ವರ್ಷ ಅವ್ಯಾಹತವಾಗಿ ನಡೆಸಿದ್ದು ಇದನ್ನೇ. ಹಾಗಾಗಿಯೇ ಅಷ್ಟೊಂದು ದೀರ್ಘಕಾಲ ಅಧಿಕಾರದಲ್ಲಿ ಮುಂದುವರೆಯಲು ಆ ಎರಡು ಪಕ್ಷಗಳಿಗೂ ಸಾಧ್ಯವಾಗಿದ್ದು.

ಜೊತೆಗೆ ವ್ಯವಸ್ಥೆಯಂತೂ ಹಳ್ಳ ಹಿಡಿದು ಹೋಗಿತ್ತು. ರಾಜ್ಯದಲ್ಲಿ ಶೇ. 70ರಷ್ಟು ದೂರುಗಳು ದಾಖಲಾಗುತ್ತಲೇ ಇರಲಿಲ್ಲ. ಪೊಲೀಸರು, ಸರ್ಕಾರಿ ಅಧಿಕಾರಿಗಳು, ನೌಕರರು ಒಂದು ರೀತಿಯಲ್ಲಿ ಟಿಎಂಸಿ ಏಜೆಂಟರಂತೆ ಕಾರ್ಯನಿರ್ವಹಿಸುತ್ತಿದ್ದರು. ಕಳೆದ ವಾರ ಸರ್ಕಾರ ಬದಲಾಗುತ್ತಲೇ ಅವರೆಲ್ಲರೂ ಕೇಸರಿ, ಬಿಜೆಪಿ ಬಾವುಟ ಹಿಡಿದು 'ಜೋಯ್ ಶ್ರೀರಾಂ' 'ಜೋಯ್ ಮೋದಿ' ಎಂದು ಇದ್ದಕ್ಕಿದ್ದಂತೆ ಅದುವರೆಗಿನ ಪ್ಲೇಟ್ ಬದಲಾಯಿಸಿ ಜಯಘೋಷ ಮಾಡಿದರು. ಅದು ನಿಜವಾದ ಪರಿವರ್ತನೆ ಯಂತೂ ಆಗಿರಲಿಲ್ಲ. ಹೀಗೇ ಇದ್ದರೆ ಇನ್ನು ಉಳಿಗಾಲವಿಲ್ಲ ಎಂಬ ಭಯದಿಂದ ನಿಷ್ಠೆ ಬದಲಾಯಿಸಿದ ಸಂಕೇತ ಅದಾಗಿತ್ತೆಂಬುದು ಗುಟ್ಟಲ್ಲ.

2021ರಲ್ಲಿ ಶೇ. 85.2ರಷ್ಟಿದ್ದ ಮತದಾನ ಪ್ರಮಾಣ ಈ ಬಾರಿ ಶೇ.92ಕ್ಕಿಂತಲೂ ಹೆಚ್ಚು ಆಗುವುದಕ್ಕೆ ಎಸ್ಆರ್ಐ ಒಂದೇ ಕಾರಣವಲ್ಲ. ಟಿಎಂಸಿಯ ದುರಾಡಳಿತ , ಹದಗೆಟ್ಟ ವ್ಯವಸ್ಥೆ, ಅವ್ಯಾಹತ ಅತ್ಯಾಚಾರದಿಂದ ಮುಕ್ತಿ ಪಡೆಯಬೇಕಾದರೆ ನೀವು ನಿರ್ಭಯದಿಂದ ಮತಗಟ್ಟೆಗೆ ಬಂದು ಮತ ಚಲಾಯಿಸಿ. ನಿಮ್ಮ ಜೊತೆ ನಾವಿದ್ದೇವೆಂಬ ಬಿಜೆಪಿ ವರಿಷ್ಠರ ಬಹಿರಂಗ ಕರೆ, ಹಳ್ಳಿಹಳ್ಳಿಗಳಲ್ಲಿ 2 ಲಕ್ಷಕ್ಕೂ ಹೆಚ್ಚು ಪುಟ್ಟ ಪುಟ್ಟ ಸಭೆ, ಬೈಠಕ್‌ಗಳನ್ನು ನಡೆಸಿ ಮತದಾರರಲ್ಲಿ ಧೈರ್ಯ ತುಂಬಿದ ಸಂಘ ಪರಿವಾರದ ಪ್ರಚಾರ ಬಯಸದ ಸಾವಿರಾರು ಕಾರ್ಯಕರ್ತರ ಅಭಯ, ಜತೆಗೆ ಈ ಬಾರಿ ಏನೇ ಆದರೂ ಪರಿವರ್ತನೆ ತರಲೇಬೇಕೆಂಬ ಜನಮನದ ತೀವ್ರ ತುಡಿತಗಳ ಪರಿಣಾಮವಾಗಿ ಬಂಗಾಳದಲ್ಲಿ ಭಯಮುಕ್ತ ಸ್ವಾತಂತ್ರ್ಯದ ಕುಳಿರ್ಗಾಳಿ ಬೀಸುವಂತಾಯಿತು.ಆರ್‌ಜಿಕರ್ ಮೆಡಿಕಲ್ ಕಾಲೇಜಿನ ಅತ್ಯಾಚಾರ ಸಂತ್ರಸ್ತೆಯ ತಾಯಿ ರತ್ನಾ ದೇವನಾಥ್, 4 ಮನೆಗಳಲ್ಲಿ ಮುಸುರೆ ತಿಕ್ಕುತ್ತಿದ್ದ ಕಲಿತಾ ಮಾಝಿ, ಸಂದೇಶ ಖಾಲಿಯ ಅತ್ಯಾಚಾರ ಸಂತ್ರಸ್ತೆ ರೇಖಾ ಪಾತ್ರರಂತಹ ಸಾಮಾನ್ಯರಲ್ಲಿ ಸಾಮಾನ್ಯರು ಚುನಾವಣೆಗೆ ಸ್ಪರ್ಧಿಸಿ ಬಿಜೆಪಿ ಶಾಸಕಿಯರಾಗಿರುವುದಕ್ಕೆ ಇದೇ ಹಿನ್ನೆಲೆ.



ಪಶ್ಚಿಮ ಬಂಗಾಳದ ಬಿಜೆಪಿ ಗೆಲುವು ನೆರೆಯ ಬಾಂಗ್ಲಾದೇಶದ ಗದ್ದುಗೆ ಹಿಡಿದವರಿಗೆ ಆತಂಕ, ಭಯ ಹುಟ್ಟಿಸಿರುವುದಂತೂ ನಿಜ. ಅಲ್ಲಿನ ಆಡಳಿತಾರೂಢ ಬಿಎನ್‌ಪಿ ಪಕ್ಷದ ಸಂಸದ ಮೊಹಮ್ಮದ್ ನೂರುಲ್ ಹುಡಾ ಹೇಳಿಕೆಯನ್ನು ನೀವು ಈಗಾಗಲೇ ಕೇಳಿಯೇ ಇರುತ್ತೀರಿ. ಚುನಾವಣೆಯಲ್ಲಿ ಸೋತು ಸುಣ್ಣವಾದ ಮಮತಾ ಬ್ಯಾನರ್ಜಿಗೆ "ನೀವು ರಾಜೀನಾಮೆ ಕೊಡಬೇಡಿ. ಪ. ಬಂಗಾಳವನ್ನು ಭಾರತದಿಂದ ಪ್ರತ್ಯೇಕಿಸಲು ದಿಲ್ಲಿ ದೊರೆಗಳೊಂದಿಗೆ ಹೋರಾಡಿ. ಅದನ್ನು ಸ್ವತಂತ್ರ ದೇಶವನ್ನಾಗಿಸಲು ಬಾಂಗ್ಲಾದ 17 ಕೋಟಿ ಮುಸ್ಲಿಮರು ನಿಮ್ಮ ಜೊತೆಗೆ ಸಾಥ್ ನೀಡುತ್ತೇವೆ" ಎಂದು ಆತ ಬಹಿರಂಗ ಕರೆ ಕೊಡುತ್ತಾನೆಂದರೆ ಆತಂಕ ಪಡಬೇಕಾಗಿರುವುದು ಪ.ಬಂಗಾಳದ ಬಿಜೆಪಿ ಸರ್ಕಾರ ಹಾಗೂ ಕೇಂದ್ರದ ಮೋದಿ ಸರ್ಕಾರವೇ ಹೊರತು ಬಾಂಗ್ಲಾದೇಶದ ಸರ್ಕಾರವಲ್ಲ.

ಮಮತಾ ಬ್ಯಾನರ್ಜಿ ಸರ್ಕಾರದ ಅವಧಿಯಲ್ಲಿ ದುರ್ಗಾಷ್ಟಮಿಯಂದು ದುರ್ಗಾ ಪೂಜೆ ಮಾಡುವಂತಿರಲಿಲ್ಲ. ಮಾ (ತಾಯಿ ಕಾಳಿ /ದುರ್ಗೆ), ಮಾಟಿ (ತಾಯಿನಾಡು) ಮತ್ತು ಮಾನುಷ್ (ಬಂಗಾಲಿಗಳು)- ಇವು ಬೆಂಗಾಲಿ ಹಿಂದುಗಳ ಮೂರು ಅಸ್ಮಿತೆಗಳು. ಅದಕ್ಕೆ ಧಕ್ಕೆ ಬಂದಾಗ ಮಾತ್ರ ಅವರು ಸುಮ್ಮನಿರುವುದಿಲ್ಲ. ಇಡೀ ದೇಶಕ್ಕೆ ದೇಶವೇ ರಾಮಮಂದಿರಕ್ಕೆ ಹೋರಾಡುತ್ತಿದ್ದ ವೇಳೆಯಲ್ಲಿ ತಲೆ ಕೆಡಿಸಿಕೊಳ್ಳದೆ ತಟಸ್ಥವಾಗಿದ್ದ ಏಕೈಕ ರಾಜ್ಯವೆಂದರೆ ಬಂಗಾಳವಾಗಿತ್ತು. ಆದರೆ ಮಮತಾ ಆಡಳಿತ ಕಾಲದಲ್ಲಿ ಟಿಎಂಸಿ ಗೂಂಡಾಗಳು ಬಂಗಾಳದ ಅಸ್ಮಿತೆಯದ ಪವಿತ್ರ ಕಾಳಿ ಮಂದಿರಗಳ ಬಾಗಿಲು ಮುಚ್ಚಿಸಿ, ಮೂರ್ತಿಯನ್ನು ಭಗ್ನಗೊಳಿಸಿ ಹಿಂಸಾಚಾರ ನಡೆಸಿದಾಗ ಬಂಗಾಲಿಗಳಿಗೆ ತಡೆದುಕೊಳ್ಳಲಾಗಲಿಲ್ಲ. ಸೇಡಿಗಾಗಿ ಕೊತ ಕೊತ ಕುದಿಯುತ್ತಿದ್ದರು. ಈ ಬಾರಿ ಮೋದಿ, ಶಾ, ನಾವಿದ್ದೇವೆ ಎಂದು ಅಭಯ ನೀಡಿದ್ದೇ ತಡ ಬಂಗಾಲಿಗಳ ಮೈ ಮೇಲೆ ಕಾಳಿಮಾತೆಯ ಆವಾಹನೆ ಆಗಿ ಬಿಟ್ಟಿತು. ಚುನಾವಣೆ ಫಲಿತಾಂಶ ಪ್ರಕಟವಾದ ದಿನದಂದೇ ಮುಚ್ಚಿಸಲಾಗಿದ್ದ ನೂರಾರು ಕಾಳಿ ಮಾತೆಯ ಗುಡಿಗಳ ಬಾಗಿಲಿನ ಚಿಲಕ ಕಿತ್ತು, ಗುಡಿಯನ್ನು ಸ್ವಚ್ಛಗೊಳಿಸಿ, ಸ್ವಚ್ಛಗೊಳಿಸಿದ ನೀರನ್ನು ಹಣೆ, ತಲೆಗೆ ಚಿಮುಕಿಸಿಕೊಂಡು ಸಂಭ್ರಮಿಸಿದರು. ಗೆದ್ದ ಹಲವು ಬಿಜೆಪಿ ಅಭ್ಯರ್ಥಿಗಳು ಕಾಳಿ ವಿಗ್ರಹದ ಪಾದದಲ್ಲಿ ಗೆಲುವಿನ ಪ್ರಮಾಣ ಪತ್ರ ಇಟ್ಟು ಆಶೀರ್ವಾದ ಬೇಡಿದರು. ಪಶ್ಚಿಮ ಬರ್ದಮಾನ್ ಜಿಲ್ಲೆಯ ಅಸನ್ಸೋಲ್ ಉತ್ತರ ಕ್ಷೇತ್ರದ ಕಾಳಿ ಮಾತೆಯ ಮಂದಿರಕ್ಕೆ ಟಿಎಂಸಿ ಗೂಂಡಾಗಳು ಬೀಗ ಜಡಿದಿದ್ದರು. ಈಗದು ಮುಕ್ತಗೊಂಡಿದೆ. ಅಲ್ಲಿ ಒಟ್ಟು ಒಂಬತ್ತು ಸೀಟುಗಳಿವೆ. 9ಕ್ಕೆ 9ರಲ್ಲೂ ಈ ಬಾರಿ ಬಿಜೆಪಿಯ ದಿಗ್ವಿಜಯ. ಈ ಜಿಲ್ಲೆಗೆ ತಾಗಿಕೊಂಡಿರುವ ಬಂಕುರಾದಲ್ಲಿ 12ಕ್ಕೆ 12, ಪುರುಲಿಯಾದಲ್ಲಿ 9ಕ್ಕೆ 9, ಝಾರ್ ಗ್ರಾಮ್‌ದಲ್ಲಿ 4ಕ್ಕೆ 4, ಪೂರ್ವ ಬರ್ಧಮಾನ್ ಜಿಲ್ಲೆಯಲ್ಲಿ 15ಕ್ಕೆ 13... ಹೀಗೆ ಕಾಳಿಮಾತೆ ಮಂದಿರಕ್ಕೆ ಟಿಎಂಸಿ ಬೀಗ ಜಡಿದ ಫಲವಾಗಿ ಬಿಜೆಪಿಗೆ ಮತದಾರರ ಭರ್ಜರಿ ಬೆಂಬಲ. ಮತದಾರರ ಆಕ್ರೋಶ ಅಂತಹುದಾಗಿತ್ತು.

ಕಾಳಿ ಮಾತೆ (ದುರ್ಗೆ) ಬಂಗಾಲಿಗಳ ಅಸ್ಮಿತೆ. ಶನಿವಾರ ನಡೆದ ಪ್ರಮಾಣವಚನ ಸಮಾರಂಭದ ವೇದಿಕೆಯ ಹಿಂಬದಿ ಕೂಡ ಕಾಳಿಮಾತೆಯ ಭವ್ಯ ಚಿತ್ರ ರಾರಾಜಿಸುತ್ತಿತ್ತು.

ಸುವೇಂದು ಅಧಿಕಾರಿ ಐವರು ಕ್ಯಾಬಿನೆಟ್ ಸಚಿವರೊಂದಿಗೆ ಮುಖ್ಯಮಂತ್ರಿ ಯಾಗಿ ಶಪಥ ಸ್ವೀಕರಿಸಿದ್ದಾರೆ. ಅಲ್ಲಿಗೆ ಪಶ್ಚಿಮ ಬಂಗಾಳದಲ್ಲೂ ಮೊಟ್ಟ ಮೊದಲ ಬಾರಿಗೆ ಬಿಜೆಪಿ ಸರ್ಕಾರ ಸ್ಥಾಪನೆಯಾದಂತಾಗಿದೆ. ಬಂಗಾಳ ಹಲವು ಸ್ಥಿತ್ಯಂತರಗಳಿಗೆ ಸಾಕ್ಷಿಯಾಗಿದೆ. ಧ್ವಜದ ಬಣ್ಣಗಳು ಬದಲಾಗುತ್ತಲೇ ಇವೆ. 'ಕೆಂಪುಧ್ವಜ ಕೆಳಗಿಳಿದು ಹಸಿರು (ಟಿಎಂಸಿ) ಧ್ವಜ ಹಾರಾಡಿತು. ಈಗ ಹಸಿರು ಕೆಳಗಿಳಿದು ಕೇಸರಿ ಧ್ವಜ ಬಾನೆತ್ತರಕ್ಕೇರಿದೆ. ಅಷ್ಟಾದರೆ ಸಾಲದು, ಧ್ವಜದ ಬಣ್ಣ ಬದಲಾದರೆ ಸಾಲದು. ಆ ರಾಜ್ಯದ, ಇದುವರೆಗೂ ಮರೀಚಿಕೆಯಾಗಿದ್ದ ಜನರ ನೆಮ್ಮದಿ, ಕಾನೂನು ಮತ್ತು ಸುವ್ಯವಸ್ಥೆ, ಅಭಿವೃದ್ಧಿಗಳಿಗೆ ಚಾಲನೆ ದೊರೆಯಬೇಕು. 'ಅಭೀ ಬದ್ಲಾ ನಹೀ, ಬದಲಾವ್' (ಈಗ ಪ್ರತೀಕಾರವಲ್ಲ, ಬದಲಾವಣೆ) ಎಂಬ ಪ್ರಧಾನಿ ಮೋದಿ ಅವರ ಘೋಷಣೆ ಕೃತಿಗಿಳಿಯಬೇಕು. ಆಗಲೇ ಈ 'ಪೊರಿಬೊರ್ತನ್' ಅರ್ಥಪೂರ್ಣ ಹಾಗೂ ಐತಿಹಾಸಿಕ.

ಆಗ ಮಾತ್ರ ಡಾ. ಶ್ಯಾಮ ಪ್ರಸಾದ್ ಮುಖರ್ಜಿಯವರ ಆತ್ಮಕ್ಕೆ ಚಿರಶಾಂತಿ. 'ತುಮಿದುರ್ಗಾ ದಶಪ್ರಹರಣಧಾರಿಣಿ' ಎಂಬ ರಣಮಂತ್ರ ಬರೆದ ಬಂಕಿಮರ ಸ್ಮೃತಿಗೆ ಗೌರವ; ಹಿಂದು ಸನ್ಯಾಸಿ ವಿವೇಕಾನಂದ, ಚೈತನ್ಯ ಪ್ರಭು , ಅರವಿಂದ ಮಹರ್ಷಿ, ರವೀಂದ್ರನಾಥ ಟ್ಯಾಗೋರ್, ಸ್ವಾತಂತ್ರ್ಯ ಪ್ರಾಪ್ತಿಗಾಗಿ ನೇಣುಗಂಬವೇರಿದ ಅಗಣಿತ ಸ್ವಾತಂತ್ರ್ಯ ಸೇನಾನಿಗಳ ತ್ಯಾಗ, ಬಲಿದಾನಗಳಿಗೆ ಅಮೂಲ್ಯ ಬೆಲೆ. ಹಾಗಾಗಲಿ.

ರಾಷ್ಟ್ರೀಯ ತಂತ್ರಜ್ಞಾನ ದಿನದಂದು ತಂತ್ರಜ್ಞಾನ-ನಾವೀನ್ಯತೆಯ ಸಮನ್ವಯ

ಡಾ. ಜಿತೇಂದ್ರ ಸಿಂಗ್, ಕೇಂದ್ರ ವಿಜ್ಞಾನ ಮತ್ತು ತಂತ್ರಜ್ಞಾನ ರಾಜ್ಯ ಸಚಿವರು(ಸ್ವತಂತ್ರ ಉಸ್ತುವಾರಿ)



ರಾಷ್ಟ್ರೀಯ ತಂತ್ರಜ್ಞಾನ ದಿನ – ವಿಜ್ಞಾನ Tech, ಮೇ 11ರಂದು ಆಚರಿಸಲಾಗುವ ಈ ದಿನವು 1998ರ ಪೋಖ್ರಾನ್ ಪರಮಾಣು ಪರೀಕ್ಷೆಗಳ ಯಶಸ್ಸಿನ ಮೂಲಕ ಭಾರತದ ಐತಿಹಾಸಿಕ ತಾಂತ್ರಿಕ ಸಾಧನೆಯನ್ನು ಸ್ಮರಿಸುತ್ತದೆ. ಈ ಸಂದರ್ಭವು ವೈಜ್ಞಾನಿಕ ನಾವೀನ್ಯತೆ, ತಾಂತ್ರಿಕ ಪ್ರಗತಿ ಮತ್ತು ಭಾರತದ ಅಭಿವೃದ್ಧಿಯ ಪಥವನ್ನು ರೂಪಿಸುವಲ್ಲಿ ವಿಜ್ಞಾನ, ಸಮಾಜ ಮತ್ತು ಉದ್ಯಮಗಳ ನಡುವಿನ ಸಮನ್ವಯಕ್ಕೆ ದೇಶದ ಅಚಲ ಬದ್ಧತೆಯನ್ನು ಉಲ್ಲೇಖಿಸುತ್ತದೆ.

ಕಳೆದ ದಶಕದಲ್ಲಿ, ಗೌರವಾನ್ವಿತ ಪ್ರಧಾನಮಂತ್ರಿ ನರೇಂದ್ರ ಮೋದಿಯವರ ನೇತೃತ್ವದಲ್ಲಿ, ಭಾರತದ ತಾಂತ್ರಿಕ ಪರಿಸರ ವ್ಯವಸ್ಥೆಯು ಅಭೂತಪೂರ್ವ ಬೆಳವಣಿಗೆಗೆ ಸಾಕ್ಷಿಯಾಗಿದೆ. ಇದು ಕ್ಷಿಪ್ರ ನಾವೀನ್ಯತೆ, ವಿಸ್ತರಿಸುತ್ತಿರುವ ಡಿಜಿಟಲ್ ಮೂಲಸೌಕರ್ಯ ಮತ್ತು ಉದಯೋನ್ಮುಖ ವಲಯಗಳಲ್ಲಿನ ಮಹತ್ವದ ಪ್ರಗತಿಯಿಂದ ಗುರುತಿಸಲ್ಪಟ್ಟಿದೆ. ಸ್ವಾವಲಂಬನೆಗೆ ಇಲ್ಲಿ ಹೆಚ್ಚಿನ ಒತ್ತು ನೀಡಲಾಗಿದ್ದು, ವೈಜ್ಞಾನಿಕ ಆವಿಷ್ಕಾರಗಳನ್ನು ನೈಜ ಜಗತ್ತಿನ ಮೇಲೆ ಪ್ರಭಾವ ಬೀರುವಂತೆ ಪರಿವರ್ತಿಸುವಲ್ಲಿ ಗಮನಾರ್ಹ ಪ್ರಗತಿ ಸಾಧಿಸಲಾಗಿದೆ. ಕ್ವಾಂಟಮ್ ಸಂವಹನ, ಬಾಹ್ಯಾಕಾಶ, ಜೈವಿಕ ತಂತ್ರಜ್ಞಾನ, ಕೃತಕ ಬುದ್ಧಿಮತ್ತೆ (AI), ಸೆಮಿಕಂಡಕ್ಟರ್‌ಗಳು, ನವೀಕರಿಸಬಹುದಾದ ಇಂಧನ ಮತ್ತು ಹವಾಮಾನ-ಸ್ಥಿತಿಸ್ಥಾಪಕ ವ್ಯವಸ್ಥೆಗಳಂತಹ ಮುಂಚೂಣಿ ತಂತ್ರಜ್ಞಾನ ಚಾಲಿತ ಕ್ಷೇತ್ರಗಳಲ್ಲಿ ಗಣನೀಯ ಸುಧಾರಣೆ ಕಂಡುಬಂದಿದೆ. 'ವಿಕಸಿತ ಭಾರತ'ದ ಗುರಿ ಸಾಧನೆಯಲ್ಲಿ ಜೈವಿಕ ಉತ್ಪಾದನೆಯು(Biomanufacturing) ಒಂದು ಪ್ರಮುಖ ತಂತ್ರಜ್ಞಾನವಾಗಿದ್ದು, ಇದು ಜೈವಿಕ ವ್ಯವಸ್ಥೆಗಳನ್ನು ಬಳಸಿಕೊಂಡು ಹೆಚ್ಚಿನ ಮೌಲ್ಯದ ಬಯೋಲಾಜಿಕ್ಸ್, ಲಸಿಕೆಗಳು, ಇಂಧನಗಳು ಮತ್ತು ಸಾಮಗ್ರಿಗಳನ್ನು ಉತ್ಪಾದಿಸುವ ಮೂಲಕ ಸುಸ್ಥಿರ ನಾವೀನ್ಯತೆ, ಆರೋಗ್ಯ ಕ್ಷೇತ್ರದ ಸ್ಥಿತಿಸ್ಥಾಪಕತ್ವ ಮತ್ತು ಬಲವಾದ ಜೈವಿಕ ಆರ್ಥಿಕತೆಯನ್ನು ಸಕ್ರಿಯಗೊಳಿಸುತ್ತದೆ. ಚಂದ್ರಯಾನ-3 ಮಿಷನ್‌ನ ಯಶಸ್ಸು ಮತ್ತು ಕಲ್ಪಾಕ್ಕಂನ ಸ್ವದೇಶಿ ಪ್ರೊಟೊಟೈಪ್ ಫಾಸ್ಟ್ ಬ್ರೀಡರ್ ರಿಯಾಕ್ಟರ್ 'ಕ್ರಿಟಿಕಾಲಿಟಿ' (criticality) ಹಂತವನ್ನು ತಲುಪಿರುವುದು, ಆಯಕಟ್ಟಿನ ವಲಯಗಳಲ್ಲಿ ದೇಶದ ಮುನ್ನಡೆಯನ್ನು ಮತ್ತು ದೀರ್ಘಕಾಲದ ತಾಂತ್ರಿಕ ಸಾರ್ವಭೌಮತ್ವಕ್ಕೆ ಭಾರತದ ಬದ್ಧತೆಯನ್ನು ಮತ್ತಷ್ಟು ಉಲ್ಲೇಖಿಸುತ್ತವೆ.

ಈ ಪ್ರಗತಿಯು ವಿವಿಧ ಪ್ರಮುಖ ರಾಷ್ಟ್ರೀಯ ಮಾನದಂಡಗಳಲ್ಲೂ ಪ್ರತಿಫಲಿಸುತ್ತದೆ. ವಿಶ್ವ ಬೌದ್ಧಿಕ ಆಸ್ತಿ ಸಂಸ್ಥೆ (WIPO) ಬಿಡುಗಡೆ ಮಾಡಿದ ಜಾಗತಿಕ ನಾವೀನ್ಯತೆ ಸೂಚ್ಯಂಕದಲ್ಲಿ (Global Innovation Index) ಭಾರತವು ತನ್ನ ಸ್ಥಾನವನ್ನು ಗಣನೀಯವಾಗಿ ಸುಧಾರಿಸಿಕೊಂಡಿದ್ದು, 2015ರಲ್ಲಿ 81ನೇ ಸ್ಥಾನದಲ್ಲಿದ್ದ ದೇಶವು 2025ರಲ್ಲಿ 38ನೇ ಸ್ಥಾನಕ್ಕೆ ಏರಿದೆ. ದೇಶದಲ್ಲಿ ಮಂಜೂರಾದ ಪೇಟೆಂಟ್‌ಗಳ ಸಂಖ್ಯೆಯು 2014-15ರಲ್ಲಿ ಕೆಲವೇ ಸಾವಿರಗಳಷ್ಟಿದ್ದು, 2025ರ ವೇಳೆಗೆ ಸುಮಾರು 1.5 ಲಕ್ಷಕ್ಕೆ ಏರಿಕೆಯಾಗಿದೆ. ಭಾರತದ ಸ್ಟಾರ್ಟ್‌ಅಪ್ ಪರಿಸರ ವ್ಯವಸ್ಥೆಯು ಸಹ ಗಣನೀಯವಾಗಿ ವಿಸ್ತರಿಸಿದ್ದು, ವಿವಿಧ ಕ್ಷೇತ್ರಗಳಲ್ಲಿ 1.5 ಲಕ್ಷಕ್ಕೂ ಹೆಚ್ಚು ಡಿಪಿಐಐಟಿ ಮಾನ್ಯತೆ ಪಡೆದ ಸ್ಟಾರ್ಟ್‌ಅಪ್ ಗಳಿವೆ. ಇದರಲ್ಲಿ ಕೃತಕ ಬುದ್ಧಿಮತ್ತೆ (ಎಐ), ರೊಬೊಟಿಕ್ಸ್ ಮತ್ತು ಅಡಿಟಿವ್ ಮ್ಯಾನುಫ್ಯಾಕ್ಚರಿಂಗ್ ನಂತಹ ಉದಯೋನ್ಮುಖ ತಂತ್ರಜ್ಞಾನ ಕ್ಷೇತ್ರಗಳಲ್ಲಿ ಸುಮಾರು ಹದಿನೈದು ಸಾವಿರ ಸ್ಟಾರ್ಟ್‌ಅಪ್‌ಗಳು ಕಾರ್ಯನಿರ್ವಹಿಸುತ್ತಿವೆ. ಪಳೆಯುಳಿಕೆ ರಹಿತ ಮೂಲಗಳಿಂದ ನವೀಕರಿಸಬಹುದಾದ ಇಂಧನ ಸಾಮರ್ಥ್ಯವನ್ನು 250 ಎಗಿಂತ ಹೆಚ್ಚಿಸಿರುವುದು ಮತ್ತು ಒಂದು ದಶಕದಲ್ಲಿ ಜೈವಿಕ ಆರ್ಥಿಕತೆಯು (bioeconomy) 10 ಬಿಲಿಯನ್‌ನಿಂದ 195 ಬಿಲಿಯನ್‌ಗೆ ಬೆಳೆದಿರುವುದು ಈ ರೂಪಾಂತರಕ್ಕೆ ಮತ್ತಷ್ಟು ಸಾಕ್ಷಿಯಾಗಿದೆ.

ಕಳೆದ ದಶಕದಲ್ಲಿ ಸರ್ಕಾರವು ಜಾರಿಗೆ ತಂದ ನೀತಿ ಸುಧಾರಣೆಗಳು ಈ ರೂಪಾಂತರದಲ್ಲಿ ನಿರ್ಣಾಯಕ ಪಾತ್ರ ವಹಿಸಿವೆ. ಇವುಗಳಲ್ಲಿ ಸ್ಟಾರ್ಟ್‌ಅಪ್ ಮತ್ತು ಇನ್ಕ್ಯುಬೇಶನ್ ಪರಿಸರ ವ್ಯವಸ್ಥೆಯ ಕ್ಷಿಪ್ರ ವಿಸ್ತರಣೆ, ಬಾಹ್ಯಾಕಾಶ ಮತ್ತು ಪರಮಾಣು ಶಕ್ತಿಯಂತಹ ಆಯಕಟ್ಟಿನ ಕ್ಷೇತ್ರಗಳನ್ನು ಖಾಸಗಿ ಸಹಭಾಗಿತ್ವಕ್ಕೆ ಮುಕ್ತಗೊಳಿಸುವುದು ಹಾಗೂ ANRF, BioE3 (ಆರ್ಥಿಕತೆ, ಪರಿಸರ ಮತ್ತು ಉದ್ಯೋಗಕ್ಕಾಗಿ ಜೈವಿಕ ತಂತ್ರಜ್ಞಾನ) ನೀತಿ ಮತ್ತು ಇತ್ತೀಚೆಗೆ ಪ್ರಾರಂಭಿಸಲಾದ 1 ಲಕ್ಷ ಕೋಟಿ ರೂಪಾಯಿಗಳ ಸಂಶೋಧನಾ ಅಭಿವೃದ್ಧಿ ಮತ್ತು ನಾವೀನ್ಯತೆ (RDI) ನಿಧಿಯಂತಹ ಪೂರಕ ಚೌಕಟ್ಟುಗಳ ಸ್ಥಾಪನೆ ಸೇರಿವೆ. ಈ ಉಪಕ್ರಮಗಳು ಭಾರತದ ನಾವೀನ್ಯತೆ ಸಂರಚನೆಯನ್ನು ಬಲಪಡಿಸಿವೆ ಮತ್ತು ವೈಜ್ಞಾನಿಕ ಫಲಿತಾಂಶಗಳನ್ನು ಸಾಮಾಜಿಕ ಮತ್ತು ಆರ್ಥಿಕ ಪ್ರಭಾವವಾಗಿ ಪರಿವರ್ತಿಸುವತ್ತ ಗಮನವನ್ನು ಕೇಂದ್ರೀಕರಿಸಿವೆ. ವಿಜ್ಞಾನವು ಈಗ ಪ್ರಯೋಗಾಲಯಗಳಿಂದ ಮಾರುಕಟ್ಟೆಗಳಿಗೆ ಮತ್ತು ಆಲೋಚನೆಗಳಿಂದ ಪ್ರಭಾವಕ್ಕೆ (Impact) ದಾಪುಗಾಲು ಹಾಕುತ್ತಿದೆ.

ಸಕ್ರಿಯ ನೀತಿಗಳು ಮತ್ತು ಹಳತಾದ ನಿಯಮಗಳ ತೆಗೆದುಹಾಕುವಿಕೆಯ ಮೂಲಕ ಸರ್ಕಾರವು ಸೂಕ್ತ ಉತ್ತೇಜನವನ್ನು ನೀಡುತ್ತಿದೆ ಹಾಗೂ ಭಾರತೀಯ ನಾವೀನ್ಯಕಾರರಿಗಾಗಿ ನೈತಿಕ ಮತ್ತು ಸಮಾನ ಅವಕಾಶಗಳ ವೇದಿಕೆಯನ್ನು ಯಶಸ್ವಿಯಾಗಿ ನಿರ್ಮಿಸುತ್ತಿದೆ. ಇದು ಕೇವಲ ಪ್ರಾಥಮಿಕವಾಗಿ ಧನಸಹಾಯ ನೀಡುವ ಮಟ್ಟವನ್ನು ಮೀರಿ, ಒಂದು ಪ್ರಮುಖ ಸಕ್ರಿಯಗೊಳಿಸುವ ಶಕ್ತಿಯಾಗಿ(primary enabler) ಹೊರಹೊಮ್ಮುತ್ತಿದೆ. ಭಾರತದಾದ್ಯಂತ ಸಂಶೋಧನೆ, ನಾವೀನ್ಯತೆ ಮತ್ತು ಉದ್ಯಮಶೀಲತೆಗೆ ಕಾರ್ಯತಂತ್ರದ ನಿರ್ದೇಶನ ನೀಡಲು ಕೇಂದ್ರದ ಅತ್ಯುನ್ನತ ಸಂಸ್ಥೆಯಾಗಿ 'ಅನುಸಂಧಾನ ರಾಷ್ಟ್ರೀಯ ಸಂಶೋಧನಾ ಪ್ರತಿಷ್ಠಾನ'(ANRF) ಸ್ಥಾಪನೆಯೊಂದಿಗೆ, ಭಾರತವನ್ನು ಜ್ಞಾನ ಆಧಾರಿತ ಆರ್ಥಿಕತೆಯನ್ನಾಗಿ ಮತ್ತು ನಾವೀನ್ಯತೆಯಲ್ಲಿ ಜಾಗತಿಕ ನಾಯಕರನ್ನಾಗಿ ಪರಿವರ್ತಿಸುವ ಗುರಿ ಹೊಂದಲಾಗಿದೆ. ಈ ಪಯಣವು ಸ್ವದೇಶಿ ಬೌದ್ಧಿಕ ಆಸ್ತಿ, ನೈತಿಕ ಚೌಕಟ್ಟುಗಳು ಮತ್ತು ಸಂಪೂರ್ಣ ಸಮಾಜದ ಬದ್ಧತೆಗಾಗಿ ಸಂಪೂರ್ಣ ಸರ್ಕಾರದ ವಿಧಾನದ ಶಕ್ತಿಯೊಂದಿಗೆ ಸಾಗುವುದನ್ನು ಖಚಿತಪಡಿಸಿಕೊಳ್ಳುವುದು ಇದರ ವಿಶಾಲ ಉದ್ದೇಶವಾಗಿದೆ.

ವಿಜ್ಞಾನ Tech ಈ ಪಯಣವನ್ನು ಪ್ರತಿಬಿಂಬಿಸುತ್ತದೆ, ಇದರಲ್ಲಿ ವಿಜ್ಞಾನವು ಬುನಾದಿಯಾಗಿದ್ದರೆ, ತಂತ್ರಜ್ಞಾನವು ಅದನ್ನು ಸಕ್ರಿಯಗೊಳಿಸುವ ಶಕ್ತಿಯಾಗಿದೆ ಮತ್ತು ನಾವೀನ್ಯತೆಯು ಅದರ ಫಲಿತಾಂಶವಾಗಿದೆ. ನವದೆಹಲಿಯ BRIC-ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಇಮ್ಯುನೊಲಾಜಿ (NII) ನಲ್ಲಿ ಮೇ 11, 2026 ರಂದು ನಿಗದಿಯಾಗಿರುವ ರಾಷ್ಟ್ರೀಯ ಪ್ರದರ್ಶನವು ಭಾರತ ಸರ್ಕಾರದ 14 ಸಚಿವಾಲಯಗಳು ಮತ್ತು ಇಲಾಖೆಗಳ ಅಡಿಯಲ್ಲಿನ ಪ್ರಮುಖ ರಾಷ್ಟ್ರೀಯ ಸಂಶೋಧನಾ ಸಂಸ್ಥೆಗಳು ಮತ್ತು ಪ್ರಯೋಗಾಲಯಗಳು ಸ್ವದೇಶಿಯಾಗಿ ಅಭಿವೃದ್ಧಿಪಡಿಸಿದ 350ಕ್ಕೂ ಹೆಚ್ಚು 'ಡೀಪ್ ಟೆಕ್ನಾಲಜಿ'ಗಳನ್ನು (deep technologies) ಪ್ರದರ್ಶಿಸುತ್ತದೆ. ಈ ಸ್ವದೇಶಿ ತಂತ್ರಜ್ಞಾನಗಳು ಬಯೋಫಾರ್ಮಾ ಮತ್ತು ಆರೋಗ್ಯ ತಂತ್ರಜ್ಞಾನಗಳು, ಬಯೋ ಇಂಡಸ್ಟ್ರಿಯಲ್ ಮತ್ತು ಗ್ರೀನ್ ಕೆಮಿಕಲ್ಸ್, ಬಾಹ್ಯಾಕಾಶ ಮತ್ತು ಜಿಯೋಸ್ಪೇಷಿಯಲ್ ತಂತ್ರಜ್ಞಾನಗಳು, ಹವಾಮಾನ ಮತ್ತು ಕೃಷಿ-ಆಹಾರ ತಂತ್ರಜ್ಞಾನಗಳು, ಡೀಪ್-ಟೆಕ್ ಮೆಟೀರಿಯಲ್ಸ್ ಮತ್ತು ಸುಧಾರಿತ ಎಂಜಿನಿಯರಿಂಗ್ ತಂತ್ರಜ್ಞಾನಗಳು, ಎಲೆಕ್ಟ್ರಾನಿಕ್ಸ್, ಸೆಮಿಕಂಡಕ್ಟರ್ ಗಳು ಮತ್ತು ಇಂಧನ ಹಾಗೂ ಆಳ ಸಮುದ್ರ ಮತ್ತು ವಾಯುಮಂಡಲದ ತಂತ್ರಜ್ಞಾನಗಳು ಸೇರಿದಂತೆ ಪ್ರಮುಖ ವಿಷಯಾಧಾರಿತ ವಲಯಗಳನ್ನು ಒಳಗೊಂಡಿವೆ. ಈ ತಂತ್ರಜ್ಞಾನಗಳಲ್ಲಿ ಹಲವು ಈಗಾಗಲೇ ಪರವಾನಗಿ ಪಡೆದಿವೆ ಅಥವಾ ವಾಣಿಜ್ಯೀಕರಣಗೊಂಡಿವೆ, ಉಳಿದವುಗಳು ಶೀಘ್ರದಲ್ಲೇ ಪರವಾನಗಿ ಮತ್ತು ನಿಯೋಜನೆಗಾಗಿ ಲಭ್ಯವಿರುತ್ತವೆ.

ಭಾರತದ ತಂತ್ರಜ್ಞಾನದ ಬೆಳವಣಿಗೆಯ ಮುಂದಿನ ಹಂತಕ್ಕೆ ಶಿಕ್ಷಣ ಸಂಸ್ಥೆಗಳು, ಉದ್ಯಮಗಳು, ಸ್ಟಾರ್ಟ್‌ಅಪ್‌ಗಳು ಮತ್ತು ಸರ್ಕಾರದ ನಡುವೆ ಸಂಶೋಧನಾ ಕಾರ್ಯಕ್ರಮಗಳ ಪರಿಕಲ್ಪನೆಯ ಹಂತದಿಂದಲೇ ಆಳವಾದ ಸಮನ್ವಯದ ಅಗತ್ಯವಿದೆ. ಬಲವಾದ ಉದ್ಯಮ-ಶೈಕ್ಷಣಿಕ ಪಾಲುದಾರಿಕೆಯು ಸಂಶೋಧನೆಯನ್ನು ರಾಷ್ಟ್ರೀಯ ಆದ್ಯತೆಗಳು, ಮಾರುಕಟ್ಟೆಯ ಅಗತ್ಯಗಳು ಮತ್ತು ಸಾಮಾಜಿಕ ಸವಾಲುಗಳೊಂದಿಗೆ ಉತ್ತಮವಾಗಿ ಹೊಂದಿಸಲು ಸಹಕರಿಸುತ್ತದೆ; ಅದೇ ಸಮಯದಲ್ಲಿ, ಮಹತ್ವದ ನಾವೀನ್ಯತೆ ಮತ್ತು ವೈಜ್ಞಾನಿಕ ಶ್ರೇಷ್ಠತೆಗಾಗಿ ಮೂಲಭೂತ ಸಂಶೋಧನೆಗಳನ್ನು ಉತ್ತೇಜಿಸುವುದನ್ನು ಮುಂದುವರಿಸಬೇಕಿದೆ. ಕೃತಕ ಬುದ್ಧಿಮತ್ತೆ, ರೊಬೊಟಿಕ್ಸ್, ಸುಧಾರಿತ ಸಾಮಗ್ರಿಗಳು, ಕ್ವಾಂಟಮ್ ತಂತ್ರಜ್ಞಾನಗಳು, ಬಾಹ್ಯಾಕಾಶ ಪರಿಶೋಧನೆ ಮತ್ತು ವೈದ್ಯಕೀಯ ತಂತ್ರಜ್ಞಾನಗಳಂತಹ ಮುಂಚೂಣಿಯ ಕ್ಷೇತ್ರಗಳಲ್ಲಿ ಉದ್ಭವಿಸುವ ಸವಾಲುಗಳನ್ನು ಎದುರಿಸಲು ರಾಷ್ಟ್ರೀಯ ಸಂಸ್ಥೆಗಳು ಮತ್ತು ಪ್ರಯೋಗಾಲಯಗಳು ಹೆಚ್ಚು ಸಹಕಾರಿ ಮತ್ತು ಮಿಷನ್-ಮೋಡ್ (Mission-mode) ರೀತಿಯಲ್ಲಿ ಕೆಲಸ ಮಾಡುವ ಅಗತ್ಯವಿದೆ. ಭಾರತವು 2047ರತ್ತ ಮುನ್ನಡೆಯುತ್ತಿರುವಂತೆ, ಆರ್ಥಿಕ ಬೆಳವಣಿಗೆ, ವ್ಯೂಹಾತ್ಮಕ ಸ್ವಾಯತ್ತತೆ, ಸಾಮಾಜಿಕ ರೂಪಾಂತರ ಮತ್ತು ಸುಸ್ಥಿರ ಭವಿಷ್ಯವನ್ನು ವೇಗವರ್ಧಿಸುವಲ್ಲಿ ವಿಜ್ಞಾನ, ತಂತ್ರಜ್ಞಾನ ಮತ್ತು ನಾವೀನ್ಯತೆ ಹೆಚ್ಚು ಪ್ರಮುಖ ಪಾತ್ರ ವಹಿಸುವುದನ್ನು ಮುಂದುವರಿಸಲಿವೆ.

ಸರ್ವೋತ್ತಮನ 'ಡೋರ್'-ಆಲೋಚನೆಗಳು

ವಾರದ ವರಸೆ
ಸಂದೇಶ್ ನಾಯ್ಕ್ ಹಕ್ಲಾಡಿ
naiksh2@gmail.com



'ಅದೃಷ್ಟವೇ ಬಂದು ಬಾಗಿಲು ತಟ್ಟಲಿ' ಎಂದು ನಿರೀಕ್ಷಿಸುವವರು ತುಂಬಾ ಜನರಿರುತ್ತಾರೆ. ಆದರೆ ಆ ಅದೃಷ್ಟ ಬಂದು ಬಾಗಿಲು ತಟ್ಟುವುದೋ ಬಿಡುವುದೋ ಆದರೆ ಆಗಾಗ ಯಾರ್ ಯಾರೋ ಬಂದು ಮನೆ ಬಾಗಿಲನ್ನು ತಟ್ಟುತ್ತಲೇ ಇರುತ್ತಾರೆ. ಓಹ್ ಸಾರಿ.. ಸಾರಿ... ಬಾಗಿಲು ತಟ್ಟುವುದಿಲ್ಲ ಬದಲಿಗೆ ಕಾಲಿಂಗ್ ಬೆಲ್ ಬಜಾಯಿಸುತ್ತಾರೆ. ಅದೊಂಥರ ಹಳೆಯ 'ಕಾಲಿಂಗ್' ಸಿಸ್ಟಮ್ ಎನ್ನಬಹುದು. ಈ ಕಾಲದ ಫೋನ್, ಮೊಬೈಲ್ 'ಕಾಲಿಂಗ್'ಗಿಂತ ಇದು ಸ್ವಲ್ಪ ಭಿನ್ನವಾದುದೇ ಸರಿ. ಕಾಲಿಂಗ್ ಬೆಲ್‌ನ ಕರೆಗೆ ಬೆನ್ನು ತೋರದೇ, ಬಂದು ಒಪ್ಪಿ, ಬಾಗಿಲು ತೆರೆದು, ಬಂದವರು ತೀರಾ ಪರಿಚಿತರೋ, ಆತ್ಮೀಯರೋ ಆಗಿದ್ದರೆ ಅಪ್ಪಿಕೊಂಡರೆ, ಆಗ ಕಾಲಿಂಗ್‌ನಿಂದ ಉಂಟಾದ ಈ ಆಲಿಂಗನವನ್ನು 'ಕಾಲಿಂಗನ' ಎಂದು ಕರೆಯಬಹುದೇನೋ! ಹಾಗಂತ ಬೆಲ್ ಮಾಡಿದಾಕ್ಷಣ ಎಲ್ಲರೂ ಹೀಗೆಯೇ, ಇದೇ ಮಾದರಿಯಲ್ಲೇ ಪ್ರತಿಕ್ರಿಯಿಸುತ್ತಾರೆ ಎಂದು ಹೇಳಲಾಗದು. ಆ ಬೆಲ್‌ನ ರಿಂಗಣ ಕೇಳುತ್ತಿದ್ದಂತೆ ರಾಂಗ್ ಆಗುವವರೂ ಇರುತ್ತಾರೆ. ಹಾಗಂತ ಅಷ್ಟು ಸುಲಭಕ್ಕೆ ಅದನ್ನು ರಾಂಗ್ ನಂಬರ್ ಎಂದು ಪರಿಗಣಿಸಿ ಮುಂದೆ ಸಾಗದೇ, ಮತ್ತೆ ಮತ್ತೆ ಮನವೊಲಿಸಿ, 'ಬಾಗಿಲನು ತೆರೆಯೇ..' ಎಂದು ಭಿನ್ನವಿಸದೇ ಅನ್ಯ ದಾರಿಯೇ ಇಲ್ಲ. ಅಂಥ ಕೆಲಸವೊಂದಕ್ಕೆ ನಿಯುಕ್ತಗೊಂಡಿದ್ದ ನಮ್ಮ ಸರ್ಕಾರಿ ನೌಕರ ಸರ್ವೋತ್ತಮ.

ಈತನಿಗೆ ಸರ್ವೋತ್ತಮ ಎಂದು ಹೆಸರಿಟ್ಟು ನಲಿಯುವಾಗಲೋ, ನಂತರ ನೌಕರಿ ಗಿಟ್ಟಿಸಿಕೊಂಡು ನೆಮ್ಮದಿಯ, ನಗು ಬೀರುವಾಗಲೋ ಬಹುಶಃ ಆತನ ಹೆಸರಾದ 'ಸರ್ವೋತ್ತಮ'ದಲ್ಲಿ ಅಡಕವಾಗಿರುವ 'ಸರ್ವೇ' ಕಾರ್ಯಕ್ಕೆ ಆಗಾಗ ನಿಯೋಜಿಸಲ್ಪಡಬಹುದು ಎಂಬ ಸಣ್ಣ ಊಹೆಯೂ ಇರಲಿಲ್ಲ. ಆದರೆ ಈಗ ಹಲವು 'ಸರ್ವೇ'ಗಳ ಕೆಲಸಗಳಲ್ಲಿ ಮತ್ತೆ ಮತ್ತೆ ತೊಡಗಿಸಿಕೊಂಡಿರುವ ಕಾರಣಕ್ಕೆ ಆತನ ಅಂಕಿತ ನಾಮ ಎನ್ನುವುದು ಒಂದರ್ಥದಲ್ಲಿ ಅನ್ವರ್ಥ ನಾಮವೂ ಆಗಿ ಪರಿವರ್ತನೆ ಹೊಂದಿದೆ. ಅನ್ಯ ಆಯ್ಕೆಗಳು ಇಲ್ಲದ ಕಾರಣಕ್ಕೆ, ಮೇಲಧಿಕಾರಿಗಳ ಆದೇಶ ಪಾಲನೆಗೆ ಪಕ್ಕಾಗಿರುವ 'ಆದೇಶವಾಸಿ'ಯಾಗಿಯೇ ಇರಬೇಕಾದ ಅನಿವಾರ್ಯತೆಯ ಕಾರಣಕ್ಕೆ ಆತ 'ಪರಿವರ್ತನೆ ಜಗದ ನಿಯಮ' ಎಂದುಕೊಂಡು ಈ ಕೆಲಸಗಳನ್ನು ಚಾಚೂ ತಪ್ಪದೇ ನೆರವೇರಿಸಿಕೊಂಡು ಸಾಗುತ್ತಿದ್ದಾನೆ. ಹೆಗಲೇರಿದ ಈ ಕೆಲಸದ ಹೊಣೆಗಾರಿಕೆಯನ್ನು ಹಗಲು-ರಾತ್ರಿ ಎನ್ನದೇ ಬದ್ಧತೆಯಿಂದ ನಿರ್ವಹಿಸುತ್ತಿದ್ದಾನೆ. ಆತ ಈ ಕಾರ್ಯಕ್ಕಾಗಿ ಕಂಡ ಕಂಡವರ ಮನೆಯ ಬಾಗಿಲು ತಟ್ಟಲೇ ಬೇಕು. ನಂತರ ಬಾಗಿ, ಬಳುಕಿ, ಇಣುಕಿ, ಹಣಕಿ ನೋಡಿ ಮನೆಯೊಡೆಯನ ಮನವೊಲಿಸಿ ಮನೆ ಹಾಗೂ ಮನೆಯವರ ಕುರಿತಾದ ಮಾಹಿತಿಗಳನ್ನು ಅಕ್ಷರಶಃ ಸೋಸಿ ತೆಗೆಯಬೇಕು. ಹಾಗೆ ತೆಗೆದದ್ದನ್ನು ಆ್ಯಪ್‌ಗಳೆಂಬ ಬಕಾಸುರನ ಹೊಟ್ಟೆಗೆ ತುರುಕಬೇಕು.

ಸರ್ವೋತ್ತಮ ಪ್ರತೀ ಬಾರಿಯ ಮನೆ ಮನೆ ಸರ್ವೆಯ ಸಂದರ್ಭದಲ್ಲೂ ಮುಚ್ಚಿದ ಬಾಗಿಲುಗಳ ಮುಂದೆ ನಿಂತು ನಿಂತು, 'ಅಯ್ಯೋ ಈ ಮನೆ ಬಾಗಿಲುಗಳು ಇರುವುದೇ ಸದಾ ಮುಚ್ಚಿರಲೇನೋ?!' ಎಂಬ ಅಭಿಪ್ರಾಯಕ್ಕೆ ಬಂದಿದ್ದ. ಹೇಳಿ ಕೇಳಿ ಮಹಾನಗರಪಾಲಿಕೆಯ ಪ್ರದೇಶಗಳು ಆತನ ಪಾಲಿಗೆ ಬಂದು ಅಲ್ಲೇ ಕೆಲಸ ಮಾಡಿದ್ದರಿಂದ ಅಲ್ಲಿ ಆತನನ್ನು ಮೊದಲು ಸ್ವಾಗತಿಸುವುದೇ ಮುಚ್ಚಿದ ಬಾಗಿಲುಗಳು. ಪ್ರತೀ ಬಾರಿಯೂ ಹೇಗೋ ಬಾಗಿಲು ತೆರೆಯುವಂತೆ ಮಾಡುವ ಆತನ ವಿವಿಧ ಪ್ರಯತ್ನಗಳನ್ನು ನೋಡುವಾಗ ಆತನಿಗೆ 'ಬಾಗಿಲು ತೆರೆಯೇ ಸೇಸಮ್ಮ' "ಬಾಗಿಲನು ತೆರೆದು...' ಇನ್ನು ಯಾವ್ಯಾವುದೋ ಹಾಡುಗಳೆಲ್ಲ ನೆನಪಿಗೆ ಬರುತ್ತಿದ್ದವಾದರೂ, ಪಾಪ ಅದನ್ನು ಒಳಗೊಳಗೇ ನುಂಗಿಕೊಂಡು, ಬಾಗಿಲು ತೆರೆದವರ ಮುಂದೆ ನಕಲಿ ನಗೆಯನ್ನು ಒಗಾಯಿಸುತ್ತಿದ್ದ. ಸದ್ಯ ಒಂದು ಬಾಗಿಲಾಗಿದ್ದಕ್ಕೇ ಹೀಗೆ, ಇನ್ನೆಲ್ಲಾದರೂ ಕೆಲವರು ಹೇಳುವಂತೆ 'ಮನೆಯೊಂದು ಮೂರು ಬಾಗಿಲು' ನಿಜವಾಗಿಯೂ ಆಗಿದ್ದರೆ, ಆಗ ತನ್ನ ಪಾಡು, ಪಡಿಪಾಟಲು ಆಧ್ವಾನವೇ ಸರಿ ಎಂಬ ಯೋಚನೆಯಲ್ಲಿ ಮುಳುಗಿ ಹೋಗಿ ಬೆಚ್ಚಿ ಬಿದ್ದು ಬಿಳಿಚಿಕೊಳ್ಳುತ್ತಾನೆ. ಹಾಗೂ ಆತನಿಗೆ ಆಗಾಗ ಅನಿಸುವುದಿದೆ. ಅಲ್ಲಾ ಅದು ಹೇಗೆ ಯಾವುದೋ ಅಡಗಿಸಿಟ್ಟ ಖಜಾನೆಯ ಬಾಗಿಲನ್ನು, ಇನ್ನಾವುದೋ ಗುಪ್ತ ದ್ವಾರವನ್ನು, ಮತ್ತಾವುದೋ ಮಹಾದ್ವಾರವನ್ನೆಲ್ಲಾ ತೆರೆಯುವವರೋ, ತೆರೆಸುವರೋ ಎಂದು!

ಈತ ಈ ಕಡೆಯಿಂದ ಬೆಲ್ ಮಾಡುವುದು, ಆತ್ತಲಿಂದ ಏನಾದರೂ ಸದ್ದು ಕೇಳುವುದೋ ಎಂದು ಕಿವಿಗೊಟ್ಟು ಕೇಳುವುದು, ಆತ್ತಲಿಂದ ಬರುವ ಮಾತಿಗೆ ಸರಿಯಾದ ಉತ್ತರವನ್ನು ಕಾದು ನೀಡುವುದು, ಅವರು ಬಾಗಿಲು ತೆಗೆಯದೇ ಇನ್ನೇನೋ ಹೇಳಿ ಸಾಗಹಾಕಲು ಯತ್ನಿಸುವುದು, ಇವನು ಆ ಬಡ ಪೆಟ್ಟಿಗೆ ಬಗ್ಗದೇ ಮತ್ತೇನೋ ಹೇಳಿ ಹೇಗೋ ಬಾಗಿಲಿನ ಚಿಲಕ ತೆಗೆಸಿಯೇ ತೀರುತ್ತೇನೆ ಎಂಬಂತೆ ಪಟ್ಟು ಹಾಕಿ ಮತ್ತೆ ಮತ್ತೆ ಪ್ರಯತ್ನಕ್ಕೆ ಇಳಿಯುವುದು.... ಅಬ್ಬಾ..! ಅಬ್ಬಬ್ಬಾ....!! ಒಂದೇ ಒಂದು 'ಕದ'ದ ಆಚೆ-ಈಚೆ ನಡೆಯುವ ಈ ಹಣಾಹಣಿ, ಈ ಪೈಪೋಟಿ, ಈ ಹಗ್ಗಜಗ್ಗಾಟಗಳನ್ನೆಲ್ಲಾ ನೋಡುತ್ತಿದ್ದರೆ ನಿಜಕ್ಕೂ ಇದೇ ಒಂದು 'ಕದನ'ವೇ ಸರಿ ಎಂದೆನಿಸುತ್ತದೆ. ಅಲ್ಲಿ 'ಕದನದೋಳ್ ಕಲಿ ಪಾರ್ಥ' ಆದೇ ಇಲ್ಲಿ 'ಕದ'ನದೋಳ್ ಬರೀ ಅಪಾರ್ಥ! ಹ್ಞೂಂ.. ಮತ್ತೆ ಇವರು ಅವರೇನೋ, ಅದೇನು ಕೇಳುವರೋ, ಅದೆಂಥ ಸ್ಕ್ಯಾಮೋ, ಮತ್ಯಾವ ಸೇಲ್ಸ್ ಏಜೆಂಟೋ, ಡೆಲಿವರಿ ಬಾಯೋ, ಮಾಟವೋ, ಮಂತ್ರವೋ, ತಂತ್ರವೋ, ಕುತಂತ್ರವೋ, ಮಳ್ಳರೋ, ಕಳ್ಳರೋ ಕಾಕರೋ ಇಂಥ ಅಪಾರ್ಥ, ಅನುಮಾನ ಪ್ರಣೀತ ಯೋಚನೆಗಳೆಲ್ಲ ಒಂದು ಸುತ್ತು ಪ್ರೋಕ್ಷಣೆಯಾಗಿ, ನಂತರವೂ ಏನಾದರೂ ಚೂರು ನಂಬಿಕೆ ಮೂಡಿದರಷ್ಟೇ ಬಾಗಿಲು ತೆರೆಯುತ್ತದೆ, ದರ್ಶನವೂ ಸಿಗುತ್ತದೆ.

ಹೀಗೆಯೇ ಹತ್ತು ಹಲವು ಮನೆಗಳನ್ನು ಹತ್ತಿಳಿದು ನೋಡಿ ಬಹಳ ಬೇಸತ್ತು ಹೋಗಿದ್ದ ಸರ್ವೋತ್ತಮಗೆ ಅದೊಂದು ಮನೆಯ ಬಾಗಿಲು ತೆರೆದೇ ಇದ್ದದ್ದು ನೋಡಿ ಅತೀವ ಆನಂದವೇ ಉಂಟಾಯಿತು. ಸದ್ಯ ಇದೊಂದು ಮನೆಯಾದರೂ ಹೀಗೆ ಬಾಗಿಲನ್ನು ತೆರೆದೇ ಇಟ್ಟು, 'ತೆರೆದಿದೆ ಮನೆ ಓ ಬಾ ಅತಿಥಿ..' ಎಂದು ಕರೆಯುತ್ತಿದೆಯಲ್ಲ ಎಂದೆನಿಸಿ ಹುರುಪು, ಉತ್ಸಾಹ ಹಾಗೂ ಖುಷಿಯಿಂದ 'ಸಾರ್...' ಎಂದು ಲವಲವಿಕೆಯ ದನಿಯಲ್ಲಿ ಕರೆದ. 'ಸರ್' ಎಂಬ ಕರೆಗೆ ಯಾವ ಪ್ರತಿಕ್ರಿಯೆಯೂ ಬರದೇ ಇದ್ದಾಗ ಲಿಂಗ ಬದಲಿಸಿ, ಅಂದರೆ ಅದೇ ಕರೆಯ ಲಿಂಗ ಬದಲಿಸಿ 'ಮೇಡಂ' ಎಂದು ಕರೆದು ಪ್ರಯತ್ನಿಸಿದ. ಅದಕ್ಕೂ ಮೌನವೇ ಉತ್ತರವಾದಾಗ ಯಾಕೋ ಅನುಮಾನ ದಟ್ಟವಾಗಲಾರಂಭಿಸಿತು. ಮೆಲ್ಲಗೆ ಬಾಗಿಲ ಮೂಲಕ ಇಣುಕಿ ನೋಡಿದರೆ ವಸ್ತುಗಳೆಲ್ಲವೂ ಎಲ್ಲೆಂದರಲ್ಲಿ ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದವು. ಸುಟ್ಟುಕೊಂಡು ಬಿದ್ದ ಸಿಗರೇಟುಗಳು ತುಂಡುಗಳು, ಕುಡಿದು ಬಿಟ್ಟ ಬಾಟಲಿ, ಪಾಕೀಟುಗಳು ಯಾವುದೋ ಕತೆ ಹೇಳಲೋ ಬೇಡವೋ ಎಂಬಂತೆ ಅಲ್ಲಲ್ಲಿ ಹರಡಿಕೊಂಡಿದ್ದವು.

ಅವನಿಗೆ ಎಲ್ಲವೂ ನಿಧಾನಕ್ಕೆ ಅರ್ಥವಾಗಲಾರಂಭಿಸಿತು. ಆದರೆ ಇದಕ್ಕೆಲ್ಲ ಕಾರಣವಾದ 'ಮನೆಯೊಡೆಯ'(ಆತ ಮನೆಯೊಡೆಯನೋ ಮನೆ- ಒಡೆಯನೋ ಎಂಬ ಶಂಕೆಯೂ ಮೂಡಿತು) ಎಲ್ಲಿದ್ದಾನೆ ಎಂಬ ಕುತೂಹಲದಿಂದ ದನಿ ಎತ್ತರಿಸಿ ಕೂಗಿದರೆ ಪಕ್ಕದಲ್ಲಿದ್ದ ಬಿಲ್ಡಿಂಗ್‌ನ ಓನರ್, "ಅಯ್ಯೋ ಅದು ಬ್ಯಾಚುಲರ್ ರೂಮಪ್ಪ. ಅದ್ ಯಾವ ಹೊತ್ತಲ್ಲಿ ಮನೇಲ್ ಇರ್ತಾನೋ, ಬಿಡ್ತಾನೋ ನಮಗೇ ಗೊತ್ತಾಗಲ್ಲ. ಇನ್ನು ನಿಮಗೆ...?" ಎಂದರು. ತನ್ನ ಪ್ರಯತ್ನ ಕೈ ಬಿಟ್ಟ ಸರ್ವೋತ್ತಮ, "ಮತ್ತೆ ಬಾಗಿಲು ತೆರೆದೇ ಇದೆಯಲ್ಲ?" ಎಂದು ಶರಣಾಗತ ದನಿಯಲ್ಲಿ ಪ್ರಶ್ನಿಸಿದ. "ಹ್ಞೂಂ.. ಆ ಮನೆಯನ್ನು ಆತ ಇಟ್ಟುಕೊಂಡಿರುವ (ದಯನೀಯ) ಸ್ಥಿತಿಯ ಬಗ್ಗೆ ಆತನಿಗೆ ಅದೆಷ್ಟು ವಿಶ್ವಾಸ ಇದೆಯಂದರೆ, ಯಾರೂ ಆ ಮನೆಯನ್ನು ಹೊಕ್ಕಲಾರರು ಎನ್ನುವುದು ಖಾತ್ರಿಯಿದೆ. ಅದಕ್ಕೇ ಬೀಗ ಹಾಕುವ ಅಗತ್ಯವೇ ಬೀಳಲ್ಲ" ಎಂದರು. ತೆರೆದಿದೆ ಮನೆ ಅಂದಾಕ್ಷಣ, 'ಓ ಬಾ ಅತಿಥಿ..' ಎಂಬುವುದೇ ಆಶಯವೆಂದು ಅಂದುಕೊಳ್ಳಬೇಕಿಲ್ಲ, ಹೀಗೂ ಇದ್ದೀತು ಎನ್ನುವುದು ಸರ್ವೋತ್ತಮಗೆ ಅರ್ಥವಾಗಿ, ಬಾಗಿಲು ಎಳೆದುಕೊಂಡು ಬಂದ.

ಇನ್ನೊಂದು ಮನೆಯ ಬಾಗಿಲು ಬಡಿದು, ಅರೆಕ್ಷಣ ಕಾದು, ಮತ್ತೊಮ್ಮೆ ಡೋರ್ ಬೆಲ್ ರಿಂಗಾಯಿಸಿದ ಮೇಲೆ ಆತ್ತಲಿಂದ ವ್ಯಗ್ರ ದನಿಯೊಂದು ಬಾಗಿಲನ್ನು ಸೀಳಿಕೊಂಡು ಬಂದಿತು, 'ಅರೇ ಕೌನ್ ಹೋ...'. ಹಿಂದಿ ಮಾತನಾಡುವುದರಲ್ಲಿ ತುಸು ಹಿಂದೆಯೇ ಇದ್ದ ಸರ್ವೋತ್ತಮ ಅದೇನೇನೋ ಸೇರಿಸಿ, ಪೇರಿಸಿ ಬಂದ ಕಾರಣದ ಪ್ರಲಾಪ ಬಿಚ್ಚಿಟ್ಟರೆ ಆತ್ತಲಿಂದ ಮತ್ತೊಂದು ಎಪಿಸೋಡ್ ಉಗ್ರಾವತಾರದ ಮಾತುಗಳು. ಕೊನೆಗೆ ಅದೇನೋ 'ಹಟೋ ಇದರ್ ಸೆ...' ಅಂದಿದ್ದು ಸರ್ವೋತ್ತಮಗೆ 'ಹಚಾ...' ಎಂದಂತೆ ಅನಿಸಿ ತುಸು ಬೆಚ್ಚಿ ಬಿದ್ದ. ಇನ್ನೂ ಮನೆಯೊಳಗಿನ ಅರಚಾಟ ಇತ್ತ ಎರಚಿ ಬಂದಂತೆ ಬರುತ್ತಲೇ ಇತ್ತು. ಇಂಥ ಖತರ್‌ನಾಕ್ ವರ್ತನೆ ನೋಡಿದ ಅಲ್ಲಲ್ಲ ಕೇಳಿದ ಸರ್ವೋತ್ತಮ ಸುಸ್ತು ಹೊಡೆದಂತೆ ಅಲ್ಲಿಂದ ಹೊರಟುಬಂದ. ಬರುವಾಗ ಆತನಿಗೆ ಅದು ಖತರ್ ನಾಕ್ ಅಲ್ಲ 'ಕದ'ರ್‌ನಾಕ್ ವರ್ತನೆಯೇ ಎಂದೆನಿಸಲಾರಂಭಿಸಿತು. ಒಂದು ಕದ ತೆಗೆಯಲಿಕ್ಕೊಪ್ಪದೇ ಅಂಥ ಬಲು ಭಯಂಕರ ವರ್ತನೆ ತೋರಿದ್ದಲ್ಲವೇ ಹಾಗಾಗಿ. ಬಾಗಿಲೊಳು ಕೈ ಮುಗಿಯುವುದಲ್ಲ, ಆ ಬಾಗಿಲ ಮುಂದೆ ನಿಂತು ಸರ್ವೋತ್ತಮ ಕೈ ಎತ್ತಿ ದೊಡ್ಡ ನಮಸ್ಕಾರ ಎಂದು ಕೈ ಮುಗಿದಿದ್ದರೂ ಅಚ್ಚರಿಯೇನಿಲ್ಲ ಬಿಡಿ. ಒಟ್ಟಾರೆಯಾಗಿ ತೆರೆಯುವ ಬಾಗಿಲು, ತೆರೆಯದ ಬಾಗಿಲು ಹೀಗೆ ಎಲ್ಲದರ ಹಿಂದೆಯೂ ಅದೆಷ್ಟೆಷ್ಟೋ ಕತೆಗಳೇ ಅಡಗಿರುತ್ತವೆ. ಆದರೆ ಅವು ಬರೀ ಕತೆಗಳಲ್ಲ, ಬದುಕು-ಬವಣೆಯ ವ್ಯಥೆಗಳೂ ಆಗಿರಬಹುದು!

ಓವರ್‌ಡೋಸ್: ಕೆಲವರು 'ಮೊಬೈಲ್ ಕಾಲ್'ನ್ನಷ್ಟೇ ಸೈಲೆಂಟ್ ಆಗಿರಿಸಲ್ಲ, ಮನೆಯ ಕಾಲಿಂಗ್ ಬೆಲ್‌ನ್ನೂ ಸೈಲೆಂಟ್ ಆಗಿರಿಸಿಕೊಂಡಿರುತ್ತಾರೆ!

ಮಧ್ಯಪ್ರಾಚ್ಯ ಸಂಘರ್ಷ ಹಿನ್ನೆಲೆ ಮೋದಿ ಕರೆ

ತೈಲ ಉತ್ಪನ್ನಗಳ ಬಳಕೆಗಿರಲಿ ಮಿತಿ



ಹೈದರಾಬಾದ್: ಪಶ್ಚಿಮ ಏಷ್ಯಾದಲ್ಲಿನ ಸಂಘರ್ಷದ ಹಿನ್ನೆಲೆಯಲ್ಲಿ ಪೆಟ್ರೋಲಿಯಂ ಉತ್ಪನ್ನ ಗಳನ್ನು ಮಿತವಾಗಿ ಬಳಸುವಂತೆ ಪ್ರಧಾನಿ ನರೇಂದ್ರ ಮೋದಿ ಭಾನುವಾರ ಕರೆ ನೀಡಿದ್ದಾರೆ.

ತೆಲಂಗಾಣದಲ್ಲಿ 9,400 ಕೋಟಿ ರೂ. ಮೌಲ್ಯದ ವಿವಿಧ ಅಭಿವೃದ್ಧಿ ಯೋಜನೆಗಳನ್ನು ಉದ್ಘಾಟಿಸಿ, ಹೈದರಾಬಾದ್ ಅಂತಾರಾಷ್ಟ್ರೀಯ ಸಮಾವೇಶ ಕೇಂದ್ರದಲ್ಲಿ ಮಾತನಾಡಿದರು. ವಿದೇಶಿ ವಿನಿಮಯವನ್ನು ಉಳಿಸಲು, ಜಾಗತಿಕ ಯುದ್ಧದ ಪರಿಣಾಮ ವನ್ನು ಕಡಿಮೆ ಮಾಡಲು ಆಮದು ಮಾಡಿಕೊಳ್ಳುವ ಪೆಟ್ರೋಲ್ ಮತ್ತು ಡೀಸೆಲ್ ಅನ್ನು ಅಗತ್ಯವಿದ್ದಾಗ ಮಾತ್ರ ಬಳಸಬೇಕು. ಭಾರತದ ಇಂಧನ ಭದ್ರತೆ ಗಾಗಿ ಸೌರಶಕ್ತಿ, ಎಥೆನಾಲ್ ಮಿಶ್ರಣ, ಎಲ್‌ಪಿಜಿ ವ್ಯಾಪ್ತಿ ಮತ್ತು ಸಿಎನ್‌ಜಿ ಬಳಕೆಗೆ ಹೆಚ್ಚಿನ ಒತ್ತು ನೀಡಲಾಗುತ್ತಿದೆ ಎಂದು ಪ್ರಧಾನಿ ತಿಳಿಸಿದರು.

ಮೂಲಸೌಕರ್ಯಕ್ಕೆ ಉತ್ತೇಜನ: ಪ್ರಧಾನ ಮಂತ್ರಿ, ಗುಡೆಬೆಲ್ಲೂರು ಮತ್ತು ಮಹಬೂಬ್‌ನಗರ ನಡುವಿನ ರಾಷ್ಟ್ರೀಯ ಹೆದ್ದಾರಿ–167ರ ಚತುಷ್ಪಥ ಕಾಮಗಾರಿ ಹಾಗೂ ಸಂಗಾರೆಡ್ಡಿ ಜಿಲ್ಲೆಯ ಜಹೀರಾ ಬಾದ್ ಕೈಗಾರಿಕಾ ಪ್ರದೇಶಕ್ಕೆ ವರ್ಚುವಲ್ ಮೂಲಕ ಶಂಕುಸ್ಥಾಪನೆ ಮಾಡಿದರು.

ಇದರೊಂದಿಗೆ ಕಾಜಿ ಪೇಟೆ–ವಿಜಯವಾಡ ರೈಲ್ವೆ ಮಲ್ಟಿ–ಟ್ರ್ಯಾಕಿಂಗ್ ಯೋಜನೆ, ಹೈದರಾ ಬಾದ್‌ನಲ್ಲಿ ಗ್ರೀನ್‌ಫೀಲ್ಡ್ ಪೆಟ್ರೋಲಿಯಂ ಟರ್ಮಿನಲ್, ವಾರಂಗಲ್‌ನಲ್ಲಿ ಪಿಎಂ ಮಿತ್ರ ಪಾರ್ಕ್ ಅನ್ನು ಅವರು ಉದ್ಘಾಟಿಸಿದರು.

ಕಳೆದ 11 ವರ್ಷಗಳಲ್ಲಿ ತೆಲಂಗಾಣದ ರಾಷ್ಟ್ರೀಯ ಹೆದ್ದಾರಿ ಜಾಲವು ದುಪ್ಪಟ್ಟಾಗಿದೆ. 2014ಕ್ಕೂ ಮೊದಲು ಅವಿಭಜಿತ ಆಂಧ್ರಪ್ರದೇಶಕ್ಕೆ ರೈಲ್ವೆ ಬಜೆಟ್ 1,000 ಕೋಟಿ ರೂ. ಗಿಂತ ಕಡಿಮೆ ಇತ್ತು. ಆದರೆ, ಇಂದು ತೆಲಂಗಾಣದ ರೈಲ್ವೆ ಬಜೆಟ್ 5,500 ಕೋಟಿ ರೂ.ಗಳಿಗೆ ಏರಿಕೆಯಾಗಿದೆ. ರಾಜ್ಯದಲ್ಲಿ ಸದ್ಯ 50,000 ಕೋಟಿ ರೂಪಾಯಿ ಮೌಲ್ಯದ ರೈಲ್ವೆ ಕಾಮಗಾರಿಗಳು ನಡೆಯುತ್ತಿವೆ ಎಂದು ಅವರು ವಿವರಿಸಿದರು. ಸಮಾರಂಭದಲ್ಲಿ ತೆಲಂಗಾಣ ರಾಜ್ಯಪಾಲ ಶಿವ ಪ್ರತಾಪ್ ಶುಕ್ಲ, ಮುಖ್ಯಮಂತ್ರಿ ಎ. ರೇವಂತ್ ರೆಡ್ಡಿ, ಕೇಂದ್ರ ಸಚಿವ ಜಿ.ಕಿಶನ್ ರೆಡ್ಡಿ ಮೊದಲಾದವರು ಭಾಗವಹಿಸಿದ್ದರು.

ಜನತೆಗೆ ಪ್ರಧಾನಿ ಮೋದಿ ಸಲಹೆ

- ದೇಶ ಹಿತದ ಸಂಕಲ್ಪಕ್ಕೆ ಆದ್ಯತೆ ನೀಡಿ
- ಎಲೆಕ್ಟ್ರಾನಿಕ್ ವಾಹನಗಳ ಬಳಕೆಗೆ ಒತ್ತು ಕೊಡಿ
- ಪೆಟ್ರೋಲ್-ಡೀಸೆಲ್ ಮಿತ ಬಳಕೆ ಮಾಡಿ
- ದೇಶದ ವಿದೇಶಿ ವಿನಿಮಯ ಉಳಿಸುವ ಸಂಕಲ್ಪ ಮಾಡಿ
- ಮೆಟ್ರೋ ಸೇವೆ, ಸಾರ್ವಜನಿಕ ಸಾರಿಗೆ, ಕಾರ್‌ಪೂಲಿಂಗ್, ವಿದ್ಯುತ್ ವಾಹನ ಬಳಕೆ ಮಾಡಿ
- ವರ್ಚುವಲ್ ಸಭೆ, ವಿಡಿಯೋ ಕಾನ್ಫರೆನ್ಸ್, ವರ್ಕ್ ಫ್ರಮ್ ಹೋಮ್ ಪದ್ಧತಿ ಅನುಸರಿಸಿ
- ವರ್ಷದ ಮಟ್ಟಿಗೆ ಚಿನ್ನ ಖರೀದಿ, ವಿದೇಶ ಪ್ರವಾಸಗಳನ್ನು ಮುಂದೂಡಿ
- ಖಾದ್ಯ ಎಣ್ಣೆ ಬಳಕೆ ಆದಷ್ಟು ಕಡಿಮೆ ಮಾಡಿ
- ರಾಸಾಯನಿಕ ಗೊಬ್ಬರಗಳ ಅವಲಂಬನೆ ತಗ್ಗಿಸಿ, ನೈಸರ್ಗಿಕ ಕೃಷಿಗೆ ಉತ್ತೇಜನ ನೀಡಿ
- ಕೃಷಿಗಾಗಿ ಸೌರಶಕ್ತಿ ಚಾಲಿತ ನೀರಾವರಿ ಪಂಪ್‌ಗಳನ್ನು ಅಳವಡಿಸಿಕೊಳ್ಳಿ
- ಸ್ವದೇಶಿ ಉತ್ಪನ್ನಗಳ ಬಳಕೆ ಹೆಚ್ಚಿಸಿ, ದೇಶವನ್ನು ಆತ್ಮನಿರ್ಭರವಾಗಿಸಲು ಸಹಕರಿಸಿ

ದೇಶದ ಮೊದಲ ‘ಪಿಎಂ ಮಿತ್ರ ಪಾರ್ಕ್’

ತೆಲಂಗಾಣದ ವಾರಂಗಲ್‌ನಲ್ಲಿ ಭಾರತದ ಮೊದಲ ಸಂಪೂರ್ಣ ಕಾರ್ಯಾಚರಣೆಯ ಪಿಎಂ ಮಿತ್ರ ಪಾರ್ಕ್ ಅನ್ನು ಪ್ರಧಾನಿ ಮೋದಿ ಉದ್ಘಾಟಿಸಿದರು. 1,327 ಎಕರೆ ಪ್ರದೇಶದಲ್ಲಿ 1,695.54 ಕೋಟಿ ರೂ. ವೆಚ್ಚದಲ್ಲಿ ಈ ಪಾರ್ಕ್ ಅಭಿವೃದ್ಧಿಪಡಿಸಲಾಗಿದೆ. ರೈತರಿಂದ ಕಾರ್ಖಾನೆಯವರೆಗೆ ಮತ್ತು ಫ್ಯಾಶನ್‌ನಿಂದ ವಿದೇಶದವರೆಗೆ ಜವಳಿ ಉದ್ಯಮವನ್ನು ಬೆಳೆಸುವ ಉದ್ದೇಶವನ್ನು ಇದು ಹೊಂದಿದೆ. ಈ ಯೋಜನೆಯಿಂದ ಸುಮಾರು 6,000 ಕೋಟಿ ರೂಪಾಯಿ ಹೂಡಿಕೆ ಹರಿದುಬರುವ ನಿರೀಕ್ಷೆಯಿದ್ದು, 24,400ಕ್ಕೂ ಹೆಚ್ಚು ಜನರಿಗೆ ಉದ್ಯೋಗಾವಕಾಶ ದೊರೆಯಲಿದೆ. ಇದೇ ಮಾದರಿಯ ಪಾರ್ಕ್‌ಗಳನ್ನು ಕರ್ನಾಟಕ ಸೇರಿದಂತೆ ದೇಶದ ಏಳು ರಾಜ್ಯಗಳಲ್ಲಿ ನಿರ್ಮಿಸಲು ಅನುಮೋದನೆ ನೀಡಲಾಗಿದೆ.



ತ.ನಾಡಿನ ಸಾಲದ ಪರಂಪರೆ, ವಿಜಯ್ ಜನಕಲ್ಯಾಣದ ಬರೆ

ಆರ್ಥಿಕ ಸಂಕಷ್ಟದ ಹಾದಿ...

ಸುದ್ದಿ ಸಮಗ್ರ

ಖ್ಯಾತ ನಟ ವಿಜಯ್ ತಮಿಳುನಾಡಿನ ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಳ್ಳುವ ಮೂಲಕ ರಾಜ್ಯ ರಾಜಕಾರಣದಲ್ಲಿ ಹೊಸ ಅಧ್ಯಾಯ ಆರಂಭಿಸಿದ್ದಾರೆ. ಆದರೆ, ಅಧಿಕಾರಕ್ಕೆ ಬರುತ್ತಿದ್ದಂತೆಯೇ ಅವರ ಮುಂದೆ ಬೃಹತ್ ಸವಾಲುಗಳು ಎದುರಾಗಿವೆ. ನಿರ್ಗಮಿತ ಡಿಎಂಕೆ ಸರ್ಕಾರ ಬಿಟ್ಟುಹೋಗಿರುವ ಭಾರಿ ಸಾಲದ ನಡುವೆಯೇ, ವಿಜಯ್ ಅವರು ತಮ್ಮ ಪ್ರಣಾಳಿಕೆಯಲ್ಲಿ ಘೋಷಿಸಿರುವ ಬೃಹತ್ ಜನಕಲ್ಯಾಣ ಯೋಜನೆಗಳನ್ನು ಜಾರಿಗೆ ತರಬೇಕಾದ ಅನಿವಾರ್ಯತೆ ಇದೆ. ಇದು ರಾಜ್ಯವನ್ನು ಆರ್ಥಿಕವಾಗಿ ಯಾವ ದಿಕ್ಕಿಗೆ ಕೊಂಡೊಯ್ಯಲಿದೆ ಎಂಬುದು ಈಗ ಚರ್ಚೆಯ ವಿಷಯವಾಗಿದೆ.

ಬೆಳೆಯದ ಆದಾಯ, ಹಣದುಬ್ಬರ ಅಧಿಕ

ತಮಿಳುನಾಡು ಕಳೆದ ವರ್ಷ ಶೇ.11.19 ರಷ್ಟು ಆರ್ಥಿಕ ಬೆಳವಣಿಗೆ ದಾಖಲಿಸಿದೆ. ಉತ್ಪಾದನಾ ವಲಯ ಶೇ. 14.74 ರಷ್ಟು ಅಭಿವೃದ್ಧಿ ಕಂಡಿದೆ. ಆದರೆ, ಈ ದೊಡ್ಡ ಅಂಕಿ–ಅಂಶಗಳ ಲಾಭ ಸಾಮಾನ್ಯ ಜನರ ಕೈಸೇರಿಲ್ಲ ಎಂಬುದು ಕಹಿ ಸತ್ಯ. ಆಹಾರ ಪದಾರ್ಥಗಳ ಬೆಲೆ ಏರಿಕೆ (ಹಣದುಬ್ಬರ) ಶೇ. 6–7 ರಷ್ಟಿದ್ದರೆ, ಅಸಂಘಟಿತ ವಲಯದ ಕಾರ್ಮಿಕರ ವೇತನ ಕೇವಲ ಶೇ.2–3ರಷ್ಟು ಮಾತ್ರ ಹೆಚ್ಚಾಗಿದೆ. ಇದರಿಂದಾಗಿ ಜನರ ಜೀವನಮಟ್ಟದಲ್ಲಿ ಸುಧಾರಣೆಯಾಗಿಲ್ಲ.

ಡಿಎಂಕೆ ಸರ್ಕಾರದ ಆರ್ಥಿಕ ಪರಂಪರೆ

ತಮಿಳುನಾಡು ಭಾರತದ ಪ್ರಬಲ ಕೈಗಾರಿಕಾ ಆರ್ಥಿಕತೆಗಳಲ್ಲಿ ಒಂದು. ಇಲ್ಲಿನ ಉತ್ಪಾದನಾ ವಲಯ, ಆಟೋಮೊಬೈಲ್ ಮತ್ತು ಎಲೆಕ್ಟ್ರಾನಿಕ್ಸ್ ಕ್ಷೇತ್ರಗಳು ದೇಶದಲ್ಲೇ ಮುಂಚೂಣಿಯಲ್ಲಿವೆ. ಇಷ್ಟೆಲ್ಲಾ ಸಾಧನೆಯ ನಡುವೆಯೂ, ಕಳೆದ ದಶಕಗಳಲ್ಲಿ ಅಧಿಕಾರ ನಡೆಸಿದ ಸರ್ಕಾರಗಳು ರಾಜ್ಯದ ಮೇಲೆ ಸಾಲದ ಹೊರೆ ಹೊರಿಸಿವೆ. 2026ರ ಚುನಾವಣೆಯವರೆಗೆ ಅಧಿಕಾರದಲ್ಲಿದ್ದ ಡಿಎಂಕೆ ಸರ್ಕಾರ, ಉಚಿತ ಕೊಡುಗೆಗಳ ರಾಜಕೀಯ ಸಂಸ್ಕೃತಿಯನ್ನು ಮುಂದುವರಿಸಿಕೊಂಡು ಬಂದಿತ್ತು. ಉಚಿತ ಟಿವಿ, ಮಿಕ್ಸರ್, ಲ್ಯಾಪ್‌ಟಾಪ್ ಮತ್ತು ನಗದು ಸಹಾಯದಂತಹ ಯೋಜನೆಗಳಿಂದಾಗಿ ರಾಜ್ಯದ ಸಾರ್ವಜನಿಕ ಹೊಣೆಗಾರಿಕೆಗಳು ಆತಂಕಕಾರಿ ಮಟ್ಟಕ್ಕೆ ತಲುಪಿವೆ. ಇಂದು ರಾಜ್ಯದ ಒಟ್ಟು ಆದಾಯದ ಬಹುಪಾಲು ಹಣ ಕೇವಲ ಬಡ್ಡಿ ಪಾವತಿಗೆ ವಿನಿಯೋಗವಾಗುತ್ತಿದೆ. ಮೂಲಸೌಕರ್ಯಾಭಿವೃದ್ಧಿಗೆ ಬಳಕೆಯಾಗಬೇಕಿದ್ದ ಹಣ, ಸಬ್ಸಿಡಿ, ಸಂಬಳ ಮತ್ತು ಪಿಂಚಣಿಗಳಂತಹ ಮರುಕಳಿಸುವ ವೆಚ್ಚಗಳಿಗೆ ಬಳಕೆಯಾಗುತ್ತಿರುವುದರ ಬಗ್ಗೆ ಆರ್ಥಿಕ ತಜ್ಞರು ಕಳವಳ ವ್ಯಕ್ತಪಡಿಸಿದ್ದಾರೆ. 2026ರ ಹಣಕಾಸು ವರ್ಷದಲ್ಲಿ ರಾಜ್ಯಗಳ ಮಾರುಕಟ್ಟೆ ಸಾಲದ ಪ್ರಮಾಣ ಶೇ.15.2 ರಷ್ಟು ಏರಿಕೆಯಾಗಿ 12.4 ಲಕ್ಷ ಕೋಟಿ ರೂಪಾಯಿಗಳಿಗೆ ತಲುಪಿದೆ. ತಮಿಳುನಾಡಿನ ಕಂದಾಯ ಕೊರತೆ 2027ರ ವೇಳೆಗೆ, ರಾಜ್ಯದ ಒಟ್ಟು ದೇಶೀಯ ಉತ್ಪನ್ನದ(ಜಿಎಸ್‌ಡಿಪಿ) ಶೇ. 1.2ಕ್ಕೆ ಏರಿಕೆಯಾಗುವ ಸಾಧ್ಯತೆಯಿದೆ.

ಟಿವಿಕೆ ಪ್ರಮುಖ ಭರವಸೆಗಳು

- ಕುಟುಂಬದ ಹಿರಿಯ ಮಹಿಳೆಗೆ ಮಾಸಿಕ 2,500 ರೂ. ಭತ್ಯೆ
- ವರ್ಷಕ್ಕೆ 6 ಉಚಿತ ಎಲ್‌ಪಿಜಿ ಸಿಲಿಂಡರ್, 200 ಯೂನಿಟ್ ಉಚಿತ ವಿದ್ಯುತ್
- ಪದವೀಧರರಿಗೆ ನಿರುದ್ಯೋಗ ಭತ್ಯೆ, ಮತ್ತು ಯುವ ಉದ್ಯಮಿಗಳಿಗೆ 25 ಲಕ್ಷ ರೂ.ವರೆಗೆ ಸಾಲ
- ರೈತರ ಬೆಳೆ ಸಾಲ ಮನ್ನಾ, ವಿದ್ಯಾರ್ಥಿಗಳಿಗೆ ಶ್ಯೂರಿಟಿ ರಹಿತ ಶಿಕ್ಷಣ ಸಾಲ
- ವಧುವಿಗೆ 8 ಗ್ರಾಂ ಚಿನ್ನ ಮತ್ತು ಬಟ್ಟೆ ನೀಡುವ ವಿವಾಹ ಸಹಾಯ ಯೋಜನೆ





ಟಿವಿಕೆ ಜನಕಲ್ಯಾಣ ಪ್ರಣಾಳಿಕೆ

ಈ ಆರ್ಥಿಕ ಬಿಕ್ಕಟ್ಟಿನ ನಡುವೆ, ಮುಖ್ಯಮಂತ್ರಿ ವಿಜಯ್ ಅವರ ತಮಿಳಗ ವೆಟ್ರಿ ಕಳಗಂ(ಟಿವಿಕೆ) ಪಕ್ಷ ಘೋಷಿಸಿರುವ ಯೋಜನೆಗಳು ಜನಸಾಮಾನ್ಯರ ಗಮನ ಸೆಳೆದಿವೆ. ಮಹಿಳಾ ಸಬಲೀಕರಣದ ಭಾಗವಾಗಿ ಸರ್ಕಾರ ಕುಟುಂಬದ ಹಿರಿಯ ಮಹಿಳೆಗೆ ಮಾಸಿಕ 2,500 ರೂ. ಗೌರವ ಧನ. ವರ್ಷಕ್ಕೆ ಆರು ಉಚಿತ ಎಲ್‌ಪಿಜಿ ಸಿಲಿಂಡರ್ ಮತ್ತು ಉಚಿತ ಬಸ್ ಪ್ರಯಾಣದ ಭರವಸೆಯೂ ಪಟ್ಟಿಯಲ್ಲಿದೆ. ಪದವೀಧರರಿಗೆ ಮತ್ತು ಡಿಪ್ಲೊಮಾದಾರರಿಗೆ ನಿರುದ್ಯೋಗ ಭತ್ಯೆ, ಶ್ಯೂರಿಟಿರಹಿತ ಶಿಕ್ಷಣ ಸಾಲ ಹಾಗೂ ಯುವ ಉದ್ಯಮಿಗಳಿಗೆ 25 ಲಕ್ಷ ರೂ.ಗಳವರೆಗೆ ಸಾಲ ಸೌಲಭ್ಯದ ಆಶ್ವಾಸನೆ ನೀಡಲಾಗಿದೆ. ವಧುವಿಗೆ ಚಿನ್ನ ಮತ್ತು ಬಟ್ಟೆ ಸಹಾಯ, ಬೆಳೆ ಸಾಲ ಮನ್ನಾ ಮತ್ತು 200 ಯೂನಿಟ್ ಉಚಿತ ವಿದ್ಯುತ್ ನೀಡುವುದಾಗಿ ವಿಜಯ್ ಭರವಸೆ ನೀಡಿದ್ದಾರೆ. ಕೇವಲ ಮಹಿಳೆಯರಿಗೆ ನೀಡುವ ಮಾಸಿಕ ಭತ್ಯೆ ಯೋಜನೆಯೊಂದಕ್ಕೇ ವರ್ಷಕ್ಕೆ ಹತ್ತಾರು ಸಾವಿರ ಕೋಟಿ ರೂಪಾಯಿಗಳ ವೆಚ್ಚವಾಗಲಿದೆ. ಇದು ಸರ್ಕಾರದ ಬೊಕ್ಕಸಕ್ಕೆ ಶಾಶ್ವತ ಹೊರೆಯಾಗುವ ಸಾಧ್ಯತೆಯಿದೆ.

ನಿರ್ಣಾಯಕ ಹಂತದಲ್ಲಿ ತಮಿಳುನಾಡು

ಕ್ರಿಸಿಲ್ ವರದಿಯ ಪ್ರಕಾರ, ಗ್ರಾಮೀಣ ಭಾಗದ ಬಡ ಕುಟುಂಬಗಳಿಗೆ ಮಾಸಿಕ 1,500 ರೂ. ನಗದು ವರ್ಗಾವಣೆ ಅವರ ಶೇ.74 ರಷ್ಟು ವೆಚ್ಚವನ್ನು ಸರಿದೂಗಿಸುತ್ತದೆ. ಇದೇ ಕಾರಣಕ್ಕೆ ಇಂತಹ ಯೋಜನೆಗಳಿಗೆ ರಾಜಕೀಯವಾಗಿ ಹೆಚ್ಚಿನ ಮನ್ನಣೆ ಸಿಗುತ್ತದೆ. ತಮಿಳುನಾಡು ಇಂದು ಆರ್ಥಿಕ ಶಿಸ್ತು ಮತ್ತು ಜನಪ್ರಿಯ ಯೋಜನೆಗಳ ನಡುವಿನ ಸಂಕಷ್ಟದ ಹಾದಿಯಲ್ಲಿದೆ. ಹೊಸ ಸರ್ಕಾರ ತನ್ನ ಭರವಸೆಗಳನ್ನು ಈಡೇರಿಸುತ್ತಲೇ ಆರ್ಥಿಕ ಅಭಿವೃದ್ಧಿಯನ್ನು ಹೇಗೆ ಕಾಯ್ದುಕೊಳ್ಳಲಿದೆ, ಎಂಬುದರ ಮೇಲೆ ರಾಜ್ಯದ ಭವಿಷ್ಯ ಅಡಗಿದೆ.

ಹೂಡಿಕೆ, ಅಭಿವೃದ್ಧಿ ಮೇಲಿನ ಪರಿಣಾಮ

ಜನಕಲ್ಯಾಣ ವೆಚ್ಚಗಳು ಹೆಚ್ಚಾದಂತೆಲ್ಲಾ ರಾಜ್ಯದ ಅಭಿವೃದ್ಧಿ ಕಾರ್ಯಗಳಿಗೆ ಮೀಸಲಿಡುವ ಬಂಡವಾಳ ವೆಚ್ಚ ಕುಂಠಿತವಾಗುತ್ತದೆ ಎಂದು ಆರ್ಥಿಕ ತಜ್ಞರು ಎಚ್ಚರಿಸಿದ್ದಾರೆ. ಕೇರ್ ಎಡ್ಜ್ ರೇಟಿಂಗ್ಸ್ ಪ್ರಕಾರ, ಮುಂದಿನ ವರ್ಷಗಳಲ್ಲಿ ಅಭಿವೃದ್ಧಿ ಕೆಲಸಗಳ ವೇಗ ಶೇ. 8–10ಕ್ಕೆ ಕುಸಿಯಬಹುದು. ಉಚಿತ ವಿದ್ಯುತ್ ಮತ್ತು ಸಾಲ ಮನ್ನಾದಂತಹ ಯೋಜನೆಗಳು ಬ್ಯಾಂಕಿಂಗ್ ಮತ್ತು ವಿದ್ಯುತ್ ನಿಗಮಗಳ ಮೇಲೆ ಒತ್ತಡ ಹೇರುವ ಸಾಧ್ಯತೆಗಳಿವೆ.

ಕಿರುಸುದ್ದಿ

ಪಶ್ಚಿಮ ನೌಕಾ ಕಮಾಂಡ್ ಮುಖ್ಯಸ್ಥ ವಾತ್ಸಾಯನ್



ಹೊಸದಿಲ್ಲಿ: ವೈಸ್ ಅಡ್ಮಿರಲ್ ಸಂಜಯ್ ವಾತ್ಸಾಯನ್ ಅವರನ್ನು ಪಶ್ಚಿಮ ನೌಕಾ ಕಮಾಂಡ್‌ನ ಮುಖ್ಯಸ್ಥರನ್ನಾಗಿ ನೇಮಿಸಲಾಗಿದೆ. ಪ್ರಸ್ತುತ ನೌಕಾ ಸಿಬ್ಬಂದಿಯ ಉಪ ಮುಖ್ಯಸ್ಥರಾಗಿ ಸೇವೆ ಸಲ್ಲಿಸುತ್ತಿರುವ ವಾತ್ಸಾಯನ್, ಕಾರ್ಯಾಚರಣೆಯ ನಿರ್ಣಾಯಕ ಕಮಾಂಡ್‌ನಲ್ಲಿ ವೈಸ್ ಅಡ್ಮಿರಲ್ ಕೃಷ್ಣ ಸ್ವಾಮಿನಾಥನ್ ಅವರ ಉತ್ತರಾಧಿಕಾರಿಯಾಗಲಿದ್ದಾರೆ. ಸ್ವಾಮಿನಾಥನ್ ಅವರನ್ನು ಮುಂದಿನ ನೌಕಾಪಡೆಯ ಮುಖ್ಯಸ್ಥರನ್ನಾಗಿ ಶನಿವಾರ ನೇಮಿಸಲಾಗಿದೆ. ಪ್ರಸ್ತುತ ನೌಕಾಪಡೆಯ ಮುಖ್ಯಸ್ಥ ಅಡ್ಮಿರಲ್ ದಿನೇಶ್ ಕುಮಾರ್ ತ್ರಿಪಾಠಿ ಅವರು ಮೇ 31ರಂದು ಸೇವೆಯಿಂದ ನಿವೃತ್ತರಾಗುವುದರಿಂದ ಅವರು ಉನ್ನತ ಹುದ್ದೆಯ ಉಸ್ತುವಾರಿಯನ್ನು ವಹಿಸಿಕೊಳ್ಳಲಿದ್ದಾರೆ.

ದಿತ್ವಾ: ಲಂಕೆಗೆ ಭಾರತದ ನೆರವು ಕಾರ್ಯ ಚುರುಕು

ಹೊಸದಿಲ್ಲಿ: ಶ್ರೀಲಂಕಾದಲ್ಲಿ ಸಂಭವಿಸಿದ ಅತ್ಯಂತ ಭೀಕರ ನೈಸರ್ಗಿಕ ವಿಕೋಪ ದಿತ್ವಾ ಚಂಡಮಾರುತ ಬಳಿಕ ಭಾರತ ನೀಡಿದ 450 ಮಿಲಿಯನ್ ಡಾಲರ್ ಮೌಲ್ಯದ ಪುನರ್‌ನಿರ್ಮಾಣ ಪ್ಯಾಕೇಜ್ ಅನುಷ್ಠಾನ ತ್ವರಿತಗೊಳಿಸಲು ಭಾರತ ಮತ್ತು ಶ್ರೀಲಂಕಾ ಭಾನುವಾರ ಒಪ್ಪಿಕೊಂಡಿವೆ. ಕೊಲಂಬೊದಲ್ಲಿರುವ ಭಾರತೀಯ ಹೈಕಮಿಷನರ್ ಸಂತೋಷ್ ಜಾ ಅವರು ಶ್ರೀಲಂಕಾದ ಕಾರ್ಮಿಕ ಸಚಿವ ಮತ್ತು ಹಣಕಾಸು ಮತ್ತು ಯೋಜನಾ ಉಪ ಸಚಿವ ಅನಿಲ್ ಜಯಂತ ಫರ್ನಾಂಡೊ ಅವರ ಭೇಟಿಯಲ್ಲಿ ಈ ಬಗ್ಗೆ ಚರ್ಚಿಸಲಾಯಿತು. ದಿತ್ವಾ ನಂತರದ 450 ಮಿಲಿಯನ್ ಡಾಲರ್ ಪುನರ್‌ನಿರ್ಮಾಣ ಪ್ಯಾಕೇಜ್ ಅನುಷ್ಠಾನವನ್ನು ತ್ವರಿತಗೊಳಿಸಲು ಒಪ್ಪಿಕೊಂಡಿದ್ದೇನೆ ಎಂದು ಜಾ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದಾರೆ.

ಪಾಕ್‌ನಲ್ಲಿ ಉಗ್ರರ ದಾಳಿ; 21 ಭದ್ರತಾ ಸಿಬ್ಬಂದಿ ಬಲಿ

ಇಸ್ಲಾಮಾಬಾದ್: ಪಾಕಿಸ್ತಾನದ ಖೈಬರ್ ಪಖ್ತುನ್ಖ್ವಾ ಪ್ರಾಂತ್ಯದ ಪೊಲೀಸ್ ಠಾಣೆಯೊಂದರ ಮೇಲೆ ನಡೆದ ಆತ್ಮಾಹುತಿ ಬಾಂಬ್ ದಾಳಿಯಲ್ಲಿ ಕನಿಷ್ಠ 21 ಭದ್ರತಾ ಸಿಬ್ಬಂದಿ ಮೃತಪಟ್ಟಿದ್ದು, ಹಲವರು ಗಾಯಗೊಂಡಿದ್ದಾರೆ. ವಾಯುವ್ಯ ಪಾಕಿಸ್ತಾನದ ಬನ್ನು ಜಿಲ್ಲೆಯಲ್ಲಿ ಶನಿವಾರ ಈ ಘಟನೆ ನಡೆದಿದೆ. ಅಲ್ಲಿ ಪೊಲೀಸ್ ಠಾಣೆಯನ್ನು ಸಮೀಪಿಸುತ್ತಿದ್ದ ಸ್ಫೋಟಕ ತುಂಬಿದ ವಾಹನದ ಮೇಲೆ ಭದ್ರತಾ ಸಿಬ್ಬಂದಿ ಗುಂಡು ಹಾರಿಸಿದ್ದಾರೆ. ಇದರಿಂದ ಸ್ಫೋಟಗೊಂಡಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಇರಾನ್‌ಗೆ ರಷ್ಯಾದಿಂದ ಅತ್ಯಾಧುನಿಕ ಡ್ರೋನ್!

ಮಾಸ್ಕೋ: ಮಧ್ಯಪ್ರಾಚ್ಯದಲ್ಲಿರುವ ಅಮೆರಿಕ ಪಡೆಗಳನ್ನು ಗುರಿಯಾಗಿಸಲು ಇರಾನ್‌ಗೆ 5,000 ಜ್ಯಾಮ್ ಮಾಡಲಾಗದ ಫೈಬರ್ ಆಪ್ಟಿಕ್ ಡ್ರೋನ್‌ಗಳು ಮತ್ತು ದೀರ್ಘ ವ್ಯಾಪ್ತಿಯ ಉಪಗ್ರಹ ಆಧಾರಿತ ಡ್ರೋನ್‌ಗಳನ್ನು ಪೂರೈಸುವ ರಹಸ್ಯ ಯೋಜನೆಯನ್ನು ರಷ್ಯಾ ಸಿದ್ಧಪಡಿಸಿದೆ ಎಂದು ಗೌಪ್ಯ ದಾಖಲೆಗಳು ಬಹಿರಂಗಪಡಿಸಿವೆ.

ರಷ್ಯಾದ ಮಿಲಿಟರಿ ಗುಪ್ತಚರ ಸಂಸ್ಥೆ ಜಿಆರ್‌ಯು ಸಿದ್ಧಪಡಿಸಿರುವ 10 ಪುಟಗಳ ಈ ಪ್ರಸ್ತಾವನೆ, ಇರಾನಿನ ವೃತ್ತಿಪರರಿಗೆ ಈ ಅತ್ಯಾಧುನಿಕ ಶಸ್ತ್ರಾಸ್ತ್ರಗಳನ್ನು ಬಳಸಲು ತರಬೇತಿ ನೀಡುವುದನ್ನು ಒಳಗೊಂಡಿದೆ. ರೇಡಿಯೋ ಸಿಗ್ನಲ್‌ಗಳ ಬದಲಿಗೆ ತೆಳುವಾದ ವೈರ್‌ಗಳ ಮೂಲಕ ನಿಯಂತ್ರಿಸಲ್ಪಡುವ ಈ ಫೈಬರ್ ಆಪ್ಟಿಕ್ ಡ್ರೋನ್‌ಗಳನ್ನು ಶತ್ರುಪಡೆಗಳು ಪತ್ತೆಹಚ್ಚಲು ಸಾಧ್ಯವಿಲ್ಲ. ಇವು 40 ಕಿಮೀಗಿಂತಲೂ ಹೆಚ್ಚಿನ ದೂರದ ಗುರಿಗಳ ಮೇಲೆ ನಿಖರ ದಾಳಿ ನಡೆಸುವ ಸಾಮರ್ಥ್ಯ ಹೊಂದಿವೆ. ಅಲ್ಲದೆ, ಸ್ಟಾರ್‌ಲಿಂಕ್ ಟರ್ಮಿನಲ್‌ಗಳನ್ನು ಹೊಂದಿರುವ ಉಪಗ್ರಹ ಮಾರ್ಗದರ್ಶಿ ಡ್ರೋನ್ ಪೂರೈಸುವ ಯೋಜನೆಯೂ ಇದರಲ್ಲಿ ಸೇರಿದೆ.

ಇರಾನ್‌ನ ತೈಲ ಕೇಂದ್ರ ಖಾರ್ಗ್ ದ್ವೀಪದ ಮೇಲೆ ದಾಳಿಯ ಭೀತಿ ಇದ್ದ ಯುದ್ಧದ ಆರಂಭಿಕ ಹಂತದಲ್ಲಿ ಈ ಯೋಜನೆ ರೂಪಿಸಲಾಗಿದೆ ಎಂದು ವಿಶ್ಲೇಷಿಸಲಾಗುತ್ತಿದೆ. ರಷ್ಯಾದ ವಿಶ್ವವಿದ್ಯಾಲಯಗಳಲ್ಲಿ ಕಲಿಯುತ್ತಿರುವ 10,000 ಇರಾನ್ ವಿದ್ಯಾರ್ಥಿಗಳು ಹಾಗೂ ತಾಜಿಕ್ ಸಮುದಾಯದವರನ್ನು ಈ ಡ್ರೋನ್ ನಿರ್ವಾಹಕರನ್ನಾಗಿ ನೇಮಿಸಿಕೊಳ್ಳುವ ಕುರಿತು ಮಾಸ್ಕೋ ಪ್ರಸ್ತಾಪಿಸಿದೆ. ಲೆಬನಾನ್‌ನ ಹಿಜ್ಬುಲ್ಲಾ ಪಡೆಗಳಲ್ಲಿ ಇಂತಹ ಡ್ರೋನ್‌ಗಳು ಈಗಾಗಲೇ ಕಂಡುಬಂದಿದ್ದರೂ, ರಷ್ಯಾ ಅಧಿಕೃತವಾಗಿ ಇವುಗಳನ್ನು ಇರಾನ್‌ಗೆ ಕಳುಹಿಸಿದೆಯೇ ಎಂಬುದು ಇನ್ನೂ ದೃಢಪಟ್ಟಿಲ್ಲ.

ಚಂದ್ರಬಾಬು, ಪವನ್ ಮನೆಗೆ ಮೋದಿ ಭೇಟಿ

ಅಮರಾವತಿ: ಪ್ರಧಾನಿ ನರೇಂದ್ರ ಮೋದಿ ಅವರ ಆಂಧ್ರ ಪ್ರದೇಶ ಭೇಟಿ ರಾಜಕೀಯ ವಲಯದಲ್ಲಿ ಹೊಸ ಚರ್ಚೆಗೆ ಕಾರಣವಾಗಿದೆ. ಪ್ರಧಾನಿ ಮೋದಿ ಭಾನುವಾರ ಆಂಧ್ರಪ್ರದೇಶ ಮುಖ್ಯಮಂತ್ರಿ ಎನ್. ಚಂದ್ರಬಾಬು ನಾಯ್ಡು ಹಾಗೂ ಡಿಸಿಎಂ ಪವನ್ ಕಲ್ಯಾಣ್ ಅವರ ನಿವಾಸಗಳಿಗೆ ಭೇಟಿ ನೀಡಿ ಮಹತ್ವದ ಮಾತುಕತೆ ನಡೆಸಿದ್ದಾರೆ.



ಈ ಭೇಟಿ ರಾಜ್ಯದಲ್ಲಿನ ಬಿಜೆಪಿ–ಟಿಡಿಪಿ–ಜನಸೇನಾ ಮೈತ್ರಿಗೆ ಮತ್ತಷ್ಟು ಬಲ ತುಂಬುವ ಹೆಜ್ಜೆಯಾಗಿ ಪರಿಗಣಿಸಲಾಗುತ್ತಿದೆ. ಮೊದಲಿಗೆ ಚಂದ್ರಬಾಬು ನಾಯ್ಡು ನಿವಾಸಕ್ಕೆ ತೆರಳಿದ ಪ್ರಧಾನಿ ನರೇಂದ್ರ ಮೋದಿ, ರಾಜ್ಯದ ಅಭಿವೃದ್ಧಿ, ಕೈಗಾರಿಕಾ ಹೂಡಿಕೆ, ಮೂಲ ಸೌಕರ್ಯ ವಿಸ್ತರಣೆ ಮತ್ತು ಕಲ್ಯಾಣ ಯೋಜನೆಗಳ ಕುರಿತು ಚರ್ಚೆ ನಡೆಸಿದರು ಎನ್ನಲಾಗಿದೆ.

ಅಮರಾವತಿ ಅಭಿವೃದ್ಧಿ, ಬಂದರುಗಳು, ಹೆದ್ದಾರಿಗಳು ಹಾಗೂ ರೈಲು ಸಂಪರ್ಕ ವಿಸ್ತರಣೆ ವಿಷಯಗಳೂ ಸಭೆಯಲ್ಲಿ ಪ್ರಸ್ತಾಪವಾಗಿವೆ ಎಂದು ತಿಳಿದುಬಂದಿದೆ. ನಂತರ ಪವನ್ ಕಲ್ಯಾಣ್ ನಿವಾಸಕ್ಕೆ ಭೇಟಿ ನೀಡಿದ ಮೋದಿ, ಯುವಜನರ ಸಬಲೀಕರಣ, ಉದ್ಯೋಗ ಸೃಷ್ಟಿ ಮತ್ತು ಗ್ರಾಮೀಣ ಆಡಳಿತ ಬಲಪಡಿಸುವ ವಿಚಾರಗಳ ಕುರಿತು ಮಾತುಕತೆ ನಡೆಸಿದರು ಎಂದು ಮೂಲಗಳು ಹೇಳಿವೆ.

ಕೊಲ್ಲಿ ರಾಷ್ಟ್ರದಲ್ಲಿ ಡ್ರೋನ್ ದಾಳಿಗಳ ಆತಂಕ ಹೆಚ್ಚಳ

ಟೆಹ್ರಾನ್: ಇರಾನ್ ಮತ್ತು ಅಮೆರಿಕ ನಡುವಿನ ಕದನ ವಿರಾಮ ಮಾತುಕತೆ ಮಧ್ಯೆ ಪರ್ಷಿಯನ್ ಕೊಲ್ಲಿಯ ರಾಷ್ಟ್ರಗಳಲ್ಲಿ ಡ್ರೋನ್ ದಾಳಿಗಳ ಆತಂಕ ಹೆಚ್ಚಾಗಿದೆ. ಅಮೆರಿಕ ನೀಡಿದ್ದ ಹೊಸ ಯುದ್ಧ ವಿರಾಮ ಪ್ರಸ್ತಾವನೆಗೆ ಇರಾನ್ ತನ್ನ ಪ್ರತಿಕ್ರಿಯೆಯನ್ನು ಪಾಕಿಸ್ತಾನದ ಮಧ್ಯವರ್ತಿಯ ಮೂಲಕ ಕಳುಹಿಸಿದೆ ಎಂದು ಇರಾನ್ ಸರ್ಕಾರಿ ಮಾಧ್ಯಮಗಳು ತಿಳಿಸಿವೆ. ಈ ವಿಚಾರವನ್ನು ಪಾಕಿಸ್ತಾನ ಕೂಡ ದೃಢಪಡಿಸಿದೆ.

ಯುದ್ಧವನ್ನು ಶಾಶ್ವತವಾಗಿ ಅಂತ್ಯಗೊಳಿಸುವುದರ ಜತೆಗೆ ಲೆಬನಾನ್‌ನಲ್ಲಿರುವ ಹೆಜ್ಬೊಲ್ಲಾ ಸಂಘರ್ಷವನ್ನೂ ಕೊನೆಗೊಳಿಸಬೇಕು ಹಾಗೂ ಸಮುದ್ರ ವ್ಯಾಪಾರ ಮಾರ್ಗಗಳ ಭದ್ರತೆ ಖಚಿತಪಡಿಸಬೇಕು ಎಂದು ಇರಾನ್ ಒತ್ತಾಯಿಸಿದೆ. ಆದರೆ ಅಮೆರಿಕ, ಹಾರ್ಮುಜ್ ಜಲಸಂಧಿ ತೆರೆಯುವುದು ಮತ್ತು ಇರಾನ್ ಅಣು ಕಾರ್ಯಕ್ರಮ ಹಿಂಪಡೆಯುವ ವಿಷಯಕ್ಕೂ ಆದ್ಯತೆ ನೀಡುತ್ತಿದೆ.

ಇದೇ ವೇಳೆ ಕತಾರ್ ಸಮೀಪ ಸಾಗುತ್ತಿದ್ದ ಹಡಗಿಗೆ ಡ್ರೋನ್ ದಾಳಿ ನಡೆದಿದ್ದು, ಸಣ್ಣ ಮಟ್ಟದ ಬೆಂಕಿ ಕಾಣಿಸಿಕೊಂಡಿದೆ. ಯುಎಇ ಮತ್ತು ಕುವೈತ್ ವಾಯುಪ್ರದೇಶದಲ್ಲೂ ಅನುಮಾನಾಸ್ಪದ ಡ್ರೋನ್‌ಗಳು ಪತ್ತೆಯಾಗಿವೆ. ಯುಎಇ ಈ ದಾಳಿಗಳಿಗೆ ಇರಾನ್ ಹೊಣೆ ಎಂದು ಆರೋಪಿಸಿದೆ. ಅಮೆರಿಕ ಮತ್ತು ಇಸ್ರೇಲ್ ದಾಳಿಗಳ ನಂತರ ಫೆ.28ರಿಂದ ಆರಂಭವಾದ ಯುದ್ಧದ ಬಳಿಕ ಇರಾನ್ ಹಾರ್ಮುಜ್ ಜಲಸಂಧಿಯಲ್ಲಿ ನಿರ್ಬಂಧ ಹೇರಿದ್ದು, ಜಾಗತಿಕ ತೈಲ ಮತ್ತು ಅನಿಲ ಸರಬರಾಜಿನ ಮೇಲೆ ಪರಿಣಾಮ ಬೀರಿದೆ. ಅಮೆರಿಕ ಕೂಡ ಇರಾನ್ ಬಂದರುಗಳ ಮೇಲೆ ನಿರ್ಬಂಧ ಹೇರಿದ್ದು, ಎರಡು ತೈಲ ಟ್ಯಾಂಕರ್‌ಗಳ ಮೇಲೆ ದಾಳಿ ನಡೆಸಿದೆ.

ಯೋಗಿ ಸಚಿವ ಸಂಪುಟ ವಿಸ್ತರಣೆ

ಲಖನೌ: ಉತ್ತರ ಪ್ರದೇಶದ ಮುಂದಿನ ವರ್ಷದ ಆರಂಭದಲ್ಲಿ ನಿಗದಿಯಾಗಿರುವ ವಿಧಾನಸಭಾ ಚುನಾವಣೆಗೆ ಮುಂಚಿತವಾಗಿ ಯೋಗಿ ಆದಿತ್ಯನಾಥ್ ಅವರು ತಮ್ಮ ಸಚಿವ ಸಂಪುಟ ವಿಸ್ತರಣೆ ಮಾಡಿದ್ದಾರೆ. ಇಬ್ಬರು ಸಂಪುಟ ಸಚಿವರು ಮತ್ತು ನಾಲ್ವರು ರಾಜ್ಯ ಸಚಿವರನ್ನು ಉತ್ತರ ಪ್ರದೇಶ ಸರ್ಕಾರಕ್ಕೆ ಸೇರ್ಪಡೆ ಮಾಡಕೊಳ್ಳಲಾಗಿದೆ. ಇಬ್ಬರು ರಾಜ್ಯ ಸಚಿವರನ್ನು ಭಾನುವಾರ ಸ್ವತಂತ್ರ ಉಸ್ತುವಾರಿಗೆ ಬಡ್ತಿ ನೀಡಲಾಗಿದೆ. ಜನ ಭವನದಲ್ಲಿ ನಡೆದ ಪ್ರಮಾಣ ವಚನ ಸಮಾರಂಭದಲ್ಲಿ ಬಿಜೆಪಿ ಮಾಜಿ ರಾಜ್ಯಾಧ್ಯಕ್ಷ ಭೂಪೇಂದ್ರ ಚೌಧರಿ ಮತ್ತು ಮನೋಜ್ ಪಾಂಡೆ ಅವರನ್ನು ಸಂಪುಟ ಸಚಿವರನ್ನಾಗಿ ನೇಮಿಸಲಾಯಿತು. ರಾಜ್ಯ ಸಚಿವರಾದ ಅಜಿತ್ ಪಾಲ್ ಸಿಂಗ್ ಮತ್ತು ಸೋಮೇಂದ್ರ ತೋಮರ್ ಅವರಿಗೆ ಸ್ವತಂತ್ರ ಉಸ್ತುವಾರಿಯೊಂದಿಗೆ ರಾಜ್ಯ ಸಚಿವರ ಹುದ್ದೆಗೆ ಬಡ್ತಿ ನೀಡಲಾಯಿತು. ರಾಜ್ಯದ ನಾಲ್ವರು ಹೊಸ ಸಚಿವರಾದ ಕೃಷ್ಣ ಪಾಸ್ವಾನ್, ಸುರೇಂದ್ರ ದಿಲರ್, ಹಂಸರಾಜ್ ವಿಶ್ವಕರ್ಮ ಮತ್ತು ಕೈಲಾಶ್ ರಜಪೂತ್ ಪ್ರಮಾಣ ವಚನ ಸ್ವೀಕರಿಸಿದರು.

ಕೇರಳ ಯುಡಿಎಫ್ ಮುಖ್ಯಮಂತ್ರಿ ಆಯ್ಕೆ ಕಸರತ್ತು: ಮುಂದುವರಿದ ಅನಿಶ್ಚಿತತೆ

ಕೈ ಕಮಾಂಡ್ ಒಲವು ವೇಣುಗೋಪಾಲ್ ಕಡೆ?



ಹೊಸದಿಲ್ಲಿ: ತಮಿಳುನಾಡಿನಲ್ಲಿ ರಾಜಕೀಯ ಹೈಡ್ರಾಮಾ ಕೊನೆಗೊಂಡು ಟಿವಿಕೆ ಮುಖ್ಯಸ್ಥ ನಟ–ರಾಜಕಾರಣಿ ವಿಜಯ್ ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿ ಕೊಂಡಿದ್ದಾರೆ. ಆದರೆ ಕೇರಳದಲ್ಲಿ ಕಾಂಗ್ರೆಸ್ ನೇತೃತ್ವದ ಯುಡಿಎಫ್ 102 ಸ್ಥಾನಗಳ ಭರ್ಜರಿ ಗೆಲುವು ಸಾಧಿಸಿದ ಹೊರತಾಗಿಯೂ ಮುಖ್ಯಮಂತ್ರಿ ಆಯ್ಕೆಯನ್ನು ಅಂತಿಮಗೊಳಿಸಲು ಇನ್ನೂ ಸಾಧ್ಯವಾಗದಿರುವುದು ಕಾಂಗ್ರೆಸ್ ನಾಯಕತ್ವಕ್ಕೆ ಇರಿಸುಮುರಿಸುಂಟು ಮಾಡಿದೆ.

ಶನಿವಾರ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ನಿವಾಸದಲ್ಲಿ 3 ಗಂಟೆಗಳ ಕಾಲ ನಡೆದ ಬಿರುಸಿನ ಚರ್ಚೆಗಳ ಹೊರತಾಗಿಯೂ ಅಂತಿಮ ಘೋಷಣೆ ಹೊರಡಿಸಲು ಸಾಧ್ಯವಾಗಿಲ್ಲ. ಇದೀಗ ರಾಹುಲ್ ಗಾಂಧಿ ಅವರು ಕಾಂಗ್ರೆಸ್ ಮಿತ್ರಪಕ್ಷ ಮುಸ್ಲಿಂಲೀಗ್ ಜತೆ ಚರ್ಚಿಸಿದ ಬಳಿಕ ಶೀಘ್ರವೇ ಅಧಿಕೃತ ಘೋಷಣೆ ಹೊರಡಿಸಲಾಗುವುದು ಎಂದು ಮೂಲಗಳು ತಿಳಿಸಿವೆ.

ಯುಡಿಎಫ್ ಕೂಟದಲ್ಲಿ ಕಾಂಗ್ರೆಸ್ 63 ಸ್ಥಾನಗಳೊಂದಿಗೆ ಅತಿದೊಡ್ಡ ಪಕ್ಷವಾಗಿ ಮೂಡಿಬಂದಿದ್ದು, ಇದೀಗ ಮುಖ್ಯ ಮಂತ್ರಿ ಸ್ಥಾನಕ್ಕೆ ಪ್ರಮುಖವಾಗಿ ವಿ.ಡಿ. ಸತೀಶನ್, ರಮೇಶ್ ಚೆನ್ನಿತ್ತಲ ಮತ್ತು ಕೆ.ಸಿ.ವೇಣುಗೋಪಾಲ್ ನಡುವೆ ತೀವ್ರ ಪೈಪೋಟಿ ನಡೆದಿದೆ. ಈ ಪೈಕಿ ಕಾಂಗ್ರೆಸ್ ಹೈಕಮಾಂಡ್ ಒಲವು ಗಾಂಧಿ ಕುಟುಂಬದ ಆಪ್ತರಾಗಿರುವ ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಕಡೆಗೆ ಇದೆ ಎನ್ನಲಾಗಿದ್ದು, ಅವರು ಮುಂಚೂಣಿಯಲ್ಲಿದ್ದಾರೆನ್ನಲಾಗಿದೆ. ಇನ್ನೊಂದೆಡೆ ಮುಸ್ಲಿಂಲೀಗ್ ಸೇರಿದಂತೆ ಕಾಂಗ್ರೆಸ್ ಮಿತ್ರಪಕ್ಷಗಳು ಇದನ್ನು ವಿರೋಧಿಸುತ್ತಿದ್ದು ಅವು ವಿ.ಡಿ.ಸತೀಶನ್ ಪರವಾಗಿ ಕಾಂಗ್ರೆಸ್ ಮೇಲೆ ತೀವ್ರ ಒತ್ತಡ ಹೇರುತ್ತಿವೆ.

ಕೈಕಮಾಂಡ್ ಅಸಮಾಧಾನ: ಮುಂದಿನ ಯುಡಿಎಫ್ ಸರ್ಕಾರದ ಮುಖ್ಯಮಂತ್ರಿ ಆಯ್ಕೆ ಗೊಂದಲ ನಿವಾರಿಸಲು ಹೆಣಗಾಡುತ್ತಿರುವ ನಡುವೆಯೇ, ಕೇರಳ ಮತ್ತು ದಿಲ್ಲಿಯಲ್ಲಿ ಮೂರೂ ನಾಯಕರ ಬೆಂಬಲಿಗರು ನಡೆಸುತ್ತಿರುವ ಬಲ ಪ್ರದರ್ಶನ ಕುರಿತಂತೆ ಕಾಂಗ್ರೆಸ್ ಹೈಕಮಾಂಡ್ ತೀವ್ರ ಅಸಮಾಧಾನ ವ್ಯಕ್ತಪಡಿಸಿದೆ. ಇದರ ಬೆನ್ನಿಗೇ ಇಂತಹ ಪ್ರದರ್ಶನಗಳನ್ನು ಕೂಡಲೇ ನಿಲ್ಲಿಸಬೇಕೆಂದು ಕಾಂಗ್ರೆಸ್ ಉಸ್ತುವಾರಿ ಹಾಗೂ ಎಐಸಿಸಿ ಪ್ರಧಾನ ಕಾರ್ಯದರ್ಶಿ ದೀಪಾ ದಾಸ್‌ಮುನ್ಷಿ ಅವರು ತಾಕೀತು ಮಾಡಿದ್ದಾರೆ.

ಬಿಜೆಪಿ, ಸಿಪಿಎಂಗಳಿಂದ ಲೇವಡಿ

ಕೇರಳದಲ್ಲಿ ಯುಡಿಎಫ್ ಗೆಲುವು ಸಾಧಿಸಿ 6 ದಿನಗಳೇ ಕಳೆದರೂ ಇನ್ನೂ ಕಾಂಗ್ರೆಸಿಗೆ ಮುಖ್ಯಮಂತ್ರಿ ಆಯ್ಕೆಯನ್ನು ಅಂತಿಮಗೊಳಿಸಲು ಸಾಧ್ಯವಾಗದೆ ಇರುವುದಕ್ಕೆ ಸಿಪಿಎಂ ಮತ್ತು ಬಿಜೆಪಿಗಳು ಕಾಂಗ್ರೆಸನ್ನು ಲೇವಡಿಗೈದಿವೆ. ಮಾತು ಮಾತಿಗೂ ಕಾಂಗ್ರೆಸ್ ನಾಯಕರು ಪ್ರಜಾತಂತ್ರ, ಸಂವಿಧಾನದ ಬಗ್ಗೆ ಮಾತನಾಡುತ್ತಿದ್ದಾರೆ. ಆದರೆ ಚುನಾವಣೆ ನಡೆದು ಫಲಿತಾಂಶ ಪ್ರಕಟವಾದರೂ ಮುಖ್ಯಮಂತ್ರಿ ಆಯ್ಕೆಯನ್ನು ಮಾತ್ರ ಕುಟುಂಬ ಸೊಸೈಟಿ ಚುನಾವಣೆಯ ಮಾದರಿಯಲ್ಲಿ ನಿರ್ವಹಿಸುತ್ತಿದೆ ಎಂಬುದಾಗಿ ಅವು ಕಿಚಾಯಿಸುತ್ತಿವೆ. ಸಾಮಾಜಿಕ ಮಾಧ್ಯಮಗಳಲ್ಲೂ ಈ ಬಗ್ಗೆ ಟೀಕೆಗಳು ಕೇಳಿಬಂದಿದ್ದು, ಕೇರಳದಲ್ಲಿ ಕಾಂಗ್ರೆಸ್‌ನ ಮೂವರು ನಾಯಕರ ಪರವಾಗಿ ನಡೆದ ಬಹಿರಂಗ ಪ್ರದರ್ಶನಗಳು, ಆಕ್ರೋಶಗಳನ್ನು ಬೊಟ್ಟು ಮಾಡಲಾಗಿದೆ.

ತೈಲ ಕಂಪನಿಗಳಿಗೆ ₹1 ಲಕ್ಷ ಕೋಟಿ ನಷ್ಟ

ಹೊಸದಿಲ್ಲಿ: ಪಶ್ಚಿಮ ಏಷ್ಯಾದ ಸಂಘರ್ಷದ ನಂತರ ಜಾಗತಿಕ ಇಂಧನ ಬೆಲೆ ಏರಿಕೆಯ ಹೊರೆಯಿಂದ ದೇಶೀಯ ಗ್ರಾಹಕರನ್ನು ರಕ್ಷಿಸಲು ಸರ್ಕಾರಿ ಸ್ವಾಮ್ಯದ ತೈಲ ಮಾರಾಟ ಕಂಪನಿಗಳು ಹತ್ತು ವಾರಗಳಲ್ಲಿ 1 ಲಕ್ಷ ಕೋಟಿ ರೂ.ಗಿಂತಲೂ ಹೆಚ್ಚು ನಷ್ಟ ಅನುಭವಿಸಿವೆ. ಇಂಡಿಯನ್ ಆಯಿಲ್ ಕಾರ್ಪೊರೇಷನ್, ಭಾರತ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿಮಿಟೆಡ್ ಮತ್ತು ಹಿಂದೂಸ್ತಾನ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿಮಿಟೆಡ್ ಪ್ರತಿದಿನ 1,600 ಕೋಟಿ ರೂ.ನಿಂದ 1,700 ಕೋಟಿ ರೂ.ವರೆಗೆ ನಷ್ಟ ಅನುಭವಿಸುತ್ತಿವೆ. ಕಚ್ಚಾ ತೈಲ ಬೆಲೆಯಲ್ಲಿ ಶೇ.50ರಷ್ಟು ಏರಿಕೆಯಾಗಿದ್ದರೂ, ಈ ಕಂಪನಿಗಳು ಪೆಟ್ರೋಲ್ ಮತ್ತು ಡೀಸೆಲ್ ಬೆಲೆಗಳನ್ನು ಎರಡು ವರ್ಷ ಹಳೆಯ ದರಗಳಾದ ಕ್ರಮವಾಗಿ ಲೀಟರ್‌ಗೆ 94.77 ರೂ. ಮತ್ತು 87.67 ರೂ. ಕಾಯ್ದುಕೊಂಡಿವೆ.

ಆರ್ಥಿಕ ಪರಿಣಾಮ: ನಿರಂತರ ನಷ್ಟ, ಈ ಸಂಸ್ಥೆಗಳು ಕಾರ್ಯನಿರತ ಬಂಡವಾಳಕ್ಕಾಗಿ ಹೆಚ್ಚಿನ ಸಾಲ ಪಡೆಯುವಂತೆ ಮಾಡಿದೆ. ಈ ಆರ್ಥಿಕ ಒತ್ತಡ ತೈಲ ಶುದ್ಧೀಕರಣ ವಿಸ್ತರಣೆ, ಪೈಪ್‌ಲೈನ್‌ಗಳು ಮತ್ತು ಶುದ್ಧ ಇಂಧನ ಯೋಜನೆಗಳಿಗೆ ಭವಿಷ್ಯದ ಹೂಡಿಕೆಗಳಿಗೆ ಅಡ್ಡಿಯಾಗುವ ಭೀತಿಯಿದೆ. ಜಪಾನ್ ಮತ್ತು ಯುಕೆಯಂತಹ ದೇಶಗಳಲ್ಲಿ ಇಂಧನ ಬೆಲೆಗಳು ಶೇ.30ರಷ್ಟು ಏರಿಕೆಯಾಗಿದ್ದರೆ, ಭಾರತದಲ್ಲಿ ದರಗಳು ಸ್ಥಿರವಾಗಿವೆ.

ಸರ್ಕಾರದ ರಕ್ಷಣೆ: ಸರ್ಕಾರ ಪೆಟ್ರೋಲ್ ಮೇಲಿನ ಅಬಕಾರಿ ಸುಂಕವನ್ನು 13 ರೂ.ನಿಂದ 3 ರೂ.ಗೆ ಇಳಿಸಿದೆ ಮತ್ತು ಡೀಸೆಲ್ ಮೇಲಿನ 10 ರೂ. ಸುಂಕವನ್ನು ರದ್ದುಗೊಳಿಸಿದೆ. ಈ ಕ್ರಮಗಳಿಂದ ಸರ್ಕಾರಿ ಬೊಕ್ಕಸಕ್ಕೆ ಪ್ರತಿ ತಿಂಗಳು 14,000 ಕೋಟಿ ರೂ. ನಷ್ಟವಾಗುತ್ತಿದೆ.

ಕಿರುಸುದ್ದಿ

ಇಂದು ಸೀಯಾಳಾಭಿಷೇಕ

• **ಪುತ್ತೂರು:** ಲೋಕ ಕಲ್ಯಾಣಾರ್ಥ ಮತ್ತು ಕಾಲಕಾಲಕ್ಕೆ ಮಳೆ, ಬೆಳೆಗಾಗಿ ಹಾಗೂ ದೇಶ ಕಾಯುವ ಸೈನಿಕರಿಗೆ ಹೆಚ್ಚಿನ ಶಕ್ತಿಯನ್ನು ಒದಗಿಸುವಂತೆ ಪ್ರಾರ್ಥಿಸಿ ಶ್ರೀ ಮಹಾಲಿಂಗೇಶ್ವರ ದೇವಸ್ಥಾನ ವಠಾರದ ಸಾರ್ವಜನಿಕ ಶ್ರೀ ಗಣೇಶೋತ್ಸವ ಸಮಿತಿ ವತಿಯಿಂದ ಇತಿಹಾಸ ಪ್ರಸಿದ್ಧ ಪುತ್ತೂರು ಮಹತೋಭಾರ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದಲ್ಲಿ ಮೇ 11ರಂದು ಸೀಯಾಳಾಭಿಷೇಕ ನಡೆಯಲಿದೆ. ಬೆಳಗ್ಗೆ 9.30 ರಿಂದ ಸೀಯಾಳಾಭಿಷೇಕ ನಡೆಯಲಿದ್ದು, ಭಕ್ತರು ಸೀಯಾಳವನ್ನು ತಂದೊಪ್ಪಿಸುವಂತೆ ಸಮಿತಿಯಿಂದ ಮನವಿ ಮಾಡಲಾಗಿದೆ.

ಮೇ 12, 13: ಸಚಿವ ಭೋಸರಾಜು ಪ್ರವಾಸ

• **ಉಡುಪಿ:** ರಾಜ್ಯ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಎನ್.ಎಸ್. ಭೋಸರಾಜು ಅವರು ಮೇ 12 ಮತ್ತು 13 ರಂದು ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳಲ್ಲಿ ಪ್ರವಾಸ ಕೈಗೊಳ್ಳಲಿದ್ದಾರೆ. ಈ ಎರಡು ದಿನಗಳ ಅವಧಿಯಲ್ಲಿ ಅವರು ವಿವಿಧ ಧಾರ್ಮಿಕ ಕ್ಷೇತ್ರಗಳಿಗೆ ಭೇಟಿ ನೀಡುವ ಜೊತೆಗೆ, ಇಲಾಖಾ ಪ್ರಗತಿ ಪರಿಶೀಲನೆ ಹಾಗೂ ಹೊಸ ಕಾಮಗಾರಿಗಳಿಗೆ ಶಂಕುಸ್ಥಾಪನೆ ನೆರವೇರಿಸಲಿದ್ದಾರೆ.

ಸಚಿವರು ಮೇ 12ರಂದು ಬೆಳಿಗ್ಗೆ 9:45ಕ್ಕೆ ಬೆಂಗಳೂರಿನಿಂದ ವಿಮಾನದ ಮೂಲಕ ಹೊರಟು 10:45ಕ್ಕೆ ಮಂಗಳೂರಿಗೆ ಆಗಮಿಸಲಿದ್ದಾರೆ. ಅಲ್ಲಿಂದ ನೇರವಾಗಿ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗದ ಕಚೇರಿಗೆ ಭೇಟಿ ನೀಡಿ ಇಲಾಖಾ ಪ್ರಗತಿ ಪರಿಶೀಲನಾ ಸಭೆ ನಡೆಸಲಿದ್ದಾರೆ. ಮಧ್ಯಾಹ್ನ ಧರ್ಮಸ್ಥಳ ಶ್ರೀ ಮಂಜುನಾಥ ಸ್ವಾಮಿ ದೇವಸ್ಥಾನಕ್ಕೆ ಭೇಟಿ ನೀಡಲಿರುವ ಅವರು, ನಂತರ ಬೆಳ್ತಂಗಡಿ ತಾಲೂಕಿನ ಕೊಕ್ಕಡ ಗ್ರಾಮದ ಮೈಪಾಲ ಸೇತುವೆ ಸಹಿತ ಕಿಂಡಿ ಅಣೆಕಟ್ಟನ್ನು ಪರಿವೀಕ್ಷಿಸಲಿದ್ದಾರೆ. ಸಂಜೆ ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಳಕ್ಕೆ ಭೇಟಿ ನೀಡಿ, ರಾತ್ರಿ ಕೊಲ್ಲೂರಿನಲ್ಲಿ ವಾಸ್ತವ್ಯ ಹೂಡಲಿದ್ದಾರೆ. ಮೇ 13ರಂದು ಬೆಳಿಗ್ಗೆ ಕೊಲ್ಲೂರು ಶ್ರೀ ಮೂಕಾಂಬಿಕಾ ದೇವಳ ದರ್ಶನ ಪಡೆದು ಪ್ರವಾಸ ಮುಂದುವರಿಸಲಿರುವ ಸಚಿವರು, ಬೈಂದೂರು ತಾಲೂಕಿನ ವಂಡ್ಸೆಯಲ್ಲಿ ಬ್ಲಾಕ್ ಕಾಂಗ್ರೆಸ್ ಕಚೇರಿ ಕಟ್ಟಡ ನಿರ್ಮಾಣ ಕಾಮಗಾರಿಗೆ ಶಂಕುಸ್ಥಾಪನೆ ನೆರವೇರಿಸಲಿದ್ದಾರೆ. ನಂತರ ಕುಂದಾಪುರದಲ್ಲೂ ಬ್ಲಾಕ್ ಕಾಂಗ್ರೆಸ್ ಕಚೇರಿ ಕಟ್ಟಡಕ್ಕೆ ಶಂಕುಸ್ಥಾಪನೆ ಮಾಡಲಿದ್ದಾರೆ. ಮಧ್ಯಾಹ್ನ ಬ್ರಹ್ಮಾವರ ತಾಲೂಕಿನ ಬೆಣ್ಣೆಕುದ್ರುವಿನಲ್ಲಿ ಉಪ್ಪು ನೀರು ತಡೆ ಕಿಂಡಿ ಅಣೆಕಟ್ಟು ಕಾಮಗಾರಿಯನ್ನು ಸಚಿವರು ವೀಕ್ಷಿಸಲಿದ್ದಾರೆ. ಬಳಿಕ ಉಡುಪಿಯ ಅಲೆವೂರು, ಮಂಗಳೂರಿನ ಪಿಲಿಕುಳ ದಲ್ಲಿರುವ ಪ್ರಾದೇಶಿಕ ವಿಜ್ಞಾನ ಕೇಂದ್ರಗಳಿಗೆ ಭೇಟಿನೀಡಿ ಮಾಹಿತಿ ಪಡೆಯಲಿದ್ದಾರೆ. ಅಂದು ರಾತ್ರಿ 8.10ಕ್ಕೆ ಮಂಗಳೂರಿನಿಂದ ವಿಮಾನದ ಮೂಲಕ ಬೆಂಗಳೂರಿಗೆ ಮರಳಲಿದ್ದಾರೆ.

ಇಂದು ಯಕ್ಷಗಾನ

ಶ್ರೀ ಕಟೀಲು ಯಕ್ಷಗಾನ ಮೇಳ

1. ತಿಮ್ಮಯ್ಯ ಕೆ. ಸುವರ್ಣ, 'ಗೀತಾ ನಿವಾಸ', ಸಂತೆಕಟ್ಟೆ, ಹಳೆಯಂಗಡಿ.
2. ಶಂಕರ ಪೂಜಾರಿ, 'ಪುಷ್ಪ ನಿಲಯ', ಶ್ರೀ ಮಹಾಲಿಂಗೇಶ್ವರ ದೇವಸ್ಥಾನ ರಸ್ತೆ, ಪೆರ್ವಾಜೆ, ಕಾರ್ಕಳ (ತಾ).
3. ಕಸ್ತೂರಿ ನಾರಾಯಣ ಕುಲಾಲ್, ಕಟ್ಟೆ ಹೌಸ್, ಬಡಗಬೆಳ್ಳೂರು – ಶ್ರೀ ಕಟೀಲು ಕ್ಷೇತ್ರ ಸರಸ್ವತೀ ಸದನ.
4. ಅಧ್ಯಕ್ಷರು ಮತ್ತು ಸದಸ್ಯರು, ಬಂಟರ ಸಂಘ, ಬಜಪೆ, ತಾರಿಕಂಬಳ.
5. ಜಯ ವಿಕ್ರಮ್ ಶೆಟ್ಟಿ, ಅಂಬ್ರೋಸಿಯ ರೆಸಾರ್ಟ್ ಬಳಿ, ಪುಣೆ – ಶ್ರೀ ಕಟೀಲು ಕ್ಷೇತ್ರ ಮಹಾಲಕ್ಷ್ಮೀ ಸದನ.
6. ವ್ಯವಸ್ಥಾಪನಾ ಸಮಿತಿ ಧರ್ಮದರ್ಶಿ ಲಾಡಿಗುತ್ತು, ಬರ್ಕೆಯವರು, ಗ್ರಾಮಸ್ಥರು, ಆದಿನಾಗಬ್ರಹ್ಮಸ್ಥಾನ ಲಾಡಿ, ಮೂಡುಬಿದ್ರಿ.
7. ಗಂಗಾಧರ ಪೂಜಾರಿ, ಕೊಪ್ಪಲಮನೆ, ಬಡಗಬೆಳ್ಳೂರು, ಶ್ರೀ ಕಾವೇಶ್ವರ ದೇವಸ್ಥಾನದ ಬಳಿ, ಬಂಟ್ವಾಳ (ತಾ).

ಶ್ರೀ ಧರ್ಮಸ್ಥಳ ಮೇಳ
ಹೆಬ್ರಿ ಬೆಳಂಜೆಯಲ್ಲಿ
ಶ್ರೀ ರಘುರಾಮ ಶೆಟ್ಟಿ ಮತ್ತು ಮಕ್ಕಳು ಹಾಗೂ ಕುಟುಂಬಸ್ಥರು

ಶ್ರೀ ಸಾಲಿಗ್ರಾಮ ಮೇಳ
ಸೊರಬದಲ್ಲಿ ಬಯಲಾಟ - **ದಕ್ಷಯಜ್ಞ, ಚಂದ್ರಾವಳಿ ವಿಲಾಸ, ಬಬ್ರುವಾಹನ**

ಶ್ರೀ ಪೆರ್ಡೂರು ಮೇಳ
ಬೀಜಾಡಿ ಚಾತ್ರಾಬೆಟ್ಟುನಲ್ಲಿ- **ಚದುರಂಗ**

ಶ್ರೀ ಹನುಮಗಿರಿ ಮೇಳ
ಪದ್ಯಾಣದಲ್ಲಿ

ಶ್ರೀ ಪಾವಂಜೆ ಮೇಳ
ಶ್ರೀ ಶಾಂತಿಕಾ ಪರಮೇಶ್ವರೀ ದೇವಸ್ಥಾನ, ದೇವರ ಹಕ್ಕಲ ಕುಮಟಾದಲ್ಲಿ -**ಶ್ರೀ ದೇವಿ ಮಹಾತ್ಮೆ**

ನೀರು ಹರಿಯುವ ತೋಡಿಗೆ ತಡೆಗೋಡೆಯ ನಿರ್ಮಾಣ: ಕೃಷಿಕರಿಗೆ ಶುರುವಾಗಿದೆ ಆತಂಕ!



• **ಪುತ್ತೂರು:** ತಾಲೂಕಿನ ಶಾಂತಿಗೋಡು ಗ್ರಾಮದ ಕೈಂದಾಡಿಯಲ್ಲಿ ನೀರು ಹರಿಯುವ ತೋಡಿಗೆ ತಡೆಗೋಡೆ ನಿರ್ಮಿಸಿದ ಪರಿಣಾಮ ಇತರ ಕೃಷಿಕರಿಗೆ ಸಂಕಷ್ಟ ಉಂಟಾಗಿರುವ ಹಿನ್ನಲೆಯಲ್ಲಿ ಅಲ್ಲಿನ ಸ್ಥಳೀಯರು ಆಕ್ರೋಶಗೊಂಡಿದ್ದಾರೆ.

ಕೃಷಿಪ್ರದೇಶವಾಗಿರುವಕೈಂದಾಡಿಯಲ್ಲಿ ಹೆಚ್ಚಿನ ಭಾಗ ತೋಟ ಪ್ರದೇಶದಿಂದ ಕೂಡಿದೆ. ಅಲ್ಲಿಕೃಷಿಗೆ ಪೂರಕವೆಂಬಂತೆ ನೀರು ಹರಿಯುವ ತೋಡು ಇದೆ. ಆದರೆ ಆ ತೋಡಿಗೆ ಇದೀಗ ಅಲ್ಲಿನ ಓರ್ವ ವ್ಯಕ್ತಿ ತನ್ನ ಜಮೀನಿಗೆ ನೀರು ನುಗ್ಗದಂತೆ ತಡೆಗೋಡೆ ನಿರ್ಮಿಸಿರುವುದು ಇತರ ಕೃಷಿಕರಿಗೆ ತೊಂದರೆಯನ್ನುಂಟಾಗುವ ಭೀತಿ ಎದುರಾಗಿದೆ.

ಈ ಹಿಂದೆ ತೋಡು ಅಗಲವಾಗಿದ್ದು, ಯಾವುದೇ ಸಮಸ್ಯೆಗಳು ಇರಲಿಲ್ಲ. ಆದರೆ ಇದೀಗ ಬಾಲಕೃಷ್ಣ ಎಂಬವರು ಯಾವುದೇ ಅನುಮತಿ ಪಡೆಯದೆ ಅಕ್ರಮವಾಗಿ ತಡೆಗೋಡೆ ನಿರ್ಮಾಣ ಮಾಡಿರುವುದಲ್ಲೇ ತೋಡಿನ ಮಧ್ಯೆಯೇ ತಡೆಗೋಡೆ ನಿರ್ಮಿಸಿ ಒತ್ತುವರಿ ಮಾಡುವ ಮೂಲಕ ಇತರೆ ಕೃಷಿ ಜಮೀನುದಾರರಿಗೆ ಸಂಕಷ್ಟವನ್ನುಂಟು ಮಾಡಿದ್ದಾರೆ. ಮಳೆಗಾಲದಲ್ಲಿ ತೋಡಿನಲ್ಲಿ ರಭಸವಾಗಿ ನೀರು ಹರಿದು ಕೃಷಿ ಜಮೀನುಗಳಿಗೆ ನುಗ್ಗುವ ಸಾಧ್ಯತೆಗಳು ಇವೆ ಎಂದು ಅಲ್ಲಿನವರು ದೂರಿದ್ದಾರೆ.

ದೂರು

ಬಾಬು ಗೌಡ ಎಂಬವರ ಪಕ್ಕದ ಜಮೀನಿನಲ್ಲಿ ತೋಡಿನ ಮಧ್ಯೆ ತಡೆಗೋಡೆ ನಿರ್ಮಿಸಿರುವ ಬಾಲಕೃಷ್ಣ ಎಂಬವರ ವಿರುದ್ಧ ಜಿಲ್ಲಾಧಿಕಾರಿ ಕಚೇರಿ, ತಾಲೂಕು ಕಚೇರಿ ಹಾಗೂ ಗ್ರಾಮ ಪಂಚಾಯತ್‌ಗಳಿಗೆ ದೂರು ನೀಡಿದ್ದಾರೆ. ಆದರೆ ಇನ್ನೂ ಈ ಪರಿಸರಕ್ಕೆ ಭೇಟಿ ನೀಡಲು ಅಧಿಕಾರಿಗಳು ಬಂದಿಲ್ಲ. ಜಮೀನು ಒತ್ತುವರಿ ಮಾಡಿ ಅಸಂಮಜಸ ತಡೆಗೋಡೆ ನಿರ್ಮಿಸಿರುವವರ ವಿರುದ್ಧ ಕ್ರಮಕೈಗೊಳ್ಳದಿದ್ದಲ್ಲಿ ಮುಂದಕ್ಕೆ ಪೊಲೀಸ್ ಠಾಣೆ ಮೆಟ್ಟಿಲೇರುವುದಾಗಿ ಅಲ್ಲಿನ ಗ್ರಾಮಸ್ಥರು ಎಚ್ಚರಿಕೆ ನೀಡಿದ್ದಾರೆ.

ನಿವೇಶನಕ್ಕೆ ಒತ್ತಾಯಿಸಿ ವಸತಿ ರಹಿತರ ಪ್ರತಿಭಟನೆ



• **ಮಡಿಕೇರಿ:** ನಿವೇಶನ ರಹಿತ ಬಡವರಿಗೆ ನಿವೇಶನ ನೀಡುವಂತೆ ಒತ್ತಾಯಿಸಿ, ಕರ್ನಾಟಕ ಬಹುಜನ ಕಾರ್ಮಿಕ ಸಂಘಟನೆಯ ನೇತೃತ್ವದಲ್ಲಿ ಕುಂಬೂರು ಗ್ರಾಮದ ಪೈಸಾರಿ ಜಾಗದಲ್ಲಿ ವಸತಿರಹಿತ ಕಾರ್ಮಿಕರು ನಡೆಸುತ್ತಿರುವ ಅಹೋರಾತ್ರಿ ಧರಣಿ ನಡೆಸುತ್ತಿದ್ದಾರೆ. ಯಾವುದೇ ಅಧಿಕಾರಿಗಳು ಮತ್ತು ಜನಪ್ರತಿನಿಧಿಗಳು ಧರಣಿ ಸ್ಥಳಕ್ಕೆ ಭೇಟಿ ನೀಡದ ಹಿನ್ನೆಲೆಯಲ್ಲಿ ಕಾರ್ಮಿಕ ಸಂಘಟನೆಯ ಅಧ್ಯಕ್ಷ ಕೆ.ಮೊಣ್ಣಪ್ಪ ನೇತೃತ್ವದಲ್ಲಿ ಪ್ರಮುಖರು ಮಡಿಕೇರಿಯಲ್ಲಿ ಉಪವಿಭಾಧಿಕಾರಿ ಅವರನ್ನು ಭೇಟಿಯಾಗಿ ಪೈಸಾರಿ ಜಾಗದ ಪಟ್ಟಿ ಹಾಗೂ ಸರ್ಕಾರಿ ಜಾಗ ಒತ್ತುವರಿಯ ಬಗ್ಗೆ ಮಾಹಿತಿ ನೀಡಿದರು. ತಹಶೀಲ್ದಾರ್ ಅವರನ್ನು ಸ್ಥಳಕ್ಕೆ ಕಳುಹಿಸಿ, ಮಾಹಿತಿ ಪಡೆದುಕೊಂಡು ಮುಂದಿನ ಕ್ರಮ ಕೈಗೊಳ್ಳಲಾಗುವುದೆಂದು ಉಪ ವಿಭಾಗಾಧಿಕಾರಿ ಭರವಸೆ ನೀಡಿದ್ದಾರೆ ಎಂದು ಮೊಣ್ಣಪ್ಪ ಅವರು ತಿಳಿಸಿದ್ದಾರೆ.

ಬಡ ಕಾರ್ಮಿಕರ ಸಮಸ್ಯೆಗೆ ಪರಿಹಾರ ನೀಡಲು ಜಿಲ್ಲಾಡಳಿತ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳುತ್ತಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಕಟೀಲು ಕಲಾ ಉತ್ಸವ ಉದ್ಘಾಟನೆಯ ಸಂಭ್ರಮ

ದೇವರು ಕಲಾಪ್ರಿಯರು: ಪಲಿಮಾರು ಸ್ವಾಮೀಜಿ



• **ಕಟೀಲು:** ದೇವರು ಕಲಾಪ್ರಿಯರು. ದೇವರ ಶಿಲ್ಪಗಳನ್ನು ನೋಡಿದರೆ ಅರಿವಾಗುತ್ತದೆ. ಮೂರ್ತಿಗಳು ಕಲಾತ್ಮಕವಾಗಿರುತ್ತದೆ. ಗಣಪತಿಯೂ ವಿವಿಧ ರೀತಿಗಳಲ್ಲಿ ಕಲಾತ್ಮಕವಾಗಿರುವುದನ್ನು ಕಾಣಬಹುದು. ನೃತ್ಯ ಸಂಗೀತ ಭಜನೆ ಹೀಗೆ ವಿವಿಧ ಕಲೆಗಳಿಂದ ದೇವರನ್ನು ಒಲಿಸಲು ಸಾಧ್ಯ ಮತ್ತು ನಾವೂ ಆತ್ಮಾನಂದವನ್ನು ಪಡೆಯಬಹುದು ಎಂದು ಪಲಿಮಾರು ಮಠದ ಶ್ರೀ ವಿದ್ಯಾಧೀಶ ತೀರ್ಥ ಸ್ವಾಮೀಜಿ ಹೇಳಿದ್ದಾರೆ.

ಅವರು ಭಾನುವಾರ ಶ್ರೀ ಕಟೀಲು ಪ್ರತಿಷ್ಠಾನ ಕಟೀಲು ಸರಸ್ವತಿ ಸದನದಲ್ಲಿ ಆಯೋಜಿಸಿದ ಶ್ರೀ ಕಟೀಲು ಕಲಾ ಉತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಕೊಂಡೆವೂರು ನಿತ್ಯಾನಂದ ಯೋಗಾಶ್ರಮದ ಯೋಗಾನಂದ ಸರಸ್ವತಿ ಸ್ವಾಮೀಜಿ ಮಾತನಾಡಿ, ಯಾವುದೇ ಖರ್ಚು ಇಲ್ಲದೆ ಸುಲಭವಾಗಿ ದೇವರನ್ನು ಒಲಿಸಿಕೊಳ್ಳಲು ಅನನ್ಯವಾದ ಭಕ್ತಿಯಿಂದ ಮಾಡುವ ಭಜನೆಯಿಂದ ಸಾಧ್ಯ. ಕಟೀಲಿನ ದುರ್ಗಾ ಮಾತೆ ಕಲಾಪ್ರಿಯೆ. ವಿವಿಧ ಕಲಾಪ್ರಕಾರಗಳನ್ನು ಕಟೀಲು ಪ್ರತಿಷ್ಠಾನ ಮಕ್ಕಳಿಗೆ ಕಲಿಸಿ ಕೊಡುವ ಮೂಲಕ ಉತ್ತಮ ಹೆಜ್ಜೆ ಇಟ್ಟಿದೆ ಎಂದರು.

ಪ್ರತಿಷ್ಠಾನದ ಅಧ್ಯಕ್ಷ ಅನಂತಪದ್ಮನಾಭ ಆಸ್ರಣ್ಣ, ಶ್ರೀ ಹರಿನಾರಾಯಣದಾಸ ಆಸ್ರಣ್ಣ, ಬಜಪೆ ರವಿರಾಜ ಆಚಾರ್ಯ, ಸೂರ್ಯ ಕುಮಾರ್ ಆಚಾರ್ಯ ಹಳೆಯಂಗಡಿ, ಸಿ. ಎ. ಸುದೇಶ್ ರೈಫ಼ಿ, ಶ್ರೀಕರ ಆಸ್ರಣ್ಣ, ವಾಮಂಜೂರು ಗಣೇಶ ರೈ, ಶೈಲೇಶ್ ಸುವರ್ಣ ಮುಕ್ಕ, ದಾಮೋದರ ದಂಡಕೇರಿ, ಅಭಿಜಿತ್ ಶೇಟ್ ಮತ್ತಿತರರಿದ್ದರು. ವಾಸುದೇವ ಶೆಣೈ ಕಾರ್ಯಕ್ರಮ ನಿರೂಪಿಸಿದರು. ಬಳಿಕ ಮೂರು ವಿಭಾಗದಲ್ಲಿ ಭಜನೆ ಸ್ಪರ್ಧೆ ನಡೆಯಿತು.

ಪುತ್ತೂರು ದೇವಳಕ್ಕೆ ನ್ಯಾಯಮೂರ್ತಿಗಳ ಭೇಟಿ



• **ಪುತ್ತೂರು:** ಇತಿಹಾಸ ಪ್ರಸಿದ್ಧ ಪುತ್ತೂರು ಮಹತೋಭಾರ ಶ್ರೀ ಮಹಾಲಿಂಗೇಶ್ವರ ದೇವಾಲಯಕ್ಕೆ ಶನಿವಾರ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಎನ್. ಕೋಟೀಶ್ವರ್ ಸಿಂಗ್ ದಂಪತಿ ಭೇಟಿ ನೀಡಿ ವಿಶೇಷ ಪ್ರಾರ್ಥನೆ ಸಲ್ಲಿಸಿದರು. ದೇವಾಲಯದ ವತಿಯಿಂದ ಅವರನ್ನು ಶಲ್ಯ ತೊಡಿಸಿ ಗೌರವಿಸಲಾಯಿತು.

ರವಿವಾರ ಕರ್ನಾಟಕ ಉಚ್ಚ ನ್ಯಾಯಾಲಯದ ನ್ಯಾಯಾಧೀಶರಾದ ನ್ಯಾ. ಇಎಸ್. ಇಂದಿರೇಶ್ ಹಾಗೂ ವಿ. ಶ್ರೀಶಾನಂದ ಅವರು ಭೇಟಿ ನೀಡಿ ದೇವರ ದರ್ಶನ ಪಡೆದರು. ಶ್ರೀ ದೇವರಿಗೆ ಶುದ್ಧ ಎಳ್ಳೆಣ್ಣೆ ಸಮರ್ಪಣೆ ಮಾಡಿ ತುಪ್ಪದ ದೀಪ ಬೆಳಗಿದ ಬಳಿ ದೇವರ ಧರ್ಮ ನಡೆಯಲ್ಲಿ ಪ್ರಸಾದ ನೀಡಿ ಶಲ್ಯ ತೊಡಿಸಿ ಗೌರವಿಸಲಾಯಿತು. ಈ ಸಂದರ್ಭದಲ್ಲಿ ದೇವಾಲಯದ ವ್ಯವಸ್ಥಾಪನ ಸಮಿತಿ ಅಧ್ಯಕ್ಷ ಪಂಜಿಗುಡ್ಡೆ ಈಶ್ವರ ಭಟ್, ಪುತ್ತೂರು ನ್ಯಾಯಾಲಯದ ನ್ಯಾಯಾಧೀಶ್ ದೇವರಾಜ್, ಪುತ್ತೂರು ವಕೀಲರ ಸಂಘದ ಅಧ್ಯಕ್ಷ ಜಗನ್ನಾಥ್ ರೈ, ವಕೀಲರಾದ ಮಹೇಶ್ ಕಜೆ, ಭಾಸ್ಕರ ಕೋಡಿಂಬಾಳ, ನರಸಿಂಹ ಪ್ರಸಾದ್ ಮೊದಲಾದವರಿದ್ದರು.

ಬೈಕ್-ಸ್ವಿಫ್ಟ್ ಮುಖಾಮುಖಿ ಡಿಕ್ಕಿ: ಅರಸಿನಮಕ್ಕಿ ಸಹಕಾರಿ ಸಂಘದ ಸರಫಾ ಸದಾನಂದ ಆಚಾರ್ ಸಾವು, ಪತ್ನಿ ಗಂಭೀರ

• **ಉಪ್ಪಿನಂಗಡಿ** : ಮಂಗಳೂರು-ಬೆಂಗಳೂರು ರಾಷ್ಟ್ರೀಯ ಹೆದ್ದಾರಿ 75ರ ಗೋಳಿತ್ತೊಟ್ಟು ಜಂಕ್ಷನ್‌ನಲ್ಲಿ ಬೈಕ್ ಹಾಗೂ ಸ್ವಿಫ್ಟ್ ಕಾರಿನ ನಡುವೆ ಭೀಕರ ಅಪಘಾತ ಸಂಭವಿಸಿ ಬೈಕ್ ಸವಾರ ಸ್ಥಳದಲ್ಲೇ ಮೃತಪಟ್ಟ ಘಟನೆ ಭಾನುವಾರ ನಡೆದಿದೆ.



ಕೊಕ್ಕಡದಿಂದ ಉಪ್ಪಿನಂಗಡಿ ಕಡೆಗೆ ಬರುತ್ತಿದ್ದ ಬೈಕ್ ಹಾಗೂ ಉಪ್ಪಿನಂಗಡಿಯಿಂದ ಶಿರಾಡಿ ಕಡೆಗೆ ಸಾಗುತ್ತಿದ್ದ ಸ್ವಿಫ್ಟ್ ಕಾರಿನ ನಡುವೆ ಗೋಳಿತ್ತೊಟ್ಟು ಜಂಕ್ಷನ್‌ನಲ್ಲಿ ಮುಖಾಮುಖಿ ಡಿಕ್ಕಿ ಸಂಭವಿಸಿದೆ. ಡಿಕ್ಕಿಯ ತೀವ್ರತೆಗೆ ಬೈಕ್ ಸವಾರ ಗಂಭೀರವಾಗಿ ಗಾಯಗೊಂಡು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಮೃತಪಟ್ಟವರನ್ನು ಅರಸಿನಮಕ್ಕಿ ಹತ್ಯಡ್ಕ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದಲ್ಲಿ ಚಿನ್ನಾಭರಣ ಪರಿಶೋಧಕರಾದ ಸದಾನಂದ ಆಚಾರ್ (59) ಎಂದು ಗುರುತಿಸಲಾಗಿದೆ. ಅಪಘಾತದಲ್ಲಿ ಬೈಕ್‌ನಲ್ಲಿದ್ದ ಅವರ ಪತ್ನಿ ಉಷಾ ಆಚಾರ್ಯ ಅವರಿಗೆ ಗಂಭೀರ ಗಾಯಗಳಾಗಿದ್ದು, ಅವರನ್ನು ತಕ್ಷಣ ಮಂಗಳೂರಿನ ಆಸ್ಪತ್ರೆಗೆ ದಾಖಲಿಸಿ ಹೆಚ್ಚಿನ ಚಿಕಿತ್ಸೆಗಾಗಿ ಕರೆದೊಯ್ಯಲಾಗಿದೆ.

ಅಪಘಾತ ಸಂಭವಿಸಿದ ತಕ್ಷಣ ಸ್ಥಳೀಯರು ನೆರವಿಗೆ ಧಾವಿಸಿದ್ದು, ಪುತ್ತೂರು ಟ್ರಾಫಿಕ್ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ಬೆಳಕು: ಉದ್ಯೋಗಾರ್ಹತಾ ಕಾರ್ಯಾಗಾರ



• **ಮಂಗಳೂರು:** ಬಿಲ್ಲವ ಅಸೋಸಿಯೇಷನ್ ಬೆಂಗಳೂರು ಮತ್ತು ಬ್ರಹ್ಮಶ್ರೀ ಗುರು ನಾರಾಯಣ ಸ್ವಾಮಿ ಸೇವಾ ಸಂಘ ಮೂಡಬಿದರೆ ಸಂಯುಕ್ತ ಆಶ್ರಯದಲ್ಲಿ ಸ್ಪಾರ್ಕ್ ಬಿಲ್ಲವ ವೃತ್ತಿಪರರ ಸಮಿತಿ ಬೆಂಗಳೂರು ವತಿಯಿಂದ 'ಬೆಳಕು – 2026 ಯಶಸ್ಸಿನ ಮಾರ್ಗಗಳು – ಮಹಾಶಿಕ್ಷಣ, ವೃತ್ತಿ ಮಾರ್ಗದರ್ಶನ ಮತ್ತು ಉದ್ಯೋಗಾರ್ಹತಾ ಕಾರ್ಯಾಗಾರ' ಮೂಡುಬಿದಿರೆ ಬ್ರಹ್ಮಶ್ರೀ ಗುರು ನಾರಾಯಣ ಸ್ವಾಮಿ ಸೇವಾ ಸಂಘದಲ್ಲಿ ಶನಿವಾರ ಜರುಗಿತು.

ಸೋಲೂರು ಆರ್ಯ ಈಡಿಗ ಮಹಾ ಸಂಸ್ಥಾನದ ಶ್ರೀ ವಿಖ್ಯಾತಾನಂದ ಸ್ವಾಮೀಜಿ ಕಾರ್ಯಕ್ರಮ ಉದ್ಘಾಟಿಸಿ ಆಶೀರ್ವಚನ ನೀಡಿದರು. ಮೂಡುಬಿದಿರೆ ಬ್ರಹ್ಮಶ್ರೀ ಗುರು ನಾರಾಯಣ ಸ್ವಾಮಿ ಸೇವಾ ಸಂಘದ ಅಧ್ಯಕ್ಷ ಸುರೇಶ ಕೆ. ಪೂಜಾರಿ ಅಧ್ಯಕ್ಷತೆ ವಹಿಸಿ ಶುಭ ಹಾರೈಸಿದರು.

ಆಳ್ವಾಸ್ ಕಾಲೇಜಿನ ಉಪನ್ಯಾಸಕ ಡಾ. ಯೋಗೀಶ್ ಕೈರೋಡಿ ಮುಖ್ಯ ಅತಿಥಿಯಾಗಿದ್ದರು. ಬಿಲ್ಲವ ಅಸೋಸಿಯೇಷನ್ ಬೆಂಗಳೂರು ಅಧ್ಯಕ್ಷ ಎಂ. ವೇದ ಕುಮಾರ್ ಮಾತನಾಡಿ, ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿ ಪರೀಕ್ಷೆಯಲ್ಲಿ ಅತೀ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಅಭಿನಂದನೆ ಸಲ್ಲಿಸಿದರು. ಈ ಬಾರಿ ದ್ವಿತೀಯ ಪಿಯುಸಿಯ ವಾಣಿಜ್ಯ ವಿಭಾಗದಲ್ಲಿ ಶೇ. 100 ಅಂಕ ಗಳಿಸಿದ ದಿಶಾ ಪೂಜಾರಿಯವರನ್ನು ಸನ್ಮಾನಿಸಿ, ಆಕೆಯ ಮುಂದಿನ ಶಿಕ್ಷಣದ ಸಂಪೂರ್ಣ ಜವಾಬ್ದಾರಿಯನ್ನು ಬಿಲ್ಲವ ಅಸೋಸಿಯೇಷನ್ ಬೆಂಗಳೂರು ವಹಿಸುವುದಾಗಿ ತಿಳಿಸಿದರು.

ಕಾರ್ಯಾಗಾರದ ಮುಖ್ಯ ಉಪನ್ಯಾಸಕರಾಗಿದ್ದ ಅಲೆನ್ ಕ್ಯಾರಿಯರ್ ಇನ್ಸ್ಟಿಟ್ಯೂಟ್ ಮುಖ್ಯಸ್ಥ ಅಭಿಮನ್ಯು ತೋಮರ್, ನಿಟ್ಟೆ ಎನ್‌ಎಂಎಎಂ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ವೃತಿಪರ ಸಮಾಲೋಚನೆ, ತರಬೇತಿ ಹಾಗೂ ಉದ್ಯೋಗ ವಿಭಾಗ ಮುಖ್ಯಸ್ಥ ಭರತ್ ಜಿ. ಕುಮಾರ್, ಜಿಸಿಸಿ ಇಂಡಸ್ಟ್ರಿ ಬೆಂಗಳೂರು ಹಿರಿಯ ಹಣಕಾಸು ಅಧಿಕಾರಿ ಕಿಶೋರ್ ಕೋಟ್ಯಾನ್ ಅವರು ವಿದ್ಯಾರ್ಥಿಗಳಿಗೆ ಸೂಕ್ತ ಮಾರ್ಗದರ್ಶನ ನೀಡಿದರು. ಬಿಲ್ಲವ ಅಸೋಸಿಯೇಷನ್ ಬೆಂಗಳೂರು ಉಪಾಧ್ಯಕ್ಷ ಕೇಶವ ಪೂಜಾರಿ, ಕಾರ್ಯಕಾರಿ ಸಮಿತಿ ಸದಸ್ಯರಾದ ಚಿತ್ತರಂಜನ್ ಸಾಲಿಯಾನ್, ಶ್ರೀಕಾಂತ್, ಸ್ಪಾರ್ಕ್ ಸಮಿತಿ ಅಧ್ಯಕ್ಷ ರವಿಚಂದ್ರ ಎಂ. ಉಪಸ್ಥಿತರಿದ್ದರು. ದೇವಿಪ್ರಸಾದ್ ವಂದಿಸಿದರು. ಪವಿತ್ರ ಹಾಗೂ ದೇವಿಪ್ರಸಾದ್ ನಿರೂಪಿಸಿದರು. ಕಾರ್ಯಾಗಾರದಲ್ಲಿ 350 ಜನ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಕೇರಳ ರಾಜ್ಯ ಲಾಟರಿ ಫಲಿತಾಂಶ ವಿವರ ಪ್ರಕಟ

ತಿರುವನಂತಪುರಂ: ಕೇರಳ ರಾಜ್ಯ ಲಾಟರಿಯ ಸಂಮೃದ್ಧಿ(ನಂ.SM-54) ಡ್ರಾ ಮೇ 10ರಂದು ತಿರುವನಂತಪುರಂನ ಬೇಕರಿ ಜಂಕ್ಷನ್ ಬಳಿಯ ಗೋರ್ಕಿ ಭವನದಲ್ಲಿ ನಡೆದಿದ್ದು, ಫಲಿತಾಂಶ ವಿವರ ಇಂತಿದೆ.

1st Prize Rs.1,00,00,000/- [1 Crore]
MX 902016 (CHITTUR)
Consolation Prize Rs.5,000/-
MN 902016 MO 902016 MP 902016 MR 902016
MS 902016 MT 902016 MU 902016 MV 902016
MW 902016 MY 902016 MZ 902016
2nd Prize Rs.25,00,000/- [25 Lakhs]
MU 698662 (MOOVATTUPUZHA)
3rd Prize Rs.5,00,000/- [5 Lakhs]
MS 230946 (THIRUVANANTHAPURAM)

FOR THE TICKETS ENDING WITH THE FOLLOWING NUMBERS

4th Prize Rs.5,000/-
1703 1985 2482 3166 4495 4797 4979 6373 6450 6807
6971 7134 7740 8166 8211 8707 8838 9692 9958
5th Prize Rs.2,000/-
0076 0370 0437 6256 8496 8833
6th Prize Rs.1,000/-
0459 0695 0866 1624 2020 2104 2717 3295 4119 4536
4723 5065 5197 5306 5581 5617 5936 6435 6933 7070
7335 7393 7705 8790 9830
7th Prize Rs.500/-
0119 0241 0335 0494 0507 0840 0965 1086 1616 1877
2131 2222 2275 2519 2562 2571 2575 2592 2687 3021
3409 3621 3710 4063 4229 4241 4270 4488 4603 4787
5123 5269 5390 5405 5538 5677 5809 5923 5957 6123
6338 6420 6584 6600 6629 6714 6745 6954 6966 7015
7128 7177 7194 7397 7430 8026 8088 8157 8172 8305
8398 8432 8493 8524 8854 8887 9250 9298 9336 9405
9664 9694 9773 9924 9954 9964
8th Prize Rs.200/-
0051 0103 0147 0254 0256 0620 0631 0685 0731 0770
1038 1062 1156 1431 1551 1678 1870 1899 2088 2137
2270 2329 2385 2686 2778 2821 3138 3293 3335 3441
3448 3509 3602 3820 3859 3988 4032 4494 4559 4599
4641 4734 4832 4837 5121 5596 5667 5934 5937 6141
6191 6283 6324 6504 6545 6548 6713 6773 6804 6884
6894 7108 7148 7336 7353 7418 7693 7770 7772 7788
7929 7995 8042 8064 8145 8194 8209 8282 8380 8394
8423 8514 8599 8935 9081 9181 9233 9408 9480 9676
9907 9915
9th Prize Rs.100/-
0001 0005 0032 0129 0206 0282 0317 0343 0374 0376
0390 0404 0442 0448 0451 0546 0590 0659 0690 0806
0831 0865 0897 1283 1486 1492 1523 1590 1636 1842
1993 2010 2150 2156 2347 2379 2398 2447 2617 2659
2759 2795 2926 2951 2980 3002 3097 3110 3133 3148
3210 3211 3218 3240 3242 3296 3385 3392 3421 3486
3544 3743 3756 3843 3880 3884 4598 4684 4719 4727
4764 4770 4774 4878 4912 4917 4957 5198 5236 5240
5263 5278 5364 5536 5591 5739 5791 5805 5869 5970
5996 6129 6149 6202 6208 6220 6290 6305 6335 6370
6399 6431 6451 6483 6672 6689 6841 6857 6895 6914
6960 6993 7062 7201 7225 7494 7546 7583 7710 7792
8077 8118 8132 8223 8278 8335 8399 8409 8429 8561
8885 9022 9046 9122 9123 9226 9282 9300 9395 9411
9425 9478 9594 9609 9641 9659 9754 9829 9919 9997

ಸುಂಟಿಕೊಪ್ಪದ ಗದ್ದೆಹಳ್ಳದ ಬಳಿಯಲ್ಲಿ ಸರಣಿ ಅಪಘಾತ





• **ಸುಂಟಿಕೊಪ್ಪ:** ಗದ್ದೆಹಳ್ಳದ ಬಳಿಯಲ್ಲಿ ಸರಣಿ ಅಪಘಾತ ಸಂಭವಿಸಿದ್ದು, ಪ್ರಯಾಣಿಕರು ಸಣ್ಣ ಪುಟ್ಟ ಗಾಯಗಳೊಂದಿಗೆ ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಕುಶಾಲನಗರ–ಮಡಿಕೇರಿ ನಡುವಿನ ರಾಷ್ಟ್ರೀಯ ಹೆದ್ದಾರಿಯ ಸುಂಟಿಕೊಪ್ಪದ ಗದ್ದೆಹಳ್ಳದ ವಂದನಾಬಾರ್ ತಿರುವಿನಲ್ಲಿ ಬೆಂಗಳೂರಿನಿಂದ ಮಡಿಕೇರಿ ಕಡೆಗೆ ತೆರಳುತ್ತಿದ್ದ ಟೆಂಪೋ ಟ್ರಾವೆಲರ್ (ಕೆಎ.51ಎಜೆ 8661), ಮಡಿಕೇರಿ ಕಡೆಯಿಂದ ಕುಶಾಲನಗರ ಕಡೆಗೆ ಆಗಮಿಸುತ್ತಿದ್ದ ಇನೋವಾ ವಾಹನ (ಕೆಎ03 ಎಂಆರ್ 9900) ಮತ್ತು ಮೈಸೂರಿನಿಂದ ಮಡಿಕೇರಿ ಕಡೆಗೆ ಆಗಮಿಸುತ್ತಿದ್ದ ಇನೋವಾ (ಕೆಎ01ಎಕೆ7349) ವಾಹನಗಳ ನಡುವೆ ಪರಸ್ಪರ ಡಿಕ್ಕಿ ಸಂಭವಿಸಿದೆ. ಚಾಲಕನ ನಿಯಂತ್ರಣ ತಪ್ಪಿದ ಟೆಂಪೋ ಟ್ರಾವೆಲರ್ ಹೆದ್ದಾರಿ ಬದಿಗೆ ಮಗಚಿಕೊಂಡಿದ್ದು ಈ ವಾಹನದಲ್ಲಿ ಪ್ರಯಾಣಿಸುತ್ತಿದ್ದ ಪ್ರಯಾಣಿಕರು ಸಣ್ಣಪುಟ್ಟ ಗಾಯಗಳೊಂದಿಗೆ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಘಟನೆಯಿಂದ ಹೆದ್ದಾರಿಯಲ್ಲಿ ವಾಹನಗಳು ಸ್ಥಗಿತ ಗೊಂಡು ಸಂಚಾರಕ್ಕೆ ತೊಡಕು ಉಂಟಾಯಿತು. ಸುಂಟಿಕೊಪ್ಪ ಠಾಣೆ ಸಿಬ್ಬಂದಿಗಳು ಘಟನೆ ಸ್ಥಳಕ್ಕೆ ತೆರಳಿ ಮಹಜರು ನಡೆಸಿ ಮುಂದಿನ ತನಿಖೆ ಕೈಗೊಂಡಿದ್ದಾರೆ.

ನೀರಿನಲ್ಲಿ ಮುಳುಗಿ ಯುವಕ ಸಾವು

• **ನಾಪೋಕ್ಲು:** ಸ್ನಾನಕ್ಕೆ ತೆರಳಿದ್ದ ಯುವಕನೊಬ್ಬ ನೀರಿನಲ್ಲಿ ಮುಳುಗಿ ಮೃತಪಟ್ಟಿರುವ ಘಟನೆ ಇಲ್ಲಿಗೆ ಸಮೀಪದ ಬಲಮುರಿ ಗ್ರಾಮದಲ್ಲಿ ಭಾನುವಾರ ನಡೆದಿದೆ. ಬಲಮುರಿ ಗ್ರಾಮದ ವಾಟೆಕಾಡು ಪೈಸಾರಿ ನಿವಾಸಿ ಕೂಲಿ ಕಾರ್ಮಿಕರಾದ ರಂಜು ಮತ್ತು ಪುಷ್ಪಾ ದಂಪತಿಯ ಪುತ್ರ ಪುನೀತ್ (21)ಮೃತಪಟ್ಟ ಯುವಕ.



ಭಾನುವಾರ ಮಧ್ಯಾಹ್ನ ನಾಲ್ವರು ಹುಡುಗರ ತಂಡ ಬಲಮುರಿ ಕಾವೇರಿ ನದಿಯ ಸೇತುವೆಯ ಸಮೀಪ ಸ್ನಾನ ಮಾಡಲು ತೆರಳಿದ್ದು, ಪುನೀತ್ ಆಕಸ್ಮಿಕವಾಗಿ ನೀರಿನಲ್ಲಿ ಮುಳುಗಿ ಮೃತರಾಗಿದ್ದಾರೆ. ಬಳಿಕ ಬಲಮುರಿ ನಿವಾಸಿ ಮುಳುಗು ತಜ್ಞ ಎಂ. ಆರ್ ಬಿಪಿನ್ ಮೃತದೇಹವನ್ನು ಪತ್ತೆಹಚ್ಚಿ ನೀರಿನಿಂದ ಮೇಲೆತ್ತಿದ್ದಾರೆ. ನಾಪೋಕ್ಲು ಪೊಲೀಸರು ಘಟನಾ ಸ್ಥಳಕ್ಕೆ ತೆರಳಿ ಪ್ರಕರಣ ದಾಖಲಿಸಿಕೊಂಡು ಕಾನೂನು ಕ್ರಮ ಕೈಗೊಂಡಿದ್ದಾರೆ.

301ನೇ ಭಾನುವಾರ ಕೋಡಿ ಬೀಚ್ ರೋಡ್ ಕ್ಲಿನಿಂಗ್

ರಸ್ತೆ ಬದಿ ಕಸ ಎಸೆಯುವರ ಮೇಲೆ ಕಠಿಣ ಕ್ರಮ ಅಗತ್ಯ





• **ಕೋಟ:** ಸ್ವಚ್ಛತೆ ಬಗ್ಗೆ ಪ್ರತಿಯೊರ್ವರು ಜಾಗೃತ ರಾಗಬೇಕು ಗಲ್ಲಿ ಗಲ್ಲಿಗಳಲ್ಲಿಕಸ ಎಸೆಯುವವರಿಗೆ ಕಠಿಣ ಕ್ರಮ ಅಗತ್ಯ ಎಂದು ಉಡುಪಿ ಎ.ಪಿ ಎಂಸಿ ಮಾಜಿ ಉಪಾಧ್ಯಕ್ಷ ಕೃಷ್ಣ ಪೂಜಾರಿ.ಪಿ ಹೇಳಿದ್ದಾರೆ.

ಭಾನುವಾರ ಕೋಟದ ಪಂಚವರ್ಣ ಯುವಕ ಮಂಡಲ ಪ್ರವರ್ತಿತ ಸಂಸ್ಥೆ ಪಂಚವರ್ಣ ಮಹಿಳಾ ಮಂಡಲದ ನೇತೃತ್ವದಲ್ಲಿ ಗೀತಾನಂದ ಫೌಂಡೇಶನ್ ಮಣೂರು,ಮಣೂರು ಫ್ರೆಂಡ್ಸ್ ಇವರುಗಳ ಸಹಯೋಗದೊಂದಿಗೆ ಸಾಲಿಗ್ರಾಮ ಪಟ್ಟಣಪಂಚಾಯತ್, ಕೋಡಿ ಗ್ರಾ.ಪಂ ಸಹಯೋಗದೊಂದಿಗೆ 301ನೇ ವಾರದ ಪರಿಸರ ಸ್ನೇಹಿ ಅಭಿಯಾನ ಕಾರ್ಯಕ್ರಮದಲ್ಲಿ ಮಾತನಾಡಿ ನಮ್ಮ ಪರಿಸರವನ್ನು ಸ್ವಚ್ಛವಾಗಿರಿಸಿಕೊಳ್ಳುವ ಹೊಣೆಗಾರಿಕೆ ನಮ್ಮ ಮೇಲಿದೆ ಆದರೆ ವಿದ್ಯಾವಂತರೇ ಕಸ ಎಸೆಯುವ ಮನಸ್ಥಿತಿ ಸೃಷ್ಟಿಸಿಕೊಂಡಿರುವುದು ಬೇಸರದ ಸಂಗತಿ ಎಂದು ಖೇದ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಸುಮಾರು 30ಕ್ಕೂ ಅಧಿಕ ಚೀಲ 400ಕೆಜಿ ಯಷ್ಟು ಪ್ಲಾಸ್ಟಿಕ್ ತ್ಯಾಜ್ಯವನ್ನು ಬೀಚ್ ರಸ್ತೆಯಿಂದ ಮುಕ್ತಗೊಳಿಸಲಾಯಿತು. ಪಂಚವರ್ಣ ಯುವಕ ಮಂಡಲದ ನಿಕಟಪೂರ್ವ ಅಧ್ಯಕ್ಷ ಅಜಿತ್ ಆಚಾರ್,ಉಪಾಧ್ಯಕ್ಷ ದಿನೇಶ್ ಆಚಾರ್, ಮಹಿಳಾ ಮಂಡಲದ ಅಧ್ಯಕ್ಷೆ ಲಲಿತಾ ಪೂಜಾರಿ ಮತ್ತಿತರರಿದ್ದರು.

ಕಿರುಸುದ್ದಿ

ಸಚಿವ ಸುಧಾಕರ್ ನಿಧನಕ್ಕೆ ಡಾ.ಹೆಗ್ಗಡೆ ತೀವ್ರ ಸಂತಾಪ

• ಉಜಿರೆ: ರಾಜ್ಯ ಯೋಜನೆ ಮತ್ತು ಸಾಂಖ್ಯಿಕ ಸಚಿವರಾಗಿದ್ದ ಡಿ. ಸುಧಾಕರ್ ಬೆಳ್ತಂಗಡಿ ರವರ ನಿಧನಕ್ಕೆ ಶ್ರೀಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿ ಡಾ.ಡಿ.ವೀರೇಂದ್ರ ಹೆಗ್ಗಡೆಯವರು ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ. ರಾಜಕೀಯ ಕ್ಷೇತ್ರದಲ್ಲಿ ಹಲವಾರು ಹುದ್ದೆಗಳನ್ನು ಹೊಂದಿದ್ದ ಅವರು ಶಾಸಕರಾಗಿ, ಸಚಿವರಾಗಿ ಉತ್ತಮ ಸೇವೆ ಮಾಡಿದ್ದಾರೆ. ಕ್ಷೇತ್ರದೊಂದಿಗೆ ಉತ್ತಮ ಸಂಬಂಧ ಹೊಂದಿದ್ದರು. ಶ್ರೀ ಕ್ಷೇತ್ರ ಧರ್ಮಸ್ಥಳದ ಅಪಾರ ಅಭಿಮಾನಿಯಾಗಿ, ಭಕ್ತರಾಗಿದ್ದು ಹಲವಾರು ಬಾರಿ ಇಲ್ಲಿಗೆ ಬಂದು ದೇವರ ದರ್ಶನ ಪಡೆದು ಮಾತುಕತೆ ನಡೆಸಿ ಹೋಗುತ್ತಿದ್ದರು. ಇತ್ತೀಚೆಗೆ ಧರ್ಮಸ್ಥಳಕ್ಕೆ ಬಂದ ಸಂದರ್ಭದಲ್ಲಿ ನಮ್ಮ ವಾತ್ಸಲ್ಯ ಯೋಜನೆಯ ಕಾರ್ಯಕ್ರಮದಲ್ಲಿ ಸಂತೋಷದಿಂದ ಭಾಗವಹಿಸಿ ಸಂಭ್ರಮಿಸಿದ್ದನ್ನು ಅವರು ನೆನಪಿಸಿಕೊಂಡಿದ್ದಾರೆ. ಸರಕಾರಕ್ಕೆ ಕಡೆಗೆ ನೀಡಿದ ದಾಖಲೆಯನ್ನು ಸಮರ್ಥವಾಗಿ ನಿರ್ವಹಿಸಿ ಜನಾನುರಾಗಿಯಾಗಿದ್ದ ಅವರು ಇಲಾಖೆ ಮೂಲಕ ತಮ್ಮ ಕ್ಷೇತ್ರದಲ್ಲಿ ಉತ್ತಮ ಸೇವಾ ಕಾರ್ಯಗಳನ್ನು ಮಾಡುತ್ತಿದ್ದುದನ್ನು ನಾನು ಗಮನಿಸಿದ್ದೇನೆ. ಧರ್ಮಸ್ಥಳದಲ್ಲಿ ಭಗವಾನ್ ಬಾಹುಬಲಿ ಸ್ವಾಮಿಯ ಮಹಾಮಸ್ತಕಾಭಿಷೇಕದ ಸಮಿತಿಯ ಸಭೆಗಳಲ್ಲಿ ಆಸಕ್ತಿಯಿಂದ ಭಾಗವಹಿಸುತ್ತಿದ್ದ ಅವರು, ಮಸ್ತಕಾಭಿಷೇಕದ ಯಶಸ್ಸಿಗೆ ಸಕ್ರಿಯ ಸಹಕಾರ ನೀಡಿದ್ದರು. ಅಲ್ಪಕಾಲದ ಅನಾರೋಗ್ಯದಿಂದ ಅಗಲಿದ ಡಿ. ಸುಧಾಕರ್ ಅವರ ಆತ್ಮಕ್ಕೆ ಚಿರಶಾಂತಿಯನ್ನು ಕೋರುತ್ತೇನೆ ಹಾಗೂ ಕುಟುಂಬಸ್ಥರಿಗೆ ಅವರ ಅಗಲುವಿಕೆಯಿಂದ ಉಂಟಾದ ದುಃಖವನ್ನು ಸಹಿಸುವ ಶಕ್ತಿ–ತಾಳ್ಮೆಯನ್ನಿತ್ತು ಶ್ರೀ ಮಂಜುನಾಥ ಸ್ವಾಮಿ ಹರಸಲೆಂದು ಪ್ರಾರ್ಥಿಸುತ್ತೇನೆ ಎಂದು ಅವರು ಸಂದೇಶದಲ್ಲಿ ತಿಳಿಸಿದ್ದಾರೆ.

ಸಚಿವ ಡಿ.ಸುಧಾಕರ್ ನಿಧನಕ್ಕೆ ಡಾ.ಎಂ.ಎನ್. ರಾಜೇಂದ್ರಕುಮಾರ್ ಸಂತಾಪ

• ಮಂಗಳೂರು: ಕರ್ನಾಟಕ ರಾಜ್ಯ ಸರ್ಕಾರದ ಸಚಿವರು ಹಾಗೂ ಕಾರ್ಕಳ ಭಗವಾನ್ ಶ್ರೀ ಬಾಹುಬಲಿ ಸ್ವಾಮಿಯ ಮಹಾಮಸ್ತಕಾಭಿಷೇಕ ಸಮಿತಿಯ ಗೌರವ ಸಂಚಾಲಕರಾದ ಡಿ.ಸುಧಾಕರ್ ಅವರ ನಿಧನಕ್ಕೆ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ, ಎಸ್ ಸಿಡಿಸಿಸಿ ಬ್ಯಾಂಕಿನ ಅಧ್ಯಕ್ಷ ಹಾಗೂ ಕಾರ್ಕಳ ಭಗವಾನ್ ಶ್ರೀ ಬಾಹುಬಲಿ ಸ್ವಾಮಿಯ ಮಹಾಮಸ್ತಕಾಭಿಷೇಕ ಸಮಿತಿಯ ಕಾರ್ಯಾಧ್ಯಕ್ಷರಾದ ಡಾ.ಎಂ.ಎನ್. ರಾಜೇಂದ್ರಕುಮಾರ್ ಸಂತಾಪ ವ್ಯಕ್ತಪಡಿಸಿದ್ದಾರೆ. ಡಿ.ಸುಧಾಕರ್ ಅವರು ಚಿತ್ರದುರ್ಗ ಜಿಲ್ಲೆಯ ಹಿರಿಯ ರಾಜಕಾರಣಿಯಾಗಿದ್ದು, ಜಿಲ್ಲೆಯ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಪ್ರಸ್ತುತ ರಾಜ್ಯ ಸಚಿವ ಸಂಪುಟದಲ್ಲಿ ಯೋಜನೆ ಮತ್ತು ಸಾಂಖ್ಯಿಕ ಇಲಾಖೆಯ ಜವಾಬ್ದಾರಿಯನ್ನು ಹೊತ್ತಿದ್ದ ಅವರು, ಜನಪರರಾಗಿ ನಾಯಕರಾಗಿ ಗುರುತಿಸಿಕೊಂಡಿದ್ದರು. ಮೊತ್ತವಲ್ಲ ಸದಾ ಸಮಾಜಮುಖಿ ಸೇವಾ ಕಾರ್ಯಗಳ ಮೂಲಕ ಗುರುತಿಸಿಕೊಂಡು ಜೈನ ಸಮಾಜಕ್ಕೆ ಹಾಗೂ ಧರ್ಮ ಸಮೃದ್ಧಿಯತೆಗೆ ಅವರು ಅಪಾರ ಕೊಡುಗೆಯನ್ನು ನೀಡಿದ್ದಾರೆ. ಸಹಕಾರ ಕ್ಷೇತ್ರದೆಡೆಗೂ ಕಳಕಳಿ ಹೊಂದಿದ್ದ ಅವರ ನಿಧನದ ಸುದ್ದಿ ಆಘಾತ ದುಃಖವನ್ನು ತಂದಿದೆ ಎಂದು ಡಾ.ಎಂ.ಎನ್. ರಾಜೇಂದ್ರಕುಮಾರ್ ತಮ್ಮ ಸಂತಾಪದಲ್ಲಿ ತಿಳಿಸಿದ್ದಾರೆ.

ಪ್ರೇಮ ಪ್ರಕರಣ: ಯುವಕನ ಅಪಹರಿಸಿ ಹಲ್ಲೆ

• ಬೆಂಗಳೂರು: ಪ್ರೀತಿಸಿದ ಯುವತಿಯನ್ನು ಕರೆದುಕೊಂಡು ಹೋಗಿರುವ ಯುವಕನ ಸಹೋದರನನ್ನು ಯುವತಿಯ ಪೋಷಕರು ಅಪಹರಣ ಮಾಡಿ, ಹಲ್ಲೆ ನಡೆಸಿದ್ದಾರೆ ಎಂದು ಆರೋಪಿಸಲಾಗಿದೆ. ಈ ಕುರಿತು ಬ್ಯಾಡರಹಳ್ಳಿ ಪೊಲೀಸ್ ಠಾಣೆಯಲ್ಲಿ ಅಪಹರಣ ಪ್ರಕರಣ ದಾಖಲಾಗಿದೆ. ಕೊತ್ತೂರ್ ಎಂಬಾತನನ್ನು ಅಪಹರಿಸಿ ಹಲ್ಲೆ ಮಾಡಿದ್ದಾರೆ ಎಂದು ಯುವತಿ ತಂದೆ ಮತ್ತು ಸಂಬಂಧಿಕರ ವಿರುದ್ಧ ಆರೋಪ ಕೇಳಿಬಂದಿದೆ.


ನಿಧನ ಸುದ್ದಿ

ರವಿ ಮಣ್ಣಿಪ್ಪಾಡಿ



ಕಾಸರಗೋಡು: ದೇವನ್ನ ರಾಮದಾಸನಗರ ಬಳಿಯ ಮಣ್ಣಿಪ್ಪಾಡಿ ನಿವಾಸಿ ರವಿ (63) ಅಲ್ಪಕಾಲದ ಅಸೌಖ್ಯದಿಂದ ಭಾನುವಾರ ನಿಧನ ಹೊಂದಿದರು. ಮೃತರು ಪತ್ನಿ, ಮೂವರು ಪುತ್ರರು ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

ಪಿ. ಮಾಳಪ ಪೈ



ಕುಂದಾಪುರ: ಕುಂದಾಪುರದ ಸೆಂಟ್ರಲ್ ಹಿರಿಯ ಜವಳಿ ವ್ಯಾಪಾರಿ ಮಹಾಲಕ್ಷ್ಮೀ ಜವಳಿ ಅಂಗಡಿ ಮಾಲೀಕರಾದ ಪಿ. ಮಾಳಪ ಪೈ (91) ಮೇ 9ರಂದು ಸ್ವಗೃಹದಲ್ಲಿ ನಿಧನ ಹೊಂದಿದರು. ಇವರು ಎಂಜಿ ಬಾಲ ಸಂಘದ ಅಧ್ಯಕ್ಷರಾಗಿ ಮತ್ತು ಹಲವಾರು ವರ್ಷ ಕೋಟೆ ಶ್ರೀ ವೆಂಕಟರಮಣ ದೇವಸ್ಥಾನದ ಮೊಕ್ತೇಸರರಾಗಿ ಸೇವೆ ಸಲ್ಲಿಸಿದ್ದರು. ಇವರು ಪತ್ನಿ ಮತ್ತು ಇಬ್ಬರು ಪುತ್ರರನ್ನು ಅಗಲಿದ್ದಾರೆ.



ಶನಿವಾರ ಬೀಸಿದ ಗಾಳಿಗೆ ಕೊಡಗು ಜಿಲ್ಲೆಯ ಕುಶಾಲನಗರ ತಾಲೂಕಿನ ತಿರಂಗಾಲ ಗ್ರಾಮದ ಪುರಿಯಯ್ಯ ಎಂಬವರ ಮನೆಯ ಮೇಲೆ ಮರ ಬಿದ್ದು ಮೇಲ್ಛಾವಣಿ, ಗೋಡೆಗೆ ಹಾನಿಯಾಗಿದೆ. ಸ್ಥಳಕ್ಕೆ ಕುಶಾಲನಗರ ತಾಲೂಕು ತಹಶೀಲ್ದಾರ್ ಕಿರಣ್ ಜೆ.ಗೌರಯ್ಯ, ಗ್ರಾಮ ಲೆಕ್ಕಾಧಿಕಾರಿ ಗುರುದರ್ಶನ್ ಹಾಗೂ ಸಿಬ್ಬಂದಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಸಚಿವ ಡಾ. ಸುಧಾಕರ್ ನಿಧನಕ್ಕೆ ಸ್ಪೀಕರ್ ಖಾದರ್ ತೀವ್ರ ಸಂತಾಪ

• ಮಂಗಳೂರು: ಕರ್ನಾಟಕ ವಿಧಾನಸಭೆಯ ಹಿರಿಯ ಸದಸ್ಯ ಹಾಗೂ ಯೋಜನೆ, ಕಾರ್ಯಕ್ರಮ ಅನುಷ್ಠಾನ ಮತ್ತು ಸಾಂಖ್ಯಿಕ ಸಚಿವ ಡಾ.ಸುಧಾಕರ್ ಅವರ ನಿಧನಕ್ಕೆ ಸ್ಪೀಕರ್ ಯು.ಟಿ. ಖಾದರ್ ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ.



ಸುಧಾಕರ್ ಡಿ. ಅವರು ನಾಲ್ಕು ಬಾರಿ ವಿಧಾನಸಭಾ ಸದಸ್ಯರಾಗಿ, ಸಹಕಾರ ರತ್ನಾಕರ ಸಚಿವರಾಗಿ ಹಾಗೂ ವಿವಿಧ ಪ್ರಮುಖ ಹುದ್ದೆಗಳಲ್ಲಿ ಸೇವೆ ಸಲ್ಲಿಸಿ, ತಮ್ಮ ಸರಳ ವ್ಯಕ್ತಿತ್ವ ಮತ್ತು ಜನಪರ ಕಾರ್ಯಗಳ ಮೂಲಕ ಜನಮನದಲ್ಲಿ ವಿಶಿಷ್ಟ ಸ್ಥಾನವನ್ನು ಗಳಿಸಿದ್ದರು. ಅವರ ಅಗಲಿಕೆ ರಾಜ್ಯಕ್ಕೆ ಹಾಗೂ ಹಿರಿಯೂರು ಕ್ಷೇತ್ರದ ಜನತೆಗೆ ತುಂಬಲಾರದ ನಷ್ಟವಾಗಿದೆ. ಈ ದುಃಖದ ಸಂದರ್ಭದಲ್ಲಿ ಅವರ ಕುಟುಂಬದವರು, ಬಂಧುಗಳು ಹಾಗೂ ಅಭಿಮಾನಿಗಳಿಗೆ ನನ್ನ ಹೃತ್ಪೂರ್ವಕ ಸಂತಾಪಗಳು. ಅಗಲಿದ ಆತ್ಮಕ್ಕೆ ಚಿರಶಾಂತಿ ದೊರಕಲಿ ಹಾಗೂ ಈ ದುಃಖವನ್ನು ಭರಿಸುವ ಶಕ್ತಿಯನ್ನು ದೇವರು ನೀಡಲಿ ಎಂದು ಪ್ರಾರ್ಥಿಸುತ್ತೇನೆ ಎಂದು ಅವರು ಹೇಳಿದ್ದಾರೆ.

ಗಫೂರ್ ಸಂತಾಪ

ಸಚಿವ ಸುಧಾಕರ್ ಅವರ ಅಗಲಿಕೆಯ ಸುದ್ದಿ ತಿಳಿದು ಅತ್ಯಂತ ದುಃಖವಾಗಿದೆ. ಅವರ ನಿಧನದಿಂದ ರಾಜ್ಯವು ಒಬ್ಬ ಜನಪರ, ದಕ್ಷ ಹಾಗೂ ಅಭಿವೃದ್ಧಿ ಪರ ನಾಯಕನನ್ನು ಕಳೆದುಕೊಂಡಿದೆ. ಅವರ ಆತ್ಮಕ್ಕೆ ಚಿರಶಾಂತಿ ದೊರೆಯಲಿ ಹಾಗೂ ಅವರ ಕುಟುಂಬದವರಿಗೆ ಮತ್ತು ಅಭಿಮಾನಿಗಳಿಗೆ ಈ ದುಃಖವನ್ನು ಭರಿಸುವ ಶಕ್ತಿ ದೇವರು ನೀಡಲಿ ಎಂದು ಪ್ರಾರ್ಥಿಸುತ್ತೇನೆ ಎಂದು, ಕರಾವಳಿ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಎಂ.ಎ. ಗಫೂರ್ ಸಂತಾಪ ವ್ಯಕ್ತಪಡಿಸಿದ್ದಾರೆ.


ಕಾಸರಗೋಡಿನಲ್ಲಿ ಎಲ್‌ಪಿಜಿ ಕೊರತೆ | ಕಾಡಿದೆ ಬೆಲೆಯೇರಿಕೆ ಬಿಸಿ | 200ಕ್ಕೂ ಅಧಿಕ ಉಪಹಾರಗೃಹ ಬಂದ್

ಇನ್ನೂ ಓಪನ್ ಆಗಿಲ್ಲ ಮುಚ್ಚಿದ ಹೋಟೇಲ್

• ಕಾಸರಗೋಡು: ಮಧ್ಯ ಪ್ರಾಚ್ಯದಲ್ಲಿ ಅಮೇರಿಕಾ, ಇಸ್ರೇಲ್ ಮತ್ತು ಇರಾನ್ ನಡುವಿನ ಯುದ್ಧದಿಂದಾಗಿ ಸಂಭವಿಸಿದ ಜಾಗತಿಕ ಆರ್ಥಿಕ ಬಿಕ್ಕಟ್ಟಿನಿಂದಾಗಿ ಕಾಸರಗೋಡು ಜಿಲ್ಲೆಯಲ್ಲಿ ಸಂಕಷ್ಟಮಯ ಪರಿಸ್ಥಿತಿ ಎದುರಾಗಿದೆ ಬಂದಿದೆ. ಅದರಂತೆ ಜಿಲ್ಲೆಯಾದ್ಯಂತ ವಿವಿಧೆಡೆಗಳಲ್ಲಾಗಿ ಮುಚ್ಚುಗಡೆಗೊಂಡಿದ್ದ ಹೋಟೇಲ್‌ಗಳು ಇನ್ನೂ ತೆರೆಯದ ಸ್ಥಿತಿಯೇ ಉಳಿದುಕೊಂಡಿದೆ. ವಾಣಿಜ್ಯ ಸಿಲಿಂಡರ್ ದರಗಳ ದಾರಿ ಕೊರತೆ, ಸಿಲಿಂಡರ್‌ಗಳ ಬೆಲೆಯೇರಿಕೆ ಮೊದಲಾದ ಕಾರಣಗಳಿಂದಾಗಿ ಜಿಲ್ಲೆಯಲ್ಲಿ ಸುಮಾರು 200ರಷ್ಟು ಹೋಟೇಲ್‌ಗಳ ಬಾಗಿಲುಮುಚ್ಚಿ ಈಗಲೂ ತೆರೆಯಲಿಲ್ಲ.

ಗ್ಯಾಸ್ ಸಿಲಿಂಡರ್ ವಿತರಣೆ ಸಮಸ್ಯೆ ಮತ್ತು ದರ ಹೆಚ್ಚಳ ಕಾರಣಗಳಿಂದಾಗಿ ಜಿಲ್ಲೆಯಲ್ಲಿ ಹೋಟೇಲ್ ಉದ್ಯಮ ಬಿಕ್ಕಟ್ಟಿನ ರಂಗವಾಗಿದೆ. ಮುಂಬರುವ ದಿನಗಳಲ್ಲಿ ಇನ್ನಷ್ಟು ಹೋಟೇಲ್‌ಗಳು ಮುಚ್ಚುಗಡೆಗೊಳ್ಳುವ ಲಕ್ಷಣಗಳು ಗೋಚರಿಸುತ್ತಿವೆ. ಮಂಜೇಶ್ವರ, ಹೊಸಂಗಡಿ, ಉಪ್ಪಳ, ಬಂದ್ಯೋಡು, ಕುಂಬಳೆ, ಪೆರ್ಲ, ಬದಿಯಡ್ಕ, ಮುಳ್ಳೇರಿಯ, ಮುಳಿಯಾರು, ಬಂದಡ್ಕ, ಬೋವಿಕ್ಕಾನ, ಚೆರ್ಕಳ, ಕಾಸರಗೋಡು, ಉದುಮ, ನೀಲೇಶ್ವರ ಹಾಗೂ ಗ್ರಾಮೀಣ ಭಾಗಗಳು ಸೇರಿದಂತೆ ಹಲವೆಡೆಗಳಲ್ಲಿ ಹೋಟೇಲ್‌ಗಳು ಬಂದ್ ಆಗಿವೆ.

ಪದೇ ಪದೇ ದರಗಳ ದಾರಿ ಸಿಲಿಂಡರ್ ಬೆಲೆಯಲ್ಲಿ ಉಂಟಾದ ಏರಿಕೆಯು ಹೋಟೇಲ್ ಉದ್ಯಮವನ್ನು ಅಧೋಗತಿಗೆ ತಳ್ಳಿದ್ದಿದೆ. ಮಾರ್ಚ್ 7ರಂದು ಮೊದಲ ಬಾರಿಗೆ ಸಿಲಿಂಡರ್‌ಗೆ ಬೆಲೆಯೇರಿಕೆಯಾಗಿತ್ತು. 19 ಕಿಲೋ ವಾಣಿಜ್ಯ ಸಿಲಿಂಡರ್‌ಗೆ 114.50ರೂ. ಹೆಚ್ಚಿಸಲಾಗಿತ್ತು. ಏಪ್ರಿಲ್ 1ರಂದು ಎರಡನೇ ಬಾರಿಗೆ 195.50ರೂ. ಏರಿಕೆಯಾಗಿತ್ತು. ನಂತರ ಮೇ 1ರಂದು ಮೂರನೇ ಬಾರಿಗೆ 993ರೂ. ಹೆಚ್ಚಿಸಲಾಗಿದೆ. ಈ ಪ್ರಮುಖ ಸಿಲಿಂಡರ್‌ಗಳನ್ನು ದೊಡ್ಡ ಸಣ್ಣಪುಟ್ಟ ಹೋಟೇಲ್‌ಗಳಿಗೆ ಸಾಧ್ಯವಾಗುತ್ತಿಲ್ಲ.





ಅಗತ್ಯದಷ್ಟು ಗ್ಯಾಸ್ ಸಿಲಿಂಡರ್‌ಗಳು ದೊರಕುತ್ತಿಲ್ಲ

ಕಾಸರಗೋಡು ಜಿಲ್ಲೆಯಲ್ಲಿ ಇಂದಿಗೂ ಅಗತ್ಯದಷ್ಟು ವಾಣಿಜ್ಯ ವಿಭಾಗದ ಸಿಲಿಂಡರ್‌ಗಳು ಲಭ್ಯವಿರದ ಸಮಸ್ಯೆ ಜೀವಂತವಾಗಿದೆ. ಹೋಟೇಲ್‌ಗಳಿಗೆ ಪ್ರತಿದಿನ ಐದರಿಂದ ಆರು ಸಿಲಿಂಡರ್‌ಗಳ ಅಗತ್ಯವಿದೆ. ಆದರೆ ಪ್ರಸ್ತುತ ಒಂದೆರಡು ಸಿಲಿಂಡರ್‌ಗಳು ಮಾತ್ರ ಲಭಿಸುತ್ತಿವೆ. ಈ ಹಿನ್ನೆಲೆಯಲ್ಲಿ ಲೈವ್ ಆಗಿ ತಯಾರಿಸುವ ತಿಂಡಿಗಳನ್ನು ಹಾಗೂ ದೋಸೆ ಸಹಿತ ಇನ್ನಿತರ ತಿಂಡಿಗಳನ್ನು ಕೈಬಿಡಬೇಕಾಗಿ ಬಂದಿದೆ. ಕಾಸರಗೋಡು ನಗರವೂ ಸಹಿತ ವಿವಿಧ ಹೋಟೇಲ್‌ಗಳಲ್ಲಿ ಮೆನು ಅರ್ಧದಷ್ಟು ಕಡಿಮೆಯಾಗಿರುವುದು ಗಮನಾರ್ಹವಾಗಿದೆ.

ಕಾರ್ಮಿಕರ ಅಭಾವ

ಜಿಲ್ಲೆಯ ಬಹುತೇಕ ಹೋಟೇಲ್‌ಗಳಲ್ಲಿ ಹೊರರಾಜ್ಯ ಕಾರ್ಮಿಕರು ದುಡಿಯುತ್ತಿದ್ದಾರೆ. ಇತ್ತೀಚೆಗೆ ವಿವಿಧ ರಾಜ್ಯಗಳಲ್ಲಿ ವಿಧಾನಸಭಾ ಚುನಾವಣೆ ನಡೆದಿರುವುದರಿಂದ ಮತ ಚಲಾವಣೆಗಾಗಿ ಹೆಚ್ಚಿನವರು ತಮ್ಮ ಊರುಗಳಿಗೆ ತೆರಳಿದ್ದಾರೆ. ಜೊತೆಗೆ ಅಡುಗೆ ಅನಿಲದ ಅಭಾವದಿಂದಾಗಿ ಬಹುತೇಕ ಮಂದಿ ಮತ್ತೆ ಮರಳಲೇ ಇಲ್ಲ. ಹೋಟೇಲ್‌ಗಳಲ್ಲಿ ಕಾರ್ಮಿಕರ ಕೊರತೆ ಕೂಡಾ ಈ ಉದ್ಯಮವನ್ನು ಸಂದಿಗ್ಧ ಪರಿಸ್ಥಿತಿಗೆ ದೂಡಿದೆ. ಊರಿಗೆ ಹೋದ ಕಾರ್ಮಿಕರು ಮತ್ತೆ ಮರಳುವರೋ ಎಂಬ ಚಿಂತೆಯಲ್ಲಿ ಹೋಟೇಲ್ ಮಾಲಕರಿದ್ದಾರೆ. ಸ್ಥಳೀಯರು ಈ ಉದ್ಯಮದಲ್ಲಿ ದುಡಿಯಲು ಅಷ್ಟೊಂದು ಇಷ್ಟಪಡುತ್ತಿಲ್ಲ. ಹೋಟೇಲ್‌ಗಳಲ್ಲಿ ಕೆಲಸ ನಿರ್ವಹಿಸುವುದು ಸ್ಥಳೀಯ ನಿವಾಸಿಗಳಿಗೆ ಅಗೌರವಕ್ಕೆ ಕಾರಣವಾಗುತ್ತಿದೆ. ಹೋಟೇಲ್‌ಗಳಲ್ಲಿ ಕೈತುಂಬಾ ವೇತನ ನೀಡಿದರೂ ಸ್ಥಳೀಯರು ಈ ಕೆಲಸವನ್ನು ನೆಚ್ಚಿಕೊಳ್ಳದಿರುವುದು ಕಂಡುಬರುತ್ತಿದೆ.

ಆಹಾರ ವಸ್ತುಗಳ ಬೆಲೆಯಲ್ಲೂ ಹೆಚ್ಚಳ

ಗ್ಯಾಸ್ ಸಿಲಿಂಡರ್ ಸಮಸ್ಯೆ ತೀವ್ರವಾದ ರೀತಿಯಲ್ಲಿ ಪ್ರಭಾವ ಇದ್ದರೆ ಕಾರಣ ಹಾಗೂ ಸಿಲಿಂಡರ್ ದರದಲ್ಲಿ ಏರಿಕೆಯಾದ ಹಿನ್ನೆಲೆಯಲ್ಲಿ ಹೋಟೇಲ್‌ಗಳಲ್ಲಿ ಆಹಾರ ವಸ್ತುಗಳ ಮತ್ತು ತಿಂಡಿ ತಿನಿಸುಗಳ ಬೆಲೆಯಲ್ಲೂ ಹೆಚ್ಚಳ ಮಾಡಲಾಗಿದೆ. 12 ರೂ. ಇದ್ದ ಚಹಾ ಬೆಲೆ ದರ ಸಣ್ಣ ಪುಟ್ಟ ತಿಂಡಿಗಳಿಗೆ 16 ರೂ. ಮಾಡಲಾಗಿದೆ. 70 ರೂ. ಇದ್ದ ಊಟಕ್ಕೆ 80 ರೂ. ದರ ನಿಗದಿಪಡಿಸಲಾಗಿದೆ. ಕೆಲವು ಹೋಟೇಲ್‌ಗಳಲ್ಲಿ ಊಟಕ್ಕೆ ಅತ್ಯಂತ ಹೆಚ್ಚಿನ ದರ ಹೇರಲಾಗಿದೆ. ಚಹಾ, ಎಣ್ಣೆ ತಿಂಡಿಗಳನ್ನು ಹೋಟೇಲ್ ಮೆನುವಿನಿಂದ ತೆಗೆಯಲಾಗಿದೆ.

ಅಂಗಡಿಗಳಿಗೆ ದಿನ ಅವಧಿಯೂ ಹಿನ್ನೆಲೆಯಲ್ಲಿ ಪ್ರವಾಸಿಗರ ಸಂಖ್ಯೆಯಲ್ಲಿ ವಿಪರೀತ ಏರಿಕೆಯಾಗಿದೆ. ಅವರ ಆಸಕ್ತಿಗೆ ಅನುಸಾರವಾದ ಆಹಾರ ತಿಂಡಿಗಳನ್ನು ತಯಾರಿಸಿ ಒದಗಿಸಲು ಗ್ಯಾಸ್ ಸಿಲಿಂಡರ್ ಅಭಾವವಾಗಿರುವುದರಿಂದ ದಾರಿ ಸಾಗುವ ಸಿಲಿಂಡರ್‌ಗಳಲ್ಲಿ ನಷ್ಟ ಉಂಟಾಗುತ್ತಿದೆ. ಜೊತೆಗೆ ದಿನಬಳಕೆ ವಸ್ತುಗಳ ಬೆಲೆಯಲ್ಲಿ ನಿತ್ಯ ಏರಿಕೆಯಾಗಿದೆ ಎಂದು ಹೋಟೇಲ್ ಮಾಲಕರು ತಿಳಿಸಿದ್ದಾರೆ. ಪ್ರಸ್ತುತ ಹೋಟೇಲ್ ಉದ್ಯಮಕ್ಕೆ ಸಂಕಷ್ಟದ ಕಾಲದಂತೆ ತೋಚುತ್ತಿದೆ. ಈ ವಿಷಮ ಪರಿಸ್ಥಿತಿಯನ್ನು ನಿಭಾಯಿಸಲು ಕೇರಳ ರಾಜ್ಯ ಸರಕಾರವು ಮಧ್ಯಪ್ರವೇಶ ಮಾಡಬೇಕಾಗಿದೆ. ಇಲ್ಲವಾದರೆ ಮುಂದಿನ ದಿನಗಳಲ್ಲಿ ಕಾಸರಗೋಡು ಜಿಲ್ಲೆಯ ಹೋಟೇಲ್ ಉದ್ಯಮವು ಮತ್ತಷ್ಟು ಸಂಕಷ್ಟ ಎದುರಿಸಬೇಕಾಗುತ್ತದೆ.

ಪೆಟ್ರೋಲಿಯಂ, ಗ್ಯಾಸ್ ವಲಯದ ಕಾರ್ಮಿಕರ ವೇತನ ಹೆಚ್ಚಿಸಲು ಆಗ್ರಹ

• ಕಾಸರಗೋಡು: ಭಾರತೀಯ ಮಜ್ದೂರ್ ಸಂಘ (ಬಿಎಂಎಸ್)ದ ಅಂಗಸಂಸ್ಥೆಯಾದ ಪೆಟ್ರೋಲಿಯಂ ಮತ್ತು ಗ್ಯಾಸ್ ಮಜ್ದೂರ್ ಸಂಘದ ಕಾಸರಗೋಡು ಜಿಲ್ಲಾ ಸಮ್ಮೇಳನವು ಕಾಸರಗೋಡು ಬಿಎಂಎಸ್ ಭವನದಲ್ಲಿ ಭಾನುವಾರ ನಡೆಯಿತು. ಪೆಟ್ರೋಲಿಯಂ ಮತ್ತು ಗ್ಯಾಸ್ ವಲಯದ ಕಾರ್ಮಿಕರಿಗೆ ಕನಿಷ್ಠ ವೇತನ ಹೆಚ್ಚಳ ಜಾರಿ ಮಾಡಬೇಕೆಂದು ಆಗ್ರಹಿಸಲಾಯಿತು.



ಸಮ್ಮೇಳನವನ್ನು ದೀಪ ಬೆಳಗಿ ಉದ್ಘಾಟಿಸಿ ಭಿಎಂಎಸ್‌ನ ರಾಜ್ಯ ಪ್ರಧಾನ ಕಾರ್ಯದರ್ಶಿ ಚಂದ್ರನ್ ಬಂಗಳೋರ್ ಮಾತನಾಡಿ, ರಾಜ್ಯದಲ್ಲಿ ಪೆಟ್ರೋಲಿಯಂ ಮತ್ತು ದಾರಿ ವಲಯದಲ್ಲಿ ದುಡಿ ಕಾರ್ಮಿಕರಿಗೆ ಈಗಿರುವ ಒಪ್ಪಂದದ ವೇತನ ಕಾಸರಗೋಡು ಜಿಲ್ಲೆಯಲ್ಲಿ ಲಭ್ಯವಿಲ್ಲ ಎಂದು ಗಮನ ಸೆಳೆದರು. ಒಪ್ಪಂದದ ವೇತನ ಮತ್ತು ಇತರ ಸವಲತ್ತುಗಳನ್ನು ಕಾರ್ಮಿಕರಿಗೆ ಆದಷ್ಟು ಬೇಗ ಜಾರಿಗೆ ತರಬೇಕೆಂದು ಅವರು ಒತ್ತಾಯಿಸಿದರು.

ಕೇರಳದ ಹಲವು ಭಾಗಗಳಲ್ಲಿ ಕಂಪೆನಿಗಳು ನೇರವಾಗಿ ನಡೆಸುವ ಪೆಟ್ರೋಲ್ ಪಂಪ್‌ಗಳಲ್ಲಿ 21,000 ರೂ. ಗಳಿಗಿಂತ ಹೆಚ್ಚು ವೇತನ ನೀಡಲಾಗುತ್ತಿದೆ. ರಾಜ್ಯದಿಂದ ಎಲ್ಲಾ ಜಿಲ್ಲೆಗಳಲ್ಲಿಯೂ ಒಂದೇ ರೀತಿಯಲ್ಲಿ ವೇತನವನ್ನು ಜಾರಿಗೆ ತರಬೇಕು ಎಂದು ಅವರು ಹೇಳಿದರು. ಪುರುಷರು ಮತ್ತು ಮಹಿಳೆಯರ ನಡುವೆ ಯಾವುದೇ ತಾರತಮ್ಯವಿಲ್ಲದೆ ಸಮಾನ ಕೆಲಸಕ್ಕೆ ಸಮಾನ ವೇತನ ಎಂಬ ಹೊಸ ಕಾರ್ಮಿಕ ಕಾನೂನು ನಿಬಂಧನೆಯು ಎಲ್ಲಾ ಕಾರ್ಮಿಕರಿಗೂ ಅನ್ವಯಗೊಳ್ಳಬೇಕು ಎಂದು ಅವರು ಇದೇ ಸಂದರ್ಭದಲ್ಲಿ ಒತ್ತಾಯಿಸಿದರು.

ಸಮಾರಂಭದಲ್ಲಿ ಒಕ್ಕೂಟದ ಜಿಲ್ಲಾ ಉಪಾಧ್ಯಕ್ಷ ರತೀಶ್ ಕೊಡ್ಲು ಅಧ್ಯಕ್ಷತೆ ವಹಿಸಿದ್ದರು. ಕೆ.ವಿ.ಬಾಬು ಶುಭಹಾರೈಸಿದರು. ಕಾರ್ಯಕ್ರಮದ ಅಂಗವಾಗಿ ಚಟುವಟಿಕೆ ವರದಿ ಮತ್ತು ಆದಾಯ ಹಾಗೂ ವೆಚ್ಚದ ಲೆಕ್ಕ ಪತ್ರಗಳನ್ನು ಮಂಡಿಸಲಾಯಿತು. ಶ್ರೀಧರ ಬೆಳ್ಳೂರು ಸ್ವಾಗತಿಸಿ, ದಿನೇಶ್ ಪಾರೆಕಟ್ಟೆ ವಂದಿಸಿದರು.

ನೂತನ ಪದಾಧಿಕಾರಿಗಳ ಘೋಷಣೆ

ಇದೇ ಸಂದರ್ಭದಲ್ಲಿ ವಿ.ದಿನೇಶ್ ಬಂಬ್ರಾಣ ಸಮಾರೋಪ ಭಾಷಣ ಮಾಡಿ ನೂತನ ಪದಾಧಿಕಾರಿಗಳನ್ನು ಘೋಷಿಸಿದರು. ಅದರಂತೆ ಹೊಸ ಸಮಿತಿಯ ಅಧ್ಯಕ್ಷರಾಗಿ ಕೆ.ವಿ.ಬಾಬು, ಉಪಾಧ್ಯಕ್ಷರಾಗಿ ಬಿಜು ಎನ್.ಪಿ. ಮುಂಗಿಲೂರು, ಶ್ರೀಜಿತ್ ಏಂಗಲ್ ಪೀಟರ್, ಟಿ.ಸುಕುಮಾರ ದಾಸ್, ಪ್ರಧಾನ ಕಾರ್ಯದರ್ಶಿಯಾಗಿ ಶ್ರೀಧರ ಬೆಳ್ಳೂರು, ಜೊತೆ ಕಾರ್ಯದರ್ಶಿಯಾಗಿ ರಂಜಿತ್ ಮಾಕ್ಲುಂಗಾಲ್, ಕೋಶಾಧಿಕಾರಿಯಾಗಿ ದಿನೇಶ್ ಪಾರೆಕಟ್ಟೆ ಅವರನ್ನು ಆರಿಸಲಾಯಿತು.

ಜನ ಜಾನುವಾರುಗಳಿಗೆ ಹಾರಂಗಿ ಅಣೆಕಟ್ಟೆಯಿಂದ ನೀರು ಬಿಡುಗಡೆ

• ಕುಶಾಲನಗರ: ಬೇಸಿಗೆಯಲ್ಲಿ ಜನ ಹಾಗೂ ಜಾನುವಾರುಗಳಿಗೆ ಕುಡಿಯುವ ನೀರು ಒದಗಿಸುವ ದಿಸೆಯಲ್ಲಿ ಹಾರಂಗಿ ಜಲಾಶಯದಿಂದ 500 ಕ್ಯೂಸೆಕ್ಸ್ ನೀರನ್ನು ನದಿಗೆ ಹರಿಸಲಾಗುತ್ತಿದೆ.



ಮೈಸೂರು ವಿಭಾಗದ ಪ್ರಾದೇಶಿಕ ಆಯುಕ್ತರ ಆದೇಶ, ಹಾರಂಗಿ ನೀರಾವರಿ ಸಲಹಾ ಸಮಿತಿಯ ಅಧ್ಯಕ್ಷ ಹಾಗೂ ಮಡಿಕೇರಿ ಕ್ಷೇತ್ರದ ಶಾಸಕ ಡಾ. ಮಂತರ್ ಗೌಡರ ಸೂಚನೆ ಮೇರೆಗೆ ಕುಡಿಯುವ ನೀರಿನ ವ್ಯವಸ್ಥೆಗೆ ಅನುಕೂಲವಾಗುವಂತೆ ಕೊಡಗು ಜಿಲ್ಲೆಯ ಕೆಲವು, ಹಾಸನ ಜಿಲ್ಲೆಯ ಅರಕಲಗೂಡು, ಸಾಲಿಗ್ರಾಮ, ಕೆಆರ್ ನಗರ ಮತ್ತು ಮೈಸೂರು ಜಿಲ್ಲೆಯ ವಿವಿಧ ಗ್ರಾಮಗಳಿಗೆ ಕುಡಿಯುವ ನೀರಿನ ವ್ಯವಸ್ಥೆಗೆ ಅನುಕೂಲ ಕಲ್ಪಿಸಲು ಹಾರಂಗಿ ಅಣೆಕಟ್ಟೆಯ ಕ್ರೆಸ್ಟ್ ಗೇಟ್ ಬಾಗಿಲುಗಳ ಮೂಲಕ 5 ದಿನಗಳವರೆಗೆ 500 ಕ್ಯೂಸೆಕ್ಸ್ ನೀರನ್ನು ಹರಿಸಲಾಗುತ್ತಿದೆ.

ಬಿಸಿಲಿನ ತಾಪದಿಂದಾಗಿ ಕಳೆದ ಒಂದು ತಿಂಗಳಿನಿಂದ ಕಾವೇರಿ ನದಿ ನೀರಿನ ಮಟ್ಟದಲ್ಲಿ ಭಾರೀ ಕುಸಿತ ಕಂಡಿರುವ ಹಿನ್ನೆಲೆಯಲ್ಲಿ ಕಾವೇರಿ ನದಿ ತೀರದ ಉಭಯ ದಂಡೆಗಳ ಮೂರು ಜಿಲ್ಲೆಯ ಗ್ರಾಮಗಳಿಗೆ ಕುಡಿಯುವ ನೀರಿನ ಸರಬರಾಜಿಗೆ ಸಂಬಂಧಿಸಿದಂತೆ ಹಾರಂಗಿ ಅಣೆಕಟ್ಟೆಯಿಂದ ಶನಿವಾರದಿಂದ ಇಂದಿ ನಿಂದ 500 ಕ್ಯೂಸೆಕ್ಸ್ ನೀರನ್ನು ನದಿಗೆ ಹರಿಸಲಾಗುತ್ತಿದೆ ಎಂದು ಹಾರಂಗಿ ನೀರಾವರಿ ಇಲಾಖೆಯ ಕಾರ್ಯಪಾಲಕ ಅಭಿಯಂತರ ಐ.ಕೆ. ಪುಟ್ಟಸ್ವಾಮಿ ಮಾಹಿತಿ ನೀಡಿದ್ದಾರೆ.

ಪಶ್ಚಿಮ ಘಟ್ಟದ ರಕ್ಷಕ ಪ್ರೊ. ಗಾಡ್ಗೀಳ್ ಸ್ಮರಣೆಯಲ್ಲಿ ಎರಡು ದಿನಗಳ ಪರಿಸರ ಮತ್ತು ಶಿಕ್ಷಣ ಸಮ್ಮೇಳನ | ಪರಿಸರ ಹೋರಾಟಗಾರ ಅಖಿಲೇಶ ಚಿಪ್ಪಳಿ ಕಿವಿಮಾತು

ಪರಿಸರದ ಉಳಿವಿಗೆ ತಕ್ಷಣವೇ ಎಚ್ಚೆತ್ತುಕೊಳ್ಳದಿದ್ದರೆ ಅಪಾಯ ಕಟ್ಟಿಟ್ಟ ಬುತ್ತಿ

• ಉಡುಪಿ: ಮಾನವನ ನಿರಂತರ ಹಸ್ತಕ್ಷೇಪ ಮತ್ತು ಅತಿಕ್ರಮಣದ ವಿರುದ್ಧ ಪ್ರಕೃತಿಯು ಪ್ರತಿಭಟಿಸುತ್ತಿರುವ ಸಂದೇಶಗಳನ್ನು ನೀಡುತ್ತಿದೆ. ಅದರೆ ನಾವು ಆ ಮಾತುಗಳಿಗೆ ಕಿವುಡಾಗಿದ್ದೇವೆ. ಪರಿಸರದ ಉಳಿವಿಗಾಗಿ ಈಗಲೇ ಎಚ್ಚೆತ್ತುಕೊಂಡು ತುರ್ತು ಸಂರಕ್ಷಣಾ ಕ್ರಮಗಳನ್ನು ಕೈಗೊಳ್ಳದಿದ್ದರೆ ಮುಂದಿನ ದಿನಗಳಲ್ಲಿ ಭಾರೀ ಬೆಲೆ ತೆರಬೇಕಾಗುತ್ತದೆ ಎಂದು ಶಿವಮೊಗ್ಗದ ಖ್ಯಾತ ಪರಿಸರ ಹೋರಾಟಗಾರ ಹಾಗೂ ಲೇಖಕ ಅಖಿಲೇಶ ಚಿಪ್ಪಳಿ ಎಚ್ಚರಿಸಿದ್ದಾರೆ.

ಭಾರತ ಜ್ಞಾನ–ವಿಜ್ಞಾನ ಸಮಿತಿಯ ಉಡುಪಿ ಜಿಲ್ಲಾ ಶಾಖೆಯ ವತಿಯಿಂದ, ಪಶ್ಚಿಮ ಘಟ್ಟದ ರಕ್ಷಕ ಪ್ರೊ. ಮಾಧವ ಗಾಡ್ಗೀಳ್ ಅವರ ನೆನಪಿನಲ್ಲಿ ಎಂಜಿಎಂ ಕಾಲೇಜಿನ ರವೀಂದ್ರ ಮಂಟಪದಲ್ಲಿ ಆಯೋಜಿಸಲಾದ ಎರಡು ದಿನಗಳ ಪರಿಸರ ಮತ್ತು ಶಿಕ್ಷಣ ಸಮ್ಮೇಳನವನ್ನು ಉದ್ಘಾಟಿಸಿ ಅವರು ಮಾತನಾಡಿದರು.

2018 ಮತ್ತು 2024ರಲ್ಲಿ ಕೇರಳದಲ್ಲಿ ಸಂಭವಿಸಿದ ಭೂಕುಸಿತ, ಕೊಡಗು ಹಾಗೂ ಇತ್ತೀಚಿನ ಶಿರೂರು ದುರಂತಗಳು ನಮ್ಮ ಕಣ್ಣೆದುರಿದ್ದರೂ ನಾವು ಪಾಠ ಕಲಿಯುತ್ತಿಲ್ಲ. ಬೆಂಗಳೂರಿನಲ್ಲಿದ್ದರೂ ಪಶ್ಚಿಮ ಘಟ್ಟದ ಮೂಲೆಮೂಲೆಯನ್ನು ಅರಿತಿದ್ದ ಗಾಡ್ಗೀಳ್ ಅವರು ಕಳೆದ ಜನವರಿಯಲ್ಲಿ ನಿಧನರಾದಾಗ, ದಾಖಲಾದ ದಾಖಲೆ ದೇಶದ ಒಬ್ಬನೇ ಒಬ್ಬ ರಾಜಕಾರಣಿ ಸಂತಾಪ ಸೂಚಿಸದಿರುವುದು ನಾಚಿಕೆಗೇಡಿನ ಸಂಗತಿ ಎಂದು ಅವರು ಆಕ್ರೋಶ ವ್ಯಕ್ತಪಡಿಸಿದರು.



ಸಮಿತಿಯ ಶಿಕ್ಷಣ ವಿಭಾಗದ ಮುಖ್ಯಸ್ಥ ಪ್ರಭಾಕರ ಮತ್ತು 'ಟೀಚರ್' ಪತ್ರಿಕೆಯ ಸಂಪಾದಕ ಉದಯ ಗಾಂವಕರ್ ಅವರು, ಗಾಡ್ಗೀಳ್ ಅವರ ಒಡನಾಟ ಹಾಗೂ ಪರಿಸರ ಶಿಕ್ಷಣದ ಅಗತ್ಯತೆಗಳ ಬಗ್ಗೆ ಮಾತನಾಡಿದರು.

> ಇಂದಿನ 'ಅಭಿವೃದ್ಧಿ' ಎಂಬುದು ಪರಿಸರ ನಾಶದ ಇನ್ನೊಂದು ಹೆಸರಾಗಿದೆ. ಅಭಿವೃದ್ಧಿಯ ವ್ಯಾಖ್ಯಾನವನ್ನು ಪರಿಸರದ ದೃಷ್ಟಿಕೋನದಿಂದ ಬದಲಾಯಿಸಬೇಕಿದೆ ಮತ್ತು ಮಕ್ಕಳಲ್ಲಿ ಬಾಲ್ಯದಿಂದಲೇ ಪರಿಸರ ಕಾಳಜಿಯನ್ನು ಶಿಕ್ಷಣದ ಮೂಲಕ ಮೂಡಿಸಬೇಕಾದ ತುರ್ತು ಅಗತ್ಯವಿದೆ
>
> ■ ಟಿ.ವಿ. ಪ್ರಶಾಂತಬಾಬು, ರಾಜ್ಯ ಪ್ರಧಾನ ಕಾರ್ಯದರ್ಶಿ, ಭಾರತ ಜ್ಞಾನ-ವಿಜ್ಞಾನ ಸಮಿತಿ

ಗಣ್ಯರ ಉಪಸ್ಥಿತಿ

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಜಿಲ್ಲಾ ಸಮಿತಿಯ ಅಧ್ಯಕ್ಷ ಹಾಗೂ ನ್ಯಾಕ್ ಮಹೋಪಾಧ್ಯಾಯ ಡಾ. ಕೆ.ವಿ. ಭಂಡಾರಿ ವಹಿಸಿದ್ದರು. ವೇದಿಕೆಯಲ್ಲಿ ಎಂಜಿಎಂ ಟ್ರಸ್ಟ್‌ನ ಮಹೇಶ ಪೈ ಹಾಗೂ ಪ್ರಾಂಶುಪಾಲರು ಕಾಲೇಜು ಅಧ್ಯಕ್ಷರ ಮೇಲಾಗಿ ಉಪಸ್ಥಿತರಿದ್ದರು. ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸಂತೋಷ್ ನಾಯಕ್ ಪಟ್ಲ ಸ್ವಾಗತಿಸಿ ಕಾರ್ಯಕ್ರಮ ನಿರೂಪಿಸಿದರು ಮತ್ತು ರಾಜೇಶ್ ಶೆಟ್ಟಿ ವಂದಿಸಿದರು.

ಗಾಡ್ಗೀಳ್ ವರದಿ ಮತ್ತು ರಾಜಕೀಯ ನಿರ್ಲಕ್ಷ್ಯ

ಪಶ್ಚಿಮ ಘಟ್ಟಗಳ ಜೀವವೈವಿಧ್ಯದ ಸಂರಕ್ಷಣೆಗಾಗಿ ಪ್ರೊ. ಮಾಧವ ಗಾಡ್ಗೀಳ್ ಅವರು ನೀಡಿದ ವೈಜ್ಞಾನಿಕ ವರದಿಯನ್ನು ಅಧಿಕಾರಿಗಳು ಮತ್ತು ರಾಜಕಾರಣಿಗಳು ತಮ್ಮ ಲಾಭಕ್ಕಾಗಿ ತಿರುಚಿ, ಅವರನ್ನು ಖಳನಾಯಕನಂತೆ ಚಿತ್ರಿಸಿದರು ಎಂದು ಅಖಿಲೇಶ ಚಿಪ್ಪಳಿ ವಿಷಾದ ವ್ಯಕ್ತಪಡಿಸಿದರು.

ಪರಿಸರ ವಿಜ್ಞಾನಿ ಡಾ.ಸುಬ್ರಹ್ಮಣ್ಯ ಎಂ.ಡಿ. ಮಾತನಾಡಿ, ಪ್ರೊ.ಮಾಧವ ಗಾಡ್ಗೀಳ್ ಅವರು ದೇಶದ ಪರಿಸರ ವಿಜ್ಞಾನ ಎಂದೇ ಖ್ಯಾತಿ ಪಡೆದಿದ್ದರು ಎಂದು ಸುಮಾರು 30 ವರ್ಷಗಳ ಕಾಲ ಅವರ ಜೊತೆಗಾರರಾಗಿ ಎಲ್ಲಾ ಪರಿಸರ ಅಧ್ಯಯನಗಳಲ್ಲಿ ಭಾಗಿಯಾಗಿದ್ದರು ಎಂದರು.

ಪರಿಸರ ಉಳಿಸಿ–ಬೆಳೆಸುವಲ್ಲಿ, ರಾಷ್ಟ್ರಗಳ ಸಂರಕ್ಷಣೆಯಲ್ಲಿ ಪ್ರೊ.ಗಾಡ್ಗಿಲ್ ಅವರು ಯುವಜನತೆಗೆ, ವಿದ್ಯಾರ್ಥಿಗಳಿಗೆ ಹಾಗೂ ಜನಸಾಮಾನ್ಯರಿಗೆ ಸ್ಫೂರ್ತಿಯಾಗಿದ್ದರು. ಪರಿಸರ ಸಂರಕ್ಷಣೆಯಲ್ಲಿ ಇಡೀ ಸಮಾಜದ ಪಾತ್ರ ಎಷ್ಟು ಮುಖ್ಯ ಎಂದು ಅವರು ಸದಾ ಕಾಲ ಎಚ್ಚರಿಸಿ ಜನರನ್ನು ಪ್ರೋತ್ಸಾಹಿಸುತ್ತಿದ್ದರು ಎಂದವರು ನೆನಪಿಸಿಕೊಂಡರು.

ಪ್ರೊ.ಗಾಡ್ಗೀಳ್ ಒಬ್ಬ ಸರಳ ಸ್ವಭಾವದ ಸೀದಾ–ಸಾದಾ ಮನುಷ್ಯ. ವಿದೇಶಗಳಲ್ಲಿ ಕಲಿತು ಬಂದರೂ ಅವರು ಮರಗಳು ಪಶ್ಚಿಮ ಘಟ್ಟದ ಪಟ್ಟ ಹಾದಿಗಳ ಮಧ್ಯೆ ಹಾದಿಗಟ್ಟರೆ ಅಲ್ಲಿನ ಜನರ ಮಧ್ಯೆ ಅವರೊಂದಿಗೆ ಒಬ್ಬರಾಗಿ ಸರಳವಾಗಿ ಬದುಕುತ್ತಿದ್ದರು ಎಂದರು.



ರಾಫೆಲ್ ಝೇಂಕಾರ, ಪಾಕ್‌ನಲ್ಲಿ ನಡುಕ

ಸಿಂಧೂರ ಪ್ರತಿದಾಳಿಯಲ್ಲಿ ಡಸ್ಸಾಲ್ಟ್ ರಾಫೆಲ್ ಯುದ್ಧ ವಿಮಾನವು ಪ್ರಮುಖ ಪಾತ್ರ ವಹಿಸಿತು. 2020ರಲ್ಲಿ ಫ್ರಾನ್ಸ್‌ನಿಂದ ಭಾರತ ಮೊದಲ ಹಂತದಲ್ಲಿ 36 ರಾಫೆಲ್ ಯುದ್ಧ ವಿಮಾನಗಳನ್ನು ಖರೀದಿಸಿತ್ತು. ಇದರಿಂದಾಗಿ ರಾಫೆಲ್ ಫೈಟರ್ ಜೆಟ್‌ಗಳು ನಿರ್ಣಾಯಕ ಪಾತ್ರ ವಹಿಸಿದ್ದವು. ರಾಫೆಲ್ ಖರೀದಿಸುವ ಕೇಂದ್ರ ಸರ್ಕಾರದ ಸಮಯೋಚಿತ ನಿರ್ಧಾರದಿಂದಾಗಿ ಪಾಕಿಸ್ತಾನಕ್ಕೆ ಪಾಠ ಕಲಿಸಲು ಸಾಧ್ಯವಾಯಿತು. 2025ರ ಏ.28ರಂದು ಭಾರತ ಇನ್ನೊಂದು ಒಪ್ಪಂದ ಮಾಡಿಕೊಂಡಿದ್ದು, ಭಾರತೀಯ ಯುದ್ಧನೌಕೆಗಳಲ್ಲಿ ನಿಯೋಜಿಸಲು 26 ರಾಫೆಲ್-ಮರೈನ್ ಯುದ್ಧ ವಿಮಾನಗಳನ್ನು ಖರೀದಿಸಲಿದೆ. 2027ರ ವೇಳೆಗೆ ಭಾರತದ ರಾಫೆಲ್‌ಗಳ ಸಂಖ್ಯೆ 62ಕ್ಕೇರಲಿದೆ.

- ನಿಖರ ದಾಳಿಗಾಗಿ ಸ್ಕಾಲ್ಪ್, ಹ್ಯಾಮರ್ ಕ್ಷಿಪಣಿ ಬಳಕೆ
- ಒಂದೇ ಸಮಯದಲ್ಲಿ ವಾಯು ಮತ್ತು ಭೂಪ್ರದೇಶದಲ್ಲಿ ಯುದ್ಧ ಸಾಮರ್ಥ್ಯ
- ಅತ್ಯಾಧುನಿಕ ಎಇಎಸ್‌ಎ ರಡಾರ್‌ನಿಂದ ದೂರದಿಂದಲೇ ಶತ್ರುವಿನ ಪತ್ತೆ
- ಹಲವು ಗುರಿಗಳನ್ನು ಪತ್ತೆಹಚ್ಚಿ ಹೊಡೆಯುವಲ್ಲಿ ನಿಖರ ಶಕ್ತಿ
- ಶತ್ರು ರಡಾರ್‌ಗಳಿಗೆ ಜ್ಯಾಮಿಂಗ್ ಮೂಲಕ ಹುಚ್ಚು ಹಿಡಿಸಬಲ್ಲ ಸ್ಪೆಕ್ಟ್ರಾ ತಂತ್ರಜ್ಞಾನ
- ಸ್ವಯಂ ಸಂರಕ್ಷಣಾ ಸಾಮರ್ಥ್ಯ
- ಸೂಪರ್‌ಸೋನಿಕ್ ವೇಗದಲ್ಲಿ ಝೇಂಕರಿಸುತ್ತ ಸಂಚಾರ

ರಕ್ತ ಸಿಂದೂರ: ದೇಶದ ಆಧುನಿಕ ಶಸ್ತ್ರಾಭ್ಯಾಸ!

ದೇಶದ ಮೊದಲ ರಕ್ಷಣಾ ಕವಚ ವಾಯು ರಕ್ಷಣಾ ವ್ಯವಸ್ಥೆ
ಅತ್ಯಾಧುನಿಕ ಯುದ್ಧ ವಿಮಾನ, ಡ್ರೋನ್, ಕ್ಷಿಪಣಿಗಳ ಬಳಕೆ

ಸಿಂಧೂರ ದಾಳಿಗೆ ಇಲಿಗಳಂತೆ ಬಿಲ ಸೇರಿದ್ದ ಪಾಕ್ ಉಗ್ರರು

100ಕ್ಕೂ ಅಧಿಕ ಉಗ್ರರು, 64 ಪಾಕ್ ಸೈನಿಕರು ಸಾವು



▸ ಮುರಲಿ ಕೃಷ್ಣ ಭಟ್

ಭಾರತೀಯ ಸೈನ್ಯವು 2025ರ ಮೇ 7ರಂದು ಮಧ್ಯರಾತ್ರಿ ಆಪರೇಷನ್ ಸಿಂಧೂರ್ ಅನ್ನು ಪ್ರಾರಂಭಿಸಿತು. 2025ರ ಏ.22ರಂದು ನಡೆದ ಪಹಲ್ಗಾಮ್ ಹತ್ಯಾಕಾಂಡವು ಈ ದಿಟ್ಟ ಕ್ರಮಕ್ಕೆ ಪ್ರೇರಣೆಯಾಯಿತು. ಪಾಕಿಸ್ತಾನ ಮತ್ತು ಪಾಕ್ ಆಕ್ರಮಿತ ಕಾಶ್ಮೀರದ (ಪಿಒಕೆ) ಆಯ್ದ 9 ಪ್ರದೇಶಗಳಲ್ಲಿನ ಭಯೋತ್ಪಾದಕ ಅಡಗುದಾಣಗಳ ಮೇಲೆ ಭಾರತೀಯ ವಾಯುಪಡೆಯು ನಿರಂತರ ವೈಮಾನಿಕ ದಾಳಿಗಳನ್ನು ನಡೆಸಿದ್ದು, 100ಕ್ಕೂ ಅಧಿಕ ಉಗ್ರರು ಹತರಾಗಿದ್ದರು. ಇಂತಹ ಪರಿಣಾಮಕಾರಿ ದಾಳಿಗಳನ್ನು ನಡೆಸಲು ಹೇಗೆ ಸಾಧ್ಯವಾಯಿತು?

ಭಾರತೀಯ ಸಶಸ್ತ್ರಪಡೆಗಳು ತಮ್ಮ ಆಧುನಿಕ ಯುದ್ಧ ಸಾಮರ್ಥ್ಯವನ್ನು ಜಗತ್ತಿಗೆ ಪ್ರದರ್ಶಿಸಿದ್ದು, ವಿವಿಧ ಅತ್ಯಾಧುನಿಕ ಶಸ್ತ್ರಾಸ್ತ್ರಗಳನ್ನು ಬಳಸಿದವು. ಭಾರತೀಯ ವಾಯುಪಡೆಯು ರಫೇಲ್ ಯುದ್ಧವಿಮಾನಗಳಿಂದ ಹಾರಿಸಲಾದ ಸ್ಕಾಲ್ಪ್ ಕ್ಷಿಪಣಿಗಳು ಮತ್ತು ಹ್ಯಾಮರ್ ನಂತಹ ಅತಿ ತೀವ್ರತೆಯ ಬಾಂಬ್ ಗಳನ್ನು ಬಳಸಿತು. ಹೆಚ್ಚು ದೂರವ್ಯಾಪ್ತಿಯ ಡ್ರೋನ್‌ಗಳು ಮತ್ತು ನಾಗಾಸ್ತ್ರ-1ನಂತಹ ಗುರಿಯ ಮೇಲೆ ತಂಗಿ (ಲೊಯಿಟರಿಂಗ್ ಮ್ಯೂನಿಷನ್‌ಗಳು) ನಿಖರ ದಾಳಿಗಳಿಗೆ ಮತ್ತು ಆಧುನಿಕ ಯುದ್ಧಕ್ಕೆ ನೆರವಾದವು. ಭಾರತೀಯ ಭೂಪಡೆಯು ಮೀಡಿಯಂ ಮಷೀನ್ ಗನ್‌ಗಳು, ಟ್ಯಾಂಕ್ ನಿರೋಧಕ ಗನ್‌ಗಳು ಮತ್ತು ಮಾರ್ಟಾರ್ ಗನ್‌ಗಳನ್ನು ಬಳಸಿದ್ದು, ಆಕಾಶದೀಪ್ ರಡಾರ್ ವಾಯು ರಕ್ಷಣಾ ವ್ಯವಸ್ಥೆಗೆ ಬೆಂಬಲ ನೀಡಿತ್ತು. ಭಾರತೀಯ ನೌಕಾಪಡೆಯು ಐಎನ್‌ಎಸ್ ವಿಕ್ರಾಂತ್ ನೇತೃತ್ವದ ಕ್ಯಾರಿಯರ್ ಯುದ್ಧನೌಕೆಗಳ ಗುಂಪಿನ ಮೂಲಕ ಸಮುದ್ರ ಪ್ರದೇಶಗಳನ್ನು ರಕ್ಷಿಸಿತು. ಐಎನ್‌ಎಸ್ ವಿಕ್ರಾಂತ್‌ನಿಂದ ಮಿಗ್-29ಕೆ ಯುದ್ಧವಿಮಾನಗಳನ್ನು ಹಾರಿಸಲಾಯಿತು, ವಿಶಾಖಪಟ್ಟಣಂ ವರ್ಗದ ಡೆಸ್ಟ್ರಾಯರ್ ಮತ್ತು ತಲ್ವಾರ್ ವರ್ಗದ ಫ್ರಿಗೇಟ್ ಯುದ್ಧ ನೌಕೆಗಳು ಸಿಂಧೂರ ಕಾರ್ಯಾಚರಣೆಯಲ್ಲಿ ಸೇನೆಗೆ ಸಹಾಯ ಮಾಡಿದ್ದವು.

ಆಪರೇಷನ್ ಸಿಂಧೂರದಲ್ಲಿ ಸಶಸ್ತ್ರಪಡೆಗಳು ನಾಶಗೈದ 9 ಭಯೋತ್ಪಾದಕ ಶಿಬಿರಗಳಲ್ಲಿ, ಲೀಪಾ ಕಣಿವೆಯ ಪಾಕಿಸ್ತಾನಿ ಸೇನಾ ಮೂಲಸೌಕರ್ಯವೂ ಸೇರಿದೆ. ಭಾರತದ ಅಧಿಕಾರಿಗಳ ಅಂದಾಜಿನ ಪ್ರಕಾರ, ಹಾನಿಗೊಳಗಾದ ಪ್ರದೇಶಗಳಲ್ಲಿ ಮರುನಿರ್ಮಾಣಕ್ಕೆ ಪಾಕ್ 8ರಿಂದ 12 ತಿಂಗಳುಗಳ ಸಮಯ ತೆಗೆದುಕೊಂಡಿದೆ. ಅಷ್ಟೊಂದು ಘಾತಕ ದಾಳಿಯನ್ನು ಭಾರತೀಯ ಸಶಸ್ತ್ರಪಡೆಗಳು ನಡೆಸಿವೆ. ನಾಲ್ಕು ದಶಕಗಳಿಂದ ಪಾಕ್ ಗಡಿಯಾಚೆಗಿನ ಭಯೋತ್ಪಾದನೆ ಮೂಲಕ ಭಾರತವನ್ನು ಕೆಣಕುತ್ತಲೇ ಇದ್ದರೂ ನರೇಂದ್ರ ಮೋದಿ ಪ್ರಧಾನಿ ಆಗುವವರೆಗೆ ಭಾರತವು ಇಂತಹದ್ದೊಂದು ಪ್ರತಿದಾಳಿ ನೀಡಿರಲಿಲ್ಲ. ಹಾಗಾಗಿ ಪಾಕ್ ನಡೆಸುತ್ತಲೇ ಬಂದ ಗಡಿಯಾಚೆಗಿನ ಭಯೋತ್ಪಾದನೆಗೆ ಸರಿಯಾದ ಸಿಂಹಸ್ವಪ್ನ ಪ್ರತಿಕ್ರಿಯೆ ನೀಡಲೇಬೇಕು ಎಂಬ ಮನೋಭಾವ ಪ್ರಧಾನಿ, ಸೈನಿಕರಷ್ಟೇ ಅಲ್ಲದೆ ಪ್ರತಿಯೊಬ್ಬ ಭಾರತೀಯ ಬೇಡಿಕೆಯಾಗಿತ್ತು. ಅಲ್ಲದೆ, ಪಹಲ್ಗಾಮ್ ದಾಳಿ ಬಳಿಕ ಪ್ರತಿಯೊಬ್ಬ ಭಾರತೀಯನ ರಕ್ತ ಕೊತ ಕೊತ ಕುದಿದಿದ್ದು, ಪ್ರತೀಕಾರದ ಕೂಗು ಹೆಚ್ಚಾಗಿತ್ತು. ಇದರಿಂದ ಗಡಿಯಾಚೆಗಿನ ಭಯೋತ್ಪಾದನೆಗೊಂದು ವಿರಾಮ ಹಾಕಬೇಕೆಂಬ ಉದ್ದೇಶದಿಂದ ಕೇಂದ್ರ ಸರ್ಕಾರ ಈ ಮಹತ್ವದ ಸಿಂಧೂರ ಕಾರ್ಯಾಚರಣೆ ನಡೆಸಿತ್ತು. ಇದು ಮಾನಸಿಕವಾಗಿ ಪಾಕ್ ಭಯೋತ್ಪಾದಕರನ್ನು ಕುಗ್ಗಿಸಿದ್ದು, ಅವರು ಬೆಕ್ಕುಇಲಿ ಆಟದಂತೆ ಮರೆಯಲ್ಲಿ ಇದ್ದುಕೊಂಡು ದಾಳಿಗೆ ಪ್ರಯತ್ನಿಸುತ್ತಿದ್ದರು. ಆದರೆ ಸಶಸ್ತ್ರಪಡೆಗಳ ನಿಖರ ದಾಳಿಗೆ ಉಗ್ರರ ಅಡಗುದಾಣಗಳೇ ಧ್ವಂಸಗೊಂಡವು. ಪಾಕ್ ಸರ್ಕಾರವು ಭಯೋತ್ಪಾದಕರ ಅಂತ್ಯ ಸಂಸ್ಕಾರವನ್ನೂ ನಡೆಸಿತ್ತು.

ಸಿಂದೂರದಲ್ಲಿ ಬ್ರಹ್ಮೋಸ್ ಪಾತ್ರ

ಸಿಂದೂರ ಕಾರ್ಯಾಚರಣೆ ವೇಳೆ ಪಾಕಿಸ್ತಾನದ ಸೇನಾನೆಲೆಗಳು, ವಾಯುನೆಲೆಗಳ ಮೇಲೆ ಭಾರತದಿಂದಲೇ ದೂರದ ನಿಖರ ಅತಿ ವೇಗದ ದಾಳಿ ನಡೆಸಲು ಇಂಡೋ-ರಷ್ಯಾ ಜಂಟಿ ಉತ್ಪಾದನೆಯ ಬ್ರಹ್ಮೋಸ್ ಕ್ಷಿಪಣಿಗಳನ್ನು ಬಳಸಲಾಗಿತ್ತು. ಪಾಕಿಸ್ತಾನದ 12 ವಾಯುನೆಲೆ ಮೇಲೆ ಬ್ರಹ್ಮೋಸ್ ಸೂಪರ್‌ಸೋನಿಕ್ ವೇಗದಲ್ಲಿ ದಾಳಿ ನಡೆಸಿದ್ದು, ಅವುಗಳು ಸಂಪೂರ್ಣ ಧ್ವಂಸಗೊಂಡಿದ್ದವು. ಪಾಕ್ ಮತ್ತು ಪಾಕ್ ಆಕ್ರಮಿತ ಕಾಶ್ಮೀರದೊಳಗಿನ ಭಯೋತ್ಪಾದಕ ಅಡಗುದಾಣಗಳ ಮೇಲೆ ಬ್ರಹ್ಮೋಸ್ ದಾಳಿ ನಡೆಸಲಾಗಿತ್ತು. ಅಂತಾರಾಷ್ಟ್ರೀಯ ಗಡಿಯನ್ನು ದಾಟದೆಯೇ ಭಯೋತ್ಪಾದಕ ಮೂಲಸೌಕರ್ಯಗಳನ್ನು ಧ್ವಂಸಗೊಳಿಸಲಾಗಿತ್ತು.

ಬ್ರಹ್ಮೋಸ್ ವಿಶೇಷತೆಗಳು

- ಇದು ಶಬ್ದಕ್ಕಿಂತಲೂ ವೇಗದಲ್ಲಿ ದಾಳಿ ಮಾಡಬಲ್ಲ ಕ್ಷಿಪಣಿ
- ಪ್ರತಿ ಗಂಟೆಗೆ 3,430ರಿಂದ 3,675 ಕಿ.ಮೀ. ಸೂಪರ್ ಸೋನಿಕ್ ವೇಗ
- ದೂರವ್ಯಾಪ್ತಿ 290ರಿಂದ, 400-500 ಕಿ.ಮೀ. ಸಾಮರ್ಥ್ಯ
- ಸ್ಫೋಟಕದ ಭಾರ 200ರಿಂದ 300 ಕೆ.ಜಿ.
- ಯುದ್ಧನೌಕೆಗಳಲ್ಲೂ ಬ್ರಹ್ಮೋಸ್ ಬಳಕೆ



ಸ್ಕಾಲ್ಪ್ ಕ್ಷಿಪಣಿ

ಇದೊಂದು ಕ್ರೂಸ್ ಕ್ಷಿಪಣಿಯಾಗಿದೆ. ಅಂದರೆ ಫೈಟರ್‌ಜೆಟ್‌ಗಳಲ್ಲಿ ಬಳಸಲಾಗುವ ಸಣ್ಣ ಕ್ಷಿಪಣಿಯಾಗಿದ್ದು, 250ರಿಂದ 500 ಕಿ.ಮೀ. ದೂರವ್ಯಾಪ್ತಿಯನ್ನು ಹೊಂದಿದೆ. ದೂರದಿಂದಲೇ ಅತ್ಯಂತ ನಿಖರ ದಾಳಿ ಮಾಡಬಲ್ಲದು. ಹೆಚ್ಚು ದೂರದ ಗುರಿಗಳಿಗಾಗಿ ಇದನ್ನು ಬಳಕೆ ಮಾಡಲಾಗುತ್ತದೆ.

ಹ್ಯಾಮರ್ ಬಾಂಬ್

ಇದು ಕ್ಷಿಪಣಿಯೋ ಅಥವಾ ಸಾಮಾನ್ಯ ಬಾಂಬ್‌ನಂತಲ್ಲ, ಇದೊಂದು ಮಾರ್ಗದರ್ಶನ ಆಧಾರಿತ ಬಾಂಬ್ ಆಗಿದೆ. ಜಿಪಿಎಸ್-ಐಎನ್‌ಎಸ್ ತಂತ್ರಜ್ಞಾನದಿಂದ ಮಾರ್ಗದರ್ಶನ ಪಡೆದುಕೊಂಡು ದಾಳಿ ನಡೆಸುತ್ತದೆ. 250ರಿಂದ 500 ಕೆ.ಜಿ. ಭಾರ ಇರುತ್ತದೆ. ಇದರ ದಾಳಿ ದೂರವ್ಯಾಪ್ತಿ 50ರಿಂದ 70 ಕಿ.ಮೀ. ಆಗಿದೆ.

ವಾಯು ರಕ್ಷಣಾ ಸಾಮರ್ಥ್ಯ: ತಂತ್ರಜ್ಞಾನವೇ ಮೊದಲ ರಕ್ಷಾಕವಚ!

ರಡಾರ್‌ಗಳು, ನಿಯಂತ್ರಣ ಕೇಂದ್ರಗಳು, ತೋಪುದಳ (ಆರ್ಟಿಲರಿ) ಹಾಗೂ ವಿಮಾನ ಅಥವಾ ಡ್ರೋನ್ ಆಧಾರಿತ ಮತ್ತು ಭೂ-ಆಧಾರಿತ ಕ್ಷಿಪಣಿಗಳ ಸಂಪರ್ಕಜಾಲದಿಂದ ಕಣ್ಗಾವಲು ನಡೆಸುವ ಮೂಲಕ ವಾಯು ರಕ್ಷಣಾ ವ್ಯವಸ್ಥೆಯು ಅಪಾಯಗಳನ್ನು ಪತ್ತೆಹಚ್ಚಿ ಅವುಗಳನ್ನು ನಿಷ್ಕ್ರಿಯಗೊಳಿಸುತ್ತವೆ. ಸೇನಾಪಡೆ, ನೌಕಾಪಡೆ ಮತ್ತು ವಾಯುಪಡೆ ಸಂಪನ್ಮೂಲಗಳನ್ನು ಒಗ್ಗೂಡಿಸಿ ಅತ್ಯುತ್ತಮ ಸಮನ್ವಯದಿಂದ ವಾಯು ರಕ್ಷಣಾ ವ್ಯವಸ್ಥೆಗಳು ಸೇವೆ ಸಲ್ಲಿಸಿವೆ. ಈ ವ್ಯವಸ್ಥೆಗಳು ದಾಟಲಾಗದ ಭದ್ರತಾ ಗೋಡೆಯಂತೆ ಕಾರ್ಯನಿರ್ವಹಿಸಿ, ಪಾಕಿಸ್ತಾನದ ಪ್ರತಿದಾಳಿ ಪ್ರಯತ್ನಗಳನ್ನು ವಿಫಲಗೊಳಿಸಿವೆ. ಭಾರತೀಯ ವಾಯುಪಡೆಯ ಏಕೀಕೃತ ವಾಯು ಕಮಾಂಡ್ ಮತ್ತು ನಿಯಂತ್ರಣ ವ್ಯವಸ್ಥೆ (ಐಎಸಿಸಿಎಸ್) ಈ ಎಲ್ಲಾ ಘಟಕಗಳನ್ನು ಒಂದೇ ವೇದಿಕೆಯಲ್ಲಿ ಒಟ್ಟುಗೂಡಿಸಿ, ಆಧುನಿಕ ಯುದ್ಧಕ್ಕೆ ಅಗತ್ಯವಾದ ನೆಟ್-ಸೆಂಟ್ರಿಕ್ ಕಾರ್ಯಾಚರಣಾ ಸಾಮರ್ಥ್ಯವನ್ನು ಒದಗಿಸಿತು.

ಸಿಂದೂರದಲ್ಲಿ ಬಳಕೆಯಾದ ವಾಯು ರಕ್ಷಣಾ ವ್ಯವಸ್ಥೆ ಸಂಪನ್ಮೂಲಗಳು



1. ಆಕಾಶ್‌ದೀಪ್ ವಾಯು ರಕ್ಷಣಾ ವ್ಯವಸ್ಥೆ

- ವರ್ಗ: ಮಧ್ಯಮ ದೂರದ ನೆಲದಿಂದ-ಆಕಾಶ ಕ್ಷಿಪಣಿ ವ್ಯವಸ್ಥೆ (ಎಸ್‌ಎಎಂ)

ವಿಶೇಷತೆಗಳು

- ಶತ್ರು ಯುದ್ಧ ವಿಮಾನ, ಡ್ರೋನ್ ಮತ್ತು ಕ್ಷಿಪಣಿಗಳನ್ನು ಹೊಡೆದುರುಳಿಸುವ ಸಾಮರ್ಥ್ಯ
- ರಡಾರ್ ಆಧಾರಿತ ಕಣ್ಗಾವಲು ಮತ್ತು ಗುರಿ ಮೇಲಿನ ಹಿಡಿತ ಸಾಧಿಸುವ ಸಾಮರ್ಥ್ಯ
- ವೇಗವಾದ ನಿಯೋಜನೆ ಮತ್ತು ನಿಖರ ದಾಳಿ
- ಆಕಾಶ್ ಕ್ಷಿಪಣಿಗಳ ದಾಳಿ ದೂರವ್ಯಾಪ್ತಿ 25-30 ಕಿ.ಮೀ.
- ಆಕಾಶ್-ಎನ್‌ಜಿ ಕ್ಷಿಪಣಿಗಳ ದಾಳಿ ದೂರವ್ಯಾಪ್ತಿ 40-70 ಕಿ.ಮೀ.
- ಎಲೆಕ್ಟ್ರಾನಿಕ್ ಸ್ಕ್ಯಾನಿಂಗ್ ಮಾಡಬಲ್ಲ ರಾಜೇಂದ್ರ-3ಡಿ ರಡಾರ್

2. ಸಮಗ್ರ ವಾಯು ನಿಯಂತ್ರಣ ವ್ಯವಸ್ಥೆ (ಐಎಸಿಸಿಎಸ್)

- ವರ್ಗ: ಕಮಾಂಡ್, ನಿಯಂತ್ರಣ ಜಾಲ ವ್ಯವಸ್ಥೆ

ವಿಶೇಷತೆಗಳು

- ಎಲ್ಲಾ ವಾಯು ರಕ್ಷಣಾ ಘಟಕಗಳಿಗೂ ಒಂದೇ ಸಂಪರ್ಕಜಾಲ
- ನೈಜ-ಸಮಯದ ಚಿತ್ರಣ ಹಂಚಿಕೆ ಮತ್ತು ಸ್ವತಃ ನಿರ್ಧಾರ ತೆಗೆದುಕೊಳ್ಳುವ ಸಾಮರ್ಥ್ಯ
- ನೆಟ್-ಕೇಂದ್ರೀಕೃತ ಯುದ್ಧಕ್ಕೆ ಮುಖ್ಯ ಆಧಾರ
- ಆಕಾಶ್, ಎಸ್-400 (ಸುದರ್ಶನ ಚಕ್ರ), ಬರಾಕ್-8 ಕ್ಷಿಪಣಿಗಳ ಬಳಕೆ

3. ರಡಾರ್‌ಗಳು

- ವರ್ಗ: ಪತ್ತೆಹಚ್ಚುವ ಮತ್ತು ಕಣ್ಗಾವಲು ವ್ಯವಸ್ಥೆ

ವಿಶೇಷತೆಗಳು

- ದೂರದಲ್ಲಿರುವ ಗುರಿಗಳನ್ನು ಪತ್ತೆಹಚ್ಚುವುದು
- ಡ್ರೋನ್‌ಗಳು, ಕ್ಷಿಪಣಿಗಳು ಅಥವಾ ಯುದ್ಧ ವಿಮಾನಗಳ ಕಣ್ಗಾವಲು ಸಾಮರ್ಥ್ಯ
- ಬಹು-ಪದರದ ರಕ್ಷಣೆಗೆ ಮೂಲಭೂತ ತಂತ್ರಜ್ಞಾನ

4. ಭೂ-ಆಧಾರಿತ ವಾಯು ರಕ್ಷಣಾ ಕ್ಷಿಪಣಿಗಳು

- ವರ್ಗ: ಎಸ್‌ಎಎಂ ವ್ಯವಸ್ಥೆ

ವಿಶೇಷತೆಗಳು

- ವಿವಿಧ ದೂರವ್ಯಾಪ್ತಿಯಲ್ಲಿ ಗುರಿ ಹೊಡೆದುರುಳಿಸುವ ಸಾಮರ್ಥ್ಯ
- ಕ್ಷಿಪಣಿ ಮತ್ತು ವಿಮಾನ ದಾಳಿಗಳನ್ನು ತಡೆಯುವ ಸಾಮರ್ಥ್ಯ
- ಹಲವು ಗುರಿಗಳನ್ನು ಒಂದೇ ಸಮಯದಲ್ಲಿ ನಿಷ್ಕ್ರಿಯಗೊಳಿಸುವ ಸಾಮರ್ಥ್ಯ
- ಆಕಾಶ್, ಎಸ್-400 ಟ್ರಿಯಂಫ್, ಬರಾಕ್-8, ಸ್ಪೈಡರ್, ಕ್ಯೂಆರ್‌ಎಸ್‌ಎಎಂ ಕ್ಷಿಪಣಿಗಳು

5. ವಿಮಾನ ಆಧಾರಿತ ವಾಯು ರಕ್ಷಣಾ ವ್ಯವಸ್ಥೆ

- ವರ್ಗ: ಯುದ್ಧ ವಿಮಾನಗಳ ಮೂಲಕ ರಕ್ಷಣಾ ಕಾರ್ಯ

ವಿಶೇಷತೆಗಳು

- ಶತ್ರು ವಿಮಾನಗಳನ್ನು ಮಧ್ಯದಲ್ಲೇ ತಡೆಯುವುದು (ಇಂಟರ್‌ಸೆಪ್ಷನ್)
- ವಾಯು ಪ್ರದೇಶದ ಪ್ರಾಬಲ್ಯ ಕಾಪಾಡುವುದು
- ವೇಗವಾಗಿ ಪ್ರತಿಕ್ರಿಯಿಸುವ ಸಾಮರ್ಥ್ಯ
- ಅಸ್ತ್ರ, ಮಿಟಿಯೋರ್, ಎಂಐಸಿಎ, ಆರ್-73, ಆರ್-77 ಕ್ಷಿಪಣಿಗಳು
- ಅಸ್ತ್ರ ಕ್ಷಿಪಣಿಯ ದಾಳಿ ದೂರವ್ಯಾಪ್ತಿ 80ರಿಂದ 110 ಕಿ.ಮೀ.

6. ಸ್ಪೈಡರ್ ವಾಯು ರಕ್ಷಣಾ ವ್ಯವಸ್ಥೆ

ಇಸ್ರೇಲಿ ತಂತ್ರಜ್ಞಾನದ ಸಣ್ಣ ಮತ್ತು ಮಧ್ಯಮ ದೂರವ್ಯಾಪ್ತಿಗೆ ವೇಗವಾಗಿ ದಾಳಿ ನಡೆಸಬಲ್ಲ ವಾಯು ರಕ್ಷಣಾ ವ್ಯವಸ್ಥೆ ಇದಾಗಿದೆ. ಸ್ಪೈಡರ್ ಉಡಾವಣಾ ವಾಹನದಿಂದ ಪೈಥಾನ್-5 ಮತ್ತು ಡರ್ಬಿ ಖಂಡಾಂತರ ಕ್ಷಿಪಣಿಗಳನ್ನು ಬಳಸಿಕೊಂಡು ದಾಳಿ ನಡೆಸಲಾಗುತ್ತದೆ. ಎಲ್ಲಾ ಹವಾಮಾನದಲ್ಲಿ, ವೇಗದ ಪ್ರತಿಕ್ರಿಯೆ ನೀಡಬಲ್ಲ ಸ್ಪೈಡರ್‌ನಲ್ಲಿ ಎರಡು ವಿಧಗಳಿವೆ. ಸಣ್ಣ ದೂರವ್ಯಾಪ್ತಿಗೆ ಸ್ಪೈಡರ್-ಎಸ್‌ಆರ್ ಮತ್ತು ಮಧ್ಯಮ ದೂರವ್ಯಾಪ್ತಿಗೆ ಸ್ಪೈಡರ್-ಎಂಆರ್ ವಾಯು ರಕ್ಷಣಾ ವ್ಯವಸ್ಥೆಗಳನ್ನು ಬಳಸಲಾಗುತ್ತವೆ.

ಕ್ಷಿಪಣಿಗಳು: ಪೈಥಾನ್-5, ಡರ್ಬಿ

ದೂರವ್ಯಾಪ್ತಿ: ಪೈಥಾನ್ - 5.2 ಕಿ.ಮೀ., ಡರ್ಬಿ 50 ಕಿ.ಮೀ.

7. ಬರಾಕ್-8 ವಾಯು ರಕ್ಷಣಾ ಕ್ಷಿಪಣಿ

ಇದೊಂದು ಇಂಡೋ-ಇಸ್ರೇಲಿ ವಾಯು ರಕ್ಷಣಾ ಕ್ಷಿಪಣಿ ವ್ಯವಸ್ಥೆಯಾಗಿದೆ. ಯಾವುದೇ ರೀತಿಯ ಯುದ್ಧ ವಿಮಾನಗಳು, ಹೆಲಿಕಾಪ್ಟರ್‌ಗಳು, ಯುದ್ಧನೌಕೆ ನಿರೋಧಕ ಕ್ಷಿಪಣಿಗಳು ಅಥವಾ ಡ್ರೋನ್‌ಗಳು, ಖಂಡಾಂತರ ಮತ್ತು ಕ್ರೂಸ್ ಕ್ಷಿಪಣಿಗಳ ವಿರುದ್ಧ ವಾಯು ಪ್ರದೇಶ ಸುರಕ್ಷತೆಯನ್ನು ಕಾಪಾಡಿಕೊಳ್ಳುವ ಸಾಮರ್ಥ್ಯ ಹೊಂದಿದೆ. 360 ಡಿಗ್ರಿ ಕಣ್ಗಾವಲು ಇದರ ಜತೆಗಿರಲಿದೆ.

ದೂರವ್ಯಾಪ್ತಿ: 0.5ರಿಂದ 100 ಕಿ.ಮೀ.

9. ಪೃಥ್ವಿ ವಾಯು ರಕ್ಷಣಾ ವ್ಯವಸ್ಥೆ

ವಾಯು ಪ್ರದೇಶದಲ್ಲಿ ಬರುವ ಯಾವುದೇ ಅಪಾಯಕಾರಿ ಖಂಡಾಂತರ ಕ್ಷಿಪಣಿಗಳನ್ನು ಹೊಡೆದು ಉರುಳಿಸಬಲ್ಲ ಸಾಮರ್ಥ್ಯ ಹೊಂದಿರುವ ವಾಯು ರಕ್ಷಣಾ ಕ್ಷಿಪಣಿ ವ್ಯವಸ್ಥೆ ಇದಾಗಿದೆ. ಇದು 600 ಕಿ.ಮೀ. ದೂರದಿಂದಲೇ ಸುಮಾರು 200 ಗುರಿಗಳನ್ನು ಪತ್ತೆಹಚ್ಚುವ ಸಾಮರ್ಥ್ಯದೊಂದಿಗೆ ವಿನ್ಯಾಸಗೊಂಡಿದೆ.

ದೂರವ್ಯಾಪ್ತಿ: 300ರಿಂದ 2,000 ಕಿ.ಮೀ.

8. ತ್ವರಿತ ಪ್ರತಿಕ್ರಿಯೆ ವಾಯು ಕ್ಷಿಪಣಿ ವ್ಯವಸ್ಥೆ (ಕ್ಯೂಆರ್‌ಎಸ್‌ಎಎಂ)

ಇದು ಭಾರತ್ ಎಲೆಕ್ಟ್ರಾನಿಕ್ಸ್ ಲಿ. ಮತ್ತು ಭಾರತ್ ಡೈನಾಮಿಕ್ಸ್ ಲಿ. ರಕ್ಷಣಾ ಕಂಪನಿಗಳು ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ (ಡಿಆರ್‌ಡಿಒ) ಜತೆಗೂಡಿ ಅಭಿವೃದ್ಧಿಪಡಿಸಿದ ತ್ವರಿತ ವೇಗದ ಪ್ರತಿಕ್ರಿಯೆ ನೀಡಬಲ್ಲ ವಾಯು ರಕ್ಷಣಾ ಕ್ಷಿಪಣಿ ವ್ಯವಸ್ಥೆಯಾಗಿದೆ. ಶತ್ರುದಾಳಿ ಪತ್ತೆಹಚ್ಚಬಲ್ಲ ಸಾಮರ್ಥ್ಯ, 360 ಡಿಗ್ರಿ ಕಣ್ಗಾವಲು ಮತ್ತು ಸ್ವಯಂಚಾಲಿತ ನಿಯಂತ್ರಣವನ್ನು ಹೊಂದಿದೆ.

ದೂರವ್ಯಾಪ್ತಿ: 3ರಿಂದ 30 ಕಿ.ಮೀ.

10. ಎಸ್-400 ಟ್ರಿಯಂಫ್ (ಸುದರ್ಶನ ಚಕ್ರ)

ಇದೊಂದು ಅತ್ಯಾಧುನಿಕ, ದೀರ್ಘ ದೂರವ್ಯಾಪ್ತಿ ಸಾಮರ್ಥ್ಯದೊಂದಿಗೆ ವಿನ್ಯಾಸಗೊಳಿಸಿದ ವಾಯು ರಕ್ಷಣಾ ವ್ಯವಸ್ಥೆಯಾಗಿದೆ. ರಷ್ಯಾದಲ್ಲಿ ಅಭಿವೃದ್ಧಿಪಡಿಸಲಾಗಿದ್ದು, ಸಿಂದೂರದಲ್ಲಿ ಬಳಕೆಯಾದ ಪ್ರಮುಖ ಯುದ್ಧೋಪಕರಣಗಳಲ್ಲಿ ಒಂದಾಗಿದೆ. ಒಂದೇ ಸಮಯದಲ್ಲಿ ನಾಲ್ಕು ವಿಧದ ಕ್ಷಿಪಣಿಗಳನ್ನು ಪ್ರಯೋಗಿಸಬಲ್ಲ ಸಾಮರ್ಥ್ಯವೇ ಇದರ ಪ್ರಮುಖ ವಿಶೇಷತೆಯಾಗಿದೆ. ಇದೇ ಕಾರಣದಿಂದ ಇದನ್ನು ಸುದರ್ಶನ ಚಕ್ರವೆಂಬ ಹೆಸರಿನಿಂದ ಕರೆಯಲಾಗುತ್ತದೆ.



ಸುದರ್ಶನ ಚಕ್ರದ ನಾಲ್ಕು ಕ್ಷಿಪಣಿಗಳು

- 40ಎನ್6 - ಅತ್ಯಂತ ದೂರದ ಗುರಿಗಳಿಗಾಗಿ ಬಳಕೆ, ಇದರ ದೂರವ್ಯಾಪ್ತಿ 400 ಕಿ.ಮೀ.
- 48ಎನ್6 - ವಿಮಾನಗಳು ಮತ್ತು ಕ್ರೂಸ್ ಕ್ಷಿಪಣಿಗಳನ್ನು ತಡೆಯಲು ಬಳಕೆ, ಇದರ ದೂರವ್ಯಾಪ್ತಿ 250 ಕಿ.ಮೀ.
- 9ಎಂ96ಇ2 ಹೆಚ್ಚು ನಿಖರ ಮತ್ತು ಚುರುಕು ಗುರಿಗಳಿಗೆ ಬಳಕೆ, ದೂರವ್ಯಾಪ್ತಿ 120 ಕಿ.ಮೀ.
- 9ಎಂ96ಇ ಕಡಿಮೆ ದೂರದ ಗುರಿಗಳ ಮೇಲೆ ಪ್ರಯೋಗ, ದೂರವ್ಯಾಪ್ತಿ 40-60 ಕಿ.ಮೀ.

ಎಸ್-400 ಒಂದೇ ಸಮಯದಲ್ಲಿ 100ಕ್ಕೂ ಹೆಚ್ಚು ಗುರಿಗಳನ್ನು ಪತ್ತೆಹಚ್ಚಬಲ್ಲ ವ್ಯವಸ್ಥೆಯಾಗಿದ್ದು, 30ಕ್ಕೂ ಅಧಿಕ ಗುರಿಗಳ ಮೇಲೆ ಒಮ್ಮೆಯೇ ನಿಖರ ದಾಳಿಯನ್ನು ನಡೆಸಬಲ್ಲದು. ಸ್ಪಷ್ಟವಾಗಿ ಗೋಚರಿಸದ ಗುರಿಗಳನ್ನು ಇದು ಪತ್ತೆಹಚ್ಚುತ್ತದೆ. ಭಾರತದ ವಾಯು ರಕ್ಷಣಾ ವ್ಯವಸ್ಥೆಯಲ್ಲಿ ಇದೊಂದು ಗೇಮ್ ಚೇಂಜರ್ ಆಗಿದ್ದು, ಇನ್ನೂ 6 ಇಂತಹ ಸುದರ್ಶನ ಚಕ್ರಗಳನ್ನು ರಷ್ಯಾದಿಂದ ಖರೀದಿಸಲು ಭಾರತ ಒಪ್ಪಂದ ಮಾಡಿದೆ.

ಸಿಂದೂರದಲ್ಲಿ ಬಳಕೆಯಾದ ಡ್ರೋನ್

1. **ನಾಗಾಸ್ತ್ರ-1:** ಟರ್ಕಿ ನಿರ್ಮಿತ ಕಮಿಕಾಝಿ ಡ್ರೋನ್‌ಗಳಿದ್ದಂತೆ ಇದು ಸ್ವದೇಶಿ ಕಮಿಕಾಝಿ ಡ್ರೋನ್ ಎನ್ನಬಹುದು. ಇದು ಗುರಿಯ ಮೇಲೆ ಇಳಿದು ಬಳಿಕ ನಿಖರ ದಾಳಿ ನಡೆಸುತ್ತದೆ. ಈ ಡ್ರೋನ್‌ನಲ್ಲಿ ಶೇ.75ಕ್ಕೂ ಹೆಚ್ಚು ಸ್ವದೇಶಿ ತಂತ್ರಜ್ಞಾನವನ್ನೇ ಬಳಸಲಾಗಿದೆ.
2. **ಹರೋಪ್ ಡ್ರೋನ್:** ಇದು ಇಸ್ರೇಲ್ ಅಭಿವೃದ್ಧಿಪಡಿಸಿದ ಕಮಿಕಾಝಿ ಮಾದರಿಯ ಇನ್ನೊಂದು ಡ್ರೋನ್. ಇದೂ ಸಹ ಗುರಿಯನ್ನು ಪತ್ತೆಹಚ್ಚಿ ಅದರ ಮೇಲೆ ತಂಗಿ ನಿಖರವಾಗಿ ಹೊಡೆಯುತ್ತದೆ. ಹೆಚ್ಚಾಗಿ ಶತ್ರು ರಡಾರ್‌ಗಳನ್ನು ಹೊಡೆ ದುರುಳಿಸಲು ಇದನ್ನು ಬಳಕೆ ಮಾಡಲಾಗುತ್ತದೆ.

ಮಿಂಚಿದ ಬೆಂಗಳೂರು ಡ್ರೋನ್

ಭಾರತದ ಅತ್ಯಾಧುನಿಕ ಯುದ್ಧ ಕಾರ್ಯಾಚರಣೆ ಸಿಂದೂರದಲ್ಲಿ ಬೆಂಗಳೂರಿನಲ್ಲಿ ನಿರ್ಮಾಣವಾದ ಸ್ಕೈಸ್ಟ್ರೈಕರ್ ಡ್ರೋನ್ ಬಳಸಲಾಗಿದೆ. ಬೆಂಗಳೂರಿನ ಆಲ್ಫಾ ಡಿಸೈನ್ ತಂತ್ರಜ್ಞಾನ ರಕ್ಷಣಾ ಕಂಪನಿ ಮತ್ತು ಇಸ್ರೇಲ್‌ನ ಎಲ್ಬಿಟ್ ಸಿಸ್ಟಮ್ಸ್ ಜಂಟಿಯಾಗಿ ಅಭಿವೃದ್ಧಿಪಡಿಸಿದ ಈ ಡ್ರೋನ್ ಯಾವುದೇ ಶಬ್ದವಿಲ್ಲದೆ ಗುರಿಯನ್ನು ಹೊಡೆಯುತ್ತದೆ. ಇದು 5ರಿಂದ 10 ಕೆ.ಜಿ. ವಾರ್‌ಹೆಡ್ ಸಾಮರ್ಥ್ಯ ಹೊಂದಿದೆ.

ಡ್ರೋನ್: ಸ್ಕೈಸ್ಟ್ರೈಕರ್, ದೂರವ್ಯಾಪ್ತಿ: 100 ಕಿ.ಮೀ.



ವಿಶೇಷತೆಗಳು

- ಗುರಿ ಇರುವ ವಾಯು ಪ್ರದೇಶದಲ್ಲಿ ಸುಮಾರು 2 ಗಂಟೆಗಳ ಕಾಲ ಗಾಳಿಯಲ್ಲೇ ನಿಲ್ಲುವ ಸಾಮರ್ಥ್ಯ
- ಎಲೆಕ್ಟ್ರಿಕ್ ಪ್ರಪಲ್ಷನ್ ಕಾರಣಗಳಿಂದ ಶಬ್ದ ಕಡಿಮೆ
- ಅತ್ಯಾಧುನಿಕ ಕ್ಯಾಮೆರಾ ಮತ್ತು ನೈಜ-ಸಮಯದ ನಿಯಂತ್ರಣ ಮೂಲಕ ಅತ್ಯಂತ ನಿಖರ ದಾಳಿ
- ಆಪರೇಟರ್ ನೇರ ಗುರಿ ಆಯ್ಕೆ ಮಾಡಿ ಕಳುಹಿಸಬಹುದು

ಯುದ್ಧನೌಕೆಗಳ ನಿಯೋಜನೆ

ಒಂದೆಡೆ ಭಾರತ-ಪಾಕ್ ಸಂಘರ್ಷ ನಡೆಯುತ್ತಿದ್ದರೆ ಸಮುದ್ರ ಪ್ರದೇಶಗಳಲ್ಲಿ ಭಾರತೀಯ ನೌಕಾಪಡೆ ತನ್ನ ಪ್ರಮುಖ ಯುದ್ಧನೌಕೆಗಳನ್ನು ನಿಯೋಜಿಸಿತ್ತು. ಯುದ್ಧ ವಿಮಾನಗಳಿಂದ ಕೂಡಿದ ಐಎನ್‌ಎಸ್ ವಿಕ್ರಾಂತ್ ಜತೆ ಇನ್ನೂ 8ರಿಂದ 10 ಯುದ್ಧನೌಕೆಗಳ ನಿಯೋಜನೆ ಮಾಡಲಾಗಿತ್ತು. ಇವುಗಳಲ್ಲದೆ, 7 ಫ್ರಿಗೇಟ್ ಶಿವಾಲಿಕ್ ,ನೀಲಗಿರಿ ವರ್ಗದ ಯುದ್ಧನೌಕೆ ನಿಯೋಜನೆ ಆಗಿದ್ದವು. ಬ್ರಹ್ಮೋಸ್ ಕ್ಷಿಪಣಿ ಸಜ್ಜಿತ ಡೆಸ್ಟ್ರಾಯರ್‌ಗಳು ಮತ್ತು ಸುಮಾರು 6 ಜಲಾಂತರ್ಗಾಮಿ (ಸಬ್‌ಮರೀನ್)ಗಳಿದ್ದವು. ಒಟ್ಟಾರೆ 30ರಿಂದ 36 ಯುದ್ಧನೌಕೆ ಹಾಗೂ ಸಬ್‌ಮರೀನ್‌ಗಳನ್ನು ನೌಕಾಪಡೆ ನಿಯೋಜಿಸಿತ್ತು.



ಐಪಿಎಲ್-2026 ಅಂಕಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ರನ್‌ರೇಟ್
ಹೈದರಾಬಾದ್	11	7	4	0	14	+0.737
ಗುಜರಾತ್	11	7	4	0	14	+0.228
ಪಂಜಾಬ್	10	6	3	1	13	+0.571
ಆರ್‌ಸಿಬಿ	10	6	4	0	12	+1.234
ಚೆನ್ನೈ	11	6	5	0	12	+0.185
ರಾಜಸ್ಥಾನ	11	6	5	0	12	+0.082
ಕೆಕೆಆರ್	10	4	5	1	9	-0.169
ದಿಲ್ಲಿ	11	4	7	0	8	-1.154
ಮುಂಬೈ	10	3	7	0	6	-0.649
ಲಖನೌ	11	3	8	0	6	-0.907

ಕಿರುಸುದ್ದಿ

ಏಷ್ಯನ್ ವೇಟ್‌ಲಿಫ್ಟಿಂಗ್‌ಗಿಲ್ಲ ಗಾಯಾಳು ಮೀರಾಬಾಯಿ

ಹೊಸದಿಲ್ಲಿ: ಗಾಯದಿಂದ ಬಳಲುತ್ತಿರುವ ತಾರಾ ವೇಟ್ ಲಿಫ್ಟರ್ ಮತ್ತು ಒಲಿಂಪಿಕ್ ರಜತ ಪದಕ ವಿಜೇತೆ ಸೈಖೋಮ್ ಮೀರಾಬಾಯಿ ಚಾನು ಏಷ್ಯನ್ ವೇಟ್‌ಲಿಫ್ಟಿಂಗ್ ಪಂದ್ಯಾವಳಿಯಿಂದ ಹೊರಗುಳಿದಿದ್ದಾರೆ. ಮೇ 12ರಿಂದ 17ರವರೆಗೆ ಗುಜರಾತ್‌ನ ಗಾಂಧಿನಗರದಲ್ಲಿ ನಡೆಯಲಿರುವ ಏಷ್ಯನ್ ವೇಟ್‌ಲಿಫ್ಟಿಂಗ್-2026 ಪಂದ್ಯಾವಳಿಗೆ 16 ಸದಸ್ಯರ ಭಾರತ ತಂಡವನ್ನು ಪ್ರಕಟಿಸಲಾಗಿದೆ. ಪುರುಷರ ತಂಡದಲ್ಲಿ ಲವ್‌ಪ್ರೀತ್ ಸಿಂಗ್, ಹರ್‌ಚರಣ್ ಸಿಂಗ್, ಅಜಿತ್ ನಾರಾಯಣ ಮತ್ತು ಪರ್ವ್ ಚೌಧರಿ ಸ್ಥಾನ ಪಡೆದಿದ್ದಾರೆ. ಮಹಿಳೆಯರ ತಂಡದಲ್ಲಿ ಬಿಂದ್ಯಾರಾಣಿ ದೇವಿ, ಹರ್‌ಜಿಂದರ್ ಕೌರ್ ಮತ್ತು ಮಾರ್ಟಿನಾ ದೇವಿ ಮೈಬಮ್ ಸ್ಥಾನ ಪಡೆದಿದ್ದಾರೆ.

ವೈದೇಹಿ-ಜುರ್ಝೂನ್ನಾ ಜೋಡಿ ಮಹಿಳಾ ಡಬಲ್ಸ್ ರನ್ನರ್‌ಅಪ್

ಹೊಸದಿಲ್ಲಿ: ತುಮಕೂರು ಓಪನ್ ಟೆನಿಸ್ ಪಂದ್ಯಾವಳಿಯ ಮಹಿಳೆಯರ ಡಬಲ್ಸ್ ವಿಭಾಗದಲ್ಲಿ ವಾಕ್‌ಓವರ್ ನೀಡಿದ ಭಾರತದ ವೈದೇಹಿ ಚೌಧರಿ ಮತ್ತು ಪೋಲೆಂಡ್‌ನ ಜುರ್ಝೂನ್ನಾ ಪಾವ್ಲಿಕೊವ್‌ಸ್ಕಾ ಜೋಡಿ ರನ್ನರ್‌ಅಪ್ ಪ್ರಶಸ್ತಿಗೆ ತೃಪ್ತಿಪಟ್ಟಿತು. ಭುಜದ ನೋವಿನ ಕಾರಣದಿಂದ ಪಾವ್ಲಿಕೊವ್‌ಸ್ಕಾ ಫೈನಲ್‌ನಿಂದ ಹೊರಗುಳಿದಿದ್ದರು. ಇದರಿಂದ



ಸೆನಿಯಾ ಲಾಸ್ಕುಟೋವಾ ಮತ್ತ ಎಲಿನಾ ನೆಪಿಲಿ ಜೋಡಿ ಕಣಕ್ಕಿಳಿಯದೆ ಟ್ರೋಫಿ ಗೆದ್ದುಕೊಂಡಿತು. ಸಿಂಗಲ್ಸ್ ವಿಭಾಗದಲ್ಲಿ ಭಾರೀ ಭರವಸೆ ಮೂಡಿಸಿದ್ದ ವೈದೇಹಿ ಸೆಮಿ ಫೈನಲ್‌ನಲ್ಲಿ ಅಗ್ರ ಶ್ರೇಯಾಂಕಿತೆ ಜಸ್ಟಿನಾ ಮಿಕುಲ್‌ಸ್ಕೈಟ್ ವಿರುದ್ಧ (3-6, 6-2, 2-6) ಸೋಲುಂಡಿದ್ದರು.

ಜ್ಯೂಸ್ ಕುಡಿಯುತ್ತ ಉರ್ವಿಲ್ ಬ್ಯಾಟಿಂಗ್ ವೀಕ್ಷಿಸಿದ ವಿರಾಟ್

ರಾಯ್ಪುರ: ಅಭ್ಯಾಸದ ಬಳಿಕ ಜ್ಯೂಸ್ ಕುಡಿಯಲು ಡಗೌಟ್ ತೆರಳಿದ್ದ ಆರ್‌ಸಿಬಿ ಬ್ಯಾಟರ್ ವಿರಾಟ್ ಕೊಹ್ಲಿ, ಚೆನ್ನೈ ಬ್ಯಾಟರ್ ಉರ್ವಿಲ್ ಪಟೇಲ್ ಅರ್ಧ ಶತಕ ಪೂರೈಸಿದ ಕ್ಷಣವನ್ನು ಕಂಪ್ಯೂಟರ್ ಪರದೆಯಲ್ಲಿ ವೀಕ್ಷಿಸಿದರು. ಸದಾ ಕ್ರಿಕೆಟ್‌ನ ಮಾಹಿತಿ, ದಾಖಲೆಗಳ ಬಗ್ಗೆ ತಿಳಿದುಕೊಳ್ಳುವ ಆಸಕ್ತಿ ಹೊಂದಿರುವ ಕೊಹ್ಲಿ ಸಾಮಾನ್ಯ ಕ್ರಿಕೆಟ್ ಅಭಿಮಾನಿಯಂತೆ ಆರೆಂಜ್ ಜ್ಯೂಸ್ ಕುಡಿಯುತ್ತ ಉರ್ವಿಲ್ ಭಾವನಾತ್ಮಕ ಕ್ಷಣವನ್ನು ವೀಕ್ಷಿಸಿ ಆನಂದಿಸಿದರು.

5ನೇ ಸ್ಥಾನಕ್ಕೇರಿದ ಚೆನ್ನೈ | ಸತತ 3ನೇ ಜಯ | 3 ವಿಕೆಟ್ ಪಡೆದ ಓವರ್ಟನ್ ಪಂದ್ಯಶ್ರೇಷ್ಠ

ಚೆಪಾಕ್‌ನಲ್ಲಿ ಉರ್ವಿಲ್ ಸೂಪರ್ ಜೈಂಟ್

ಚೆನ್ನೈ: ಉರ್ವಿಲ್ ಪಟೇಲ್ ಸ್ಫೋಟಕ ಬ್ಯಾಟಿಂಗ್ ನಿಂದಾಗಿ ಚೆನ್ನೈ ಸೂಪರ್ ಕಿಂಗ್ಸ್ 2018ರ ಬಳಿಕ ಇದೇ ಮೊದಲ ಬಾರಿಗೆ 200+ ಸ್ಕೋರ್ ಬೆನ್ನತ್ತಿ ಗೆಲುವು ಸಾಧಿಸಿತು. ಈ ಆವೃತ್ತಿಯ ಮೊದಲಾರ್ಧ ಕಳಪೆ ಪ್ರದರ್ಶನ ನೀಡಿ ಮೊದಲು ಹೊರಬೀಳುವ ತಂಡವಾಗುವಂತೆ ಕಂಡಿದ್ದ ಸಿಎಸ್‌ಕೆ ಸತತ 3ನೇ ಜಯದೊಂದಿಗೆ ಅಂಕಪಟ್ಟಿಯಲ್ಲಿ 5ನೇ ಸ್ಥಾನಕ್ಕೇರಿದೆ.

ಟಾಸ್ ಗೆದ್ದ ನಾಯಕ ಋತುರಾಜ್ ಗಾಯಕ್ವಾಡ್ ಕ್ಷೇತ್ರರಕ್ಷಣೆ ಆಯ್ದುಕೊಂಡಿದ್ದು, ಚೆನ್ನೈ ಬೌಲರ್ ಜೇಮಿ ಓವರ್ಟನ್ ನಾಯಕ ನಿರ್ಧಾರಕ್ಕೆ ತಕ್ಕಂತೆ ಪ್ರದರ್ಶನ ನೀಡಿ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು. ಸ್ಫೋಟಕ ಅರ್ಧ ಶತಕ ಸಿಡಿಸಿದ್ದ ಇಂಗ್ಲಿಸ್ (85), ಲಖನೌ ನಾಯಕ ರಿಷಭ್ ಪಂತ್ (15) ವಿಕೆಟ್‌ಗಳನ್ನು ಕಬಳಿಸಿದ್ದರು.

ಸಿಡಿದ ಇಂಗ್ಲಿಸ್: ಲಖನೌ 200+ ಸ್ಕೋರ್: ಸೂಪರ್ ಜೈಂಟ್ಸ್ ಪರ ಜೋಶ್ ಇಂಗ್ಲಿಸ್ 17 ಎಸೆತಗಳಲ್ಲಿ ಅರ್ಧ ಶತಕ ಪೂರೈಸಿದ್ದು, ಬಳಿಕವೂ ಚೆನ್ನೈ ಬೌಲರ್ ಗಳನ್ನು ಚೆಂಡಾಡಿದರು. ಆದರೆ ಉಳಿದ ಬ್ಯಾಟರ್ಸ್ ಸಾಥ್ ನೀಡಿರಲಿಲ್ಲ. ಇಂಗ್ಲಿಸ್ ವಿಕೆಟ್ ಪತನವಾಗುತ್ತಲೇ ಲಖನೌ ತತ್ತರಿಸಿಹೋಗಿ ನಿರಂತರ ವಿಕೆಟ್‌ಗಳನ್ನು ಕಳೆದುಕೊಂಡಿತು. ಆದರೆ ಇಂಗ್ಲಿಸ್, ಶೆಹಬಾಜ್ ಆಟದಿಂದ ಲಖನೌ 200+ ಸ್ಕೋರ್ ಪೇರಿಸಿತ್ತು. ಆದರೆ ಗೆಲುವಿನ ಭಾಗ್ಯ ಒಲಿಯಲಿಲ್ಲ.

ಸಂಕ್ಷಿಪ್ತ ಸ್ಕೋರ್

ಲಖನೌ 203/8 (20): ಇಂಗ್ಲಿಸ್ 85, ಶೆಹಬಾಜ್ 43 (ಓವರ್ಟನ್ 36ಕ್ಕೆ 3).
ಚೆನ್ನೈ 208/5 (19.2): ಉರ್ವಿಲ್ 65, ಗಾಯಕ್ವಾಡ್ 42, ಸ್ಯಾಮ್ಸನ್ 28 (ಶೆಹಬಾಜ್ 30ಕ್ಕೆ 2)



ಇಂದಿನ ಪಂದ್ಯ
ಪಂಜಾಬ್-ದಿಲ್ಲಿ, ರಾತ್ರಿ 7.30ರಿಂದ, ಧರ್ಮಶಾಲಾ

ಉರ್ವಿಲ್ ಎದುರಿಸಿದ ಮೊದಲ 8 ಎಸೆತಗಳು
1, 6, 6, 6, 6, 6, 4, 6

ಮೊದಲ 10 ಎಸೆತಗಳಲ್ಲಿ ಗರಿಷ್ಠ ಸ್ಕೋರ್

- 42★ - ಉರ್ವಿಲ್ ಪಟೇಲ್, 2026
- 41★ - ಎಬಿ ಡಿ ವಿಲಿಯರ್ಸ್, 2015
- 41★ - ಯಶಸ್ವಿ ಜೈಸ್ವಾಲ್, 2023
- 40★ - ಅಭಿಷೇಕ್ ಶರ್ಮಾ, 2024
- 39★ - ರೊಮಾರಿಯೊ ಶೆಫರ್ಡ್, 2024
- 39★ - ಪ್ರಿಯಾಂಶ್ ಆರ್ಯ, 2026

ಅತಿ ವೇಗದ ಅರ್ಧ ಶತಕಗಳು

- 13 - ಯಶಸ್ವಿ ಜೈಸ್ವಾಲ್ (ಆರ್‌ಆರ್), 2023
- 13 - ಉರ್ವಿಲ್ ಪಟೇಲ್ (ಸಿಎಸ್‌ಕೆ), 2026
- 14 - ಕೆಎಲ್ ರಾಹುಲ್ (ಪಿಬಿಕೆಎಸ್), 2018
- 14 - ಪ್ಯಾಟ್ ಕಮಿನ್ಸ್ (ಕೆಕೆಆರ್), 2022
- 14 - ರೊಮಾರಿಯೊ (ಆರ್‌ಸಿಬಿ), 2025

ಉರ್ವಿಲ್ ಅತಿ ವೇಗದ ಅರ್ಧ ಶತಕ

ಚೆಪಾಕ್‌ನಲ್ಲಿ ಮಹೇಂದ್ರ ಸಿಂಗ್ ಧೋನಿ ಏನಾದರೂ ಮೈದಾನಕ್ಕಿಳಿದರೋ ಎಂಬಂತೆ ಬ್ಯಾಟ್ ಬೀಸಿದ ಉರ್ವಿಲ್ ಪಟೇಲ್, ಒಂದರ ಮೇಲೊಂದು ಸಿಕ್ಸರ್‌ಗಳನ್ನು ಎತ್ತಿದ್ದೇ ಎತ್ತಿದ್ದು. ಸ್ಫೋಟಕ ಆಟವಾಡಿದ ಉರ್ವಿಲ್ ಅತಿ ವೇಗದ ಅರ್ಧ ಶತಕದ ಜೈಸ್ವಾಲ್ ಐಪಿಎಲ್‌ನ ಸಾರ್ವಕಾಲಿಕ ದಾಖಲೆಯನ್ನು ಸರಿದೂಗಿಸಿದ್ದಾರೆ. ಸೂಪರ್ ಜೈಂಟ್ಸ್ ಬೌಲರ್‌ಗಳನ್ನು ಚೆಂಡಾಡಿದ ಚೆನ್ನೈ ಬ್ಯಾಟರ್ 13 ಎಸೆತಗಳಲ್ಲಿ ದಾಖಲೆಯ ಅರ್ಧ ಶತಕವನ್ನು ಪೂರೈಸಿದರು. ಸ್ಯಾಮ್ಸನ್ ವಿಕೆಟ್ ಪತನದ ಬಳಿಕ ಉದಾಸೀನರಾಗಿ ಕುಳಿತಿದ್ದ ಸಿಎಸ್‌ಕೆ ಅಭಿಮಾನಿಗಳೆಲ್ಲಾ ತಮ್ಮ ಆಸನದಿಂದ ಎದ್ದು ಕುಣಿದರು. ಲೆಗ್‌ಸ್ಪಿನ್ನರ್ ದಿಗ್ವೇಶ್ ರಾಠಿ ಓವರ್‌ನಲ್ಲಿ ಉರ್ವಿಲ್ ರೌದ್ರಾವತಾರ ತಾಳಿದ್ದರು. ದಿಗ್ವೇಶ್ ಓವರ್ ವೊಂದರಲ್ಲೇ 5 ಸಿಕ್ಸರ್‌ಗಳನ್ನು ಎತ್ತಿದ್ದರು. ಉರ್ವಿಲ್ ಬ್ಯಾಟಿಂಗ್‌ಗೆ ಇಳಿದಾಗ ಸಿಎಸ್‌ಕೆ ಗೆಲುವಿನ ಸಾಧ್ಯತೆ ಶೇ.38.13 ಇತ್ತು, ಆದರೆ ಆತ ಔಟಾದಾಗ ಅದು ಶೇ.93.02 ಆಗಿತ್ತು.

ದಿಸ್ ಈಸ್ ಫಾರ್ ಯೂ, ಪಾಪಾ!

ವಿಶ್ವ ತಾಯಂದಿರ ದಿನ ಅರ್ಧಶತಕ ಪೂರೈಸಿದ ಪಟೇಲ್, ದಿಸ್ ಈಸ್ ಫಾರ್ ಯೂ ಪಾಪಾ (ಇದು ನಿಮಗಾಗಿ ಅಪ್ಪ) ಎಂದು ಬರೆದಿದ್ದ ಚೀಟಿಯನ್ನು ತಮ್ಮ ಜೇಬಿನಿಂದ ಎತ್ತಿ ಪ್ರದರ್ಶಿಸಿದ ತಂದೆಗೆ ಕೃತಜ್ಞತೆಗಳನ್ನು ಸಲ್ಲಿಸಿದರು. ಸ್ಫೋಟಕ ಬ್ಯಾಟಿಂಗ್ ನಂತರ ಭಾವನಾತ್ಮಕ ರೀತಿಯಲ್ಲಿ ಪಟೇಲ್ ಸಂಭ್ರಮಾಚರಿಸಿದರು.

ಯಾರೀತ? ಹಿನ್ನೆಲೆಯೇನು?

28 ವರ್ಷದ ಉರ್ವಿಲ್ ಆಟ ನೋಡಿದಾಕ್ಷಣ ಸೂಪರ್ ಜೈಂಟ್ಸ್ ಅಷ್ಟೇ ಅಲ್ಲ ಪ್ರೇಕ್ಷಕರೂ ಯಾರೀತ? ಎಲ್ಲಿಂದ ಬಂದ ಎಂಬಂತೆ ತಬ್ಬಿಬ್ಬಾಗಿದ್ದರು. ಈತ ಗುಜರಾತ್‌ನ ವಜ್ರದ ವ್ಯಾಪಾರಕ್ಕೆ ಹೆಸರುವಾಸಿ ಪಾಲನ್‌ಪುರ್‌ನ ಕ್ರಿಕೆಟಿಗ. ಸೈಯದ್ ಮುಷ್ತಾಕ್ ಅಲಿ ಟಿ20 ಪಂದ್ಯಾವಳಿಯಲ್ಲಿ 28 ಎಸೆತಗಳಲ್ಲಿ ಅತಿ ವೇಗದ ಶತಕ ದಾಖಲಿಸಿದ ಭಾರತೀಯ ಎಂಬ ದಾಖಲೆ ಮತ್ತು ವಿಜಯ್ ಹಜಾರೆ ಟ್ರೋಫಿಯಲ್ಲಿ 41 ಎಸೆತಗಳಲ್ಲಿ ಶತಕ ಪೂರೈಸಿದ ದಾಖಲೆ ತಮ್ಮ ಹೆಸರಿಗೆ ಹೊಂದಿದ್ದಾರೆ. ಟಿ20ನಲ್ಲಿ 28 ಎಸೆತಗಳ ಶತಕ ವಿಶ್ವದಲ್ಲೇ ಎರಡನೇ ಅತಿ ವೇಗದ ಶತಕವೂ ಹೌದು.

ಆರ್ಚರಿ ವಿಶ್ವಕಪ್‌ನಲ್ಲಿ ಭಾರತಕ್ಕೆ ಸ್ವರ್ಣ

ಶಾಂಘೈ: ದೀಪಿಕಾ ಕುಮಾರಿ, ಅಂಕಿತಾ ಭಕತ್ ಮತ್ತು ಕುಂಕುಮ್ ಮೊಹೊದ್ ಅವರನ್ನು ಒಳಗೊಂಡ ಭಾರತದ ಮಹಿಳಾ ರಿಕರ್ವ್ ತಂಡ ಆರ್ಚರಿ ವಿಶ್ವಕಪ್‌ನಲ್ಲಿ ಸ್ವರ್ಣ ಪದಕ ಗೆದ್ದುಕೊಂಡಿದೆ. ಐದು ವರ್ಷಗಳ ಬಳಿಕ ಭಾರತದ ರಿಕರ್ವ್ ತಂಡ ವಿಶ್ವಕಪ್ ಪದಕವೊಂದನ್ನು ಗೆದ್ದಿತು.

ಚೀನಾದಲ್ಲಿ ನಡೆಯುತ್ತಿರುವ ಆರ್ಚರಿ ವಿಶ್ವಕಪ್‌ನ ಮಹಿಳಾ ರಿಕರ್ವ್ ವಿಭಾಗದ ಫೈನಲ್‌ನಲ್ಲಿ ತವರಿನ ತಂಡವನ್ನು 5-4 (28-26) ಅಂತರದಿಂದ ಮಣಿಸಿದ ಭಾರತ ಚಿನ್ನದ ಪದಕ ತನ್ನದಾಗಿಸಿದೆ. ಕಳೆದ ಮೂರು ವರ್ಷಗಳಲ್ಲಿ ಇದು ಭಾರತದ ಮೊದಲ ವಿಶ್ವಕಪ್ ಪದಕವಾಗಿದೆ. ಕಡೆಯದಾಗಿ 2023ರ ಪ್ಯಾರಿಸ್ ವಿಶ್ವಕಪ್‌ನಲ್ಲಿ ಪದಕ ಗೆದ್ದುಕೊಂಡಿತ್ತು. ಶನಿವಾರ ಭಾರತದ ಆರ್ಚರಿಪಟು ಸಾಹಿಲ್ ಜಾಧವ್ ಪುರುಷರ ವಿಭಾಗದಲ್ಲಿ ಕಂಚಿನ ಪದಕ ಗೆದ್ದುಕೊಂಡಿದ್ದರು. ಭಾನುವಾರ ಮಹಿಳೆಯರ ತಂಡ ಸ್ವರ್ಣ ಪದಕ ಗೆದ್ದಿರುವುದರಿಂದ ವಿಶ್ವಕಪ್‌ನಲ್ಲಿ ಇದು ಭಾರತದ 2ನೇ ಪದಕವಾಗಿದೆ. ಪೂರ್ಣಾವಧಿ ತರಬೇತುದಾರ ಇಲ್ಲದ ಭಾರತದ ತಂಡ ದೀಪಿಕಾ ಕುಮಾರಿ ನೇತೃತ್ವದಲ್ಲಿ ಸಾಧನೆ ಮಾಡಿದೆ. ಮಹಿಳಾ ರಿಕರ್ವ್ ಕೋಚ್ ಪ್ರಫುಲ್ ದಾಂಗೆ ತರಬೇತಿಯಿಂದ ರಾಷ್ಟ್ರೀಯ ಟ್ರಯಲ್ಸ್‌ನಲ್ಲಿ ಯುವ ಆರ್ಚರಿಪಟು ಕುಂಕುಮ್ ಅಗ್ರಸ್ಥಾನ ಪಡೆದಿದ್ದರು. ಮೊದಲ ಸೆಟ್‌ನಲ್ಲಿ ಭಾರತ 54-53 ಅಂಕಗಳಿಂದ ಗೆದ್ದಿತು. ಚೀನಾ ತಂಡ ತವರಿನ ಅಭಿಮಾನಿಗಳ ಮುಂದೆ 55-52 ಅಂಕಗಳ ಅಂತರದಿಂದ ದ್ವಿತೀಯ ಸೆಟ್ ಗೆದ್ದು 2-2 ಸಮಬಲ ಸಾಧಿಸಿತು. ಭಾರೀ ರೋಚಕ ಹಂತ ತಲುಪಿದ ಮೂರನೇ ಸೆಟ್ 56 ಅಂಕಗಳೊಂದಿಗೆ ಟೈ ಆಗಿದ್ದು, ಆದರೆ ಚೀನಾ ಹೊಡೆದಿದ್ದ ಕೊನೆಯ ಬಾಣ 8 ಅಲ್ಲ, 9 ಅಂಕ ಆಗಬೇಕಿತ್ತು. ರಿವ್ಯೂ ಪಡೆದುಕೊಂಡ ಚೀನಾ ಮೂರನೇ ಸೆಟ್‌ನಲ್ಲಿ 57-56 ಅಂಕಗಳಿಂದ ಗೆದ್ದು 4-2 ಸೆಟ್ ಅಂತರ ಕಾಯ್ದುಕೊಂಡಿತು. ನಾಲ್ಕನೇ ಸೆಟ್‌ನಲ್ಲಿ ಭಾರತ ಸೋಲಿನ ಅಂಚಿನಲ್ಲಿದ್ದಾಗ ದೀಪಿಕಾ ಎರಡು ಬಾರಿ 10 ಅಂಕಕ್ಕೆ ಗುರಿಯಿಟ್ಟು ಹೊಡೆದರು. 54 ಅಂಕಗಳನ್ನು ಸಂಪಾದಿಸಿದ ಭಾರತ ನಾಲ್ಕನೇ ಸೆಟ್ ಗೆದ್ದು 4 ಸೆಟ್ ಅಂಕಗಳೊಂದಿಗೆ 4-4 ಸಮಬಲ ಸಾಧಿಸಿತು.

ಶೂಟೌಟ್‌ನಲ್ಲಿ ಭಾರತಕ್ಕೆ ಗೆಲುವು: ಶೂಟೌಟ್‌ನಲ್ಲಿ ದೀಪಿಕಾ ನೇತೃತ್ವದ ಭಾರತ 28-26 ಅಂಕಗಳ ಅಂತರದಿಂದ ಸ್ವರ್ಣ ಪದಕ ಗೆದ್ದುಕೊಂಡಿತು. ಭಾರತ ಪರ ಅಂಕಿತಾ 9, ಕುಂಕುಮ್ 10 ಮತ್ತು ದೀಪಿಕಾ 9 ಅಂಕ ಸಂಪಾದಿಸಿದ್ದರು.



- 5 ವರ್ಷಗಳ ಬಳಿಕ ರಿಕರ್ವ್ ತಂಡಕ್ಕೆ ವಿಶ್ವಕಪ್ ಪದಕ
- 3 ವರ್ಷಗಳ ಬಳಿಕ ಮಹಿಳಾ ತಂಡಕ್ಕೆ ವಿಶ್ವಕಪ್ ಪದಕ
- ನಾಯಕಿ ದೀಪಿಕಾ ಕುಮಾರಿಗೆ 12ನೇ ವಿಶ್ವಕಪ್ ಸ್ವರ್ಣ
- ಚೀನಾ ವಿರುದ್ಧ ಭಾರತಕ್ಕೆ 5-4 (28-26) ಗೆಲುವು

ಸ್ಕೋರ್
ಫೈನಲ್: ಭಾರತ 5(28)-4(26) ಚೀನಾ
ಸೆಮಿ ಫೈನಲ್: ಭಾರತ 5-1 ದ.ಕೊರಿಯಾ
ಕ್ವಾರ್ಟರ್ ಫೈನಲ್: ಭಾರತ 5(28)-4(25) ವಿಯೆಟ್ನಾಂ

ಮಹತ್ವದ ಪಂದ್ಯದಲ್ಲಿ ಎಂಐ ಸಾಧಾರಣ ಮೊತ್ತ


ಭುವಿ ದಾಳಿಗೆ ಮುಂಬೈ ತತ್ತರ

ರಾಯ್ಪುರ: ಸ್ವಿಂಗ್ ಕಿಂಗ್ ಭುವನೇಶ್ವರ್ ಕುಮಾರ್ ಮಾರಕ ಬೌಲಿಂಗ್ ದಾಳಿಗೆ ತತ್ತರಿಸಿದ ಮುಂಬೈ ಇಂಡಿಯನ್ಸ್, ತಿಲಕ್ ವರ್ಮಾ ಅರ್ಧ ಶತಕದ ಆಸರೆಯಿಂದ 20 ಓವರ್‌ಗಳಲ್ಲಿ 7 ವಿಕೆಟ್ ಕಳೆದುಕೊಂಡು 166 ರನ್‌ಗಳ ಸಾಧಾರಣ ಮೊತ್ತ ಪೇರಿಸಿತು.

ಭುವಿ ಕಬಳಿಸಿದ ಎಲ್ಲಾ ನಾಲ್ಕು ಪ್ರಮುಖ ಬ್ಯಾಟರ್ ಗಳದ್ದೇ ಆಗಿದ್ದವು, 10 ಎಸೆತಗಳಲ್ಲಿ 22 ರನ್ ಹೊಡೆದ ಅಬ್ಬರಿಸಿದ ಹಿಟ್‌ಮ್ಯಾನ್ ರೋಹಿತ್, ರಿಕೆಲ್ಟನ್ (2), ಮುಂಬೈ ಹಂಗಾಮಿ ನಾಯಕ ಸೂರ್ಯಕುಮಾರ್ (0) ಮತ್ತು ತಿಲಕ್ (57) ವಿಕೆಟ್‌ಗಳನ್ನು ಭುವನೇಶ್ವರ್ ಪಡೆದಿದ್ದರು. ಗಾಯಾಳು ಹಾರ್ದಿಕ್ ಅನುಪಸ್ಥಿತಿಯಲ್ಲಿ ನಾಯಕನಾದ ಸೂರ್ಯ ಮಹತ್ವದ ಪಂದ್ಯದಲ್ಲಿ ಬ್ಯಾಟಿಂಗ್‌ನಲ್ಲಿ ವೈಫಲ್ಯ ಕಂಡರು. ಮುಂಬೈಗೆ ಧೀರನಾಗಿ ಆಡಿದ ಇನ್ನೋರ್ವ ಬ್ಯಾಟರ್ ನಮನ್ 47 ರನ್ ಹೊಡೆದರು. ರೊಮಾರಿಯೊ ಇಕಾನಮಿಕಲ್ ಬೌಲಿಂಗ್ ನಡೆಸಿದ್ದು ಜ್ಯಾಕ್ಸ್ ವಿಕೆಟ್ ಪಡೆದರು. ಆರ್‌ಸಿಬಿ ಬೌಲಿಂಗ್ ವಿಭಾಗದಲ್ಲಿ ಭುವನೇಶ್ವರ್ ಪ್ರಾಬಲ್ಯ ಮೆರೆದರೆ, ಮುಂಬೈ ಇನ್ನಿಂಗ್ಸ್‌ನಲ್ಲಿ ತಿಲಕ್ ಅರ್ಧಶತಕವೊಂದೇ ಹೈಲೈಟ್.

ಸಂಕ್ಷಿಪ್ತ ಸ್ಕೋರ್

ಮುಂಬೈ 166/7 (20): ತಿಲಕ್ 57(42), ಧೀರ್ 47(32), ರೋಹಿತ್ 22(10), ಭುವನೇಶ್ವರ್ 23ಕ್ಕೆ 4



ಕೊಹ್ಲಿ ಮತ್ತೆ ಗೋಲ್ಡನ್ ಡಕ್!


ಈ ಆವೃತ್ತಿಯಲ್ಲಿ ವಿರಾಟ್ ಕೊಹ್ಲಿ ಸತತ 2ನೇ ಬಾರಿ ಖಾತೆ ತೆರೆಯದೆ (ಗೋಲ್ಡನ್ ಡಕ್) ಔಟಾದರು. ಕಳೆದ ಪಂದ್ಯದಲ್ಲಿ ಲಖನೌ ಸೂಪರ್ ಜೈಂಟ್ಸ್ ವಿರುದ್ಧವೂ ಕೊಹ್ಲಿ ಖಾತೆ ತೆರೆದಿರಲಿಲ್ಲ. ವೇಗಿ ದೀಪಕ್ ಚಹರ್ ಬೌಲಿಂಗ್‌ನಲ್ಲಿ ಮಿಡ್‌ಆಫ್ ಕ್ಷೇತ್ರದಲ್ಲಿ ಹೊಡೆಯುವ ಯತ್ನದಲ್ಲಿ ರಾಜ್ ಬಾವಾಗೆ ಕ್ಯಾಚಿತ್ತು ಔಟಾಗಿದ್ದರು. ಕೊಹ್ಲಿ ವಿಕೆಟ್ ಪತನದಿಂದ ರಾಯ್ಪುರ ಮೈದಾನದಲ್ಲಿ ಮೌನ ಆವರಿಸಿಕೊಂಡಿತ್ತು. 167 ರನ್ ಗುರಿ ಬೆನ್ನತ್ತಿದ ಆರ್‌ಸಿಬಿ ತಂಡ ಪವರ್‌ಪ್ಲೇ ಓವರ್‌ಗಳಲ್ಲಿ 3 ವಿಕೆಟ್ ಕಳೆದುಕೊಂಡು 47 ರನ್‌ಗಳನ್ನು ಪೇರಿಸಿತು.

ಐರನ್ ಮ್ಯಾನ್ ಸವಾಲು ಗೆದ್ದ ಐಜಿಪಿ ಸಂದೀಪ್

▶ ಬಾಳಗೌಡ ಪಾಟೀಲ

ಬೆಳಗಾವಿ: ಇತ್ತೀಚೆಗೆ ಬೆಳಗಾವಿ ಉತ್ತರ ವಲಯದ ಪೊಲೀಸ್ ಇನ್ಸ್‌ಪೆಕ್ಟರ್ ಜನರಲ್ (ಐಜಿಪಿ) ಆಗಿ ನೇಮಕಗೊಂಡಿರುವ ಐಪಿಎಸ್ ಅಧಿಕಾರಿ ಸಂದೀಪ್ ಪಾಟೀಲ್ ಅವರು ಆಸ್ಟ್ರೇಲಿಯಾದಲ್ಲಿ ನಡೆದ ವಿಶ್ವಪ್ರಸಿದ್ಧ ಐರನ್ ಮ್ಯಾನ್ 70.3 ವೆಸ್ಟರ್ನ್ ಸಿಡ್ನಿ-2026 ಸ್ಪರ್ಧೆಯನ್ನು ಯಶಸ್ವಿಯಾಗಿ ಪೂರ್ಣಗೊಳಿಸುವ ಮೂಲಕ ಮತ್ತೊಮ್ಮೆ ತಮ್ಮ ಅಪಾರ ಸಹಿಷ್ಣುತೆ ಮತ್ತು ದೃಢ ಸಂಕಲ್ಪ ಸಾಬೀತುಪಡಿಸಿದ್ದಾರೆ.

ಈ ಸಾಧನೆಯೊಂದಿಗೆ ಅವರು ವಿಶ್ವದ ವಿವಿಧ ದೇಶಗಳಲ್ಲಿ ಒಟ್ಟು 6ನೇ ಬಾರಿ ಐರನ್ ಮ್ಯಾನ್ ಸ್ಪರ್ಧೆಯನ್ನು ಪೂರ್ಣಗೊಳಿಸಿದ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಈಗಾಗಲೇ ಗೋವಾ, ಥೈಲ್ಯಾಂಡ್, ಪೋಲೆಂಡ್, ಟರ್ಕಿ ಹಾಗೂ ಕೋಪನ್ಹೇಗನ್‌ನಲ್ಲಿ ನಡೆದ ಐರನ್ ಮ್ಯಾನ್ ಸ್ಪರ್ಧೆಗಳನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ್ದ ಸಂದೀಪ್ ಪಾಟೀಲ್, ಇದೀಗ ಸಿಡ್ನಿಯಲ್ಲೂ ಆದೇ ಸಾಧನೆಯನ್ನು ಮರುಕಳಿಸಿದ್ದಾರೆ.



ಆಸ್ಟ್ರೇಲಿಯಾದ ಸಿಡ್ನಿಯಲ್ಲಿ ನಡೆದ ವಿಶ್ವಪ್ರಸಿದ್ಧ ಐರನ್ ಮ್ಯಾನ್ 70.3 ಸ್ಪರ್ಧೆ

ಕಠಿಣ ಸ್ಪರ್ಧೆಯಲ್ಲಿ ಅದ್ಭುತ ಸಾಧನೆ: ಐರನ್ ಮ್ಯಾನ್ 70.3 ಸ್ಪರ್ಧೆ ವಿಶ್ವದ ಅತ್ಯಂತ ಕಠಿಣ ಸಹಿಷ್ಣುತೆ ಕ್ರೀಡಾ ಸ್ಪರ್ಧೆಗಳಲ್ಲಿ ಒಂದಾಗಿ ಪರಿಗಣಿಸಲ್ಪಡುತ್ತದೆ. ಈ ಸ್ಪರ್ಧೆಯಲ್ಲಿ ಸ್ಪರ್ಧಿಗಳು ನಿರಂತರವಾಗಿ 1.9 ಕಿಮೀ ಈಜು, 90 ಕಿಮೀ ಸೈಕ್ಲಿಂಗ್, ಮತ್ತು 21.1 ಕಿಮೀ ಅರ್ಧ ಮ್ಯಾರಥಾನ್ ಓಟವನ್ನು ಪೂರ್ಣಗೊಳಿಸಬೇಕಾಗುತ್ತದೆ. ಓಟ 45-49 ವಿಭಾಗದಲ್ಲಿ ಸ್ಪರ್ಧಿಸಿದ ಸಂದೀಪ್ ಪಾಟೀಲ್ ಅವರು ಈ ಸಂಪೂರ್ಣ ಸ್ಪರ್ಧೆಯನ್ನು 7 ಗಂಟೆ 16 ನಿಮಿಷ 25 ಸೆಕೆಂಡುಗಳಲ್ಲಿ ಯಶಸ್ವಿಯಾಗಿ ಮುಗಿಸಿ ಗಮನ ಸೆಳೆದಿದ್ದಾರೆ.

ಕರ್ತವ್ಯದೊಂದಿಗೆ ಫಿಟ್‌ನೆಸ್‌ಗೂ ಆದ್ಯತೆ: ಪೊಲೀಸ್ ಇಲಾಖೆಯಂತಹ ಒತ್ತಡದ ಕರ್ತವ್ಯಗಳ ನಡುವೆಯೂ ಸಂದೀಪ್ ಪಾಟೀಲ್ ಅವರು ಆರೋಗ್ಯ, ಫಿಟ್ನೆಸ್ ಮತ್ತು ಕ್ರೀಡಾ ಚಟುವಟಿಕೆಗಳಿಗೆ ಮಹತ್ವ ನೀಡುತ್ತಿರುವುದು ಯುವಕರಿಗೆ ಪ್ರೇರಣೆಯಾಗಿದೆ. ಒಬ್ಬ ಹಿರಿಯ ಪೊಲೀಸ್ ಅಧಿಕಾರಿ ಅಂತಾರಾಷ್ಟ್ರೀಯ ಮಟ್ಟದ ಸಹಿಷ್ಣುತೆ ಸ್ಪರ್ಧೆಗಳಲ್ಲಿ ನಿರಂತರವಾಗಿ ಭಾಗವಹಿಸಿ ಯಶಸ್ಸು ಸಾಧಿಸುತ್ತಿರುವುದು ಸಾರ್ವಜನಿಕರ ಮೆಚ್ಚುಗೆಗೆ ಪಾತ್ರವಾಗಿದೆ.

ಸಂದೀಪ್ ಪಾಟೀಲ್ ಅವರ ಸಾಧನೆಗೆ ಪೊಲೀಸ್ ಇಲಾಖೆ, ಕ್ರೀಡಾಭಿಮಾನಿಗಳು, ಸಾರ್ವಜನಿಕರು ಹಾಗೂ ವಿವಿಧ ಸಂಘ-ಸಂಸ್ಥೆಗಳು ಅಭಿನಂದನೆಗಳನ್ನು ಸಲ್ಲಿಸಿವೆ.

77ನೇ ಸ್ಥಾನ

ಈಜು: 49 ನಿಮಿಷ 58 ಸೆಕೆಂಡು, ಸೈಕ್ಲಿಂಗ್: 3 ಗಂಟೆ 38 ನಿಮಿಷ 03 ಸೆಕೆಂಡು, ಓಟ: 2 ಗಂಟೆ 35 ನಿಮಿಷ 06 ಸೆಕೆಂಡು ಈ ಸಾಧನೆಯೊಂದಿಗೆ ಅವರು ತಮ್ಮ ವಿಭಾಗದಲ್ಲಿ 77ನೇ ಸ್ಥಾನ ಪಡೆದುಕೊಂಡಿದ್ದಾರೆ.

ಪ್ರತಿ ಐರನ್ ಮ್ಯಾನ್ ಸ್ಪರ್ಧೆಯೂ ವಿಭಿನ್ನ ಅನುಭವ ನೀಡುತ್ತದೆ. ಪ್ರತಿಯೊಂದು ಓಟವೂ ದೈಹಿಕ ಮತ್ತು ಮಾನಸಿಕ ಸಹಿಷ್ಣುತೆಯನ್ನು ವಿಭಿನ್ನ ರೀತಿಯಲ್ಲಿ ಪರೀಕ್ಷಿಸುತ್ತದೆ. ಆದರೆ ಎಲ್ಲಾ ಸ್ಪರ್ಧೆಗಳಿಗೂ ಒಂದೇ ಗುಟ್ಟು -ಸ್ಥಿರತೆ, ಶಿಸ್ತು ಮತ್ತು ಎಂದಿಗೂ ಮುನ್ನುಗುವುದನ್ನು ನಿಲ್ಲಿಸದ ಮನೋಭಾವ, ಪ್ರಯತ್ನಕ್ಕೆ ಸೋಲಿಲ್ಲ.
■ ಸಂದೀಪ್ ಪಾಟೀಲ್, ಬೆಳಗಾವಿ ಐಜಿಪಿ

ತುಮಕೂರಿನಲ್ಲಿ ಜಸ್ಟಿನಾ ಚಾಂಪಿಯನ್

ತುಮಕೂರು: ತುಮಕೂರು ಓಪನ್ ಸಿಂಗಲ್ಸ್ ವಿಭಾಗದಲ್ಲಿ ಜಸ್ಟಿನಾ ಮಿಕುಲ್‌ಸ್ಕೈಟ್ ಪ್ರಶಸ್ತಿ ವಿಜೇತೆಯಾಗಿ ಹೊರಹೊಮ್ಮಿದ್ದಾರೆ. ಜಿಲ್ಲಾ ಟೆನಿಸ್ ಅಸೋಸಿಯೇಷನ್ ಕೋರ್ಟ್‌ನಲ್ಲಿ ಭಾನುವಾರ ನಡೆದ ಫೈನಲ್‌ನಲ್ಲಿ ಆಡಿದ ಗಾಯಾಳು ಎರಡನೇ ಶ್ರೇಯಾಂಕದ ಜುರ್ಝುನ್ನಾ ಪಾವ್ಲಿಕೋವ್‌ಸ್ಕಾ ಮೊದಲ ಗೇಮ್ ಬಳಿಕ ಸ್ಪರ್ಧೆಯಿಂದ ಹಿಂದೆ ಸರಿದರು. ಹೀಗಾಗಿ ಜಸ್ಟಿನಾ ಸುಲಭವಾಗಿ ಸಿಂಗಲ್ಸ್ ಕಿರೀಟ ಮುಡಿಗೇರಿಸಿಕೊಂಡರು. ಭುಜದ ನೋವಿನಿಂದ ಬಳಲುತ್ತಿರುವ ಜುರ್ಝುನ್ನಾ ರನ್ನರ್‌ಅಪ್ ಪ್ರಶಸ್ತಿಗೆ ತೃಪ್ತರಾದರು.

ಭುಜದ ಗಾಯದಿಂದಾಗಿ ಶನಿವಾರ ನಡೆದ ಡಬಲ್ಸ್ ಫೈನಲ್‌ನಿಂದ ಹಿಂದೆ ಸರಿದಿದ್ದ ಪಾವ್ಲಿಕೋವ್‌ಸ್ಕಾ, ಗಾಯದ ಹೊರತಾಗಿಯೂ ಪ್ರಶಸ್ತಿ ಹೋರಾಟಕ್ಕೆ ಅಂಗಣಕ್ಕಿಳಿಯುವ ಮೂಲಕ ಅದ್ಭುತ ಧೈರ್ಯವನ್ನು ತೋರಿಸಿದರು. ಆದಾಗ್ಯೂ, ಆರಂಭಿಕ ಗೇಮ್‌ನ ನಂತರ ಪೋಲೆಂಡ್ ಆಟಗಾರ್ತಿಗೆ ಮುಂದುವರಿಯಲು ಸಾಧ್ಯವಾಗಲಿಲ್ಲ. ಇದು ಪ್ರಶಸ್ತಿ ಹೋರಾಟದ ಅಕಾಲಿಕ ಅಂತ್ಯಕ್ಕೆ ಕಾರಣವಾಯಿತು. ಅಗ್ರ ಎರಡು ಶ್ರೇಯಾಂಕಿತೆಯರ ನಡುವಿನ ಸೆಣಸಾಟ ರೋಮಾಂಚಕ ಆಗಿರಲಿದೆ ಎಂಬ ನಿರೀಕ್ಷೆಯಲ್ಲಿದ್ದ ಪ್ರೇಕ್ಷಕರ ದೊಡ್ಡ ಸಭೆಗೆ ನಿರಾಶೆಯಾಯಿತು. ಇದು ಜಸ್ಟಿನಾಗೆ 8ನೇ ಐಟಿಎಫ್ ಸಿಂಗಲ್ಸ್ ಕಿರೀಟವಾಗಿದೆ. ಇದರೊಂದಿಗೆ ಅವರು ಅಂತಾರಾಷ್ಟ್ರೀಯ ಸರ್ಕ್ಯೂಟ್‌ನಲ್ಲಿ ಪ್ರಭಾವಶಾಲಿ ಋತುವಿಗೆ ಮತ್ತೊಂದು ಮೈಲಿಗಲ್ಲನ್ನು ಸೇರಿಸಿದರು. ಜಸ್ಟಿನಾ 4,860 ಯುಎಸ್ ಡಾಲರ್ (ಅಂದಾಜು 4.58 ಲಕ್ಷ ರೂ.) ವಿಜೇತರ ಚೆಕ್ ಅನ್ನು ಜೇಬಿಗೆ ಇಳಿಸಿಕೊಂಡರು ಮತ್ತು 35 ಮೌಲ್ಯಯುತ ಡಬ್ಲ್ಯುಟಿಎ ಶ್ರೇಯಾಂಕ ಅಂಕಗಳನ್ನು ತಮ್ಮದಾಗಿಸಿಕೊಂಡರು. ಪಾವ್ಲಿಕೋವ್‌ಸ್ಕಾ ರನ್ನರ್ ಅಪ್ ಸ್ಥಾನಕ್ಕೆ 2,637 ಯುಎಸ್ ಡಾಲರ್ ಮತ್ತು 23 ಡಬ್ಲ್ಯುಟಿಎ ಅಂಕಗಳನ್ನು ಸಂಪಾದಿಸಿದರು.



ರಾಜಸ್ಥಾನದಲ್ಲಿ ಜಿಟಿ ಪ್ರಾಬಲ್ಯ

ಜೈಪುರ: ನಾಯಕಗಿಲ್, ಸುದರ್ಶನ್ ಮತ್ತು ರಶೀದ್ ಉತ್ತಮ ಪ್ರದರ್ಶನದ ನೆರವಿನಿಂದ ರಾಜಸ್ಥಾನ್ ರಾಯಲ್ಸ್ ವಿರುದ್ಧ ಗುಜರಾತ್ ಟೈಟಾನ್ಸ್ 77 ರನ್‌ಗಳ ಜಯದೊಂದಿಗೆ ಸಂಪೂರ್ಣ ಪ್ರಾಬಲ್ಯ ಮೆರೆದಿದೆ. ಶನಿವಾರ ರಾತ್ರಿ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ಟೈಟಾನ್ಸ್ ಗಿಲ್ ಮತ್ತು ಸುದರ್ಶನ್ ಅರ್ಧ ಶತಕಗಳ ನೆರವಿನಿಂದ 20 ಓವರ್‌ಗಳಲ್ಲಿ 4 ವಿಕೆಟ್ ನಷ್ಟಕ್ಕೆ 229 ರನ್‌ಗಳ ದೊಡ್ಡ ಮೊತ್ತ ಕಲೆಹಾಕಿತ್ತು. 230 ರನ್ ಬೃಹತ್ ಮೊತ್ತ ಬೆನ್ನತ್ತಿದ ರಾಯಲ್ಸ್‌ಗೆ ರಶೀದ್ ಲೆಗ್‌ಸ್ಪಿನ್ ಮೋಡಿಯಿಂದ ಆಘಾತ ನೀಡಿದರು. ಬೃಹತ್ ಸವಾಲು ಬೆನ್ನತ್ತಿದ ರಾಯಲ್ಸ್ ಪರ ವೈಭವ್ 16 ಎಸೆತಗಳಿಂದ 36 ರನ್ ಹೊಡೆದಿದ್ದು, ವೇಗಿ ಸಿರಾಜ್ ಗೆ ವಿಕೆಟ್ ಒಪ್ಪಿಸಿದ್ದರು. ಮಿಂಚಿದ ರಬಾಡ 2 ವಿಕೆಟ್ ಕಬಳಿಸಿದರು. ಜಡೇಜಾರನ್ನು ಎಲ್‌ಬಿ ಬಲೆಗೆ ಬೀಳಿಸಿದ ರಶೀದ್ ಪಂದ್ಯ ಗೆಲ್ಲಿಸಿಕೊಟ್ಟರು. ಆರ್‌ಆರ್ 16.3 ಓವರ್ ಗಳಲ್ಲಿ 152ಕ್ಕೆ ಆಲೌಟಾಗಿ ಸೋಲೊಪ್ಪಿತು.



ಟೈಟಾನ್ಸ್‌ಗೆ 77 ರನ್ ಗೆಲುವು

ವೈಭವ್ 100ನೇ ಸಿಕ್ಸರ್: 2 ವಿಶ್ವದಾಖಲೆ!

ಪುರುಷರ ಟಿ20 ಕ್ರಿಕೆಟ್ ಇತಿಹಾಸದಲ್ಲೇ 100 ಸಿಕ್ಸರ್‌ಗಳ ಮೈಲಿಗಲ್ಲನ್ನು ಅತಿ ಕಡಿಮೆ ಇನ್ನಿಂಗ್ಸ್ ಗಳಲ್ಲಿ ದಾಖಲಿಸಿದ ಮತ್ತು ಈ ದಾಖಲೆ ಬರೆದ ಅತಿ ಕಿರಿಯ ಬ್ಯಾಟರ್ ಎಂಬ ದಾಖಲೆಗಳನ್ನು ವೈಭವ್ ಸೂರ್ಯವಂಶಿ ಬರೆದಿದ್ದಾರೆ. 15ರ ಹರೆಯದ ಪೋರ ಸೂರ್ಯವಂಶಿ 29 ಇನ್ನಿಂಗ್ಸ್‌ಗಳಲ್ಲಿ ಈ ವಿಶ್ವದಾಖಲೆ ಬರೆದಿದ್ದಾರೆ.

ಶಾಟ್‌ಗನ್ ವಿಶ್ವಕಪ್: ಕಂಚು ಗೆದ್ದ ಭಾರತ

ಅಲ್ಮಾಟಿ: ಕಜಕಿಸ್ತಾನದಲ್ಲಿ ನಡೆಯುತ್ತಿರುವ ಐಎಸ್‌ಎಸ್ ಎಫ್ ಶಾಟ್‌ಗನ್ ಶೂಟಿಂಗ್ ವಿಶ್ವಕಪ್ ಪಂದ್ಯಾವಳಿಯಲ್ಲಿ ಭಾರತದ ವಿವಾನ್ ಮತ್ತು ನೀರು ಅವರ ಮಿಶ್ರ ಜೋಡಿ ಕಂಚಿನ ಪದಕ ಗೆದ್ದುಕೊಂಡಿದೆ. ವಿವಾನ್ ಕಪೂರ್ ಮತ್ತು ನೀರು ಜತೆಗೂಡಿ 24/30 ಸ್ಕೋರ್ ಮಾಡಿದ್ದರು. 31 ತಂಡಗಳ ಅರ್ಹತಾ ಸುತ್ತಿನಲ್ಲಿ 143/150 ಸ್ಕೋರ್‌ನೊಂದಿಗೆ 2ನೇ ಸ್ಥಾನ ಪಡೆದು ಫೈನಲ್ ಪ್ರವೇಶಿಸಿದ್ದರು.


ತವರಿನಲ್ಲಿ ಸಿನ್ನರ್ ಶುಭಾರಂಭ

ರೋಮ್: ಇಟಾಲಿಯನ್ ಓಪನ್ 2026ರಲ್ಲಿ ತವರಿನ ಐಕಾನ್ ಯಾನಿಕ್ ಸಿನ್ನರ್ ಶುಭಾರಂಭ ಮಾಡಿದ್ದಾರೆ. ಭಾರತೀಯ ಕಾಲಮಾನದಂತೆ ಶನಿವಾರ ತಡರಾತ್ರಿ ಮೊದಲ ಸುತ್ತಿನ ಪಂದ್ಯವಾಡಿದ್ದ ಸಿನ್ನರ್, ಆಸ್ಟ್ರಿಯಾ ಎದುರಾಳಿ ಸೆಬಾಸ್ಟಿಯನ್ ಆಫ್ನರ್ ಅವರನ್ನು 6-3, 6-4 ನೇರ ಸೆಟ್‌ಗಳ ಅಂತರದಿಂದ ಸೋಲಿಸಿ ಸುಲಭ ಜಯ ಸಾಧಿಸಿದ್ದಾರೆ. ಸತತ 5ನೇ ಮಾಸ್ಟರ್ಸ್ 1000 ಟೂರ್ನಿ ಗೆದ್ದು ದಾಖಲೆ ಬರೆಯುವ ಗುರಿ ಹೊಂದಿದ್ದಾರೆ.

ಪದಬಂಧ

5980

▶ ರಾಜಾ ಸಂಗಮೇಶ ಹಿರೇಮಠ



ಎಡದಿಂದ ಬಲಕ್ಕೆ
1.ಸ್ಥಿರತೆ ತಪ್ಪಿದ ನಯನಗಳು (4)
3.ನಿಂದೆಯ ಕಡೆಯಲ್ಲಿ ಆದಾಯವಿದೆ (4)
5.ಬಲೆ ಬೀಸಿ ಮೀನು ಹಿಡಿಯುವವನು (4)
8.ನಮ ನಡುವೆ ಇಟ್ಟುಕೊಂಡ ಸೂರ್ಯ (4)
10.ಪಟದ ನಡುವೆ ಬದಲಾವಣೆಯಿದೆ (3)
11.ಪ್ರತಿಜ್ಞೆ-ಶಪಥದ ಸಮಾನಪದ (2)
12.ಬಾಲ್ಯಾವಸ್ಥೆಯ ಪೇವಿ ಉಲ್ಟಾ ಕುಳಿತಿದೆ (2)
14.ಪಹರೆಯ ಕಾಯಕದವನು (5)
16.ಮಾನ-ಹಾದಿ ಸೇರಿ ದೊಡ್ಡ ಹೊಳೆಯಾಯ್ತು (4)
17.ಇದೀಗ ತಾನೆ ಬರೆದ ಗೀತೆ (4)

ಮೇಲಿನಿಂದ ಕೆಳಕ್ಕೆ
2.ಕಾಳಿನಿಂದ ಎಣ್ಣೆ ತೆಗೆಯುವವ ತಲೆಕೆಳಗಾಗಿದ್ದಾನೆ (3)
4.ವಿಷಯ ಹೀಗೆ ತುಂಬ ಆಳವಾಗಿದೆ (3)
6.ಕ್ಷಾರ ವಸ್ತು-ಉಪ್ಪು ಇದು (3)
7. ಅವರ ಕಡೆಗೆ ಎಂಬರ್ಥದ ಶಬ್ದ ತಿರುಗಿದೆ (2)
8.ಸತ್ಯ-ನಿಜದ ಸಮಾನಪದ (2)
9.ಶಯನಿಸು-ನಿದ್ದೆಮಾಡುವಿಕೆ (3)
11.ಕೊಡಲಿಯನ್ನು ಆಯುಧವಾಗುಳ್ಳವನು (5)
13. ಮಡುವಿನ ನಡುವೆ ಉಸುಕಿನ ಪ್ರದೇಶವಿದೆ (5)
14. ಇದು ಸಮಯದ ಅಳತೆ (4)
15.ನೀಡುತ್ತಿರುವ ನೆರವು ತಲೆಕೆಳಗಾಗಿದೆ (4)

5979 ಉತ್ತರ

ಎಡದಿಂದ ಬಲಕ್ಕೆ:
1.ಸಂಪು 2.ದಿನಪ
4.ಕಂಬಿ 6.ಧನುರ್ಗುಣ
7.ಬವರಿಗ 8.ತಿಕಡಿ
10.ದಿಟ್ಟ 11.ವ್ಯಸನ
13.ತಾತ 15.ರಾಜಗಿರಿ
16.ರಾಗಿಬೀಸು

ಮೇಲಿನಿಂದ ಕೆಳಕ್ಕೆ :
1.ಸಂಶೋಧನೆ 2.ಪರಿಣತಿ
3.ದಿವ್ಯಂಬಡಿ 5.ಬಿಡಗಡೆ
9.ಕಳಸ 10.ದಿವರಾತ್ರಿ
11.ವ್ಯತಿರಿಕ್ತ
12.ನಡುರಾತ್ರಿ
14.ತಲೆಸುತ್ತು

ಕಿರುಸುದ್ದಿ

ಐಸಿಎಸ್‌ಇ 10ನೇ ತರಗತಿ ಪರೀಕ್ಷೆ: ಅಧೃತ್ ಶರ್ಮ ಕೊಡಗಿಗೆ ಪ್ರಥಮ



ಮಡಿಕೇರಿ : ಐಸಿಎಸ್‌ಇ 2025 – 26 ರ 10ನೇ ತರಗತಿ ಪರೀಕ್ಷೆಯಲ್ಲಿ ಗೋಣಿಕೊಪ್ಪದ ಕೂರ್ಗ್ ಪಬ್ಲಿಕ್ ಸ್ಕೂಲ್ ನ ವಿದ್ಯಾರ್ಥಿ ಪಿ.ಹೆಚ್. ಅಧೃತ್ ಶರ್ಮ ಶೇ.98.20 ಫಲಿತಾಂಶ ಗಳಿಸುವ ಮೂಲಕ ಕೊಡಗು ಜಿಲ್ಲೆಗೆ ಪ್ರಥಮ ಸ್ಥಾನ ಪಡೆದಿದ್ದಾರೆ. ಇವರು ವಿರಾಜಪೇಟೆ ತಾಲ್ಲೂಕಿನ ಪಾಲಂಗಾಲ ಗ್ರಾಮದ ಪಿ.ಎನ್.ಹರಿಶಂಕರ್ ಪ್ರಸಾದ್ ಹಾಗೂ ಡಾ.ವಿಜಯಲತಾ ಸಿ. ದಂಪತಿಯ ಪುತ್ರ.

ವಾಹನ ಡಿಕ್ಕಿ ಹೊಡೆದು ರೈಲ್ವೆ ಲೆವೆಲ್ ಕ್ರಾಸ್ ಗೇಟ್ ಹಾನಿಗೊಂಡಲ್ಲಿ ಕಠಿಣ ಶಿಕ್ಷೆ

ಕಾಸರಗೋಡು: ವಾಹನ ಡಿಕ್ಕಿ ಹೊಡೆದು ರೈಲ್ವೆ ಲೆವೆಲ್ ಕ್ರಾಸ್ ಗೇಟ್ ಹಾನಿಗೊಂಡಲ್ಲಿ ಆ ವಾಹನ ಚಲಾಯಿಸಿದವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ರೈಲ್ವೇ ಭದ್ರತಾ ಪಡೆ ರಾಜ್ಯ ಸಾರಿಗೆ ಇಲಾಖೆಗೆ ಆಗ್ರಹಿಸಿದೆ. ರೈಲ್ವೆ ಲೆವೆಲ್ ಕ್ರಾಸ್ ಗೇಟ್‌ಗಳಿಗೆ ವಾಹನ ಡಿಕ್ಕಿ ಹೊಡೆದು ಹಾನಿಗೊಳಿಸುವುದು ರೈಲ್ವೆ ಇಲಾಖೆಯ ಒಂದು ಭದ್ರತಾ ವಿಷಯವಾಗಿದೆ. ಆದ್ದರಿಂದ ಡಿಕ್ಕಿ ಹೊಡೆಯುವ ವಾಹನವನ್ನು ಚಲಾಯಿಸುವ ವ್ಯಕ್ತಿಯ ಡ್ರೈವಿಂಗ್ ಲೈಸೆನ್ಸ್ ರದ್ದುಪಡಿಸಲಾಗುವುದು. ಮಾತ್ರವಲ್ಲದೆ ರೈಲ್ವೆ ಇಲಾಖೆಗೆ ಉಂಟಾಗುವ ನಷ್ಟಕ್ಕೆ ಪರಿಹಾರ ಕ್ರಮಕೈಗೊಳ್ಳಲು ಆರ್‌ಪಿಎಫ್ ಆಗ್ರಹಿಸಿದೆ. ಇದನ್ನು ಗಂಭೀರವಾಗಿ ಪರಿಗಣಿಸಿದ ರಾಜ್ಯ ಸಾರಿಗೆ ಆಯುಕ್ತರು ಅದಕ್ಕೆ ಹೊಂದಿಕೊಂಡು ಅಧಿಕೃತ ಅಧಿಸೂಚನೆಯನ್ನು ಜಾರಿಗೊಳಿಸಿದ್ದಾರೆ. ಈ ಅಧಿಸೂಚನೆಯಲ್ಲಿ ನೀಡಲಾಗುವ ಮುನ್ಸೂಚನೆ ಯನ್ನು ಉಲ್ಲಂಘಿಸಿ ರೈಲ್ವೆ ಗೇಟ್ ಮುಚ್ಚುವ ವೇಳೆ ಬಲವಂತವಾಗಿ ರೈಲ್ವೆ ಲೆವೆಲ್ ಕ್ರಾಸ್ ದಾಟಿದಲ್ಲಿ ಅದು ಇನ್ನು ಕ್ರಿಮಿನಲ್ ಅಪರಾಧ ಕೃತ್ಯವಾಗಲಿದೆ. ಅಂತಹ ವಾಹನವನ್ನು ಚಲಾಯಿಸುವ ವ್ಯಕ್ತಿಯ ಲೈಸೆನ್ಸ್ ರದ್ದುಪಡಿಸುವುದರ ಜೊತೆಗೆ ನಷ್ಟ ಪರಿಹಾರ ವಸೂಲಿ ಮಾಡಲಾಗುವುದು. ಮಾತ್ರವಲ್ಲ ಜೈಲುಶಿಕ್ಷೆ ಮತ್ತು ದಂಡ ಪಾವತಿಸಬೇಕಾಗಿ ಬರಲಿದೆ. 2025ನೇ ವರ್ಷದಲ್ಲಿ ರೈಲ್ವೇ ಇಲಾಖೆಯ ತಿರುವನಂತಪುರ ವಿಭಾ ಗೀಯ ವಲಯದಲ್ಲಿ 104 ಮತ್ತು 2026ರಲ್ಲಿ ಇಂತಹ 27 ರೈಲ್ವೆ ಲೆವೆಲ್ ಕ್ರಾಸ್‌ಗಳ ಗೇಟ್‌ಗಳು ವಾಹನ ಡಿಕ್ಕಿಯಿಂದ ಹಾನಿಗೊಂಡಿವೆ. ಇದರ ಹೊರತಾಗಿ ಮಧ್ಯ ಮತ್ತು ಉತ್ತರ ಕೇರಳದ ಹಲವೆಡಗಳಲ್ಲಿ ಹಲವು ರೈಲ್ವೆ ಗೇಟ್‌ಗಳು ಇದೇ ರೀತಿ ಹಾನಿಗೊಂಡಿವೆ.

ಸ್ಕೂಟರ್‌ನಲ್ಲಿ ಸಾಗಿಸುತ್ತಿದ್ದ ಮದ್ಯ ವಶ: ಆರೋಪಿ ಸೆರೆ

ಮಂಜೇಶ್ವರ: ಸ್ಕೂಟರ್‌ನಲ್ಲಿ ಸಾಗಿಸುತ್ತಿದ್ದ ನಾಲ್ಕೂವರೆ ಲೀಟರ್ ಕರ್ನಾಟಕ ಮದ್ಯವನ್ನು ಅಬಕಾರಿ ತಂಡ ಬೆನ್ನಟ್ಟಿ ವಶಪಡಿಸಿಕೊಂಡಿದೆ. ಸ್ಕೂಟರ್ ಸವಾರ ಕಡಂಬಾರ್ ಹೆದ್ದಾರಿಯ ರೋಹಿತ್ ಕೆ. ಅಲಿಯಾಸ್ ಕೋಟಾಯಿ (28), ಸ್ಕೂಟರ್ ಹಾಗೂ ಮದ್ಯವನ್ನು ಉಪೇಕ್ಷಿಸಿ ಪರಾರಿಯಾಗಿದ್ದಾನೆ. ಅವುಗಳನ್ನು ಅಬಕಾರಿ ತಂಡ ಕಸ್ಟಡಿಗೆ ತೆಗೆದುಕೊಂಡಿದೆ. ಕುಂಬಳೆ ಪ್ರಿವೆಂಟಿವ್ ಆಫೀಸರ್‌ಗಳಾದ ಮನಾಸ್ ಕೆ.ವಿ., ಜಿಜಿನ್ ಎಂ.ವಿ., ಸಿವಿಲ್ ಅಬಕಾರಿ ಆಫೀಸರ್‌ಅಖಿಲೇಶ್ ಎಂ.ವಿ., ಜಿತಿನ್ ವಿ., ಅವಿನಾಶ್ ವಿ., ಚಾಲಕ ಪ್ರವೀಣ್‌ಕುಮಾರ್ ತಂಡದಲ್ಲಿದ್ದರು.

ಸ್ಕೂಟರ್‌ನಿಂದ ಬಿದ್ದು ತೀವ್ರ ಗಾಯಗೊಂಡಿದ್ದ ಮಹಿಳೆ ಮೃತ್ಯು

ಕಾಸರಗೋಡು: ಸ್ಕೂಟರ್‌ನಿಂದ ಎಸೆಯಲ್ಪಟ್ಟು ಗಂಭೀರ ಗಾಯಗೊಂಡು ಚಿಕಿತ್ಸೆಯಲ್ಲಿದ್ದ ಮಹಿಳೆ ಮೃತಪಟ್ಟಿದ್ದಾರೆ. ಅಂಬಲತ್ತರೆ ಪರಕ್ಲಾಯಿ ವಲಿಯಡ್ಕದ ಪಿ.ಕುಂಞಂಬು ಎಂಬವರ ಪತ್ನಿ ಶೋಭಾ (48) ಎಂಬವರು ಪರಿಯಾರಂ ವೈದ್ಯಕೀಯ ಕಾಲೇಜು ಆಸ್ಪತ್ರೆಯಲ್ಲಿ ಮೃತಪಟ್ಟವರು. ಪತಿಯ ಸಹೋದರ ಅರ್ಜುನನ್ ಚಲಾಯಿಸುತ್ತಿದ್ದ ಸ್ಕೂಟರ್‌ನ ಹಿಂಬದಿಯಲ್ಲಿ ಕುಳಿತು ಪ್ರಯಾಣಿಸುತ್ತಿದ್ದ ಮಧ್ಯೆ ಸೋಮವಾರ ಇರಿಯ ಲಾಲೂರಿನಲ್ಲಿ ಅಪಘಾತ ಸಂಭವಿಸಿತ್ತು. ಮಕ್ಕೋಡನ್ ಕಣ್ಣನ್ ಮತ್ತು ನಾರಾಯಣಿ ದಂಪತಿಯ ಪುತ್ರಿಯಾದ ಮೃತರು ಮಕ್ಕಳಾದ ಶರತ್, ಶರಣ್ಯ ಅವರನ್ನು ಅಗಲಿದ್ದಾರೆ.

ಅನಾರೋಗ್ಯದಿಂದ ಚಿಕಿತ್ಸೆ ಪಡೆಯುತ್ತಿದ್ದ ಕಂದಾಯ ಇಲಾಖೆ ಉದ್ಯೋಗಿ ಮೃತ್ಯು



ಕಾಸರಗೋಡು: ಅನಾರೋಗ್ಯದಿಂದ ಚಿಕಿತ್ಸೆ ಪಡೆಯುತ್ತಿದ್ದ ಕಂದಾಯ ಇಲಾಖೆಯ ಉದ್ಯೋಗಿಯೊಬ್ಬರು ಮೃತಪಟ್ಟಿದ್ದಾರೆ. ಬೇಳ ದಭೇತ್ತಡ್ಕ ರಘು (48) ಮೃತಪಟ್ಟವರು. ಕ್ಷಯರೋಗ ಸಂಬಂಧಿತ ಕಾಯಿಲೆಗೆ ಚಿಕಿತ್ಸೆ ಪಡೆಯುತ್ತಿದ್ದರು. ಶನಿವಾರ ಅನಾರೋಗ್ಯ ಉಲ್ಬಣಗೊಂಡು ರಕ್ತವಾಂತಿ ಮಾಡಿದ ಅವರನ್ನು ಆಸ್ಪತ್ರೆಗೆ ಕೊಂಡೊಯ್ಯಲಾಗಿತ್ತಾದರೂ ಪ್ರಯೋಜನವಾಗಲಿಲ್ಲ.

ರಾಷ್ಟ್ರೀಯ ವೇದಿಕೆಯಲ್ಲಿ ಮೊಳಗಲಿದೆ ನಮ್ಮ ಪಂಚಾಯತ್‌ಗಳ 'ಪಂಚ' ಸಾಧನೆ ಜಯಘೋಷ

ಮಿಂಚಲಿದೆ ದಿಲ್ಲಿಯಲ್ಲಿ ಉಡುಪಿ ಜಿಲ್ಲೆ!

ಉಡುಪಿ: ಜಿಲ್ಲೆಯ ಪಂಚಾಯತ್ ರಾಜ್ ಇತಿಹಾಸದಲ್ಲಿ ಸುವರ್ಣಾಕ್ಷರಗಳಲ್ಲಿ ದಾಖಲಾಗುವ ಎಲ್ಲಾ ಕ್ಷಣಗಳು ಹತ್ತಿರವಾಗುತ್ತಿವೆ!

ಕೇಂದ್ರ ಪಂಚಾಯತ್ ರಾಜ್ ಸಚಿವಾಲಯವು ಘೋಷಿಸಿರುವ ಪ್ರತಿಷ್ಠಿತ ದೀನ್ ದಯಾಳ್ ಉಪಾಧ್ಯಾಯ ಪಂಚಾಯತ್ ಸತತ ವಿಕಾಸ ಪುರಸ್ಕಾರ–2025ನ್ನು ಮುಡಿಗೇರಿಸಿಕೊಳ್ಳಲು ಉಡುಪಿ ಜಿಲ್ಲೆಯ ಐದು ಸಾಧಕ ಪಂಚಾಯತ್‌ಗಳು ಸಜ್ಜಾಗಿವೆ. ಇದೇ ಜೂ 3ರಂದು ದೇಶದ ರಾಜಧಾನಿ ಹೊಸದಿಲ್ಲಿಯಲ್ಲಿ ನಡೆಯ ಲಿರುವ ಅದ್ದೂರಿ ಸಮಾರಂಭದಲ್ಲಿ ಜಿಲ್ಲೆಯ ಈ ಪಂಚ ಗ್ರಾಮ ಪಂಚಾಯತ್‌ಗಳು ರಾಷ್ಟ್ರೀಯ ಮನ್ನಣೆಯನ್ನು ಅಧಿಕೃತವಾಗಿ ಸ್ವೀಕರಿಸಲಿವೆ.

ರಾಷ್ಟ್ರಮಟ್ಟದಲ್ಲಿ ಉಡುಪಿಯ ಛನತೆ

ಗ್ರಾಮೀಣ ಆಡಳಿತದಲ್ಲಿ ಸುಸ್ಥಿರ ಅಭಿವೃದ್ಧಿಯ ಗುರಿ ತಳಮಟ್ಟದಲ್ಲಿ ಅತ್ಯಂತ ಯಶಸ್ವಿಯಾಗಿ ಜಾರಿಗೊಳಿಸಿದ ಭಾರತದ ಶ್ರೇಷ್ಠ ಪಂಚಾಯತ್‌ಗಳ ಪಟ್ಟಿಯಲ್ಲಿ ಉಡುಪಿ ಜಿಲ್ಲೆಯ ಮುದ್ರಾಡಿ, ವಂಡ್ಸೆ, ಮಡಾಮಕ್ಕಿ, ಸಾಣೂರು ಮತ್ತು ಹಕ್ಲಾಡಿ ಸ್ಥಾನ ಪಡೆದಿರುವುದು ಜಿಲ್ಲೆಯ ಗೌರವವನ್ನು ಇಡೀ ದೇಶದ ಗಮನ ಸೆಳೆಯುವಂತೆ ಮಾಡಿದೆ. 2030ರೊಳಗೆ ಸಾಧಿಸಬೇಕಾದ ಸ್ಥಳೀಕೃತ ಅಭಿವೃದ್ಧಿ ಗುರಿಗಳನ್ನು ಕಾಲಮಿತಿಯೊಳಗೆ ತಲುಪಲು ಈ ಪಂಚಾಯತ್‌ಗಳು ತೋರಿರುವ ಬದ್ಧತೆ, ಕಠಿಣ 156 ಸೂಚ್ಯಾಂಕಗಳ ಮೌಲ್ಯ ಮಾಪನದಲ್ಲಿ ಪಡೆದ ಉನ್ನತ ಅಂಕ ಇವುಗಳನ್ನು ಜೂ.3ರ ಸಮಾರಂಭದ ಕೇಂದ್ರಬಿಂದುವಾಗಿಸಿವೆ.



ಉಡುಪಿ ಜಿಲ್ಲೆಯ ಗ್ರಾಮ ಸ್ವರಾಜ್ಯ ಮಾದರಿ

ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಉಡುಪಿ ಜಿಲ್ಲೆ ಮೊದಲಿನಿಂದಲೂ ಮುಂಚೂಣಿಯಲ್ಲಿದೆ. ಆದರೆ ಈ ಬಾರಿ ಒಟ್ಟಿಗೆ ಐದು ಪಂಚಾಯತ್‌ಗಳು ರಾಷ್ಟ್ರೀಯ ಪ್ರಶಸ್ತಿಗೆ ಭಾಜನವಾಗಿರುವುದು ಜಿಲ್ಲೆಯ ಆಡಳಿತ ದಕ್ಷತೆಗೆ ಸಾಕ್ಷಿಯಾಗಿದೆ. ಸುಸ್ಥಿರ ಅಭಿವೃದ್ಧಿಯ 9 ಗುರಿಗಳಲ್ಲಿ ಪಾರದರ್ಶಕತೆ, ಡಿಜಿಟಲೀಕರಣ ಮತ್ತು ಜನಭಾಗೀದಾರಿಕೆಯನ್ನು ಸಮರ್ಪಕವಾಗಿ ಬಳಸಿಕೊಂಡಿದ್ದೇ ಈ ಯಶಸ್ಸಿಗೆ ಮೂಲ ಕಾರಣ. ಕೇಂದ್ರದ ಮೌಲ್ಯಮಾಪನ ತಂಡವು ಖುದ್ದಾಗಿ ಭೇಟಿ ನೀಡಿ ಪರಿಶೀಲಿಸಿದಾಗ, ಇಲ್ಲಿನ ಪಂಚಾಯತ್‌ಗಳು ಕೇವಲ ದಾಖಲೆಗಳಲ್ಲಿ ಮಾತ್ರವಲ್ಲದೆ ನೈಜವಾಗಿಯೂ ಅಭಿವೃದ್ಧಿ ಕಂಡಿರುವುದು ಸಾಬೀತಾಗಿದೆ.

ಜೀವನೋಪಾಯ, ಆರೋಗ್ಯದ ಮಾದರಿ

ಹೆಬ್ರಿ ತಾಲೂಕಿನ ಮುದ್ರಾಡಿ ಪಂಚಾಯತ್ 'ಬಡತನ ಮುಕ್ತ ಮತ್ತು ಸುಧಾರಿತ ಜೀವನೋಪಾಯ' ವಿಭಾಗದಲ್ಲಿ ದೇಶಕ್ಕೇ ಪ್ರಥಮ ಸ್ಥಾನ ಪಡೆದು 1 ಕೋಟಿ ರೂ. ನಗದು ಬಹುಮಾನದೊಂದಿಗೆ ದಿಲ್ಲಿಯಲ್ಲಿ ಮಿಂಚಲಿದೆ. ಇಲ್ಲಿನ ನೂರಕ್ಕೆ ನೂರರಷ್ಟು ಉದ್ಯೋಗ ಕಾರ್ಡ್ ವಿತರಣೆ ಮತ್ತು ಮಹಿಳಾ ಸಬಲೀಕರಣದ ಯಶೋಗಾಥೆ ಈಗ ರಾಷ್ಟ್ರೀಯ ಅಧ್ಯಯನ ವಸ್ತುವಾಗಿದೆ. ಅದೇ ರೀತಿ ಕುಂದಾಪುರ ತಾಲೂಕಿನ ವಂಡ್ಸೆ ಪಂಚಾಯತ್ ತಾಯಿ–ಮಗು ಆರೋಗ್ಯ ಮತ್ತು ಸಂಪೂರ್ಣ ಆರೋಗ್ಯ ವಿಮೆ ಶಿಸ್ತಿನಿಂದಾಗಿ 'ಆರೋಗ್ಯಕರ ಪಂಚಾಯತ್' ವಿಭಾಗದಲ್ಲಿ ದ್ವಿತೀಯ ಸ್ಥಾನದ ಗೌರವ ಪಡೆದಿದೆ.

ಜಲ, ಮೂಲಸೌಕರ್ಯದ ಯಶೋಗಾಥೆ

ಪರಿಸರ ಸ್ನೇಹಿ ಆಡಳಿತಕ್ಕೆ ಹೆಸರಾದ ಮಡಾಮಕ್ಕಿ ಪಂಚಾಯತ್ ಜಲ ಸಂರಕ್ಷಣೆ ಮತ್ತು ಮಳೆನೀರು ಕೊಯ್ಲು ಪದ್ಧತಿಯನ್ನು ಕಡ್ಡಾಯಗೊಳಿಸಿ 'ಜಲ ಸಮೃದ್ಧ ಪಂಚಾಯತ್' ವಿಭಾಗದಲ್ಲಿ ದ್ವಿತೀಯ ಸ್ಥಾನವನ್ನು ಅಲಂಕರಿಸಿದೆ. ಇನ್ನು ಕಾರ್ಕಳ ತಾಲೂಕಿನ ಸಾಣೂರು ಪಂಚಾಯತ್ ತನ್ನದೇ ಆದ ಆದಾಯದ ಮೂಲ ಕಂಡುಕೊಂಡು ಗ್ರಾಮವನ್ನು ಡಿಜಿಟಲೀಕರಣದತ್ತ ಮುನ್ನಡೆಸಿ ಮೂಲಸೌಕರ್ಯ ಅಭಿವೃದ್ಧಿಯಲ್ಲಿ ರಾಷ್ಟ್ರಮಟ್ಟದ ತೃತೀಯ ಸ್ಥಾನವನ್ನು ಗಳಿಸಿದೆ.

ಸಮಾಜದ ಕಟ್ಟಕಡೆಯ ವ್ಯಕ್ತಿಗೂ ಸಾಮಾಜಿಕ ಭದ್ರತೆ ಒದಗಿಸಿದ ಕುಂದಾಪುರದ ಹಕ್ಲಾಡಿ ಪಂಚಾಯತ್ ಸಾಮಾಜಿಕ ನ್ಯಾಯದ ವಿಭಾಗದಲ್ಲಿ ತೃತೀಯ ಸ್ಥಾನದೊಂದಿಗೆ ದಿಲ್ಲಿಯ ವೇದಿಕೆಯೇರಲಿದೆ.

ದಿಲ್ಲಿಯಲ್ಲಿ ಜಿಲ್ಲೆಯ ಪಂಚ ಸಂಭ್ರಮ

ಜೂ.3 ರಂದು ದಿಲ್ಲಿಯಲ್ಲಿ ನಡೆಯುವ ಈ ಸಮಾರಂಭವು ಜಿಲ್ಲೆಯ ಜನಪ್ರತಿನಿಧಿಗಳು ಮತ್ತು ಅಧಿಕಾರಿಗಳ ದಕ್ಷತೆಗೆ ಸಿಕ್ಕ ಅತಿದೊಡ್ಡ ಪುರಸ್ಕಾರವಾಗಿದೆ. ಒಟ್ಟು 3.5 ಕೋಟಿ ರೂಪಾಯಿಗಳಿಗೂ ಅಧಿಕ ಅನುದಾನವನ್ನು ಈ ಐದು ಪಂಚಾಯತ್‌ಗಳು ಬಹುಮಾನದ ರೂಪದಲ್ಲಿ ಜಿಲ್ಲೆಗೆ ತರಲಿವೆ. ಕೇವಲ ಹಣಕಾಸಿನ ನೆರವಲ್ಲದೆ, ಇಡೀ ಭಾರತ ದೇಶಕ್ಕೆ ಉಡುಪಿ ಮಾದರಿಯ ಆಡಳಿತ ವನ್ನು ಪರಿಚಯಿಸಲು ಈ ವೇದಿಕೆ ಸಾಕ್ಷಿಯಾಗಲಿದೆ. ಈ ಸಾಧನೆಯ ಸಂಭ್ರಮವು ಜಿಲ್ಲೆಯ ಇತರ ಪಂಚಾಯತ್‌ಗಳಿಗೂ ಹೊಸ ಸ್ಫೂರ್ತಿ ನೀಡಲಿದೆ ಎಂಬುದರಲ್ಲಿ ಸಂಶಯವಿಲ್ಲ.

ಅಭಿವೃದ್ಧಿಗೆ ಆನೆಬಲ ನೀಡಲಿರುವ 3.5 ಕೋಟಿ ರೂ. ಅನುದಾನ

ಈ ರಾಷ್ಟ್ರೀಯ ಪುರಸ್ಕಾರವು ಕೇವಲ ಪ್ರಶಸ್ತಿ ಮತ್ತು ಗೌರವಕ್ಕೆ ಸೀಮಿತವಾಗಿಲ್ಲ; ಇದು ಆಯಾ ಗ್ರಾಮಗಳ ಸಮಗ್ರ ಪ್ರಗತಿಗೆ 'ಆನೆಬಲ' ನೀಡುವ ಆರ್ಥಿಕ ಶಕ್ತಿಯನ್ನೂ ತಂದಿದೆ. ಮುದ್ರಾಡಿ ಪಂಚಾಯತ್‌ಗೆ ಲಭಿಸಲಿರುವ 1 ಕೋಟಿ ರೂ., ವಂಡ್ಸೆ ಮತ್ತು ಮಡಾಮಕ್ಕಿ ಪಂಚಾಯತ್‌ಗಳಿಗೆ ತಲಾ 75 ಲಕ್ಷ ರೂ. ಹಾಗೂ ಸಾಣೂರು ಮತ್ತು ಹಕ್ಲಾಡಿ ಪಂಚಾಯತ್‌ಗಳಿಗೆ ತಲಾ 50 ಲಕ್ಷ ರೂ. ಸೇರಿ ಒಟ್ಟು 3.5 ಕೋಟಿ ರೂಪಾಯಿ ನಗದು ಬಹುಮಾನ ಜಿಲ್ಲೆಯ ಪಾಲಾಗಲಿದೆ.



ಪಶ್ಚಿಮ ಬಂಗಾಳ ವಿಧಾನಸಭೆ ಚುನಾವಣೆಯಲ್ಲಿ ಗೆಲುವು ಸಾಧಿಸಿದ ಹಿನ್ನೆಲೆಯಲ್ಲಿ ಮೋದಿ ಟಿ ಹಾಗೂ ಮೋದಿ ಝಾಲ್‌ಮೂರಿ ವಿತರಣೆ ಕಾರ್ಕಳದ ರಥಬಿದಿಯ ಮಾಧವೇಂದ್ರ ಜ್ಯೂಸ್ ಸೆಂಟರ್ ಬಳಿ ಕಾರ್ಕಳ ಜೈಹಿಂದ್ ಗೇಮ್ಸ್ ಕ್ಲಬ್ ಆಶ್ರಯದಲ್ಲಿ ಭಾನುವಾರ ಸಂಜೆ ನಡೆಯಿತು.

ಕಟೀಲು ಅಮ್ಮನ ಸನ್ನಿಧಿಯಲ್ಲಿ ಸತಿಪತಿಗಳಾದರು 72 ಜೋಡಿ

ಕಟೀಲು: ಕಟೀಲು ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನದಲ್ಲಿ ಭಾನುವಾರ 72 ಸರಳ ವಿವಾಹ ನಡೆಯಿತು. ಕಟೀಲು ದೇವಿಯ ಸನ್ನಿಧಿಯಲ್ಲಿ ಮದುವೆ ಆಗುತ್ತೇವೆಂದು ಹರಕೆ ಹೇಳಿಕೊಳ್ಳುವವರು ಭಕ್ತಿಯಿಂದ ಇಚ್ಛಿಸಿದವರು ಅತ್ಯಂತ ಸರಳ ರೀತಿಯಲ್ಲಿ ವಿವಾಹ ಆಗುತ್ತಾರೆ. 50, 60 ಹೀಗೆ ಅನೇಕ ಮದುವೆಗಳು ಆಗುತ್ತಿದ್ದು ಭಾನುವಾರ ನಡೆದ ಮದುವೆಗಳ ಸಂಖ್ಯೆ ಈ ವರುಷದ ಅತ್ಯಂತ ಹೆಚ್ಚು ಸಂಖ್ಯೆಯಾಗಿದೆ. ವರುಷದಿಂದ ವರುಷ ಕಟೀಲು ದೇಗುಲದಲ್ಲಿ ವಿವಾಹ ಆಗುವವರ ಸಂಖ್ಯೆ ಹೆಚ್ಚುತ್ತಿದೆ.

ವ್ಯವಸ್ಥಿತ ರೀತಿಯಲ್ಲಿ ಮದುವೆಯಾಗಲು ಅಥವಾ ಮದುವೆ ವ್ಯವಸ್ಥೆಯನ್ನು ಇನ್ನಷ್ಟು ವ್ಯವಸ್ಥಿತ ರೀತಿಯಲ್ಲಿ ಮಾಡಲು ದೇಗುಲದ ಆಡಳಿತ ಮಂಡಳಿ ಸಿದ್ಧವಾಗಬೇಕಾಗಿದೆ.

ವಾಹನಗಳ ಬ್ಲಾಕ್ ಹೆಚ್ಚುತ್ತಿದ್ದು ಕಿಲೋಮೀಟರ್ ಗಟ್ಟಲೇ ವಾಹನಗಳು ನಿಲ್ಲುತ್ತಿವೆ. ಅನೇಕರು ರಸ್ತೆಯ ಬದಿಗಳಲ್ಲಿ ವಾಹನ ನಿಲ್ಲಿಸುವ ಪರಿಣಾಮ ಬ್ಲಾಕ್ ಮತ್ತಷ್ಟು ಹೆಚ್ಚುತ್ತಿದ್ದು ಸಮಸ್ಯೆ ಆಗುತ್ತಿದೆ. ನಂದಿನಿ ನದಿಯ ಸೇತುವೆಯನ್ನು ಅಗಲಗೊಳಿಸುವುದು ರಸ್ತೆಯ ಅಗಲದ ಅಗತ್ಯ ಇದೆ.



ಸರಳ ವಿವಾಹದತ್ತ ಹೆಚ್ಚುತ್ತಿರುವ ಒಲವು

ಕಟೀಲು ದೇವಸ್ಥಾನದಲ್ಲಿ ಅತ್ಯಂತ ಸರಳವಾಗಿ ವಿವಾಹವಾಗಲು ಅವಕಾಶವಿದೆ. ವಾರಗಳ ಮೊದಲು ವಧೂ ವರರ ಸಮರ್ಪಕ ದಾಖಲೆಗಳನ್ನು ನೀಡಬೇಕು. ಕರಿಮಣಿ ಹಾರ ಇತ್ಯಾದಿ ಅಗತ್ಯ ವಸ್ತುಗಳನ್ನು ಅವರೇ ತರಬೇಕು. ಕೇವಲ ರೂಪಾಯಿ 800 ವಿವಾಹ ಕಾಣಿಕೆ, ದಕ್ಷಿಣೆ ಹಾಗೂ ದಾಖಲೆ ಪತ್ರ ನೀಡಿದರೆ ಸಾಕು. ಅತ್ಯಂತ ಸರಳವಾಗಿ ದೇವರ ಸಮ್ಮುಖ ವಿವಾಹವಾಗಲು ಸಾಧ್ಯ. ಹೀಗಾಗಿ ಈಗ ಸರಳ ವಿವಾಹದತ್ತ ಹೆಚ್ಚಿನ ಒಲವು ಕಂಡುಬರುತ್ತಿದೆ.

ಕಡಲಿನಲ್ಲಿ ಕಾಡಿದೆ ಮತ್ಸ್ಯಕ್ಷಾಮ | ಸಂಕಷ್ಟದಲ್ಲಿ ಉದ್ಯಮ

ಮೀನುಗಾರರ ಬೆವರಿಳಿಸಿದೆ ಬಿಸಿಲು

ಕಾಸರಗೋಡು: ಬಿಸಿಲಿನ ತಾಪಮಾನ ದಿನದಿಂದ ದಿನಕ್ಕೆ ಹೆಚ್ಚುತ್ತಿದ್ದು ಮೀನಿನ ಲಭ್ಯತೆ ತೀವ್ರ ಮಟ್ಟದಲ್ಲಿ ಕುಸಿದಿದೆ. ಇದರಿಂದಾಗಿ ಮೀನುಗಾರರು ಸಂಕಷ್ಟಕ್ಕೀಡಾಗಿದ್ದಾರೆ.

ಕಳೆದ ಮಳೆಗಾಲಹಾಗೂ ಟ್ರಾಲಿಂಗ್ ನಿಷೇಧ ಹಿಂಪಡೆದ ಬಳಿಕ ಸಮುದ್ರಕ್ಕಿಳಿದ ಮೀನುಗಾರರಿಗೆ ತೀವ್ರ ನಿರಾಸೆ ಎದುರಾಗಿದೆ. ತೀವ್ರ ಕಡಲ್ಕೊರೆತ ಹಾಗೂ ಬಿಸಿನ ತಾಪದಿಂದಾಗಿ ಮೀನಿನ ಲಭ್ಯತೆ ಕಡಿಮೆಯಾಗಿದೆ. ಇದರಿಂದ ಮೀನುಗಾರರು ಜೀವನ ನಡೆಸಲು ಸಾಧ್ಯವಾಗದ ಪರಿಸ್ಥಿತಿಗೆ ತಲುಪಿದ್ದಾರೆ ಎಂದು ಮೀನುಗಾರರು ತಮ್ಮ ಅಳಲು ವ್ಯಕ್ತಪಡಿದ್ದಾರೆ.

ಸಮುದ್ರದಲ್ಲಿ ತಾಪಮಾನ ಹೆಚ್ಚಿನ ಹಿನ್ನೆಲೆಯಲ್ಲಿ ಮೀನುಗಳು ಕರಾವಳಿಯಿಂದ ಆಳ ಸಮುದ್ರದತ್ತ ಸಾಗಿರುವುದು ಮೀನಿನ ಅಲಭ್ಯತೆಗೆ ಕಾರಣವಾಗಿದೆ. ಮೀನುಗಾರರ ಸಮಸ್ಯೆಗಳಿಗೆ ಪರಿಹಾರ ಕೈಗೊಳ್ಳುವುದಾಗಿ ಸರಕಾರ ಹಲವು ಭರವಸೆಗಳನ್ನು ನೀಡುತ್ತಿದ್ದರೂ ಅದ್ಯಾವುದೂ ಜಾರಿಗೊಳ್ಳದೆ ಕೇವಲ ಕಡತಕ್ಕೆ ಮಾತ್ರ ಸೀಮಿತವಾಗುತ್ತಿರುವುದು ಮೀನು ಕಾರ್ಮಿಕರ ಪಾಲಿಗೆ ಬಲುದೊಡ್ಡ ಸಮಸ್ಯೆಯಾಗಿ ಪರಿಣಮಿಸಿದೆ.

ಪ್ರಸ್ತುತ ಪರಿಸ್ಥಿತಿ ಸಾಂಪ್ರದಾಯಿಕ ರೀತಿಯಲ್ಲಿ ದೋಣಿಗಳಲ್ಲಿ ಸಾಗಿ ಮೀನುಗಾರಿಕೆಗೆ ತೆರಳುವವರಿಗೆ ತೀವ್ರ ಸಂಕಷ್ಟ ಉಂಟಾಗಿದೆ. ಮೀನುಗಳ ಲಭ್ಯತೆ ಕಡಿಮೆ ಇರುವ ಹಿನ್ನೆಲೆಯಲ್ಲಿ ಇಂಜಿನ ಅಳವಡಿಸಿದ ದೋಣಿಗಳಲ್ಲಿ ಸಾಗವ ಮೀನುಗಾರರು, ಬೋಟ್‌ಗಳಲ್ಲಿ ಮೀನುಗಾರಿಕೆಗೆ ತೆರಳುವ ಮೀನುಗಾರರೂ ಕೂಡಾ ಸಮುದ್ರಕ್ಕಿಳಿಯಲು ಹಿಂದೇಟು ಹಾಕುತ್ತಿದ್ದಾರೆ.

ಮೀನುಗಳು ಕೂಡಾ ಕಾಣೆ

ಬೇಸಿಗೆಯಲ್ಲಿ ಧಾರಾಳ ಲಭಿಸುವ ಬಂಗುಡೆ, ಬೂತಾಯಿ ಮೀನುಗಳು ಕೂಡಾ ಕಾಣೆಯಾಗಿದ್ದು, ಸಮುದ್ರಕ್ಕಿಳಿದು ಮೀನುಗಾರಿಕೆ ನಡೆಸಿದರೂ ಇಂಧನ ವೆಚ್ಚವೂ ಲಭಿಸದಂತಹ ಪರಿಸ್ಥಿತಿ ಉಂಟಾಗಿದೆ ಎಂದು ಮೀನುಗಾರರು ತಮ್ಮ ನೋವು ವ್ಯಕ್ತಪಡಿಸುತ್ತಿದ್ದಾರೆ.



ಇನ್ನಷ್ಟು ನಷ್ಟ

ಇನ್ನು ಮುಂದೆ ಮಳೆಗಾಲ ಆರಂಭಗೊಂಡರೆ ಟ್ರಾಲಿಂಗ್ ನಿಷೇಧ ಜಾರಿಯಾಗಲಿದ್ದು, ಲಕ್ಷಾಂತರ ರೂ. ಸಾಲ ಪಡೆದು ಮೀನುಗಾರಿಕೆಯಲ್ಲಿ ತೊಡಗಿರುವ ಮೀನುಗಾರರು ಇನ್ನಷ್ಟು ನಷ್ಟ ಎದುರಿಸಬೇಕಾಗುತ್ತದೆ ಎಂದು ಮೀನುಗಾರರು ಹೇಳುತ್ತಿದ್ದಾರೆ.

ಕೊಡಗಿನ ಮುಖ್ಯ ರಸ್ತೆಯಲ್ಲೇ ಅಡ್ಡಾಡಿದ ಕಾಡಾನೆ

ಎಲ್ಲೆಡೆ ಆತಂಕದ ವಾತಾವರಣ

ಮಡಿಕೇರಿ: ಸಿದ್ದಾಪುರ–ಮೈಸೂರು ಮುಖ್ಯ ರಸ್ತೆಯ ಮಾಲ್ದಾರೆ ಸಮೀಪ ಕಾಡಾನೆಯೊಂದು ರಸ್ತೆಯಲ್ಲೇ ಓಡಾಡಿ ಆತಂಕ ಸೃಷ್ಟಿಸಿದ ಘಟನೆ ನಡೆದಿದೆ.

ಮಾಲ್ದಾರೆ ಭಾಗದ ಕಾಫಿ ತೋಟದ ಸೋಲಾರ್ ಬೇಲಿಯನ್ನು ಮುರಿದು ಬಂದ ಕಾಡಾನೆ ಅರಣ್ಯ ಪ್ರದೇಶದ ಕಡೆಗೆ ರಸ್ತೆ ದಾಟುತ್ತಿರುವ ದೃಶ್ಯವನ್ನು ಸ್ಥಳೀಯರು ಮೊಬೈಲ್‌ನಲ್ಲಿ ಸೆರೆಹಿಡಿದಿದ್ದಾರೆ. ಇದೇ ವೇಳೆ ಕಾಡಾನೆ ತೋಟದಲ್ಲಿದ್ದ ಸಿಲ್ವರ್ ಮರವನ್ನು ಮುರಿದು ವಿದ್ಯುತ್ ಕಂಬದ ಮೇಲೆ ತಳ್ಳಿಹಾಕಿರುವುದರಿಂದ ಕೆಲಕಾಲ ಆತಂಕದ ವಾತಾವರಣ ನಿರ್ಮಾಣವಾಗಿತ್ತು. ಸ್ಥಳಕ್ಕೆ ಅರಣ್ಯ ಇಲಾಖೆ ಸಿಬ್ಬಂದಿ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.



ಬೆಳಗಿನ ವೇಳೆಯಲ್ಲಿ ಈ ಘಟನೆಯಿಂದ ನಡೆದಿದ್ದು, ವಾಹನ ಸವಾರರು ಆತಂಕದಿಂದಲೇ ವಾಹನ ಚಲಾಯಿಸಿದರು. ಈ ಭಾಗದಲ್ಲಿ ಕಾಡಾನೆಗಳ ಹಾವಳಿ ಹೆಚ್ಚಾಗುತ್ತಿರುವ ಹಿನ್ನೆಲೆ ಅರಣ್ಯ ಇಲಾಖೆ ಶಾಶ್ವತ ಪರಿಹಾರ ಕ್ರಮ ಕೈಗೊಳ್ಳಬೇಕು ಎಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ.

2025–26ನೇ ಸಾಲಿನ ಆರ್ಥಿಕ ವರ್ಷದಲ್ಲಿ ಬೊಕ್ಕಸಕ್ಕೆ 167,89,09,080.77 ರೂ. | ಕಳೆದ ಆರ್ಥಿಕ ವರ್ಷದಿಂದ ರೂ. 12 ಕೋಟಿ ಅಧಿಕ ಸಂಗ್ರಹ

ಆದಾಯದಲ್ಲಿ ಸತತ 15ನೇ ವರ್ಷವೂ ನಂ.1 ಸ್ಥಾನ ಪಡೆದ ಕುಕ್ಕೆ ದೇವಸ್ಥಾನ

ಸುಬ್ರಹ್ಮಣ್ಯ: ರಾಜ್ಯದ ಮುಜರಾಯಿ ಇಲಾಖೆಯ ಆಧೀನದ ಪ್ರಸಿದ್ಧ ನಾಗಾರಾಧನೆಯ ಪುಣ್ಯ ಕ್ಷೇತ್ರ ಮಹತೋಭಾರ ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಾಲಯವು 2025–26ನೇ ಸಾಲಿನ ಆರ್ಥಿಕ ವರ್ಷದಲ್ಲಿ 167,89,09,080.77 ರೂ. ಆದಾಯ ಗಳಿಸಿದೆ.

ಆದಾಯ ಗಳಿಕೆಯಲ್ಲಿ ಸತತ ನಂಬರ್ ವನ್

2025 ಏಪ್ರಿಲ್ 1ರಿಂದ 2026 ಮಾರ್ಚ್ 31ರ ತನಕದ ಆರ್ಥಿಕ ವರ್ಷದಲ್ಲಿ ದೇವಸ್ಥಾನಕ್ಕೆ ಈ ಆದಾಯ ಲಭಿಸಿದೆ. ಇದರಲ್ಲಿ ಒಟ್ಟು 85,20,14,531.42 ರೂ ಖರ್ಚಾಗಿದೆ. 2024–2025ನೇ ಸಾಲಿನಲ್ಲಿ 155 ಕೋಟಿ ರೂ. ಆದಾಯ ಗಳಿಸಿತ್ತು. ಈ ಬಾರಿ 167,89,09,080.77 ರೂ. ಆದಾಯ ಗಳಿಸುವ ಮೂಲಕ ಈ ಆರ್ಥಿಕ ವರ್ಷದಲ್ಲಿ ಕಳೆದ ಆರ್ಥಿಕ ವರ್ಷದಿಂದ ಸುಮಾರು ರೂ. 12 ಕೋಟಿ ಅಧಿಕ ಆದಾಯ ಗಳಿಸಿದೆ. ಈ ಮೂಲಕ ಸತತ 15ನೇ ವರ್ಷ ಆದಾಯ ಗಳಿಕೆಯಲ್ಲಿ ನಂಬರ್ ವನ್ ಮುಜರಾಯಿ ದೇವಳವಾಗಿ ಹೊರಹೊಮ್ಮಿದೆ.



ಇದೇ ಮೊದಲು ಇಷ್ಟೊಂದು ಆದಾಯ

ಗುತ್ತಿಗೆಗಳಿಂದ 2,53,09,230.00 ರೂ., ಧಾನ್ಯ ಇಳುವರಿ, ತೋಟದ ಉತ್ಪನ್ನದಿಂದ 10,50,323.00 ರೂ, ಕಟ್ಟಡ, ಅಂಗಡಿ ಬಾಡಿಗೆಯಿಂದ 94,46,470.00 ರೂ., ಕಾಣಿಕೆಯಿಂದ 5,47,43,244.45 ರೂ., ಇ ಹುಂಡಿಯಿಂದ 38,01,676.80 ರೂ., ಕಾಣಿಕೆ ಹುಂಡಿಯಿಂದ 24,69,63,576.00 ರೂ., ಹರಿಕೆ ಸೇವೆಗಳಿಂದ 64,08,90,940.51 ರೂ., ಅನುದಾನದಿಂದ ರೂ.1,67,956.00 ರೂ., ಹೂಡಿಕೆ ಬಡ್ಡಿ 49,11,07,412 ರೂ.,ಉಳಿತಾಯ ಖಾತೆ, ಇತರ ಬಡ್ಡಿ 41,80,588.00 ರೂ., ಸ್ವೀಪ್ ವ್ಯವಹರಣೆಯಿಂದ ಬಂದ ಬಡ್ಡಿ 12,90,390.00 ರೂ., ಇತರ ಬಾಬ್ತು 3,20,31,937.00 ರೂ., ಛತ್ರ ಸಂರಕ್ಷಣಾ ವಂತಿಗೆ 6,93,66,026.00 ರೂ., ಅನ್ನಸಂತರ್ಪಣೆ ನಿಧಿಯಿಂದ ರೂ. 9,14,71,606.01, ಅಭಿವೃದ್ಧಿ ನಿಧಿ 14,17,284.00 ರೂ., ಶಾಶ್ವತ ಸೇವಾ ಮೂಲಧನ ರೂ. 56,70,421 ಹೀಗೆ ಒಟ್ಟು 167ಕೋಟಿ 89ಲಕ್ಷದ 09 ಸಾವಿರದ 080.77 ರೂ ಆದಾಯ ಶ್ರೀ ದೇವಳಕ್ಕೆ ಬಂದಿದೆ. ಈ ಮೂಲಕ ಪ್ರಪ್ರಥಮ ಬಾರಿಗೆ 167,89,09,080 ಕೋಟಿ ರೂ. ಗೂ ಮಿಕ್ಕಿ ಆದಾಯ ಗಳಿಕೆಯ ದಾಖಲೆ ಸ್ಥಾಪಿತವಾಗಿದೆ.

ಕ್ಷೇತ್ರಕ್ಕೆ ಯಾವುದರಿಂದ ಬಂದಿದೆ ಆದಾಯ?

ಮಹತೋಭಾರ ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಾಲಯಕ್ಕೆ ಮುಖ್ಯವಾಗಿ ಹರಕೆ ಸೇವೆ, ಕಾಣಿಕೆ ಡಬ್ಬಿ, ಬಡ್ಡಿ, ಛತ್ರಗಳ ಬಾಡಿಗೆ, ಕಟ್ಟಡಗಳ ಬಾಡಿಗೆ ಮತ್ತು ಕೃಷಿ ತೋಟದಿಂದ ಆದಾಯವು ಬರುತ್ತದೆ. ಕಳೆದ 14 ವರ್ಷಗಳಿಂದ ನಿರಂತರವಾಗಿ ಆದಾಯ ಗಳಿಕೆಯಲ್ಲಿ ರಾಜ್ಯದ ನಂಬರ್ ದೇವಸ್ಥಾನವಾಗಿ ಹೊರ ಹೊಮ್ಮಿರುವ ಕುಕ್ಕೆಯು 15ನೇ ವರ್ಷವೂ ರಾಜ್ಯದಲ್ಲಿ ತನ್ನ ನಂಬರ್ ವನ್ ಸ್ಥಾನವನ್ನು ಇನ್ನಷ್ಟು ಗಟ್ಟಿಗೊಳಿಸಿದೆ.

ಆದಾಯದಲ್ಲಿ ಸತತ ಹೆಚ್ಚಳ

2006-07ರಲ್ಲಿ ದೇವಳದ ಆದಾಯವು 19.76 ಕೋಟಿ ರೂ. ಆಗಿದೆ. 2007-08ರಲ್ಲಿ 24.44 ಕೋಟಿ ರೂ.ಗಳಿಗೆ ಆದಾಯವು ನೆಗೆದು ರಾಜ್ಯದ ಶ್ರೀಮಂತ ದೇವಾಲಯವಾಗಿ ಪರಿಗಣಿತವಾಯಿತು. ನಂತರದ ವರ್ಷಗಳಲ್ಲಿ ರಾಜ್ಯದ ನಂ.1 ದೇವಸ್ಥಾನವೆಂದು ಪರಿಗಣಿಸಲ್ಪಟ್ಟಿತು. 2008-09ರಲ್ಲಿ 31 ಕೋಟಿ ಆದಾಯ,2009-10ರಲ್ಲಿ 38.51 ಕೋಟಿ ರೂ. ಆದಾಯ, 2011-12ರಲ್ಲಿ 56.24 ಕೋಟಿ, 2012-13ರಲ್ಲಿ 66.76 ಕೋಟಿ ರೂ., 2013-14ರಲ್ಲಿ 68 ಕೋಟಿ ರೂ, 2014-15ರಲ್ಲಿ 77 ಕೋ. 60 ಲಕ್ಷ ರೂ., 2015-16ರಲ್ಲಿ 88 ಕೋ.83ಲಕ್ಷ ರೂ., 2016-17ರಲ್ಲಿ 89 ಕೋಟಿ 65ಲಕ್ಷ ರೂ., 2017-18ರಲ್ಲಿ 95 ಕೋಟಿ 92 ಲಕ್ಷ ರೂ., 2018-19ರಲ್ಲಿ 92 ಕೋಟಿ 09 ಲಕ್ಷ, 2019-20ರಲ್ಲಿ 98 ಕೋಟಿ 92 ಲಕ್ಷ, 2020-21 ರಲ್ಲಿ 68 ಕೋಟಿ 94 ಲಕ್ಷ ರೂ., 2021-22 ರಲ್ಲಿ 72 ಕೋಟಿ 73 ಲಕ್ಷ, 2022-23 ರಲ್ಲಿ 123 ಕೋಟಿ 64 ಲಕ್ಷ, 2023-24ನೇ ಸಾಲಿನಲ್ಲಿ 146 ಕೋಟಿ 1 ಲಕ್ಷ, 2024-25ನೇ ಸಾಲಿನಲ್ಲಿ 155 ಕೋಟಿ 95 ಲಕ್ಷ ಆದಾಯ ಗಳಿಸಿ ಸತತ 14 ವರ್ಷ ರಾಜ್ಯದ ನಂಬರ್ ವನ್ ಆದಾಯ ಗಳಿಕೆಯ ದೇವಳವಾಗಿತ್ತು.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. published at : 2nd Floor, Micasa, Near KSRTC Bus stand, Bejai, Mangaluru - 575 004, Phone : 2497091 to 2497093. Fax : 2497098. RNI:29813/78, Printed at Digantha Mudrana Ltd., D/No.5-184-185, Industrial Estate, Yeyyadi, Mangaluru - 575 008. . Editor: P.S.Prakash, Group Editor: Vinayak S. Bhat, Resident Editor : Prakash Ilanthila.

ಇಂದಿನ ಹವಾಮಾನ

ದಕ್ಷಿಣ ಕನ್ನಡ 34° 27°

ಉಡುಪಿ 34° 27°

ಹೊಸ ದಿಗಂತ ಸಂಗಮ

ರಾಷ್ಟ್ರ ಜಾಗೃತಿಯ ದೈನಿಕ

ದಕ್ಷಿಣ ಕನ್ನಡ | ಉಡುಪಿ | ಕೊಡಗು | ಕಾಸರಗೋಡು

ಸೋಮವಾರ 11, ಮೇ 2026 e-mail diganthamlr@gmail.com | Website www.hosadigantha.com | e-paper epaper.hosadigantha.com | MANGALURU



ಪುಟ 2

ಸಮುದಾಯ ಭವನ ಆದಾಯ ಬಡ ಮಕ್ಕಳ ಶಿಕ್ಷಣಕ್ಕೆ ಬಳಸಿ



ಪುಟ 5

ಕಾಸರಗೋಡು ಮೆಡಿಕಲ್ ಕಾಲೇಜಿಗೆ ಮೂಲ ಸೌಲಭ್ಯ ಕಲ್ಪಿಸಲು ಆಗ್ರಹ

ಸುದ್ದಿ ಅಪ್ಡೇಟ್‌ಗಾಗಿ Google lensನಲ್ಲಿ ಈ QR ಕೋಡ್ ಸ್ಕ್ಯಾನ್ ಮಾಡಿ, whatsApp ಗ್ರೂಪ್ ಇಂದೇ ಸೇರಿ!

ಸುತ್ತಮುತ್ತ

ರಸಪ್ರಶ್ನೆ ಸ್ಪರ್ಧೆಯಲ್ಲಿ ಅಕ್ಷತಾ ಪ್ರವೀಣ್‌ಗೆ ದ್ವಿತೀಯ ಸ್ಥಾನ



ಪುತ್ತೂರು: ಬಪ್ಪಳಿಗೆ ಅಂಬಿಕಾ ವಿದ್ಯಾಲಯದ ಆವರಣದಲ್ಲಿ ಶೃಂಗೇರಿ ಶಾರದಾ ಪೀಠದ ವತಿಯಿಂದ ಆಯೋಜಿಸಲಾದ ಶ್ರೀಶಂಕರ ಭಗವತ್ಪಾದರ ಜೀವನ ಸಂದೇಶ ಮತ್ತು ಮಧ್ವಾಲ್ಮೀಕಿ ರಾಮಾಯಣದ ರಸಪ್ರಶ್ನೆ ಸ್ಪರ್ಧೆಯಲ್ಲಿ ಅಕ್ಷತಾ ಪ್ರವೀಣ್ ಅವರು ಭಾಗವಹಿಸಿ ದ್ವಿತೀಯ ಸ್ಥಾನವನ್ನು ಪಡೆದುಕೊಂಡಿದ್ದಾರೆ. ಈ ಸ್ಪರ್ಧೆಯಲ್ಲಿ ಪುತ್ತೂರು, ಬಂಟ್ವಾಳ, ಸುಳ್ಯ, ಕಡಬ, ಮಂಜೇಶ್ವರ, ಕಾಸರಗೋಡು ತಾಲೂಕುಗಳಿಂದ ಸ್ಪರ್ಧಾರ್ಥಿಗಳು ಭಾಗವಹಿಸಿದ್ದರು. ಜಗದ್ಗುರು ಶ್ರೀ ವಿಧುಶೇಖರಭಾರತಿ ಸನ್ನಿಧಾನಂಗಳವರ ಆಶೀರ್ವಾದ ಪಡೆದು 18,000 ಮೌಲ್ಯದ ಟ್ಯಾಬ್, ಪ್ರಮಾಣಪತ್ರ ಹಾಗೂ ಬಹುಮಾನವನ್ನು ಪಡೆದುಕೊಂಡಿರುವ ಅಕ್ಷತಾ ಅವರು ಕೆಮ್ಮಿಂಜೆ ನಿವಾಸಿ ಪ್ರವೀಣ್ ನಾಯಕ್ ಅವರ ಪತ್ನಿ.

ಮೇ 14: ಕಾಯರ್ ಪದವಿನಲ್ಲಿ ರಾಹುಗುಳಿಗ ದೈವದ ಪ್ರತಿಷ್ಠೆ

ಮಂಗಳೂರು: ಉಳಾಯಿಬೆಟ್ಟು ಪೆರ್ಮಂಕಿ ಕಾಯರ್‌ಪದವಿನಲ್ಲಿ ನೂತನವಾಗಿ ನಿರ್ಮಾಣಗೊಂಡಿರುವ ರಾಹುಗುಳಿಗ ದೈವದ ಪ್ರತಿಷ್ಠೆ ಕಾರ್ಯಕ್ರಮ ಶಶಿಧರ್ ಭಟ್ ಬೊಳ್ಮಾರಗುತ್ತು ನೇತೃತ್ವದಲ್ಲಿ ಮೇ 14ರಂದು ಬೆಳಗ್ಗೆ 10.40ಕ್ಕೆ ನಡೆಯಲಿದೆ. ಮೇ 13ರಂದು ರಾತ್ರಿ ವಾಸ್ತು ಪೂಜೆ, ಮೇ 14ರಂದು ಬೆಳಗ್ಗೆ ಗುಳಿಗ ದೈವದ ಪ್ರತಿಷ್ಠೆ ಹಾಗೂ ರಾತ್ರಿ ಪರ್ವ ನಡೆಯಲಿದೆ ಎಂದು ಕ್ಷೇತ್ರದ ಪ್ರಕಟಣೆ ತಿಳಿಸಿದೆ.

ಮೇ 12, 13: ವಿವಿ ಕಾಲೇಜು ವಾರ್ಷಿಕೋತ್ಸವ, ಪ್ರತಿಭಾ ದಿನಾಚರಣೆ

ಮಂಗಳೂರು: ನಗರದ ವಿಶ್ವವಿದ್ಯಾನಿಲಯ ಕಾಲೇಜಿನಲ್ಲಿ 2025–26ನೇ ಶೈಕ್ಷಣಿಕ ಸಾಲಿನ ಪ್ರತಿಭಾ ದಿನಾಚರಣೆ ಹಾಗೂ 121ನೇ ಕಾಲೇಜು ವಾರ್ಷಿಕೋತ್ಸವ ಮೇ 12 ಮತ್ತು 13ರಂದು ಬೆಳಗ್ಗೆ 9.30 ಗಂಟೆಗೆ ಕಾಲೇಜು ಆವರಣದ ರವೀಂದ್ರ ಕಲಾಭವನದಲ್ಲಿ ಆಯೋಜಿಸಲಾಗಿದೆ. ಮೇ 12ರಂದು ನಡೆಯಲಿರುವ ಪ್ರತಿಭಾ ದಿನಾಚರಣೆ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ನಿವೃತ್ತ ಸೇನಾಧಿಕಾರಿ ಹಾಗೂ ಕಾಲೇಜಿನ ಹಳೆ ವಿದ್ಯಾರ್ಥಿ ಸಂಘದ ಪೂರ್ವತನ ಅಧ್ಯಕ್ಷ ಕರ್ನಲ್ ನಿಟ್ಟೆಗುತ್ತು ಶರತ್ ಭಂಡಾರಿ ಹಾಗೂ ಮಂಗಳೂರಿನ ಕಲಾ ಸೌರಭ ಪರಿಷತ್‌ನ ನಿರ್ದೇಶಕಿ ಡಾ. ಶ್ರೀವಿದ್ಯಾ ಆಗಮಿಸಲಿದ್ದಾರೆ. ಪ್ರತಿಭಾ ದಿನಾಚರಣೆ ಅಧ್ಯಕ್ಷತೆಯನ್ನು ಕಾಲೇಜಿನ ಪ್ರಾಂಶುಪಾಲ ಪ್ರೊ. ಗಣಪತಿ ಗೌಡ ಎಸ್. ಅವರು ವಹಿಸಲಿದ್ದಾರೆ. ಮೇ 13ರಂದು ಕಾಲೇಜು ವಾರ್ಷಿಕೋತ್ಸವ ಸಮಾರಂಭ ನಡೆಯಲಿದೆ. ಭಾರತೀಯ ಭೂಸೇನೆಯ ನಿವೃತ್ತ ಸೇನಾಧಿಕಾರಿ ಕರ್ನಲ್ ನಿತಿನ್ ಬಿಡೆ ಆಗಮಿಸಲಿದ್ದು, ವಿದ್ಯಾರ್ಥಿ ಜೀವನದ ಸವಿನೆನಪುಗಳನ್ನು ಖ್ಯಾತ ನ್ಯಾಯವಾದಿ ಹಾಗೂ ಕಾಲೇಜಿನ ಹಳೆ ವಿದ್ಯಾರ್ಥಿ ಲೋಹಿದಾಸ್ ಆರ್. ಅವರು ಹಂಚಿಕೊಳ್ಳಲಿದ್ದಾರೆ. ಅಧ್ಯಕ್ಷತೆಯನ್ನು ಕಾಲೇಜಿನ ಪ್ರಾಂಶುಪಾಲ ಪ್ರೊ. ಗಣಪತಿ ಗೌಡ ಎಸ್. ವಹಿಸಲಿದ್ದಾರೆ.

ಡಿಎಲ್‌ಇಡಿ, ಡಿಪಿಇಡಿ, ಡಿಪಿಎಸ್‌ಇ ಕೋರ್ಸ್: ಅರ್ಜಿ ಆಹ್ವಾನ

ಮಂಗಳೂರು: 2026–27 ನೇ ಸಾಲಿನ ಡಿಎಲ್‌ಇಡಿ, ಡಿಪಿಇಡಿ ಡಿಪಿಎಸ್‌ಇ ಕೋರ್ಸುಗಳ ವ್ಯಾಸಂಗಕ್ಕಾಗಿ ರಾಜ್ಯದ ಸರ್ಕಾರಿ ಮಾನ್ಯತೆ ಪಡೆದ ಅನುದಾನಿತ ಹಾಗೂ ಅನುದಾನರಹಿತ ಸಂಸ್ಥೆಗಳಲ್ಲಿನ ಸರ್ಕಾರಿ ಕೋಟಾದ ಸೀಟುಗಳ ದಾಖಲಾತಿಗೆ ಆನ್ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಜೂನ್ 6 ಕೊನೆಯ ದಿನ. ಶಾಲಾ ಶಿಕ್ಷಣ ಇಲಾಖೆಯ ವೆಬ್‌ಸೈಟ್ ಡಿಡಿಡಿ.ಠಿಜಟಟಜ್ಠಿಚಿಟ್ಟಜಚ ಠಿಜಟ್ಲಾಎಟ್ಟಚಿಠಿಟ್ಟುಚಿ.ಜಟಡಿ.ಜ್ನನಲ್ಲಿ ಪ್ರಕಟಿಸಲಾದ ಅಧಿಸೂಚನೆಯಲ್ಲಿ ಅರ್ಹತೆ, ಮೀಸಲಾತಿ, ಶುಲ್ಕ ಇತ್ಯಾದಿ ವಿವರ ನೀಡಲಾಗಿದೆ. ಮತ್ತು ಇದರೊಂದಿಗೆ ಜಿಲ್ಲಾವಾರು ಡಿಎಲ್‌ಇಡಿ, ಡಿಪಿಇಡಿ, ಡಿಪಿಎಸ್‌ಇ ಶಿಕ್ಷಣ ಸಂಸ್ಥೆಗಳ ಪಟ್ಟಿಯನ್ನು ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ. ಅಭ್ಯರ್ಥಿಗಳು ಅಧಿಸೂಚನೆಯನ್ನು ಓದಿ, ಅರ್ಜಿಯನ್ನು ಭರ್ತಿ ಮಾಡಿ ಸಂಬಂಧಪಟ್ಟ ವ್ಯವಸ್ಥಾಪಕ ಕೇಂದ್ರ (ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ–ಡಯಟ್) ಗಳಲ್ಲಿ ಸಲ್ಲಿಸಬೇಕು ಎಂದು ಶಾಲಾ ಶಿಕ್ಷಣ ಇಲಾಖೆ ಕೇಂದ್ರೀಕೃತ ದಾಖಲಾತಿ ಘಟಕದ ಜಂಟಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಉಳ್ಳಾಲದಲ್ಲಿ ನೂತನ 'ಗಾಣಿಗ ಭವನ' ಉದ್ಘಾಟಿಸಿ ದೇವು ಮೂಲ್ಯಣ್ಣ ಆಶೀರ್ವಚನ

ಸಮುದಾಯ ಭವನ ಆದಾಯ ಬಡ ಮಕ್ಕಳ ಶಿಕ್ಷಣಕ್ಕೆ ಬಳಸಿ

ಉಳ್ಳಾಲ: ದೀಪ ಬೆಳಗಿಸಲು ಗಾಣದ ಎಣ್ಣೆ ತೆಗೆಯುವ ಮೂಲಕ ಸಮಾಜಕ್ಕೆ ಬೆಳಕು ಕೊಟ್ಟ ಸಮಾಜ ನಮ್ಮದಾಗಿದೆ. ಉಳ್ಳಾಲದಲ್ಲಿ ಗಾಣಿಗ ಸಮಾಜ ಭವನ ನಿರ್ಮಾಣಕ್ಕೆ ಬಹಳಷ್ಟು ಜನ ಶ್ರಮಿಸಿದ್ದಾರೆ. ಸಮುದಾಯ ಭವನನಿರ್ಮಾಣದಿಂದ ಸಮಾಜವು ಏಳಿಗೆಯಾಗುವುದಲ್ಲದೇ, ಅದರಿಂದ ಬರುವ ಆದಾಯವನ್ನು ಸಮಾಜದ ಅಶಕ್ತ ವರ್ಗದ ಮಕ್ಕಳ ವಿದ್ಯಾಭ್ಯಾಸ ಇನ್ನಿತರ ಅಭಿವೃದ್ಧಿ ಚಟುವಟಿಕೆಗಳಿಗೆ ವಿನಿಯೋಗಿಸಬೇಕಾಗಿದೆ ಎಂದು ಉಳ್ಳಾಲ, ಉಳಿಯ ಶ್ರೀ ಉಳ್ಳಾಲ್ತಿ ಧರ್ಮ ಅರಸರ ಕ್ಷೇತ್ರದ ಧರ್ಮದರ್ಶಿ ದೇವು ಮೂಲ್ಯಣ್ಣ ಅಭಿಪ್ರಾಯಪಟ್ಟರು.

ಗಾಣಿಗರ ಸಮುದಾಯ ಸೇವಾ ಟ್ರಸ್ಟ್ ಉಳ್ಳಾಲ ಪ್ರಖಂಡ ತೊಕ್ಕೊಟ್ಟು ಇದರ ಆಶ್ರಯದಲ್ಲಿ ಉಳ್ಳಾಲ ಬೈಲಿನಲ್ಲಿ ನಿರ್ಮಾಣಗೊಂಡ ನೂತನ 'ಗಾಣಿಗ ಭವನ'ವನ್ನು ಭಾನುವಾರ ಉದ್ಘಾಟಿಸಿದ ಅವರು ಆಶೀರ್ವಚನ ನೀಡಿದರು.

ಸಮಾಜಕ್ಕೆ ಕೊಡುಗೆ ನೀಡಲಿ

ಗಾಣಿಗ ಭವನ ಉದ್ಘಾಟನಾ ಸಮಾರಂಭದಲ್ಲಿ ಎಲ್ಲಾ ಜಾತಿ ಸಮುದಾಯದ ಮುಖಂಡರು ಸೇರಿರುವುದು ಸಮಾಜದ ಒಗ್ಗಟ್ಟನ್ನು ಪ್ರದರ್ಶಿಸುತ್ತಿದೆ.ಸಮಾಜ ದಲ್ಲಿ ನಾವು ಒಬ್ಬರನ್ನೊಬ್ಬರು ಬಿಟ್ಟು ಇರಲಿಕ್ಕೆ ಸಾಧ್ಯವಿಲ್ಲ ಪ್ರತಿ ತಾಲೂಕಿನಲ್ಲಿ ಇಂತಹ ಭವನಗಳು ತಲೆಎತ್ತುವುದರ ಮೂಲಕ ಗಾಣಿಗ ಸಮುದಾಯವು ಮುಂಚೂಣಿಗೆ ಬರಬೇಕಿದೆ. ಶೈಕ್ಷಣಿಕ, ಧಾರ್ಮಿಕ ಹಾಗೂ ಕ್ರೀಡಾ ಕ್ಷೇತ್ರಕ್ಕೆ ನೂತನ ಭವನವು ಮಹತ್ತರವಾದ ಕೊಡುಗೆ ನೀಡುವಂತಾಗಲಿ ಎಂದು ಹಾರೈಸಿದರು.



ನೂತನ ಗಾಣಿಗ ಭವನ ನಿರ್ಮಾಣಕ್ಕೆ ವಿಶೇಷ ಸಹಕಾರ ನೀಡಿದ ಮುಂಬೈ ಉದ್ಯಮಿ ಶ್ರೀನಿವಾಸ ಸಪಲ್ಯ, ರತಿಕಾ ಶ್ರೀನಿವಾಸ ಸಪಲ್ಯ ದಂಪತಿಯನ್ನು ವೇದಿಕೆಯಲ್ಲಿ ಸನ್ಮಾನಿಸಲಾಯಿತು.

ಉಳ್ಳಾಲ ಗಾಣಿಗರ ಸಮುದಾಯ ಸೇವಾ ಟ್ರಸ್ಟ್ ಅಧ್ಯಕ್ಷ ಸುನಿಲ್ ಕುಮಾರ್ ತೊಕ್ಕೊಟ್ಟು ಅಧ್ಯಕ್ಷತೆ ವಹಿಸಿದ್ದರು. ಉಳ್ಳಾಲ ಶ್ರೀ ಚೀರುಂಭ ಭಗವತಿ ಕ್ಷೇತ್ರದ ಪ್ರಧಾನ ಅರ್ಚಕರಾದ ಮಂಜಪ್ಪ ಕಾರ್ನವರ್, ಜಿಲ್ಲಾ ಗಾಣಿಗ ಸಂಘದ ಅಧ್ಯಕ್ಷ ವಿಶ್ವನಾಥ್ ಕುಮಾರ್ ದಾಸ್, ಉಳ್ಳಾಲ ಬ್ರಹ್ಮಶ್ರೀ ಬಿಲ್ಲವ ವೇದಿಕೆಯ ಅಧ್ಯಕ್ಷ ಕೆ.ಟಿ. ಸುವರ್ಣ, ಉಳ್ಳಾಲ ವಲಯ ಬಂಟರ ಸಂಘದ ಅಧ್ಯಕ್ಷ ರವೀಂದ್ರ ರೈ ಹರೇಕಳ, ಉಳ್ಳಾಲ ಮೊಗವೀರ ಸಂಘದ ಅಧ್ಯಕ್ಷ ಯಶವಂತ ಅಮೀನ್, ಗಟ್ಟಿ ಸಮಾಜದ ಅಧ್ಯಕ್ಷ ಜನಾರ್ದನ ಗಟ್ಟಿ ಕಣ್ಣನ, ಮುಂಬೈ ಉದ್ಯಮಿ ಪೇತ್ರಿ ವಿಶ್ವನಾಥ ಶೆಟ್ಟಿ, ಉದ್ಯಮಿ ಜನಾರ್ದನ ಅಕ್ರೂಳ, ಮುಂಬೈ ಗಿರಿಜಾ ವೆಲ್ಫೇರ್ ಫೌಂಡೇಷನ್ ಅಧ್ಯಕ್ಷ ವಸಂತ ಸಪಲ್ಯ ಕುಂಬಳ, ರಾಜಸ್ಥಾನದ ಉದ್ಯಮಿ ಸತೀಶ್ ಕುಂದರ್, ಉಳಿಯ ಧರ್ಮ ಅರಸರ ಕ್ಷೇತ್ರದ ಮಾಜಿ ಆಡಳಿತ ಮೊಕ್ತೇಸರ ಯು.ಎಸ್. ಪ್ರಕಾಶ್, ಕ್ಷೇತ್ರದ ಒಂದನೇ ಗುರಿಕಾರ ರಾಜೇಶ್ ನಾಯ್ಕ್ ಯಾನೆ ಅಂತ ಗುರಿಕಾರ, ಉಳ್ಳಾಲ ಬೈಲು ವೈದ್ಯನಾಥ ಸೇವಾ ಸಮಿತಿ ಅಧ್ಯಕ್ಷ ಪ್ರವೀಣ್ ಕುಮಾರ್,ತೀಯಾ ಸಮಾಜದ ಮುಖಂಡರಾದ ಚಂದ್ರಹಾಸ್ ಉಳ್ಳಾಲ್, ವಿಶ್ವ ಹಿಂದೂ ಪರಿಷತ್ ಗೋಪಾಲ ಕುತ್ತಾರು, ಪ್ರಮುಖರಾದ ಗೌತಮ್ ದುಬಾಯಿ, ರೋಹಿತ್ ಉಳ್ಳಾಲ್, ಅಂಬಿಕಾ ಸುನಿಲ್ ಕುಮಾರ್, ಪುಷ್ಪಲತಾ ಬಂಗೇರ ಮುಂಬೈ ಇದ್ದರು.

ಸೋಮೇಶ್ವರ ಪುರಸಭಾ ಉಪಾಧ್ಯಕ್ಷ ರವಿಶಂಕರ್ ಸೋಮೇಶ್ವರ ಸ್ವಾಗತಿಸಿದರು. ವಸಂತ್ ಪಜೀರು ವಂದಿಸಿದರು. ಆಶಿಕ್ ಗೋಪಾಲಕೃಷ್ಣ ಕಾರ್ಯಕ್ರಮ ನಿರೂಪಿಸಿದರು.

ಐದು ಅಶಕ್ತ ಕುಟುಂಬಗಳಿಗೆ ಮನೆ

ಗಾಣಿಗ ಸಮುದಾಯದ ಹಿರಿಯರ ದೀರ್ಘಕಾಲದ ಕನಸು ಇವತ್ತು ಸಾಕಾರಗೊಂಡಿದೆ.ನೂತನ ಗಾಣಿಗ ಭವನಕ್ಕೆ ಭದ್ರ ಬುನಾದಿ ಹಾಕಿದ ಅವರ ಸೇವೆಯು ಸ್ಮರಣೀಯ.ಬಿದ್ದರೆ ಮತ್ತೆ ಎದ್ದು ನಿಲ್ಲುವ ಛಲ ಇದ್ದಾಗಲೇ ಅಂದುಕೊಂಡಿದನ್ನ ಸಾಧಿಸಲು ಸಾಧ್ಯವೆಂಬ ಮಾತು ವೈಯಕ್ತಿಕ ಹಾಗೂ ಸಮುದಾಯಕ್ಕೂ ಅನ್ವಯವಾಗಿದೆ. ಆಶಾಕಿರಣ ಯೋಜನೆಯಡಿ ಸಮುದಾಯದ ಅಶಕ್ತ ಕುಟುಂಬಗಳಿಗೆ ಐದು ಮನೆಗಳನ್ನು ನಿರ್ಮಿಸಿಕೊಡುವ ಮಹದಾಸೆ ಇದ್ದು ಶೀಘ್ರವೇ ಅದಕ್ಕೆ ಕಾಯಕಲ್ಪ ನೀಡಲಾಗುವುದು.

● ಶ್ರೀನಿವಾಸ ಸಪಲ್ಯ, ಮುಂಬೈ ಉದ್ಯಮಿ

ಭಜನಾ ಸ್ಪರ್ಧೆ: ಮಲ್ಪೆ, ಕೃಷ್ಣಾಪುರ, ಕಾರ್ಕಳ ತಂಡಗಳಿಗೆ ಬಹುಮಾನ



ಕಟೀಲು: ಕಲೆಯ ಆಸಕ್ತಿ ಇರುವ ಮನುಷ್ಯ ನೆಮ್ಮದಿಯನ್ನು ಆತ್ಮ ಸಂತೋಷವನ್ನು ಅನುಭವಿಸಬಲ್ಲ, ಉತ್ತಮ ಕಲಾವಿದರ ನಾಟ್ಯಸಂಗೀತಪ್ರದರ್ಶನಗಳನ್ನುನೋಡುವ ಒಳ್ಳೆಯ ಪ್ರೇಕ್ಷಕರು ಹೆಚ್ಚಾಗಬೇಕು ಎಂದು ಕಾಣಿಯೂರು ಶ್ರೀ ವಿದ್ಯಾವಲ್ಲಭ ಸ್ವಾಮೀಜಿ ಹೇಳಿದರು.

ಇಲ್ಲಿನ ಸರಸ್ವತೀ ಸದನದಲ್ಲಿ ಶ್ರೀ ಕಟೀಲು ಪ್ರತಿಷ್ಠಾನದ ಸಂಯೋಜನೆಯಲ್ಲಿ ಭಾನುವಾರ ಶ್ರೀ ಕಟೀಲು ಕಲಾ ಉತ್ಸವದಲ್ಲಿ ಅವರು ಆಶೀರ್ವಚನ ನೀಡಿದರು.

ವೇದವ್ಯಾಸ ತಂತ್ರಿ ಶಿಬರೂರು, ಕಟೀಲು ದೇಗುಲದ ಅನುವಂಶಿಕ ಮೊಕ್ತೇಸರ ವಾಸುದೇವ ಆಸ್ರಣ್ಣ, ಕಟೀಲು ದೇಗುಲದ ಅರ್ಚಕ ಕಮಲಾದೇವಿಪ್ರಸಾದ ಆಸ್ರಣ್ಣ, ಶ್ರೀಹರಿನಾರಾಯಣದಾಸ ಆಸ್ರಣ್ಣ, ಉದ್ಯಮಿ ಶಶಿಧರ ಶೆಟ್ಟಿ ಬರೋಡ, ಮಿಜಾರು ರಾಜೇಶ್ ಶೆಟ್ಟಿ ಬೊಂಡಾಲ ಸಚ್ಚಿದಾನಂದ ಶೆಟ್ಟಿ, ಪೂನಾದ ಬಂಟರ ಸಂಘದ ರೋಹಿತ್ ಶೆಟ್ಟಿ, ಐಕಳ ಆನಂದ ಶೆಟ್ಟಿ, ಉದಯಕುಮಾರ ಮಡಂತ್ಯಾರು, ಹರೀಶ್ ಶೆಟ್ಟಿ, ನಿಶಾನ್ ಉಳ್ಳಾಲ್, ಗಿರೀಶ್ ಶೆಟ್ಟಿ ತೆಳ್ಳಾರು, ನ್ಯೂರೋ ಸರ್ಜನ್ ಡಾ. ವೆಂಕಟ್ರಮಣ, ಟ್ರಸ್ಟಿಗಳಾದ ಸಿ ಎ. ಸುದೇಶ್ ರೈ, ಜಿಲ್ಲಾ ಧಾರ್ಮಿಕ ಪರಿಷತ್ತು ಸದಸ್ಯ ಸುಬ್ರಹ್ಮಣ್ಯ ಪ್ರಸಾದ್ ಕೋರಿಯಾರ್, ರತ್ನಾಕರ ಶೆಟ್ಟಿ ಎಕ್ಕಾರು, ಗಿರೀಶ್ ಶೆಟ್ಟಿ ಕಟೀಲು, ಶಿಬರೂರು ಮಧುಕರ ಅಮೀನ್, ದೊಡ್ಡಯ್ಯ ಮೂಲ್ಯ, ಲೋಕಯ್ಯ ಸಾಲ್ಯಾನ್ ಮತ್ತಿತರರು ಇದ್ದರು. ಪ್ರತಿಷ್ಠಾನದ ಅಧ್ಯಕ್ಷ ಅನಂತಪದ್ಮನಾಭ ಆಸ್ರಣ್ಣ ಸ್ವಾಗತಿಸಿದರು. ನಿತೇಶ್ ಶೆಟ್ಟಿ ಎಕ್ಕಾರು, ಕಿರಣ್ ಶೆಟ್ಟಿ ನಿರೂಪಿಸಿದರು. ಸಂಗೀತ ನೃತ್ಯ ಹಾರ್ಮೋನಿಯಂ ಶಿಕ್ಷಕರಾದ ಅರುಣಾ ರಾವ್, ವಾಸು ಮಾಸ್ಟರ್, ಶ್ರಾವ್ಯ ಇವರನ್ನು ಗೌರವಿಸಲಾಯಿತು.

ಕಲಿಕೆಯಲ್ಲಿ ಸಾಧನೆ ಮಾಡಿದ ಪ್ರತಿಷ್ಠಾನದ ವಿದ್ಯಾರ್ಥಿಗಳನ್ನು ಅಭಿನಂದಿಸಲಾಯಿತು. ಭರತನಾಟ್ಯ ಹಾಗೂ ಶಾಸ್ತ್ರೀಯ ಸಂಗೀತ ಪರೀಕ್ಷೆ ವಿಜೇತರಿಗೆ ಪ್ರಮಾಣ ಪತ್ರ ವಿತರಿಸಲಾಯಿತು.

ಭಜನಾ ಸ್ಪರ್ಧೆ ವಿಜೇತರು

ಕುಟುಂಬ ಭಜನೆ ಸ್ಪರ್ಧೆಯಲ್ಲಿ ಪ್ರಥಮ ಶ್ರೀ ದುರ್ಗಾಪರಮೇಶ್ವರಿ ಭಜನಾ ಮಂಡಳಿ ಕಾರ್ಕಳ, ದ್ವಿತೀಯ ಕಟೀಲು ಸಹೋದರಿಯರು, ತೃತೀಯ ಸಾಕ್ಷಾತ್ ಶಿವ ಭಜನಾ ಮಂಡಳಿ, ಚಾರ್ವಾಕ, 16 ವರ್ಷಕ್ಕಿಂತ ಕೆಳಗಿನವರ ವಿಭಾಗದಲ್ಲಿ ಪ್ರಥಮ ಶ್ರೀ ರಾಮ ಭಜನಾ ಮಂಡಳಿ ಮಲ್ಪೆ ದ್ವಿತೀಯ ಸ್ವರಾಂಜಲಿ ಸುರತ್ಕಲ್, ತೃತೀಯ ವೀರಾಂಜನೇಯ ಭಜನಾ ಮಂಡಳಿ ಸುಳ್ಯ, 16 ವರ್ಷಕ್ಕಿಂತ ಮೇಲಿನವರ ವಿಭಾಗದಲ್ಲಿ ಪ್ರಥಮ ಸ್ವರ ಸಾಗರ ಕೃಷ್ಣಾಪುರ ಸುರತ್ಕಲ್ ದ್ವಿತೀಯ ಸ್ವರಾಂಜಲಿ ಸುರತ್ಕಲ್, ತೃತೀಯ ಸಸಿಹಿತ್ಲು ಲಕ್ಷ್ಮೀನಾರಾಯಣ ಭಜನಾ ಮಂಡಳಿ ಇವರು ಪಡೆದರು.

ಸಿಎ ಬ್ಯಾಂಕ್ ನಿವೃತ್ತ ಸಿಇಒಗೆ ಪಂಜ ದೇವಸ್ಥಾನದಿಂದ ಸನ್ಮಾನ



ಸುಬ್ರಹ್ಮಣ್ಯ: ಕಾರ್ಯತತ್ಪರ ಸೇವಾ ಕೈಂಕರ್ಯವು ಸದಾ ಜನತೆಯ ಪ್ರೀತಿಗೆ ಪಾತ್ರವಾಗುತ್ತದೆ. ಉತ್ತಮ ಕಾರ್ಯವೈಖರಿಯು ಜನರ ಹಿತ ಕಾಪಾಡುತ್ತದೆ. ನಿಷ್ಕಲ್ಮಶವಾಗಿ ಕರ್ತವ್ಯ ನಿರ್ವಹಣೆ ಮಾಡಿ ನಿವೃತ್ತರಾಗುವುದು ಸೇವಾ ಬದುಕಿಗೆ ಗೌರವವನ್ನು ನೀಡುತ್ತದೆ ಎಂದು ಪಂಜ ಶ್ರೀಪರಿವಾರ ಪಂಚಲಿಂಗೇಶ್ವರ ದೇವಾಲಯದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಡಾ.ದೇವಿಪ್ರಸಾದ್ ಕಾನತ್ತೂರು ಹೇಳಿದರು.

ಪಂಜ ಶ್ರೀ ಸದಾಶಿವ ಪರಿವಾರ ಪಂಚಲಿಂಗೇಶ್ವರ ದೇವಸ್ಥಾನದ ವತಿಯಿಂದ ಪಂಜ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘದ ನಿವೃತ್ತ ಮುಖ್ಯ ಕಾರ್ಯನಿರ್ವಹಣಾಧಿಕಾರಿಯಾಗಿರುವ ನೇಮಿರಾಜ ಪಲ್ಲೋಡಿ ಅವರಿಗೆ ಭಾನುವಾರ ನಡೆದ ಸನ್ಮಾನ ಕಾರ್ಯಕ್ರಮದಲ್ಲಿ ಗೌರವಾರ್ಪಣೆ ನೆರವೇರಿಸಿ ಅವರು ಮಾತನಾಡಿದರು.

ಗೌರವಾರ್ಪಣೆ

ಸಮಾರಂಭದಲ್ಲಿ ನೇಮಿರಾಜ ಪಲ್ಲೋಡಿ ಮತ್ತು ಅವರ ಪತ್ನಿ ಕವಿತಾ ನೇಮಿರಾಜ ಪಲ್ಲೋಡಿ ಅವರನ್ನು ಡಾ. ದೇವಿಪ್ರಸಾದ್ ಕಾನತ್ತೂರು ಸನ್ಮಾನಿಸಿ ಗೌರವಿಸಿದರು.

ಕಾರ್ಯಕ್ರಮದಲ್ಲಿವ್ಯವಸ್ಥಾಪನಾಸಮಿತಿಯ ಗೌರವ ಸಲಹೆಗಾರರಾದ ಪರಮೇಶ್ವರ ಬಿಳಿಮಲೆ, ಉಮೇಶ್ ಬುಡೆಂಗಿ ಬಳ್ಪ ವ್ಯವಸ್ಥಾಪನಾ ಸಮಿತಿ ಸದಸ್ಯರಾದ ಸತ್ಯನಾರಾಯಣ ಭಟ್ ಕಾಯಂಬಾಡಿ, ಧರ್ಮಪಾಲ ಮರಕ್ಕಡ, ಸಂತೋಷ್ ಕುಮಾರ್ ರೈ ಪಲ್ಲತ್ತಡ್ಕ ಮಾಯಿಲಪ್ಪ ಗೌಡ ಎಣ್ಣೂರು ಪಟ್ಟೆ ಪವಿತ್ರ ಮಲ್ಲೆಟ್ಟಿ ಮಾಲಿನಿ ಕುದ್ವ ವೇದಿಕೆಯಲ್ಲಿದ್ದರು.

ಶಿಮಂತೂರು ದೇವಸ್ಥಾನದಲ್ಲಿ ಮೋಕ್ಷಧಾಮಕ್ಕೆ ಶಿಲಾನ್ಯಾಸ



ಮುಲ್ಕಿ: ಸೀಮೆಯ ಒಂಬತ್ತು ಮಾಗಣೆಯ ಶಿಮಂತೂರು ಶ್ರೀ ಆದಿಜನಾರ್ದನ ದೇವಸ್ಥಾನದಲ್ಲಿ ಭಾನುವಾರ ಬೆಳಿಗ್ಗೆ ಮೋಕ್ಷಧಾಮ ಶಿಲಾನ್ಯಾಸ ಕಾರ್ಯಕ್ರಮ ಕ್ಷೇತ್ರದ ಬಳಿ ನಡೆಯಿತು. ಶ್ರೀ ಕ್ಷೇತ್ರದ ತಂತ್ರಿಗಳಾದ ವೇದವ್ಯಾಸ ತಂತ್ರಿಗಳು ವಿಶೇಷ ಪ್ರಾರ್ಥನೆ ಸಲ್ಲಿಸಿ ಮಾತನಾಡಿ, ಮೋಕ್ಷಧಾಮದ ಪ್ರಯೋಜನ ಸರ್ವ ಸಮಾಜ ಬಾಂಧವರಿಗೆ ಲಭಿಸಲಿ, ಭಕ್ತರ ಒಗ್ಗಟ್ಟಿನ ಮೂಲಕ ದೇವಸ್ಥಾನದ ಅಭಿವೃದ್ಧಿ ನಿರಂತರವಾಗಿ ನಡೆಯಲಿ ಎಂದರು. ಕ್ಷೇತ್ರದ ಆಡಳಿತ ಮೊಕ್ತೇಸರ ಉದಯ ಕುಮಾರ್ ಶೆಟ್ಟಿ ನೂತನ ಮೋಕ್ಷಧಾಮ ನಿರ್ಮಾಣಕ್ಕೆ ಶಿಲಾನ್ಯಾಸ ನೆರವೇರಿಸಿದರು.

ಈ ಸಂದರ್ಭದಲ್ಲಿ ಕ್ಷೇತ್ರದ ಅರ್ಚಕ ಪುರುಷೋತ್ತಮ ಭಟ್, ವ್ಯವಸ್ಥಾಪನಾ ಸಮಿತಿಯ ಸದಸ್ಯೆ ಶಶಿಕಲಾ, ಪ್ರಬಂಧಕ ಜಯದೇವಾಡಿಗ, ಭರತ್ ದೇವಾಡಿಗ, ಗುತ್ತಿಗೆದಾರಚಂದ್ರಶೇಖರಕುಬೆವೂರು ಮತ್ತಿತರರು ಉಪಸ್ಥಿತರಿದ್ದರು.

ಕೋವಿ ಪರವಾನಿಗೆ: ಗೃಹ ಸಚಿವರಿಗೆ ಪಟ್ಟಿ ಸಲ್ಲಿಸಿದ ಶಾಸಕ ಅಶೋಕ್ ರೈ



ಪುತ್ತೂರು: ಕೋವಿ ಪರವಾನಿಗೆ ನವೀಕರಣವಾಗದೆ ಬಾಕಿ ಇರುವವರ ಪಟ್ಟಿಯನ್ನು ರಾಜ್ಯ ಗೃಹ ಸಚಿವ ಡಾ.ಎಚ್.ಜಿ. ಪರಮೇಶ್ವರ್ ಅವರಿಗೆ ಪುತ್ತೂರು ಶಾಸಕ ಅಶೋಕ್ ರೈ ಸಲ್ಲಿಸಿದ್ದಾರೆ.

ಪುತ್ತೂರು, ಬೆಳ್ತಂಗಡಿ, ಬಂಟ್ವಾಳ, ಸುಳ್ಯ ತಾಲೂಕಿನ ಸುಮಾರು 38 ಕೃಷಿಕರ ನವೀಕರಣವಾಗಲು ಬಾಕಿ ಇರುವವರ ಪಟ್ಟಿಯನ್ನು ಸಲ್ಲಿಸಿದ್ದಾರೆ. ಗೃಹ ಸಚಿವರನ್ನು ಭೇಟಿಯಾಗಿ ಮಾತುಕತೆ ನಡೆಸಿದ ಶಾಸಕರು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೃಷಿಕರಿಗೆ ಕೋವಿ ಅಗತ್ಯವಾಗಿದೆ. ಆದರೆ ವಿವಿಧ ಕಾರಣಗಳನ್ನು ಮುಂದಿಟ್ಟು ನವೀಕರಣಕ್ಕೆ ಅರ್ಜಿ ಸಲ್ಲಿಸಿದವರ ಕೋವಿಯನ್ನು ನವೀಕರಣ ಮಾಡುತ್ತಿಲ್ಲ, ಈ ಬಗ್ಗೆ ಅರ್ಜಿದಾರರು ನನ್ನಲ್ಲಿ ವಿಚಾರವನ್ನು ತಿಳಿಸಿದ್ದು ಅದರಂತೆ ನವೀಕರಣಕ್ಕೆ ಅರ್ಜಿ ಹಾಕಿರುವ ವಿವಿಧ ತಾಲೂಕುಗಳ ಅರ್ಜಿದಾರರ ಪಟ್ಟಿಯನ್ನು ಸಲ್ಲಿಸುತ್ತಿರುವುದಾಗಿ ತಿಳಿಸಿದರು.

ಅಧಿವೇಶನದಲ್ಲಿ ಮಾತನಾಡಿದ್ದ ಶಾಸಕರು

ಕಳೆದ ವಿಧಾನಸಭಾ ಅಧಿವೇಶನ ದಲ್ಲಿ ಕೋವಿ ಪರವಾನಿಗೆ ನವೀಕರಣವಾಗದೇ ಇರುವ ಬಗ್ಗೆ ಸರಕಾರದ ಗಮನ ಸೆಳೆದಿದ್ದರು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೃಷಿಗಳಿಗೆ ಕಾಡುಪ್ರಾಣಿಗಳ ಕಾಟವಿದ್ದು ಈ ಕಾರಣಕ್ಕೆ ಕೋವಿ ಅಗತ್ಯವಾಗಿ ಬೇಕಾಗಿದೆ. ಕೋವಿ ಪರವಾನಿಗೆ ನೀಡಲು ಕಾನೂನು ಪ್ರಕಾರ ಯಾರಿಗೆ ಖಂಡಿತವಾಗಿಯೂ ಸಾಧ್ಯವಿಲ್ಲವೋ ಅಂಥವರನ್ನು ಹೊರತುಪಡಿಸಿ ಉಳಿದ ಅರ್ಜಿದಾರರನ್ನು ಮಾನ್ಯ ಮಾಡಬೇಕು ಎಂದು ಅಧಿವೇಶನದಲ್ಲಿ ಶಾಸಕರು ಒತ್ತಾಯಿಸಿದ್ದರು.

ಪಟ್ಟಿ ಸಲ್ಲಿಸಲು ಸೂಚಿಸಿದ್ದರು

ಇದಕ್ಕೆ ಪ್ರತಿಕ್ರಿಯಿಸಿದ್ದ ಗೃಹ ಸಚಿವರು ಯಾರೆಲ್ಲಾ ಕೋವಿ ಪರವಾನಿಗೆಗೆ ಅರ್ಜಿ ಹಾಕಿದ್ದಾರೋ ಅಂಥವರ ಪಟ್ಟಿ ಸಲ್ಲಿಸುವಂತೆ ತಿಳಿಸಿದ್ದರು. ಆ ಪ್ರಕಾರ ಶಾಸಕರು ಅರ್ಜಿದಾರರ ಪಟ್ಟಿ ಸಲ್ಲಿಸಿದ್ದಾರೆ.

ಮಿಲಾಗ್ರಿಸ್ 'ಅಪೆಕ್ಸ್ 2026': 1500ಕ್ಕೂ ಹೆಚ್ಚು ಓಟಗಾರರು ಭಾಗಿ



ಮಂಗಳೂರು: ಮಿಲಾಗ್ರಿಸ್ ಕಾಲೇಜುಮಂಗಳೂರು, ಐಸಿವೈಎಂ ಮಂಗಳೂರು ಡಯೊಸಿಸ್ ಹಾಗೂ ಮಂಗಳೂರು ರನ್ನರ್ಸ್ ಕ್ಲಬ್ ಇದರ ಸಹಯೋಗದಲ್ಲಿ 'ಅಪೆಕ್ಸ್2026' ಕಾಲೇಜು ಆವರಣದಲ್ಲಿ ಭಾನುವಾರ ಆಯೋಜಿಸಲಾಯಿತು.

ಬೆಳಗ್ಗೆ 5:30ಕ್ಕೆ ಆರಂಭವಾದ ಓಟವನ್ನು ಮಿಲಾಗ್ರಿಸ್ ಸಮೂಹ ಸಂಸ್ಥೆಗಳಸಂಚಾಲಕ ಧರ್ಮಗುರು ವಂ. ಬೊನವೆಂಚರ್ ನಜರತ್, ಮಂಗಳೂರು ಧರ್ಮಪ್ರಾಂತದ ವಿಕಾರ್ ಜನರಲ್ ಲಾರೆನ್ಸ್ ಮ್ಯಾಕ್ಸಿಮ್ ನೊರೊನ್ಹಾ, ಮಿಲಾಗ್ರಿಸ್‌ಕಾಲೇಜಿನ ಪ್ರಾಂಶುಪಾಲ ವಂ. ಡಾ. ಆಲ್ವಿನ್ ಸೆರಾವೋ ಚಾಲನೆ ನೀಡಿದರು.

'ಅಪೆಕ್ಸ್ ರನ್ 2026' ನಗರ ಮಟ್ಟದ ಮ್ಯಾರಥಾನ್ ಆಗಿದ್ದು ದೈಹಿಕ ಕ್ಷಮತೆ, ಆರೋಗ್ಯ ಜಾಗೃತಿ, ಸಮುದಾಯದ ಒಗ್ಗಟ್ಟು ಉತ್ತೇಜಿಸುವ ಉದ್ದೇಶದೊಂದಿಗೆ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಸುಮಾರು 1500ಕ್ಕೂ ಹೆಚ್ಚು ಓಟಗಾರರು ಭಾಗವಹಿಸಿದ್ದರು.

ಮೂರು ವಿಭಾಗಗಳಲ್ಲಿ ಆಯೋಜಿಸಿದ್ದ ಓಟದ ಐದು ಕಿಲೋಮೀಟರ್ ಓಟದ ಪುರುಷರ ವಿಭಾಗದಲ್ಲಿ ಪ್ರಥಮ ಸ್ಥಾನ ಗೋವಿಂದ ರಾಜ್, ದ್ವಿತೀಯ ಸ್ಥಾನ ಸತೀಶ್ ಕುಮಾರ್, ಮಹಿಳಾ ವಿಭಾಗದಲ್ಲಿ ಪ್ರಥಮ ಸ್ಥಾನ ಧನ್ಯಾ ಪ್ರಭು, ದ್ವಿತೀಯ ಸ್ಥಾನ ಜೆಸ್ಸಿಕಾ ಸರೋಜಮ್, ಹತ್ತು ಕಿಲೋಮೀಟರ್ ಓಟದ ಪುರುಷರ ವಿಭಾಗದಲ್ಲಿ ಪ್ರಥಮ ಸ್ಥಾನ ಚೆನ್ನಕೇಶವ ಜಿಎಲ್, ದ್ವಿತೀಯ ಸ್ಥಾನ ರವಿ ಮಡಂತ್ಯಾರ್, ಮಹಿಳಾ ವಿಭಾಗದಲ್ಲಿ ಪ್ರಥಮ ಸ್ಥಾನ ಜಯಶ್ರೀ ಬಿ.ಆರ್., ದ್ವಿತೀಯ ಸ್ಥಾನ ಜಸ್ಮಿತಾ ಕೋಡೆಂಕೇರಿ ಪಡೆದರು. ಕ್ಲೈಡ್ ಡಿಸೋಜ ವಂದಿಸಿದರು. ಫ್ಲಾಯ್ಡ್ ಪಿಂಟೋ ನಿರೂಪಿಸಿದರು.

ಮಿತ್ತೂರು–ಸೂರ್ಯ ರಸ್ತೆ ಅಭಿವೃದ್ಧಿ ಕಾರ್ಯಕ್ಕೆ ಶಿಲಾನ್ಯಾಸ



ಪುತ್ತೂರು: ಇಡ್ಕಿದು ಗ್ರಾಮದ ಮಿತ್ತೂರು–ಸೂರ್ಯ ರಸ್ತೆ ಅಭಿವೃದಿಗೆ ಒಟ್ಟು ರೂ. 70 ಲಕ್ಷ ಅನುದಾನ ಇಡಲಾಗಿದ್ದು, ಕಳೆದ ಎರಡು ವರ್ಷಗಳಲ್ಲಿ ಇಡ್ಕಿದು ಗ್ರಾಮದ ಅಭಿವೃದಿ ಕಾರ್ಯಗಳಿಗೆ 3.31 ಕೋಟಿ ಅನುದಾನ ನೀಡಲಾಗಿದೆ ಎಂದು ಪುತ್ತೂರು ಶಾಸಕ ಅಶೋಕ್ ಕುಮಾರ್ ರೈ ಹೇಳಿದರು.

ಅವರು ಇಡ್ಕಿದು ಗ್ರಾಮದ ಮಿತ್ತೂರು–ಸೂರ್ಯ ರಸ್ತೆಗೆ ಶಿಲಾನ್ಯಾಸ ನೆರವೇರಿಸಿ ಮಾತನಾಡಿದರು. ಕ್ಯಾಂಪ್ಕೋ ಮಾಜಿ ಅಧ್ಯಕ್ಷ ಕೊಂಕೋಡಿ ಪದ್ಮನಾಭ, ಕೋಲ್ಪೆ ಶ್ರೀ ಷಣ್ಮುಖ ಸುಬ್ರಹ್ಮಣ್ಯ ದೇವಸ್ಥಾನದ ಅಧ್ಯಕ್ಷ ಪ್ರಕಾಶ್ ಭಟ್, ಇಡ್ಕಿದು ವಲಯ ಕಾಂಗ್ರೆಸ್ ಅಧ್ಯಕ್ಷ ನಾಸೀರ್ ಕೋಲ್ಪೆ ಮಾತನಾಡಿದರು. ಜಿ.ಪಂ.ಮಾಜಿ ಅಧ್ಯಕ್ಷೆ ಶೈಲಜಾ ಭಟ್, ಮಾಜಿ ಸದಸ್ಯ ಎಂ.ಎಸ್.ಮಹಮ್ಮದ್, ವಿಟ್ಲ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಪದ್ಮನಾಭ ಪೂಜಾರಿ, ಪ್ರಮುಖರಾದ ರಾಜಾರಾಮ್ ಶೆಟ್ಟಿ ಸುಧಾಕರ ಶೆಟ್ಟಿ ಇದ್ದರು.

ಉಪ್ಪಳಿಗೆ ಭಗತ್‌ಸಿಂಗ್ ಸೇವಾ ಯುವಶಕ್ತಿಯಿಂದ ಇರ್ದೆಯಲ್ಲಿ ಶನೈಶ್ಚರ ಕಲ್ಪೋಕ್ತ ಪೂಜೆ, ಎಳ್ಳಗಂಟು ದೀಪ ಸೇವೆ, ಧರ್ಮಸಭೆ

ಸಮಾಜ, ರಾಷ್ಟ್ರಕ್ಕೆ ಉತ್ತಮವಾದುದನ್ನೇ ಬಯಸಬೇಕು: ಶ್ರೀ ರಾಜಶೇಖರಾನಂದ ಸ್ವಾಮೀಜಿ

ಪುತ್ತೂರು: ಕಷ್ಟ ಬಂದಾಗ ಜಗ್ಗದೆ, ಸುಖ ಬಂದಾಗ ಹಿಗ್ಗದೆ ಕರ್ಮವನ್ನು ಅನುಭವಿಸಬೇಕು. ಸಮಾಜ, ರಾಷ್ಟ್ರಕ್ಕೆ ಉತ್ತಮವಾದುದನ್ನೇ ಬಯಸಬೇಕು. ನಾವು, ನಮ್ಮ ಮನೆಯ ಬದುಕು ಯಾವ ರೀತಿ ಉತ್ತಮವಾಗಿರಬೇಕೋ ಅದೇ ರೀತಿ ಸಮಾಜ, ದೇಶ ಇರಬೇಕು ಎಂಬ ಚಿಂತನೆ ನಮ್ಮೆಲ್ಲರದಾಗಬೇಕು ಎಂದು ಗುರುಪುರ ವಜ್ರದೇಹಿ ಮಠದ ಶ್ರೀ ರಾಜಶೇಖರಾನಂದ ಸ್ವಾಮೀಜಿ ಹೇಳಿದರು.

ಉಪ್ಪಳಿಗೆ ಭಗತ್‌ಸಿಂಗ್ ಸೇವಾ ಯುವಶಕ್ತಿ ಆಶ್ರಯದಲ್ಲಿಬೈಲಾಡಿಶ್ರೀವಿಷ್ಣುಮೂರ್ತಿ ದೇವಸ್ಥಾನದ ದ್ವಾರದ ಬಳಿಯ ಮೈದಾನದಲ್ಲಿ ನಡೆದ ಮೂರನೇ ವರ್ಷದ ಸಾಮೂಹಿಕ ಶ್ರೀಶನೈಶ್ಚರ ಕಲ್ಪೋಕ್ತ ಪೂಜೆ, ಎಳ್ಳುಗಂಟು ದೀಪ ಸೇವೆ ಹಾಗೂ ಧರ್ಮಸಭೆಯಲ್ಲಿ ಅವರು ಆಶೀರ್ವಚನ ನೀಡಿದರು.



ಬೆಂಗಳೂರಿನ ತಹಶೀಲ್ದಾರ್ ಅಜಿತ್ ರೈ ಸೊರಕೆ ಮಾತನಾಡಿ, ಸೇವಾ ಮನೋಭಾವದಲ್ಲಿರುವ ಭಗತ್ ಸಿಂಗ್ ಯುವಶಕ್ತಿಯ ಕಾರ್ಯಕ್ರಮ ಉಪ್ಪಳಿಗೆಗೆ ಸೀಮಿತವಾಗದೆ ಪುತ್ತೂರು ತಾಲೂಕಿಗೆ ಪಸರಿಸಬೇಕು. ಧರ್ಮ ರಕ್ಷಣಾ ಸಭೆಯಾಬೇಕು ಎಂದರು.

ಕೇಂದ್ರ ಸರಕಾರ, ಜಾರಿ ನಿರ್ದೇಶನಾಲಯದ ವಕೀಲ ರಾಜಾರಾಮ ಸೂರ್ಯಂಬೈಲು ಮಾತನಾಡಿ, ಸನಾತನ ಭಾರತದಲ್ಲಿ ದೈವೀ ಕಾರ್ಯಗಳು ನಡೆಯುತ್ತ ಬಂದಿರುವುದರಿಂದ ಭಾರತ ವಿಶ್ವಗುರುವಾಗಿ ಶ್ರೇಷ್ಠತೆ ಪಡೆದಿದೆ. ಸ್ವಾತಂತ್ರ್ಯ ಪೂರ್ವದಲ್ಲಿ ಪ್ರಾರಂಭಗೊಂಡಿದ್ದ ದೇಶದ, ದೇವಸ್ಥಾನಗಳ ಮೇಲಿನ ತೀವ್ರದಾಳಿ, ಷಡ್ಯಂತ್ರ ಇಂದಿಗೂ ಮುಂದುವರಿದಿದ್ದು, ಶಬರಿಮಲೆ, ಧರ್ಮಸ್ಥಳ ಕ್ಷೇತ್ರಗಳ ಮೇಲೆ ಮುಂದುವರಿಯುತ್ತಿದೆ. ಇದರ ವಿರುದ್ಧ ಹಿಂದುಗಳು ಒಂದಾಗಬೇಕು ಎಂದರು.

ಕ್ಯಾಂಪ್ಕೋ ಅಧ್ಯಕ್ಷ ಎಸ್.ಆರ್. ಸತೀಶ್ಚಂದ್ರ ಮಾತನಾಡಿ, ಸಿನಿಮಾ, ರಾಜಕಾರಣಿ, ಕ್ರಿಕೆಟ್ ಆಟಗಾರರ ಅಭಿಮಾನಿಗಳ ಸಂಘ ರಚಿಸುವುದು ಸಾಮಾನ್ಯ. ಆದರೆ ಉಪ್ಪಳಿಗೆಯಲ್ಲಿ ವಿಶೇಷ ಭಗತ್‌ಸಿಂಗ್‌ನ ಅಭಿಮಾನಿಗಳ ಸಂಘಟನೆ ಕಾರ್ಯನಿರ್ವಹಿಸುತ್ತಿದ್ದು ಭಾರತ ಬೆಳೆಯುತ್ತಿರುವುದಕ್ಕೆ ಜೀವಂತ ಸಾಕ್ಷಿ ಎಂದರು.

ಧರ್ಮ ಭಾರತದ ಸಂಸ್ಕೃತಿ

ಬೌದ್ಧಿಕ್ ನಡೆಸಿಕೊಟ್ಟ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ದಕ್ಷಿಣ ಕರ್ನಾಟಕ ಪ್ರಾಂತ ಸಹಕಾರ್ಯವಾಹ ಪ್ರಕಾಶ್ ಪಿ.ಎಸ್., ಧರ್ಮವೆಂದರೆ ಪೂಜಾ ಪದ್ಧತಿಯಲ್ಲ, ಅದು ಜೀವನ ಪದ್ಧತಿ. ಧರ್ಮ ಎನ್ನುವುದು ಭಾರತದ ಸಂಸ್ಕೃತಿ. ಜಗತ್ತಿಗೆ ಮಾರ್ಗದರ್ಶನ ಮಾಡುವ ವಿಚಾರ ಭಾರತದಲ್ಲಿದ್ದು ಅದುವೇ ಧರ್ಮ. ಜಗತ್ತಿನಲ್ಲಿ ಬದಲಾವಣೆಗಳು ಬರಬೇಕಾಗಿದೆ. ಇದಕ್ಕಾಗಿ ರಾಷ್ಟ್ರೀಯ ಸ್ವಯಂ ಸೇವಕ ಸಂಘ ಭಾರತದಲ್ಲಿ ಹಿಂದುಗಳ ಸಂಘಟನೆಗಾಗಿ ನೂರು ವರ್ಷ ಕೆಲಸ ಮಾಡಿದೆ. ಜಾತಿ, ಮತ, ಪಂಥ ಬೇಧ ಬಿಟ್ಟು ಹಿಂದುತ್ವದ ಆಧಾರದಲ್ಲಿ ಒಂದು ಮಾಡುವ ಕೆಲಸ ಮಾಡಿದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ದ.ಕ. ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್‌ನ ನಿರ್ದೇಶಕ, ಭಗತ್‌ಸಿಂಗ್ ಸೇವಾ ಯುವಶಕ್ತಿ ಗೌರವಾಧ್ಯಕ್ಷ ಶಶಿಕುಮಾರ್ ರೈ ಬಾಲ್ಯೊಟ್ಟು ಮಾತನಾಡಿ, ಕಳೆದ ಮೂರು ವರ್ಷಗಳಿಂದ ಭಗತ್ ಸಿಂಗ್ ಸೇವಾ ಯುವಶಕ್ತಿಯು ಉತ್ತಮ ಕಾರ್ಯಕ್ರಮ ನಡೆಸುತ್ತಿದ್ದಾರೆ. ಯುವಕ ತಂಡ ಪುತ್ತೂರು ತಾಲೂಕಿನ ಅರ್ಧಭಾಗದ ಮನೆ ಮನೆ ಸಂಪರ್ಕ ಮಾಡಿರುವುದು ಶ್ಲಾಘನೀಯ ಎಂದರು.

ಸನ್ಮಾನ

ಕ್ಯಾಂಪ್ಕೋ ಅಧ್ಯಕ್ಷ ಎಸ್.ಆರ್. ಸತೀಶ್ಚಂದ್ರ, ಇರ್ದೆ ಬೆಟ್ಟಂಪಾಡಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಸಿಬ್ಬಂದಿ ಆರ್.ಬಿ. ಸುವರ್ಣ, ರಾಷ್ಟ್ರಮಟ್ಟದ ಕ್ರೀಡಾ ಸಾಧಕಿ ಕೀರ್ತಿ ಗೌಡ ಗುಮ್ಮಟೆಗದ್ದೆ, ಸುಗಮ ಸಂಗೀತ ಕ್ಷೇತ್ರದ ವಿಷ್ಣು ವಿಕತ್ತಡ್ಕ, ಸ್ಯಾಂಡ್ ಆರ್ಟ್‌ನಲ್ಲಿ ಸಾಧನೆ ಮಾಡಿದ ಲಿಖಿತಾ ಅವರನ್ನು ಕಾರ್ಯಕ್ರಮದಲ್ಲಿ ಸನ್ಮಾನಿಸಲಾಯಿತು. ಭಗತ್‌ಸಿಂಗ್ ಸೇವಾ ಯುವಶಕ್ತಿಯ ಸ್ಥಾಪಕ ಅಧ್ಯಕ್ಷ ಚೇತನ್ ಉಪ್ಪಳಿಗೆ ಸ್ವಾಗತಿಸಿದರು. ಶಿಕ್ಷಕಿ ಭಾಗ್ಯಶ್ರೀ ಕಾರ್ಯಕ್ರಮ ನಿರ್ವಹಿಸಿದರು.

ಶನೈಶ್ಚರ ಕಲ್ಪೋಕ್ತ ಪೂಜೆ

ಸಂಜೆ ಶ್ರೀ ವಿಷ್ಣುಮೂರ್ತಿ ದೇವಸ್ಥಾನದ ಪ್ರಧಾನ ಅರ್ಚಕ ಅನಂತರಾಮ ಮಡಕುಳ್ಳಾಯ ಮತ್ತು ಪುರೋಹಿತ ರಾಧಾಕೃಷ್ಣ ಭಟ್ ಕಕ್ಕೂರ ಪೌರೋಹಿತ್ಯದಲ್ಲಿ ಶ್ರೀಶನೈಶ್ಚರ ಪೂಜೆ, ಎಳ್ಳುಗಂಟು ದೀಪ ಸೇವೆಯು ನೆರವೇರಿತು.

ಸುತ್ತ ಮುತ್ತ

ಸುಜ್ಞಾನದಲ್ಲಿ 'ಮಂಥನ' ಬೇಸಿಗೆ ಶಿಬಿರ

ಕುಂದಾಪುರ: ಇಂದಿನ ಮೊಬೈಲ್ ಯುಗದಲ್ಲಿ ಮಕ್ಕಳು ಡಿಜಿಟಲ್ ಲೋಕದಿಂದ ಹೊರಬಂದು, ಸೃಜನಶೀಲ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವುದು ಅತ್ಯಗತ್ಯ. ಈ ನಿಟ್ಟಿನಲ್ಲಿ ಸುಜ್ಞಾನ ಎಜುಕೇಷನಲ್ ಟ್ರಸ್ಟ್ ಆಯೋಜಿಸಿರುವ 'ಮಂಥನ' ಬೇಸಿಗೆ ಶಿಬಿರವು ಮಕ್ಕಳ ಬದುಕಿಗೆ ಹೊಸ ದಾರಿದೀಪವಾಗಲಿದೆ ಎಂದು ಸುಣ್ಣಾರಿಯ ವಿವೇಕೋದಯ ಇಂಗ್ಲಿಷ್ ಮಾಧ್ಯಮ ಶಾಲೆಯ ಅಧ್ಯಕ್ಷ ಕಿಶೋರ್ ಕುಮಾರ್ ಶೆಟ್ಟಿ ಹೇಳಿದರು.

ಮಡಾಡಿ-ಮತ್ಯಾಡಿಯ ಸುಜ್ಞಾನ ಎಜುಕೇಷನಲ್ ಟ್ರಸ್ಟ್ ಆಶ್ರಯದಲ್ಲಿ ನಡೆಯುತ್ತಿರುವ 'ಮಂಥನ' ಬೇಸಿಗೆ ಶಿಬಿರದ ನಾಲ್ಕನೇ ದಿನದ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಅತಿಥಿಯಾಗಿದ್ದ ಬಾರ್ಕೂರಿನ ರುಕ್ಮಿಣಿ ಶೆಟ್ಟಿ ಸ್ಮಾರಕ ಮೆಮೋರಿಯಲ್ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ಪ್ರೊ. ಭಾಸ್ಕರ್ ಶೆಟ್ಟಿ, ಕನ್ನಡ ಉಪನ್ಯಾಸಕ ಉದಯ್ ಕುಮಾರ್ ಶೆಟ್ಟಿ, ಸುಜ್ಞಾನ ಎಜುಕೇಶನಲ್ ಟ್ರಸ್ಟ್‌ನ ಅಧ್ಯಕ್ಷ ಡಾ. ರಮೇಶ್ ಶೆಟ್ಟಿ ಅವರು ಮಾತನಾಡಿದರು.

ಉದ್ಯಮಿ ಚಿಟ್ಟಿಬೈಲು ಜಗನ್ನಾಥ ಶೆಟ್ಟಿ, ಟ್ರಸ್ಟ್‌ನ ಕಾರ್ಯದರ್ಶಿ ಪ್ರತಾಪ್ ಚಂದ್ರ ಶೆಟ್ಟಿ ಖಜಾಂಚಿ ಭರತ್ ಶೆಟ್ಟಿ ಹಾಗೂ ಮುಖ್ಯೋಪಾಧ್ಯಾಯ ಪ್ರದೀಪ್ ಮೊದಲಾದವರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ಪಾಕ ತಜ್ಞ ಸುಜನ್ ಕುಂದಾಪುರ ಅವರಿಂದ ಮಕ್ಕಳು 'ಓರಿಯೊ ಸೀಸರ್ ರೋಲ್' ತಯಾರಿಕೆಯನ್ನು ಕಲಿತರು. ತಾವೇ ತಯಾರಿಸಿದ ಸಿಹಿತಿಂಡಿಯನ್ನು ಸವಿದು ಮಕ್ಕಳು ಸಂಭ್ರಮಿಸಿದರು.

ಎಂಸಿಸಿ ಬ್ಯಾಂಕ್ ಕುಂದಾಪುರ ಶಾಖೆಯಲ್ಲಿ ಸಂಸ್ಥಾಪಕರ ದಿನಾಚರಣೆ



ಕುಂದಾಪುರ : ಎಂಸಿಸಿ ಬ್ಯಾಂಕ್ ಲಿಮಿಟೆಡ್‌ನ ಕುಂದಾಪುರ ಶಾಖೆಯಲ್ಲಿ ಸಂಸ್ಥಾಪಕರ ದಿನಾಚರಣೆಯನ್ನು ಶುಕ್ರವಾರ ಆಚರಿಸಲಾಯಿತು. ಶಾಖೆಯ ಬೆಂಬಲ ನಿರ್ದೇಶಕ ಎಲ್ರಾಯ್ ಕಿರಣ್ ಕ್ರಾಸ್ಟೊ ಅವರು ಸಂಸ್ಥಾಪಕರ ಭಾವಚಿತ್ರಕ್ಕೆ ಪುಷ್ಪಾರ್ಚಣೆ ಮಾಡಿ, ಸಂಸ್ಥಾಪಕರರಿಗೆ ನಮನ ಸಲ್ಲಿಸಿದರು. ಪಿ. ಎಫ್. ಎಕ್ಸ್. ಸಲ್ಡಾನ್ಹಾ ಮತ್ತು ಇತರ 67 ಸದಸ್ಯರಿಂದ 1912 ರಂದು ಪ್ರಾರಂಭವಾದ ಎಂಸಿಸಿ ಬ್ಯಾಂಕ್, ಅಧ್ಯಕ್ಷ ಸಹಕಾರ ರತ್ನ ಅನಿಲ್ ಲೋಬೊ ಅವರ ನೇತೃತ್ವದಲ್ಲಿ ಬ್ಯಾಂಕಿನ ಉತ್ತಮ ಪ್ರಗತಿ ಸಾಧಿಸಿದ್ದು, 1500 ಕೋಟಿ ವ್ಯವಹಾರದ ಸಾಧನೆ ಮಾಡಿದೆ. ಹಲವು ಶಾಖೆಗಳನ್ನು ಆರಂಭಿಸಲಾಗಿದೆ. ಶೀಘ್ರದಲ್ಲಿ ಇನ್ನೂ ಎರಡು ಶಾಖೆಗಳು ಆರಂಭವಾಗಲಿದೆ ಎಂದು ಅವರು ಹೇಳಿದರು. ಶಾಖೆಯ ವ್ಯವಸ್ಥಾಪಕ ಸಂದೀಪ್ ಕ್ವಾಡ್ರಾಸ್, ಸ್ವಾಗತಿಸಿ ಕಾರ್ಯಕ್ರಮ ನಿರೂಪಿಸಿದರು. ಸಿಬ್ಬಂದಿ ಸದಸ್ಯೆ ಲವೀನಾ ಲೂಯಿಸ್ ವಂದಿಸಿದರು.

ಶಿಮಂತೂರು-ಪಡಂಗ ಶ್ರೀ ಕೋರ್ದಬ್ಬು ದೈವಸ್ಥಾನದಲ್ಲಿ ನೇಮ

ಮುಲ್ಕಿ: ಶಿಮಂತೂರಿನ ಬಾವದ ಮಣ್ಣು ಪಡಂಗದ



ಕೊಟ್ಯ (ಗುಡಿ) ದಲ್ಲಿ ನೆಲೆಯಾಗಿರುವವರು ಎಂಬ ಮನ್ನಣೆ ಪಡೆದಿರುವ ಧರ್ಮದೈವ ಶ್ರೀ ಬಬ್ಬು ಸ್ವಾಮಿ ಮತ್ತು ಪರಿವಾರ ದೈವಗಳಿಗೆ ನೇಮ ಶನಿವಾರ ರಾತ್ರಿ. ನಡೆಯಿತು. ಶನಿವಾರ ಮಧ್ಯಾಹ್ನ ಚಪ್ಪರ ಏರುವುದು , ಸಂಜೆ 6ಗಂಟೆಗೆ ಭಂಡಾರ ಇಳಿಯುವುದು, ರಾತ್ರಿ ಗಂಟೆ 8ಕ್ಕೆ ಅನ್ನಸಂತರ್ಪಣೆ ನಡೆಯಿತು. ರಾತ್ರಿ ಗಂಟೆ 9ರಿಂದ ಗಗ್ಗರ ಸೇವೆ, ದೈವರಾಜ ಕೋರ್ದಬ್ಬು ತನ್ನಿಮಾನಿಗ ನೇಮ ಹಾಗೂ ಧೂಮಾವತಿ ಬಂಟ ದೈವಗಳ ನೇಮ ನಡೆಯಿತು. ಈ ಸಂದರ್ಭ ಶಿಮಂತೂರು ದೇವಸ್ಥಾನದ ಆಡಳಿತ ಮೊಕ್ತೇಸರ ಉದಯಕುಮಾರ್ ಶೆಟ್ಟಿ,ಮಾಜೀ ಮೊಕ್ತೇಸರ ಚಂದ್ರಹಾಸ ಎನ್ ಶೆಟ್ಟಿ ಶಿವರಾಮ ಶೆಟ್ಟಿ ಅಜೆಕಾರು, ದೈವಸ್ಥಾನದ ಆಡಳಿತ ಸಮಿತಿ ಅಧ್ಯಕ್ಷ ಶಂಕರ್ ಶೆಟ್ಟಿ, ಕಾರ್ಯದರ್ಶಿ ನಾಗರಾಜ ಶೆಟ್ಟಿ,ಕೋಶಾಧಿಕಾರಿ ಜಯಕರ ಶೆಟ್ಟಿ, ಭಾಸ್ಕರ್ ಶೆಟ್ಟಿ ನಡುಗಿತ್ತು, ಬಾಲಕೃಷ್ಣ ಶೆಟ್ಟಿ, ಶಂಕರ್ ಮಾಸ್ಟರ್, ಮೋಹನ ಕೋಟ್ಯಾನ್, ವಿಶ್ವನಾಥ ಶೆಟ್ಟಿ, ತೇಜರಾಜ ಶೆಟ್ಟಿ ಮಜಲಗುತ್ತು, ಕಿರಣ್ ಕುಮಾರ್ ಶೆಟ್ಟಿ ಕಟ್ಟಪುಣಿ , ಸಂಜಿತ್ ಶೆಟ್ಟಿ ಶಿಮಂತೂರು ಮತ್ತಿತರರಿದ್ದರು

ಬೋಳಂತೂರು, ವೀರಕಂಬ, ವಿಟ್ಲಪಡ್ನೂರು ಸಂಪರ್ಕಿಸುವ ಹಾದಿ ಅಭಿವೃದ್ಧಿಗೆ ಇನ್ನೂ ಗ್ರಹಣ ಕಾಲ

ಗ್ರಾಮ ಬೆಸೆವ ಮುಖ್ಯ ರಸ್ತೆಗೆ ಮಣ್ಣು, ಉಪ ರಸ್ತೆಗೆ ಕಾಂಕ್ರೀಟ್!

ಬಂಟ್ವಾಳ: ತಾಲೂಕಿನ ಬೋಳಂತೂರು, ವೀರಕಂಬ ಹಾಗೂ ವಿಟ್ಲಪಡ್ನೂರು ಗ್ರಾಮ ಸಂಪರ್ಕಿಸುವ ಪ್ರಮುಖ ರಸ್ತೆಯೊಂದರ ಅಭಿವೃದ್ಧಿ ಕುರಿತಾಗಿ ಜನಪ್ರತಿನಿಧಿಗಳು, ಅಧಿಕಾರಿಗಳಿಗೆ ಸಲ್ಲಿಸಿದ ಸತತ ಮನವಿಗೆ ಯಾವುದೇ ಸ್ಪಂದನೆ ಸಿಗದ ಹಿನ್ನೆಲೆಯಲ್ಲಿ ಇದೀಗ ಸ್ಥಳೀಯರು ತಮ್ಮ ತೀವ್ರ ಅಸಮಾಧಾನ, ಆಕ್ರೋಶವನ್ನು ವ್ಯಕ್ತಪಡಿಸುತ್ತಿದ್ದಾರೆ.

ಐದಾರು ಗ್ರಾಮಗಳಿಗೆ ಉಪಯೋಗವಿದೆ

ಬೋಳಂತೂರು ಗ್ರಾಮದಲ್ಲಿನ ಕೊಕ್ಕಪುಣಿಯಿಂದ ಬಚ್ಚಿರೆಕೋಡಿ, ರಾಕೋಡಿ, ದಿವಾಣ, ಕೋಡಪದವು ಮೂಲಕ ಮಜಿಓಣಿ ಎಂಬಲ್ಲಿಗೆ ಸಂಪರ್ಕ ಕಲ್ಪಿಸುವ ಈ ರಸ್ತೆ ಅಭಿವೃದ್ಧಿಗೊಂಡಲ್ಲಿ ಸುಮಾರು ಎಂಟು ಕಿಮೀ ದೂರ ಕೇವಲ ಎರಡು ಕಿಮೀನಲ್ಲಿ ಕ್ರಮಿಸಲು ಸಾಧ್ಯ. ಜೊತೆಗೆ ಐದಾರು ಗ್ರಾಮಗಳಿಗೂ ಇದರಿಂದ ಉಪಯೋಗ ಸಿಗಲಿದೆ. ಆದರೆ ಈ ರಸ್ತೆಯ ಅಭಿವೃದ್ಧಿಗೆ ಬದಲಾಗಿ ಇದರ ಉಪ ರಸ್ತೆ ಅಭಿವೃದ್ಧಿ ಕಾಣುತ್ತಿರುವುದು ವಿಪರ್ಯಾಸ.

ಈ ನಡುವೆ ಒಂದೆರಡು ಬಾರಿ ಈ ರಸ್ತೆಗೆಂದು ಘೋಷಣೆಯಾದ ಅನುದಾನವೂ ಕೂಡಾ ಬೇರೆ ಕಡೆಗೆ ಬದಲಾಗಿದೆ ಎಂಬ ಆರೋಪ ಸ್ಥಳೀಯರದ್ದು. ಈ ಹಿಂದೆ ಶಾಸಕರಾಗಿದ್ದ ಬಿ. ರಮಾನಾಥ ರೈ ಅವರ ಮೂಲಕ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ 10 ಲಕ್ಷ ರೂ. ಅನುದಾನದಲ್ಲಿ ಇಲ್ಲಿ 150 ಮೀಟರ್ ದೂರ ಕಾಂಕ್ರೀಟ್ ಹಾಕಲಾಗಿದೆ. ಅದಾದ ಬಳಿಕ ಜಿಲ್ಲಾ ಪಂಚಾಯತ್ ಸದಸ್ಯರ ಅನುದಾನದಲ್ಲಿ ಎರಡು ಕಡೆ 100 ಮೀಟರ್ ಹಾಗೂ 50 ಮೀಟರ್ ಕಾಂಕ್ರೀಟ್ ಹಾಕಲಾಗಿದೆ. ಜಿಲ್ಲಾ ಪಂಚಾಯತ್ ಸದಸ್ಯರಾಗಿದ್ದ ಸಂದರ್ಭ ಎಂ.ಎಸ್. ಮಹಮ್ಮದ್ ಹಾಗೂ ಮಂಜುಳಾ ಮಾಧವ ಮಾವೆ ಅವರು ಅನುದಾನ ಒದಗಿಸಿ, 150 ಮೀಟರ್ ರಸ್ತೆಗೆ ಕಾಂಕ್ರೀಟ್ ಹಾಕಲಾಗಿದೆ. ಆ ಬಳಿಕ ಈ ರಸ್ತೆಯ ಅಭಿವೃದ್ಧಿಗೆ ಜನಪ್ರತಿನಿಧಿಗಳು ಕಿವಿಕೊಟ್ಟಿಲ್ಲ.



ಇಲ್ಲಿ ಸ್ಥಳೀಯ ಜನರಿಗೆ ಅನ್ಯಾಯವಾಗಿದೆ

ಅಗತ್ಯವಿರುವ ಕೊಕ್ಕಪುಣಿ ಮಜಿಓಣಿ ಪ್ರಧಾನ ರಸ್ತೆ ಅಭಿವೃದ್ಧಿಗೆ ಅನುದಾನ ಒದಗಿಸಲಿಲ್ಲ, ರಾಕೋಡಿಯಿಂದ ಕಡಂಬಿಲಕ್ಕೆ ಕೊನೆಗೊಳ್ಳುವ ಉಪರಸ್ತೆಗೆ 50 ಲಕ್ಷ ರೂ ಅನುದಾನ ಒದಗಿಸಿ, ಅಭಿವೃದ್ಧಿಪಡಿಸಲಾಗಿದೆ. ಅಧಿಕಾರಿಗಳು, ಜನಪ್ರತಿನಿಧಿಗಳು ವಾಸ್ತವ ಸ್ಥಿತಿ ಮನಗಾಣಬೇಕು. ಇಲ್ಲಿ ಸ್ಥಳೀಯರಿಗೆ ನಿಜಕ್ಕೂ ಅನ್ಯಾಯವಾಗಿದೆ.

● **ರಾಕೋಡಿ ಈಶ್ವರ ಭಟ್, ನಿರ್ದೇಶಕರು,** ರಬ್ಬರ್ ಮತ್ತು ಜೇನು ವ್ಯವಸಾಯಗಾರರ ವಿವಿಧೋದ್ದೇಶ ಸಹಕಾರಿ ಸಂಘ ನಿ., ಜೋಡುಮಾರ್ಗ.

ಅಭಿವೃದ್ಧಿಯಾದರೆ ಎಲ್ಲರಿಗೂ ಒಳ್ಳೆಯದು

ಕೊಕ್ಕಪುಣಿಯಿಂದ ಮಜಿಓಣಿ ಸಂಪರ್ಕಿಸುವ ಸುಮಾರು 3ರಿಂದ 4 ಕಿಮೀ ದೂರದ ಮಣ್ಣಿನ ರಸ್ತೆಗೆ ಒಟ್ಟು 150 ಮೀಟರ್ ದೂರ ಕಾಂಕ್ರೀಟ್ ಹಾಕಲಾಗಿದೆ. ಉಳಿದ ಭಾಗ ಅಗಲ ಕಿರಿದಾಗಿ ಸಂಚಾರಕ್ಕೆ ಅಯೋಗ್ಯವಾಗಿದೆ. ಚರಂಡಿ ವ್ಯವಸ್ಥೆ ಕೂಡಾ ಇಲ್ಲ. ಈ ರಸ್ತೆ ಅಭಿವೃದ್ಧಿಯಾದಲ್ಲಿ ಮೇಲ್ನೋಟಕ್ಕೆ ಮೂರು ಗ್ರಾಮವೆ ನಿಸಿದರೂ ಅಕ್ಕಪಕ್ಕದ ಐದಾರು ಗ್ರಾಮಗಳಿಗೆ ಉಪಯುಕ್ತವಾಗಲಿದೆ.

● **ಇಸ್ಮಾಯಿಲ್ ಮಾಜಿ ಸದಸ್ಯರು,** ವೀರಕಂಬ, ಬೋಳಂತೂರು ಗ್ರಾಮ ಪಂಚಾಯತ್

ಉಪ ರಸ್ತೆಗೆ ಕಾಂಕ್ರೀಟ್ ಹಾಕಿದರು!

ಅಚ್ಚರಿ ಎಂದರೆ ಈ ರಸ್ತೆಯ ರಾಕೋಡಿ ಎಂಬಲ್ಲಿ ಒಳಗೆ ತಿರುಗುವ ರಸ್ತೆಗೆ 50 ಲಕ್ಷ ರೂ. ಅನುದಾನ ಬಿಡುಗಡೆಯಾಗಿ ಕಡಂಬಿಲ ಐತಾಳಗೋಳಿ ರಸ್ತೆ ಅಭಿವೃದ್ಧಿಯಾಗಿದೆ. ಕಡಂಬಿಲಕ್ಕೆ ಕೊನೆಗೊಳ್ಳುವ ಈ ರಸ್ತೆ ಬೇರೆ ಗ್ರಾಮವನ್ನು ಅಥವಾ ಇನ್ನೊಂದು ಊರನ್ನು ಸಂಪರ್ಕಿಸುವುದಿಲ್ಲ, ಕೇವಲ ಎಂಟು ಹತ್ತು ಮನೆಗೆ ಮಾತ್ರ ಈ ರಸ್ತೆಯ ಪ್ರಯೋಜನ ಲಭ್ಯವಾಗುತ್ತದೆ. ಇಷ್ಟೇ ಅಲ್ಲ, ಶಾಸಕ ರಾಜೇಶ್ ನ್ಯಾಕ್ ಮೂಲಕ ವೀರಕಂಬ ಗ್ರಾಮಕ್ಕೆ ಬಿಡುಗಡೆಯಾಗಿರುವ ಈ ಅನುದಾನವನ್ನು ಬೋಳಂತೂರು ಗ್ರಾಮದಲ್ಲಿಯೂ ಬಳಸಲಾಗಿದೆ ಎಂಬ ಆರೋಪ ಸ್ಥಳೀಯರದ್ದು.

ಮುಖ್ಯ ರಸ್ತೆ ಅಗಲ ಕಿರಿದಾಗಿದ್ದು, ಇಲ್ಲಿ ಒಳಚರಂಡಿ ವ್ಯವಸ್ಥೆ ಕೂಡಾ ಇಲ್ಲ. ಇಲ್ಲಿ ಸ್ಥಳೀಯರೇ ಎರಡು ಮೋರಿ ನಿರ್ಮಿಸಿ, ತಮ್ಮ ಸಮಸ್ಯೆಯ ನಿವಾರಣೆಗೆ ಪ್ರಯತ್ನಿಸಿದ್ದಾರೆ. ಮಳೆಗಾಲದಲ್ಲಿ ಈ ರಸ್ತೆ ಕೆಸರು ಗದ್ದೆಯಂತಾಗುತ್ತದೆ. ಆಗ ಈ ರಸ್ತೆಯನ್ನು ಬಳಸುವ ಸುಮಾರು ನೂರಕ್ಕೂ ಅಧಿಕ ಕುಟುಂಬ ನಡೆದೇ ಹೋಗುವ ಸ್ಥಿತಿ ನಿರ್ಮಾಣವಾಗುತ್ತದೆ.

ಈ ರಸ್ತೆ ಅಭಿವೃದ್ಧಿಯಾದಲ್ಲಿ ಬೋಳಂತೂರು-ವೀರಕಂಬ-ವಿಟ್ಲಪಡ್ನೂರು ಗ್ರಾಮಗಳಿಗೆ ನೇರ ಸಂಪರ್ಕ ಸಾಧ್ಯವಾಗುತ್ತದೆ. ಜತೆಗೆ ಈ ರಸ್ತೆ ವಿಟ್ಲ, ಗೋಳ್ತಮಜಲು, ಮಂಚಿ ಗ್ರಾಮಗಳನ್ನು ಕೂಡಾ ಹತ್ತಿರದ ಮಾರ್ಗವನ್ನಾಗಿಸಿ ಸಂಪರ್ಕಿಸಲು ಅನುಕೂಲವಾಗುತ್ತದೆ. ಆದರೆ ಇಂತಹಾ ಪ್ರಮುಖ ರಸ್ತೆಗೆ ಕಾಂಕ್ರೀಟ್ ಹಾಕದೆ, ಹೆಚ್ಚು ಸಂಪರ್ಕವೇ ಇಲ್ಲದ ಉಪರಸ್ತೆ ಕಾಂಕ್ರೀಟಿಕರಣಗೊಳಿಸಿದ್ದು ಸ್ಥಳೀಯರ ತೀವ್ರ ಅಸಮಾಧಾನಕ್ಕೆ ಕಾರಣವಾಗಿದೆ.

ಬಸ್ ತಂಗುದಾಣ ಕಾಮಗಾರಿಗೆ ಶಾಸಕ ಮಂಥರ್ ಗೌಡರಿಂದ ಭೂಮಿಪೂಜೆ



ಕುಶಾಲನಗರ: ಹೆಬ್ಬಾಲೆ ಗ್ರಾ.ಪಂ. ವ್ಯಾಪ್ತಿಯ ಕಣಿವೆ ಗ್ರಾಮದಲ್ಲಿ ನೂತನವಾಗಿ ಬಸ್ ತಂಗುದಾಣ ನಿರ್ಮಿಸಲು ಮಡಿಕೇರಿ ಕ್ಷೇತ್ರದ ಶಾಸಕ ಡಾ. ಮಂಥರ್ ಗೌಡ ಭೂಮಿ ಪೂಜೆ ನೆರವೇರಿಸಿದರು.

ಈ ಸಂದರ್ಭ ಮಾತನಾಡಿದ ಅವರು, ಗ್ರಾಮೀಣ ಪ್ರದೇಶಗಳ ಮೂಲಭೂತ ಸೌಕರ್ಯಗಳ ಅಭಿವೃದ್ಧಿಗೆ ಸಂಬಂಧಿಸಿದಂತೆ ಎಲ್ಲಾ ಕ್ರಮಗಳನ್ನು ಕೈಗೊಳ್ಳಲಾಗುತ್ತದೆ. ಅದರಂತೆ ಕಣಿವೆ ಗ್ರಾಮದಲ್ಲಿ 5 ಲಕ್ಷ ರೂ. ವೆಚ್ಚದ ಬಸ್ ತಂಗುದಾಣ ಕಾಮಗಾರಿಗೆ ಚಾಲನೆ ನೀಡಲಾಗಿದೆ. ಮುಂದಿನ ದಿನಗಳಲ್ಲಿ ಹಂತ ಹಂತವಾಗಿ ಅಭಿವೃದ್ಧಿ ಕಾಮಗಾರಿಗಳ ಕೈಗೊಳ್ಳಲಾಗುವುದು ಎಂದರು.

ಈ ಸಂದರ್ಭ ಕೆ.ಪಿ.ಸಿ.ಸಿ. ಸದಸ್ಯ ನಟೇಶ್ ಗೌಡ, ಸಮಾಜ ಸೇವಕ ಹಕ್ಕೆ ಮೋಹನ್, ಶ್ರೀ ರಾಮಲಿಂಗೇಶ್ವರ ದೇವಾಲಯ ಸಮಿತಿ ಅಧ್ಯಕ್ಷ ಕೆ.ಎನ್. ಸುರೇಶ್, ಉಪಾಧ್ಯಕ್ಷ ಮಂಜುನಾಥ, ಕಾರ್ಯದರ್ಶಿ ಮಾಧವ, ಹುಲುಸೆ ವೆಂಕಟೇಶ್, ಗ್ರಾ.ಪಂ.ಮಾಜಿ ಅಧ್ಯಕ್ಷ ಟಿ.ಪಿ. ಹಮೀದ್ ಮತ್ತಿತರರಿ ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

5 ಲ.ರೂ.ವೆಚ್ಚ

ಹೆಬ್ಬಾಲೆ ಗ್ರಾ.ಪಂ.ವ್ಯಾಪ್ತಿಯ ಕಣಿವೆ ಗ್ರಾಮದಲ್ಲಿ 5 ಲಕ್ಷ ರೂ. ವೆಚ್ಚದ ನೂತನ ಬಸ್ ತಂಗುದಾಣ ನಿರ್ಮಾಣಕ್ಕೆ ಭೂಮಿಪೂಜೆ ಮಾಡಲಾಯಿತು.

ಮಳಲಿ ಶ್ರೀ ಸೂರ್ಯನಾರಾಯಣ ದೇವಳ ನಾಗಾಲಯದಲ್ಲಿ ಪುನಃ ಪ್ರತಿಷ್ಠೆ, ಬ್ರಹ್ಮಕಲಶ

ಕೈಕಂಬ: ಮಂಗಳೂರು ತಾಲೂಕಿನ ಗಂಜಿಮಠಸಮೀಪದಮಳಲಿಯಇತಿಹಾಸ ಪ್ರಸಿದ್ಧ ಶ್ರೀ ಸೂರ್ಯನಾರಾಯಣ ದೇವಸ್ಥಾನದ ಪುನರ್ ನಿರ್ಮಾಣದ ಅಂಗವಾಗಿ, ಪೊಳಲಿ ಸುಬ್ರಮಣ್ಯ ತಂತ್ರಿಗಳ ಮಾರ್ಗದರ್ಶನದಲ್ಲಿ ಕ್ಷೇತ್ರದ ನಾಗಾಲಯದಲ್ಲಿ ಶ್ರೀ ನಾಗಬ್ರಹ್ಮ, ರಕ್ತೇಶ್ವರಿ, ನಂದಿಗೋಣ, ಕ್ಷೇತ್ರಪಾಲ ಸಾನಿಧ್ಯಗಳ ಪ್ರನಃಪ್ರತಿಷ್ಠಾ ಬ್ರಹ್ಮಕಲಶ ಮಹೋತ್ಸವ ಶನಿವಾರ , ಭಾನುವಾರ ನೆರವೇರಿತು.

ಶನಿವಾರ ಸಂಜೆ ಪ್ರಾಸಾದ ಪರಿಗ್ರಹ, ಪ್ರಾರ್ಥನೆಯೊಂದಿಗೆ ವೈದಿಕ ವಿಧಾನಗಳು ಆರಂಭವಾದವು. ಪುಣ್ಯಾಹ, ಸಪ್ತಶುದ್ಧಿ, ಪ್ರಾಸಾದ ಶುದ್ಧಿ, ರಾಕ್ಷೋಘ್ನ ಹೋಮ, ವಾಸ್ತು ಹೋಮ, ವಾಸ್ತು ಪೂಜೆ, ದಿಶಾ ಬಲಿ, ಬಿಂಬ ಶುದ್ಧಿ ಬಳಿಕ ಬಿಂಬಾಧಿವಾಸ ನಡೆಸಲಾಯಿತು.

ಭಾನುವಾರ ಬೆಳಿಗ್ಗೆ 6.30ರಿಂದ ಪುಣ್ಯಾಹ, ಗಣಪತಿ ಹೋಮ, ಸಾನಿಧ್ಯಗಳ ಪ್ರತಿಷ್ಠಾ ಹೋಮ, ಕಲಶ ಪೂಜೆ, ಆದಿವಾಸ ಹೋಮ, ಪವಮಾನ ಹೋಮ, ತಿಲ ಹೋಮ, ಆಶ್ಲೇಷ ಬಲಿ ಮತ್ತಿತರ ವಿಧಿಗಳನ್ನು ನಡೆಸಿ ಬೆಳಿಗ್ಗೆ 9.43ರ ಮಿಥುನ ಲಗ್ನ ಸುಮುಹೂರ್ತದಲ್ಲಿ ಪ್ರತಿಷ್ಠಾ ಕಲಶಾಭಿಷೇಕ, ಪ್ರತಿಷ್ಠಾ ಪೂಜೆ, ಪಂಚಮೃತ ಅಭಿಷೇಕ ಪ್ರಾಯಶ್ಚಿತ ಹೋಮಗಳ ಕಲಶಾಭಿಷೇಕ, ಪರಿಕಲಶಾಭಿಷೇಕ



ಬ್ರಹ್ಮಕಲಶಾಭಿಷೇಕ ಪೂಜೆ ನೆರವೇರಿತು. ಮಧ್ಯಾಹ್ನ ಮಹಾಪೂಜೆಯ ಪ್ರಸಾದ ವಿತರಣೆಯ ಬಳಿಕ ಅನ್ನಸಂತರ್ಪಣೆ ನಡೆಯಿತು. ಪ್ರಶಾಂತ್ ಕುಮಾರ್ ಜೈನ್ ಕಟ್ಟೆಮಾರ್, ಕಾರ್ಯಾಧ್ಯಕ್ಷರಾದ ಭಾಸ್ಕರ ಭಟ್, ಜೀರ್ಣೋದ್ದಾರ ಸಮಿತಿ ಅಧ್ಯಕ್ಷ ಶೇಖರ್ ಜೋಗಿ ಮಟ್ಟಿ ಟ್ರಸ್ಟಿನ ಅಧ್ಯಕ್ಷ ಭಾಸ್ಕರ ಕುಲಾಲ್, ಪ್ರೇಮಚಂದ್ರ ನಾಯಕ್, ತುಳು ಸಾಹಿತ್ಯ ಅಕಾಡೆಮಿಯ ಸದಸ್ಯ ಬೂಬ ಪೂಜಾರಿ, ಜಯಾನಂದ ನಾಯ್ಕ್ ಮೊಗರು ಹಾಗೂ ಸಮಿತಿಯ ಸದಸ್ಯರು ಮತ್ತು ಊರಿನ ಭಕ್ತಾಭಿಮಾನಿಗಳು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು

49ನೇ ಕಂಕನಾಡಿ ವಾರ್ಡಿನ ಸದಾಶಿವನಗರ ಪಾರ್ಕ್ ಅಭಿವೃದ್ಧಿ ಕಾಮಗಾರಿಗೆ ಭೂಮಿಪೂಜೆ



ಮಂಗಳೂರು: ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ ಮಹಾ ನಗರ ಪಾಲಿಕೆ ವ್ಯಾಪ್ತಿಯ 49ನೇ ಕಂಕನಾಡಿ ವಾರ್ಡಿನ ಸದಾಶಿವನಗರ ಪಾರ್ಕ್ ಅಭಿವೃದ್ಧಿ ಕಾಮಗಾರಿಯು ಸುಮಾರು 10.65 ಲಕ್ಷ ರೂ ಅನುದಾನದಲ್ಲಿ ನಡೆಯಲಿದ್ದು, ಶಾಸಕ ವೇದವ್ಯಾಸ ಕಾಮತ್ ನೇತೃತ್ವದಲ್ಲಿ ಭೂಮಿಪೂಜೆ ನಡೆಯಿತು.

ಮೂಡ ಅಧ್ಯಕ್ಷ ಸದಾಶಿವ ಉಳ್ಳಾಲ್, ಪ್ರಾಧಿಕಾರದ ಆಯುಕ್ತ ಮೊಹಮ್ಮದ್ ನಜೀರ್, ಪ್ರಮುಖರಾದ ಭಾಸ್ಕರ ಚಂದ್ರ ಶೆಟ್ಟಿ, ಕಿರಣ್ ರೈ, ರಘುನಾಥ್ ಶೆಟ್ಟಿ ಸುಕೇಶ್, ಚೇತನ್ ನೆಕ್ಕರೆಮಾರ್, ಸುಮತಿ, ಮಾನಸ ರೈ, ಮೌನೇಶ್ ಚೌಟ, ಯಶೋಧ ಗಟ್ಟಿ, ತನುಜಾ ಎಕ್ಕೂರು, ನೀರಜ್‌ಚಂದ್ರ ಪಾಲ್, ಸುಮನ್‌ದಾಸ್, ಅಬ್ದುಲ್ ಜಲೀಲ್, ಸಬಿತಾ ಮಿಸ್ಕತ್ ಸೇರಿದಂತೆ ಮೊದಲಾದವರು ಉಪಸ್ಥಿತರಿದ್ದರು.

ಅನುಮೋದನೆ ಸಂತಸ ತಂದಿದೆ

ಈಗಾಗಲೇ ಮೂಡ ವತಿಯಿಂದ ಈ ಹಿಂದೆಯೇ ಪಾರ್ಕ್ ಅಭಿವೃದ್ಧಿಗೊಂಡಿದ್ದು ಪ್ರತಿನಿತ್ಯ ಅನೇಕರು ಇದರ ಸದುಪಯೋಗ ಪಡೆದುಕೊಳ್ಳುತ್ತಿದ್ದಾರೆ. ಇದೀಗ ಇನ್ನಷ್ಟು ಮುಂದುವರಿದ ಅಭಿವೃದ್ಧಿ ಕಾರ್ಯ ಅಗತ್ಯವಿರುವ ಬಗ್ಗೆ ಅನೇಕರು ಮನವಿ ಮಾಡಿದಂತೆ ಮೂಡ ಸಭೆಯಲ್ಲಿ ಅದಕ್ಕೆ ಎಲ್ಲರ ಸಹಕಾರದೊಂದಿಗೆ ಅನುಮೋದನೆ ದೊರೆತಿದ್ದು ಸಂತಸ ತಂದಿದೆ.

● **ವೇದವ್ಯಾಸ ಕಾಮತ್,** ಶಾಸಕರು

ಬಿ.ಸಿ.ರೋಡ್: 'ಕರಾವಳಿ ಕಲೋತ್ಸವ, ಬಹುಸಂಸ್ಕೃತಿ ಉತ್ಸವ' ಕಾರ್ಯಕ್ರಮ ಸಂಪನ್ನ



ಬಂಟ್ವಾಳ: ಚಿಣ್ಣರ ಲೋಕ ಮೋಕೆದ ಕಲಾವಿದೆರ್ ಸೇವಾ ಟ್ರಸ್ಟ್, ಬಂಟ್ವಾಳ ಚಿಣ್ಣರ ಲೋಕ ಸೇವಾ ಬಂಧು ಸಂಸ್ಥೆಯ ಆಶ್ರಯದಲ್ಲಿ ಬಿ.ಸಿ.ರೋಡ್‌ನ ಸ್ಪರ್ಶ ಕಲಾಮಂದಿರದಲ್ಲಿ ಕಳೆದ 1 ವಾರಗಳ ಕಾಲ ನಡೆದ 'ಕರಾವಳಿ ಕಲೋತ್ಸವ, ಬಹು ಸಂಸ್ಕೃತಿ ಉತ್ಸವ' ಕಾರ್ಯಕ್ರಮ ಶನಿವಾರ ಸಂಪನ್ನಗೊಂಡಿತು.

ಕಾರ್ಯಕ್ರಮ ಯಶಸ್ವಿಯಾಗಿದೆ

ಮಾಣಿ ಗ್ರಾಮ ಪಂಚಾಯತ್ ನಿಕಟ ಪೂರ್ವ ಅಧ್ಯಕ್ಷ ಸುದೀಪ್ ಕುಮಾರ್ ಶೆಟ್ಟಿ , ಕಳೆದ ಹಲವು ವರ್ಷದಿಂದ ಕರಾವಳಿ ಕಲೋತ್ಸವ ಅತ್ಯಂತ ಯಶಸ್ವಿ ಯಾಗಿ ನಡೆಯುತ್ತಾ ಬಂದಿದ್ದು, ಮೋಹನ್ ದಾಸ್ ಕೊಟ್ಟಾರಿ ಅವರ ಮೂಲಕ ಸಂಸ್ಥೆಯ ಕಾರ್ಯಕ್ರಮ ಅದ್ವಿತೀಯವಾಗಿದೆ ಎಂದರು.

ಸಂಸ್ಥೆಯ ಸಂಚಾಲಕ ಮೋಹನ್ ದಾಸ್ ಕೊಟ್ಟಾರಿ ಮಾತನಾಡಿ, ಕರಾವಳಿ ಕಲೋತ್ಸವ ಅತ್ಯಂತ ಯಶಸ್ವಿಯಾಗಿ ನೆರವೇರಿದ್ದು, ಈ ಬಾರಿ ತುಳು, ಕೊಂಕಣಿ, ಬ್ಯಾರಿ ಸಹಿತ ವಿವಿಧ ಅಕಾಡೆಮಿಗಳ ಸಹಯೋಗದೊಂದಿಗೆ ಬಹು ಸಂಸ್ಕೃತಿ ಉತ್ಸವವು ನಿರೀಕ್ಷೆಗೂ ಮೀರಿ ಯಶಸ್ಸು ದಾಖಲಿಸಿದೆ ಎಂದರು.

ಕಾರ್ಯಕ್ರಮದ ಯಶಸ್ಸಿಗೆ ಸಹಕರಿಸಿದ ಪ್ರಮುಖರನ್ನು ಸನ್ಮಾನಿಸಲಾಯಿತು. ಸ್ವಾಗತ ಸಮಿತಿ ಅಧ್ಯಕ್ಷ ಸುದರ್ಶನ್ ಜೈನ್ ಅಧ್ಯಕ್ಷತೆ ವಹಿಸಿದ್ದರು. ಸಮಿತಿ ಪದಾಧಿಕಾರಿ ಗಳಾದ ಚಿತ್ತರಂಜನ್ ಶೆಟ್ಟಿ ಬೊಂಡಾಲ, ವಿಶ್ವನಾಥ್, ರಾಜೇಶ್ ಮೆಂಡನ್, ಮೋನಪ್ಪ ಪೂಜಾರಿ, ಸರಪಾಡಿ ಅಶೋಕ್ ಶೆಟ್ಟಿ, ಅಬ್ದುಲ್‌ರಝಾಕ್ ಕುಕ್ಕಾಜೆ, ದೇವಪ್ಪ ಕುಲಾಲ್ ಪಂಜಿಕಲ್ಲು, ಪದ್ಮನಾಭಗೌಡ, ವಿಜಯ್‌ಕುಮಾರ್ ಅಡ್ಯಾರ್, ಮಾಧವ ಕರ್ಬೆಟ್ಟು ಮತ್ತಿತರರಿದ್ದರು.

ಇಂಟರ್‌ಗೇಲ್ ಫೈಟಿಂಗ್ ಚಾಂಪಿಯನ್‌ಶಿಪ್: ಪದಕ ಗೆದ್ದು ಸಾಧನೆ ಮಾಡಿದ ವಿದ್ಯಾರ್ಥಿಗಳು



ಮಡಿಕೇರಿ : ಇಂಡಿಯನ್ ಇಂಟರ್ ಗೇಲ್ ಫೈಟಿಂಗ್ ಅಸೋಸಿಯೇಷನ್ ವತಿಯಿಂದ ಉತ್ತರ ಪ್ರದೇಶದ ಸಹರಂಗಪುರದಲ್ಲಿ ನಡೆದ ಮೊದಲ ಇಂಡೋ ನೇಪಾಳ ಇಂಟರ್ ಗೇಲ್ ಫೈಟಿಂಗ್ ಚಾಂಪಿಯನ್ ಶಿಪ್ ನಲ್ಲಿ ಕರ್ನಾಟಕ ಇಂಟರ್ ಗೇಲ್ ಫೈಟಿಂಗ್ ಸಿಸ್ಟಮ್ ಅಸೋಸಿಯೇಷನ್ ನಕೊಡಗು ಜಿಲ್ಲೆಯ ಐವರು ವಿದ್ಯಾರ್ಥಿಗಳು ಪದಕ ಗೆದ್ದು ಸಾಧನೆ ಮಾಡಿದ್ದಾರೆ.

ಮಿಥೇಶ್ ಜೆ. ಚಿನ್ನ, ಯಶಸ್ ಪಿ.ಆರ್, ಎಸ್.ಎಸ್.ಪಶುಪತಿ ಅರಸ್, ಯಶಸ್ಮಿತ್ ಗೌಡ ಬೆಳ್ಳಿ ಹಾಗೂ ಪ್ರಜ್ವಲ್ ಪ್ರದೀಪ್ ರಾಥೋಡ್ ಕಂಚು ಗೆದ್ದಿದ್ದಾರೆ.

ಸಾಧನೆ ಮಾಡಿದ್ದಾರೆ

ಕರ್ನಾಟಕ ಇಂಟರ್ ಗೇಲ್ ಫೈಟಿಂಗ್ ಸಿಸ್ಟಮ್ ಅಸೋಸಿಯೇಷನ್‌ನ ಅಧ್ಯಕ್ಷ ಸುದರ್ಶನ್ ಎನ್.ಸಿ ಹಾಗೂ ಪ್ರಧಾನ ಕಾರ್ಯದರ್ಶಿ ಪಲಂಗೋಟು ಯಶಸ್ ಪಿ.ಆರ್ ಅವರ ಮಾರ್ಗ ದರ್ಶನದಲ್ಲಿ ವಿದ್ಯಾರ್ಥಿಗಳು ಈ ಸಾಧನೆ ಮಾಡಿದ್ದಾರೆ.

ದೇಂದಡ್ಕ ಶ್ರೀ ದೇವಸ್ಥಾನದಲ್ಲಿ 24ನೇ ವರ್ಷದ ಸಾಮೂಹಿಕ ಶ್ರೀ ಶನಿಪೂಜೆ

ಮುಲ್ಕಿ: ಕವತ್ತಾರು ಗ್ರಾಮದಲ್ಲಿನ ದೇಂದಡ್ಕ, ಪುತ್ತೂರು ಶ್ರೀ ಮಹಾಲಿಂಗೇಶ್ವರ ಮಹಾಗಣಪತಿ ದೇವಸ್ಥಾನದಲ್ಲಿ ಗೆಳೆಯರ ಬಳಗ ಮತ್ತು ಗೆಳತಿಯರ ಬಳಗದ ಆಶ್ರಯದಲ್ಲಿ ಊರ ಪರವೂರ ಭಕ್ತಾದಿಗಳ ಸಹಕಾರದಲ್ಲಿ 24ನೇ ವರುಷದ ಸಾಮೂಹಿಕ ಶ್ರೀ ಶನಿಪೂಜೆ ದೇವಳದ ಅನುವಂಶಿಕ ಅರ್ಚಕ ದೇಂದಡ್ಕ ಪಿ. ಸುಬ್ರಹ್ಮಣ್ಯ ಭಟ್ ಪೌರೋಹಿತ್ವದಲ್ಲಿ ನಡೆಯಿತು. ಈ ಸಂದರ್ಭ ಬಳಗದ ಸದಸ್ಯರು, ಅನುವಂಶಿಕ ಮುಕ್ತೇಸರರು, ದೇವಳದ ಆಡಳಿತ ಮಂಡಳಿ ಸದಸ್ಯರು ಹಾಗೂ



ಕವತ್ತಾರು, ಕರ್ನಿರೆ, ಬಳ್ಕುಂಜೆ, ಕೊಲ್ಲೂರು, ಅತಿಕಾರಿಬೆಟ್ಟು ಗ್ರಾಮದ ಗ್ರಾಮಸ್ಥರು ಉಪಸ್ಥಿತರಿದ್ದರು. ಬಳಿಕ ಮಹಾಪೂಜೆ, ಪ್ರಸಾದ ವಿತರಣೆ, ಅನ್ನಸಂತರ್ಪಣೆ ನಡೆಯಿತು.



ಕಾಸರಗೋಡು ಜಿಲ್ಲೆಯಲ್ಲಿ ಶುಕ್ರವಾರ ರಾತ್ರಿ ಸುರಿದ ಬೇಸಿಗೆ ಮಳೆ ಮತ್ತು ಪ್ರಬಲ ಗಾಳಿಗೆ ಕೇಳುಗುಡ್ಡೆ ನಿವಾಸಿ, ಛಾಯಾಗ್ರಾಹಕ ವಿನಯಕುಮಾರ್ (ಕುಮಾರ್ ಕಾಸರಗೋಡು) ಅವರ ಮನೆಯ ಮೇಲೆ ಮರವೊಂದು ಉರುಳಿ ಬಿದ್ದಿದ್ದು, ಅದೃಷ್ಟವಶಾತ್ ಸಂಭವನೀಯ ದುರಂತ ತಪ್ಪಿ ಹೋಯಿತು.

ನೀರಪಾದೆಯಲ್ಲಿ ಬ್ರಹ್ಮಶ್ರೀ ನಾರಾಯಣ ಗುರುಮಂದಿರ ಲೋಕಾರ್ಪಣೆ | ಧಾರ್ಮಿಕ ಸಭೆಯಲ್ಲಿ ಗೋರಕ್ಷಾ ಪ್ರಮುಖ್ ಸುನೀಲ್ ಅಭಿಪ್ರಾಯ

ಹಿಂದು ಧರ್ಮದ ಉಳಿವಿಗಾಗಿ ಸಮಸ್ತ ಹಿಂದೂ ಸಮಾಜ ಒಗ್ಗಟ್ಟಾಗುವುದು ಇಂದಿನ ಅಗತ್ಯ

ಬಂಟ್ವಾಳ: ಭಾರತದ ಸಂಸ್ಕೃತಿ, ಸಂಸ್ಕಾರ ಆಚಾರ, ವಿಚಾರಗಳಿಗೆ ಧಕ್ಕೆಯಾಗದಂತೆ ಮುಂದಿನ ಪೀಳಿಗೆಗೆ ತಿಳಿಸಿಕೊಡುವ ಸಂಪರ್ಕದ ಸೇತುವಾಗಿ ಧಾರ್ಮಿಕ ಕೇಂದ್ರಗಳು ಕೆಲಸ ಮಾಡಬೇಕು ಹಿಂದೂ ಧರ್ಮದ ಉಳಿವಿಗಾಗಿ ಸಮಸ್ತ ಹಿಂದೂ ಸಮಾಜ ಒಂದಾಗುವ. ಅನೀವಾರ್ಯತೆ ಇದೆ ಎಂದು ವಿಶ್ವ ಹಿಂದೂ ಪರಿಷತ್ ಪ್ರಾಂತ ಗೋರಕ್ಷಾ ಪ್ರಮುಖ್ ಸುನಿಲ್ ಕೆ.ಆರ್.ಹೇಳಿದ್ದಾರೆ.

ಬಂಟ್ವಾಳ ತಾಲೂಕಿನ ಬಾಳ್ತಿಲ ಗ್ರಾಮದ ನೀರಪಾದೆ ಎಂಬಲ್ಲಿಪುನರ್ ನಿರ್ಮಾಣಗೊಂಡ ನೂತನ ಬ್ರಹ್ಮಶ್ರೀ ನಾರಾಯಣ ಗುರುಮಂದಿರ ಲೋಕಾರ್ಪಣೆ ಮತ್ತು ಬ್ರಹ್ಮಶ್ರೀ ನಾರಾಯಣ ಗುರುವರ್ಯರ ಮೂರ್ತಿ ಪ್ರತಿಷ್ಠಾ ಸಾನಿಧ್ಯ ಕಲಶಾಭಿಷೇಕ ಕಾರ್ಯಕ್ರಮದ ಪ್ರಯುಕ್ತ ನಡೆದ ಧಾರ್ಮಿಕ ಸಭೆಯನ್ನು ಉದ್ಘಾಟಿಸಿ



ಅವರು ಮಾತನಾಡುತ್ತಿದ್ದರು.

ಸಭೆಯ ಅಧ್ಯಕ್ಷತೆ ವಹಿಸಿದ್ದ ನಿವೃತ್ತ ಯೋಧರಾದ ಡೀಕಯ್ಯ ಪೂಜಾರಿ ಮಾತನಾಡಿ, ಬಾಳ್ತಿಲ ಗ್ರಾಮದಲ್ಲಿ ನಡೆಯುವ ಪ್ರತಿ ಧಾರ್ಮಿಕ ಕಾರ್ಯಕ್ರಮಗಳಿಗೆ ಮಂದಿರ ಕೇಂದ್ರವಾಗಿ ಮೂಡಿಬರಲಿದೆ ಎಂದರು.

ಕುದ್ರೋಳಿ ಶ್ರೀ ಗೋಕರ್ಣನಾಥೇಶ್ವರ ದೇವಸ್ಥಾನದ ಕೋಶಾಧಿಕಾರಿ ಪದ್ಮರಾಜ್ ಆರ್. ಪೂಜಾರಿ ಮಾತನಾಡಿ ಬ್ರಹ್ಮಶ್ರೀ ನಾರಾಯಣ ಗುರುಗಳು ಶೋಷಿತ ಸಮಾಜದ ಏಳಿಗೆಗೆ ಶ್ರಮಿಸಿದ ಮಹಾನ್ ಚೇತನ ಎಂದು ಅವರು ತಿಳಿಸಿದರು.

ಸಂಸ್ಕಾರ ಕಲಿಸುವ ಕೇಂದ್ರಗಳಾಗಬೇಕು

ಬ್ರಹ್ಮಶ್ರೀ ನಾರಾಯಣ ಗುರು ಮಂದಿರಗಳು ಸಂಸ್ಕಾರವನ್ನು ಕಲಿಸುವ ಕೇಂದ್ರಗಳಾದಾಗ ಅವರ ಯೋಚನೆ, ಚಿಂತನೆ, ಹೋರಾಟ, ತತ್ವ ಸಿದ್ಧಾಂತಗಳಿಗೆ ಗೌರವಿಸಿದಂತಾಗುತ್ತದೆ. ಭಜನೆಯ ಮೂಲಕ ಹಿಂದೂಸಮಾಜವನ್ನು ಒಟ್ಟುಗೂಡಿಸುವ ಕಾರ್ಯಗಳು ನಡೆಯಲಿ.

● **ಸುನೀಲ್,** ವಿಹಿಂಪ ಪ್ರಾಂತ ಗೋರಕ್ಷಾ ಪ್ರಮುಖ್

ಜವಾಹರ ಬಾಲಮಂಚ್‌ನ ಜಿಲ್ಲಾಧ್ಯಕ್ಷೆ ಶೈಲಜಾ ರಾಜೇಶ್, ಪಾಣೆಮಂಗಳೂರು ಸುಮಂಗಲಾ ಕ್ರೆಡಿಟ್ ಕೋ.ಆಪರೇಟಿವ್ ಸೊಸೈಟಿ ಅಧ್ಯಕ್ಷ ನಾಗೇಶ್ ಕಲ್ಲಡ್ಕ ಮಾತನಾಡಿದರು.

ಪುತ್ತೂರು ವಿವೇಕಾನಂದ ವಿದ್ಯಾವರ್ಧಕ ಸಂಘದ ಅಧ್ಯಕ್ಷ ಡಾ.ಪ್ರಭಾಕರ ಭಟ್ ಕಲ್ಲಡ್ಕ, ಜೀರ್ಣೋದ್ಧಾರ ಸಮಿತಿ ಅಧ್ಯಕ್ಷ ನಾರಾಯಣ ಪೂಜಾರಿ ನಿಡ್ಯ, ಬ್ರಹ್ಮಶ್ರೀ ನಾರಾಯಣ ಗುರು ಸೇವಾ ಟ್ರಸ್ಟ್‌ನ ಅಧ್ಯಕ್ಷ ಎ.ರುಕ್ಮಯ ಪೂಜಾರಿ, ಕಾರ್ಯದರ್ಶಿ ಮೋಹನ್ ಪಿ.ಎಸ್. ಬರಿಮಾರು, ಮಹಾಮ್ಮಾಯಿ ದೇವಸ್ಥಾನದ ಅನುವಂಶಿಕ ಆಡಳಿತ ಮೊಕ್ತೇಸರ ರಾಕೇಶ್ ಪ್ರಭು, ನೀರಪಾದೆ ಶ್ರೀ ಸಾರ್ವಜನಿಕ ಗಣೇಶೋತ್ಸವ ಸಮಿತಿ ಅಧ್ಯಕ್ಷ ಕುಮಾರ್ ಕೆ. ಕಾಂದಿಲ, ಸಮರ್ಪಣಾ ಟ್ರಸ್ಟ್ ವಿಟ್ಲ ಇದರ ಅಧ್ಯಕ್ಷ ಯಶವಂತ ಎನ್. ಪೂಜಾರಿ, ಕಶೆಕೋಡಿ ಶ್ರೀ ಲಕ್ಷ್ಮೀ ವೆಂಕಟರಮಣ ದೇವಸ್ಥಾನದ ಅನುವಂಶಿಕ ಆಡಳಿತ ಮೊಕ್ತೇಸರ ಗೋಪಾಲ ಶೆಣೈ ಕಂಟೀಕ, ಎ.ಪಿ.ಎಂ.ಸಿ.ಮಾಜಿ ಉಪಾಧ್ಯಕ್ಷ ಚಂದ್ರಶೇಖರ ಪೂಜಾರಿ ಕೋರ್ಯ, ಉದ್ಯಮಿ ತುಳಸಿದಾಸ್ ಮಂಗಳೂರು, ನರಿಕೊಂಬು ಗ್ರಾಮ ಪಂಚಾಯತ್ ನಿಕಟಪೂರ್ವ ಅಧ್ಯಕ್ಷ ಸಂತೋಷ್ ನರಿಕೊಂಬು ಹಾಗೂ ಟ್ರಸ್ಟ್ ಮತ್ತು ಸಮಿತಿಯ ಪ್ರಮುಖರು ಹಾಜರಿದ್ದರು.

ಜೀರ್ಣೋದ್ಧಾರ ಸಮಿತಿ ಉಪಾಧ್ಯಕ್ಷ ಶರತ್ ಕುಮಾರ್ ಸ್ವಾಗತಿಸಿ, ಜತೆ ಕಾರ್ಯದರ್ಶಿ ಚಂದ್ರಶೇಖರ ಪೂಜಾರಿ ವಂದಿಸಿದರು. ಗ್ರಾಮ ಪಂಚಾಯತ್ ಮಾಜಿ ಸದಸ್ಯ ರಾಜೇಶ್ ಕೊಟ್ಟಾರಿ ಹಾಗೂ ಶಿಕ್ಷಕ ಸಂತೋಷ್ ಕುಮಾರ್ ಕಾರ್ಯಕ್ರಮ ನಿರೂಪಿಸಿದರು.

ಬಳಿಕ ಸ್ಥಳೀಯ ಅಂಗನವಾಡಿ ಮಕ್ಕಳಿಂದ ಮತ್ತು ಇತರ ಸದಸ್ಯರಿಂದ ಸಾಂಸ್ಕೃತಿಕ ಕಾರ್ಯಕ್ರಮ, ಸ್ಥಳೀಯ ಕಲಾವಿದರಿಂದ ನಾಟಕ ಪ್ರದರ್ಶನಗೊಂಡಿತು.

ಸುತ್ತಮುತ್ತ

ಮೇ 17: ಬಂಟಕಲ್ಲು- ಆರ್‌ಎಸ್‌ಬಿ -ಬಿಜಿಎಸ್‌ಬಿ ವಧು-ವರ ಪರಿಚಯ ಸಮಾವೇಶ

ಶಿರ್ವ: ಆರ್‌ಎಸ್‌ಬಿ ಮತ್ತು ಬಿಜಿಎಸ್‌ಬಿ ಸಪ್ತಪದಿ ವಿವಾಹ ಮಾಹಿತಿ ಕೇಂದ್ರ ಬೆಂಗಳೂರು, ಇವರ ನೇತೃತ್ವ ಮತ್ತು ಆಯೋಜನೆಯಲ್ಲಿ ಆರ್‌ಎಸ್‌ಬಿ -ಬಿಜಿಎಸ್‌ಬಿ ವಧೂವರ ಪರಿಚಯ ಸಮಾವೇಶ 'ಋಣಾನುಬಂಧ' ಮೇ 17ರಂದು ಬಂಟಕಲ್ಲು ರೋಟರಿ ಸಭಾಭವನದಲ್ಲಿ ಬೆಳಿಗ್ಗೆ 9ರಿಂದ ಸಾಯಂ 3ರವರೆಗೆ ಜರುಗಲಿದೆ. ವಧುವರರು ಬಯೋಡೇಟಾ ಮತ್ತು ಪೂರ್ಣ ಸೈಜ್‌ನ ಫೋಟೋವನ್ನು ಕಡ್ಡಾಯವಾಗಿ ತರುವುದು. ವಧು, ವರರ ಜೊತೆಗೆ ಇಬ್ಬರಿಗೆ ಬರಲು ಅವಕಾಶವಿದೆ. ಹೆಚ್ಚಿನ ಮಾಹಿತಿಗಾಗಿ ಸ್ಥಳೀಯವಾಗಿ ಸಂಪರ್ಕಿಸಲು 7019976058, 9448724073, 9880585104, 7353053119, 8277403845 ಇವರನ್ನು ಸಂಪರ್ಕಿಸಬಹುದು ಎಂದು ಸಪ್ತಪದಿ ವಿವಾಹ ಮಾಹಿತಿ ಕೇಂದ್ರ ಬೆಂಗಳೂರು ಇದರ ಪ್ರಧಾನ ಸಂಚಾಲಕರಾದ ಎಂ.ಡಿ.ಪ್ರಭು ಪ್ರಕಟನೆಯಲ್ಲಿ ತಿಳಿಸಿದ್ದಾರೆ.

ವಿಶೇಷ ಕಾರ್ಯಕ್ರಮ

ಖ್ಯಾತ ಜೀವನ ತರಬೇತುದಾರ ಸುಬ್ರಹ್ಮಣ್ಯ ಕುಲೇದು ಬೆಂಗಳೂರು ಅವರಿಂದ ಬೆಳಿಗ್ಗೆ 9ರಿಂದ 15 ವರ್ಷ ಮೇಲ್ಪಟ್ಟ ವಿದ್ಯಾರ್ಥಿಗಳಿಗೆ 'ಜೀವನ ದೃಷ್ಟಿಕೋನವನ್ನು ಹೇಗೆ ಹೊಂದಿಸುವುದು' ಎಂಬ ವಿಷಯದ ಕುರಿತು ವಿಶೇಷ ಉಪನ್ಯಾಸ ಕಾರ್ಯಕ್ರಮ ಏರ್ಪಡಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಮೇ 12ರಂದು ಕಾಂಗ್ರೆಸ್ ಸಮಿತಿಯ ವಿಶೇಷ ಸಭೆ

ಉಡುಪಿ: ಜಿಲ್ಲಾ ಕಾಂಗ್ರೆಸ್ ಸಮಿತಿಯ ವಿಶೇಷ ಸಭೆಯು ವಿಧಾನ ಪರಿಷತ್ ಸದಸ್ಯ ಹಾಗೂ ಕೆಪಿಸಿಸಿ ಕಾರ್ಯಾಧ್ಯಕ್ಷ ಮಂಜುನಾಥ್ ಭಂಡಾರಿ ಮಾರ್ಗದರ್ಶನದಲ್ಲಿ ಮೇ 12ರಂದು ಬೆಳಗ್ಗೆ 10 ಗಂಟೆಗೆ ಉಡುಪಿ ಜಿಲ್ಲಾ ಕಾಂಗ್ರೆಸ್ ಭವನದಲ್ಲಿ ನಡೆಯಲಿದೆ. ಸಭೆಯಲ್ಲಿ ಕೆಪಿಸಿಸಿ ಪ್ರಚಾರ ಸಮಿತಿ ಅಧ್ಯಕ್ಷ ವಿನಯ್ ಕುಮಾರ್ ಸೊರಕೆ, ವಿಧಾನ ಪರಿಷತ್ ಸದಸ್ಯ ಹಾಗೂ ಕೆಪಿಸಿಸಿ ಉಪಾಧ್ಯಕ್ಷ ಐವನ್ ಡಿಸೋಜ, ಮಾಜಿ ಸಚಿವ ಜಯಪ್ರಕಾಶ್ ಹೆಗ್ಡೆ ಕರಾವಳಿ ಪ್ರಾಧಿಕಾರದ ಅಧ್ಯಕ್ಷ ಎಂ.ಎ. ಗಫೂರ್, ನಾರಾಯಣಗುರು ಅಭಿವೃದ್ಧಿ ನಿಗಮದ ಅಧ್ಯಕ್ಷ ಮಂಜುನಾಥ ಪೂಜಾರಿ ಮುದ್ರಾಡಿ, ಮಾಜಿ ಶಾಸಕರಾದ ಗೋಪಾಲ್ ಪೂಜಾರಿ, ಸುಕುಮಾರ್ ಶೆಟ್ಟಿ, ಮುಖಂಡರಾದ ಉದಯ್ ಕುಮಾರ್ ಶೆಟ್ಟಿ, ಪ್ರಸಾದ್‌ರಾಜ್ ಕಾಂಚನ್, ದಿನೇಶ್ ಹೆಗ್ಡೆ ಮೊಳಹಳ್ಳಿ, ಕಾರ್ಯಾಧ್ಯಕ್ಷ ಕಿಶನ್ ಹೆಗ್ಡೆ ಕೊಳ್ಕೆಬೈಲ್, ರಾಜು ಪೂಜಾರಿ ಭಾಗವಹಿಸಲಿರುವರು ಎಂದು ಕಾಂಗ್ರೆಸ್ ಉಡುಪಿ ಜಿಲ್ಲಾಧ್ಯಕ್ಷ ಅಶೋಕ್ ಕುಮಾರ್ ಕೊಡವೂರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೇ 13: ಕುಂದಾಪುರ ಬ್ಲಾಕ್ ಕಾಂಗ್ರೆಸ್ ಕಚೇರಿ ಕಟ್ಟಡದ ಶಂಕುಸ್ಥಾಪನೆ

ಕುಂದಾಪುರ: ಕುಂದಾಪುರ ಬ್ಲಾಕ್ ಕಾಂಗ್ರೆಸ್ ನೂತನ ಕಚೇರಿ ಕಟ್ಟಡದ ಶಂಕುಸ್ಥಾಪನೆ ಘಂಟೆಗೆ ಕುಂದಾಪುರ ಜ್ಯೂನಿಯರ್ ಕಾಲೇಜು ಹತ್ತಿರದ ಪಕ್ಷದ ನಿವೇಶನದಲ್ಲಿ ಮೇ 13 ರಂದು ಬೆಳಿಗ್ಗೆ 11.30ಕ್ಕೆ ನಡೆಯಲಿದೆ. ಸಣ್ಣ ನೀರಾವರಿ, ಮಾಹಿತಿ ಮತ್ತು ತಂತ್ರಜ್ಞಾನ ಸಚಿವ ಎನ್. ಎಸ್. ಬೋಸರಾಜು ಅವರು ಕಟ್ಟಡದ ಶಂಕುಸ್ಥಾಪನೆ ನೆರವೇರಿಸಲಿದ್ದಾರೆ. ವಿಧಾನ ಪರಿಷತ್ ಮಾಜಿ ಸಭಾಪತಿ ಕೆ. ಪ್ರತಾಪಚಂದ್ರ ಶೆಟ್ಟಿ ಕೆಪಿಸಿಸಿ ಕಾರ್ಯಾಧ್ಯಕ್ಷ ಮಂಜುನಾಥ ಭಂಡಾರಿ, ಪ್ರಚಾರ ಸಮಿತಿ ಅಧ್ಯಕ್ಷ ವಿನಯ ಕುಮಾರ ಸೊರಕೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಅಶೋಕ ಕುಮಾರ ಕೊಡವೂರು, ಕೆಪಿಸಿಸಿ ಉಪಾಧ್ಯಕ್ಷ ಐವನ್ ಡಿಸೋಜಾ, ಮಾಜಿ ಸಚಿವ ಕೆ. ಜಯಪ್ರಕಾಶ ಹೆಗ್ಡೆ, ಎಂ. ಎ. ಗಫೂರ, ಕಿಶನ್ ಹೆಗ್ಡೆ, ದಿನೇಶ್ ಹೆಗ್ಡೆ ಮೊಳಹಳ್ಳಿ, ರಾಜು ಪೂಜಾರಿ, ಶಿವರಾಮ ಶೆಟ್ಟಿ ಮಲ್ಯಾಡಿ, ಶಂಕರ ಕುಂದರ ಭಾಗವಹಿಸಲಿದ್ದಾರೆ.

ವ್ಯಕ್ತಿ ನಾಪತ್ತೆ

ಉಡುಪಿ: ಕಾರ್ಕಳ ತಾಲೂಕು ಮುಂಡ್ಕೂರು ಗ್ರಾಮದ ಜಾರಿಗೆಕಟ್ಟೆ ಅಂಜರಾಡಿ ನಿವಾಸಿ ಭಾಸ್ಕರ (66) ಎಂಬ ವ್ಯಕ್ತಿಯು ಏ. 18ರಂದು ಬೆಳಗ್ಗೆ 8.30 ರ ಸುಮಾರಿಗೆ ಪೇಟೆಗೆ ಹೋಗಿ ಬರುವುದಾಗಿ ಮನೆಯವರಲ್ಲಿ ಹೇಳಿ ಹೋದವರು ಇದುವರೆಗೂ ಮನೆಗೆ ವಾಪಸು ಬಾರದೇ ನಾಪತ್ತೆಯಾಗಿದ್ದಾರೆ. ಇವರ ಬಗ್ಗೆ ಮಾಹಿತಿ ದೊರೆತಲ್ಲಿ ಕಾರ್ಕಳ ಗ್ರಾಮಾಂತರ ಪೊಲೀಸ್ ಠಾಣೆಯನ್ನು ಸಂಪರ್ಕಿಸಬಹುದಾಗಿದೆ ಎಂದು ಪ್ರಕಟಣೆ ತಿಳಿಸಿದೆ.

'ವಿದ್ಯಾಪೋಷಕ್' ಯೋಜನೆಯಡಿ ಉಡುಪಿ ಯಕ್ಷಗಾನ ಕಲಾರಂಗದಿಂದ 95ನೇ ಮನೆಯ ಹಸ್ತಾಂತರ

ಸಾಧಕ ವಿದ್ಯಾರ್ಥಿನಿಯ ಕನಸಿನ ಹಾದಿಗೆ 'ಪಂಚಮ್' ಬೆಳಕು

ಉಡುಪಿ: ಬಡತನದ ಬೇಗೆಯಲ್ಲಿ ಬೆಂದರೂ ಸಾಧನೆಯ ಹಸಿವು ಇಂಗದ ವಿದ್ಯಾರ್ಥಿನಿಯ ಬಾಳಿಗೆ ಉಡುಪಿಯ ಯಕ್ಷಗಾನ ಕಲಾರಂಗವು ಭರವಸೆಯ ಆಸರೆಯಾಗಿದೆ. ಸಂಸ್ಥೆಯ 'ವಿದ್ಯಾಪೋಷಕ್' ಯೋಜನೆಯಡಿ ಎರಡನೇ ಪಿಯುಸಿ ವಿದ್ಯಾರ್ಥಿನಿ ಸಿಂಚನಾಳ ಕುಟುಂಬಕ್ಕಾಗಿ ಕುಂದಾಪುರ ತಾಲೂಕಿನ ಕೆರಾಡಿಯಲ್ಲಿ ನಿರ್ಮಿಸಲಾದ 95ನೇ ನೂತನ ಮನೆ 'ಪಂಚಮ್' ಸಂಭ್ರಮದಿಂದ ಲೋಕಾರ್ಪಣೆಗೊಂಡಿತು.



ಪಾರದರ್ಶಕ ಸೇವೆಗೆ ಮೆಚ್ಚುಗೆ

ಕಾರ್ಯಕ್ರಮವನ್ನು ಜ್ಯೋತಿ ಬೆಳಗಿಸಿ ಉದ್ಘಾಟಿಸಿದ ಕೊಲ್ಲೂರು ಮೂಕಾಂಬಿಕಾ ದೇವಳದ ಮಾಜಿ ಧರ್ಮದರ್ಶಿ ಹಾಗೂ ಉದ್ಯಮಿ ಕೆರಾಡಿ ಚಂದ್ರಶೇಖರ ಶೆಟ್ಟಿ ಅವರು ಮಾತನಾಡಿ, ಯಕ್ಷಗಾನ ಕಲಾರಂಗದ ಕಾರ್ಯವೈಖರಿಯನ್ನು ಶ್ಲಾಘಿಸಿದರು. ವಿದ್ಯಾರ್ಥಿಗಳನ್ನು ಆಯ್ಕೆ ಮಾಡುವ ಮೊದಲು ಅವರ ಮನೆಗಳಿಗೆ ಭೇಟಿ ನೀಡಿ ವಾಸ್ತವ ಸ್ಥಿತಿಯನ್ನು ಅರಿಯುವ ಸಂಸ್ಥೆಯ ಪಾರದರ್ಶಕತೆ ಎಲ್ಲ ಸಂಸ್ಥೆಗಳಿಗೂ ಮಾದರಿಯಾಗಿದೆ. ಕತ್ತಲೆಯ ಹಾದಿಯಲ್ಲಿ ನಡೆದರೂ ಪರವಾಗಿಲ್ಲ, ಆದರೆ ಮನುಷ್ಯ ಕನಸಿಲ್ಲದ ಹಾದಿಯಲ್ಲಿ ನಡೆಯಬಾರದು. ಸಿಂಚನಾ ಚೆನ್ನಾಗಿ ಓದಿ ಭವಿಷ್ಯದಲ್ಲಿ ತಾನು ಕೂಡ ಬಡ ವಿದ್ಯಾರ್ಥಿಗಳಿಗೆ ನೆರವಾಗುವ ಹಂತಕ್ಕೆ ಬೆಳೆಯಬೇಕು ಎಂದು ಹಾರೈಸಿದರು.

ಐವರು ಮಿತ್ರರ ಸಮಾಜಮುಖಿ ಕಳಕಳಿ

ಉಡುಪಿಯ ಸಾಮಾಜಿಕ ಕಳಕಳಿಯ ಐವರು ಮಿತ್ರರ ಪ್ರಾಯೋಜಕತ್ವದಲ್ಲಿ ಈ ಸುಂದರ ಮನೆ ನಿರ್ಮಾಣಗೊಂಡಿದೆ. ಪ್ರಾಯೋಜಕತ್ವ ವಹಿಸಿದ್ದ ಎ.ಜಿ. ಅಸೋಸಿಯೇಟ್ಸ್‌ನ ಆರ್ಕಿಟೆಕ್ಟ್ ಯೋಗೀಶ್ಚಂದ್ರಧರ್, ಇಂಜಿನಿಯರ್ ಎಂ. ಗೋಪಾಲ್ ಭಟ್, ಸ್ಮಾನ್ ಅಸೋಸಿಯೇಟ್ಸ್‌ನ ಇಂಜಿನಿಯರ್ ಪಾಂಡುರಂಗ ಆಚಾರ್ ಹಾಗೂ ಪದ್ಮಶ್ರೀ ಕನ್ಸ್ಟ್ರಕ್ಷನ್ಸ್‌ನ ಇಂಜಿನಿಯರ್ ಹರಿಪ್ರಸಾದ್ ಶೆಟ್ಟಿ ಕಾರ್ಯಕ್ರಮದಲ್ಲಿ ಭಾಗವಹಿಸಿ ವಿದ್ಯಾರ್ಥಿನಿಗೆ ಸ್ಫೂರ್ತಿದಾಯಕ ಮಾತುಗಳನ್ನಾಡಿದರು.

ಗ್ರಾಮೀಣ ಭಾಗದ ಕನ್ನಡ ಮಾಧ್ಯಮದ ವಿದ್ಯಾರ್ಥಿಗಳು ಕೀಳರಿಮೆಗೆ ಒಳಗಾಗಬೇಕಿಲ್ಲ, ನಾವು ಕೂಡ ಅದೇ ಹಾದಿಯಿಂದ ಬಂದವರು. ವಿದ್ಯಾಪೋಷಕ್‌ನಂತಹ ಸಂಸ್ಥೆ ಬೆನ್ನಿಗಿರುವಾಗ ಧೈರ್ಯದಿಂದ ಸಾಧನೆಯ ಹಾದಿಯಲ್ಲಿ ಮುನ್ನಡೆದು, ಭವಿಷ್ಯದಲ್ಲಿ ನೀನೂ ಒಬ್ಬ ದಾನಿಯಾಗಿ ಸಮಾಜಕ್ಕೆ ಮರಳಿಸು ಎಂದು ಕಿವಿಮಾತು ಹೇಳಿದರು.

ಡಿವಿಜಿ ಅವರ 'ದೀನ ದುರ್ಬಲರಿಗೆ ಬೆಲ್ಲ ಸಕ್ಕರೆಯಾಗು' ಎಂಬ ಮಂಕುತಿಮ್ಮನ ಕಗ್ಗದ ಸಾಲುಗಳನ್ನು ಉಲ್ಲೇಖಿಸಿ, ಸಮಾಜದಲ್ಲಿ ಸಬಲರು ದುರ್ಬಲರಿಗೆ ಸಹಾಯ ಮಾಡಿದಾಗ ಮಾತ್ರ ಉತ್ತಮ ಸಮಾಜ ನಿರ್ಮಾಣ ಸಾಧ್ಯ ಎಂಬ ಸಂದೇಶ ನೀಡಿದರು.

ವೇದಿಕೆಯಲ್ಲಿ ಸಂಸ್ಥೆಯ ಉಪಾಧ್ಯಕ್ಷ ವಿ.ಜಿ ಶೆಟ್ಟಿ, ಹಿರಿಯ ಸದಸ್ಯ ಯು. ವಿಶ್ವನಾಥ್ ಶೆಣೈ, ಇಂಜಿನಿಯರ್‌ಗಳಾದ ವಿನಯ ಕುಮಾರ್ ಹಾಗೂ ನಿರಂಜನ್ ಉಪಸ್ಥಿತರಿದ್ದರು. ಅಲ್ಲದೆ ಮಲ್ಲಿಕಾ ಯೋಗೀಶ್ ಧರ್, ಶ್ರೀಲಕ್ಷ್ಮೀ ಜಿ.ಭಟ್, ಸುರೇಖಾ ಪಿ.ಆಚಾರ್ಯ, ಪದ್ಮಿನಿ ಹರಿಪ್ರಸಾದ್ ಶೆಟ್ಟಿ, ಶಿಲ್ಪಾ ಶಶಿಧರ್, ಗಿರೀಶ್ ಚಂದ್ರ ಧರ್, ದಿವ್ಯಾ ಗಿರೀಶ್ ಧರ್ ಹಾಗೂ ರಕ್ಷಣ್ ಆಚಾರ್ಯ ಭಾಗವಹಿಸಿದ್ದರು.

ಸಂಸ್ಥೆಯ ಪ್ರಮುಖರಾದ ಭುವನಪ್ರಸಾದ ಹೆಗ್ಡೆ, ಅನಂತರಾಜ ಉಪಾಧ್ಯ, ಕೃಷ್ಣಮೂರ್ತಿ ಭಟ್, ಜಯರಾಮ್ ಪಡಿಯಾರ್, ವಿನೋದಾ ಎಂ, ಡಾ. ಪ್ರತಿಮಾ ಆಚಾರ್ಯ, ಸುದರ್ಶನ ಬಾಯರಿ, ವಿಶ್ವನಾಥ್ ಮತ್ತು ಮಾಲತಿ ಕಾರ್ಯಕ್ರಮಕ್ಕೆ ಸಾಕ್ಷಿಯಾದರು. ಸಂಸ್ಥೆಯ ಅಧ್ಯಕ್ಷ ಎಂ. ಗಂಗಾಧರ ರಾವ್ ಸ್ವಾಗತಿಸಿದರು. ನಾರಾಯಣ ಎಂ. ಹೆಗಡೆ ವಂದಿಸಿದರು. ಕಾರ್ಯದರ್ಶಿ ಮುರಲಿ ಕಡೆಕಾರ್ ಪ್ರಸ್ತಾವನೆಯ ಮಾತುಗಳೊಂದಿಗೆ ಇಡೀ ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ನಿರೂಪಿಸಿದರು.

ಕಟಪಾಡಿ ಎಸ್‌ವಿಎಸ್ ಪಿಯು ಕಾಲೇಜು ಹಳೆ ವಿದ್ಯಾರ್ಥಿ ಸಂಘದ ವಾರ್ಷಿಕೋತ್ಸವ



ಶಿರ್ವ: ಕಟಪಾಡಿ ಎಸ್‌ವಿಎಸ್ ಪದವಿ ಪೂರ್ವ ಕಾಲೇಜು ಹಳೆ ವಿದ್ಯಾರ್ಥಿ ಸಂಘದ 62ನೇ ವಾರ್ಷಿಕೋತ್ಸವ ಸಮಾರಂಭ ಶಾಲಾ ಬಯಲು ರಂಗಮಂಟಪದಲ್ಲಿ ಜರುಗಿತು. ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಕಟಪಾಡಿ ಎಸ್‌ವಿಎಸ್ ಸಮೂಹ ಶಿಕ್ಷಣ ಸಂಸ್ಥೆಯ ಸಂಚಾಲಕ ಕೆ. ಸತ್ಯೇಂದ್ರ ಪೈ ಮಾತನಾಡಿ, ಹಳೆವಿದ್ಯಾರ್ಥಿ ಸಂಘ ಶಾಲಾ ವಿದ್ಯಾರ್ಥಿಗಳಿಗೆ ಹಿಂದಿನಿಂದಲೂ ಅನೇಕ ಉಚಿತ ಕೊಡುಗೆಗಳನ್ನು ನೀಡುತ್ತಾ ಪ್ರೋತ್ಸಾಹಿಸುತ್ತಾ ಬಂದಿದೆ. ಮುಂದೆಯೂ ನಾವೆಲ್ಲರೂ ಒಟ್ಟಾಗಿ ಶಾಲೆ ಹಾಗೂ ಸಮಾಜಕ್ಕಾಗಿ ಕೆಲಸ ಮಾಡೋಣ. ಕನ್ನಡ ಮಾಧ್ಯಮದ ಉಚಿತ ಶಿಕ್ಷಣವನ್ನು ಹೈಸ್ಕೂಲಿಗೂ ವಿಸ್ತರಿಸಲು ಹಾಗೂ ಎಲ್ಲರಿಗೂ ಉಚಿತ ಬಸ್ಸಿನ ವ್ಯವಸ್ಥೆಯನ್ನೂ ಒದಗಿಸಲು ಪ್ರಯತ್ನಿಸೋಣ ಎಂದರು.

ಹಳೆ ವಿದ್ಯಾರ್ಥಿ ಸಂಘದ ಅಧ್ಯಕ್ಷ ಪ್ರೇಮ್ ಕುಮಾರ್ ಮಾತನಾಡಿ, ಮುಂದಿನ ದಿನಗಳಲ್ಲಿ ಕಾಲೇಜು ಮತ್ತು ಸಂಘದ ವಾರ್ಷಿಕೋತ್ಸವವನ್ನು ಒಟ್ಟೊಟ್ಟಿಗೆ ಆಚರಿಸಲು ಹಾಗೂ ಸಂಘದ ಕಾರ್ಯಾಲಯಕ್ಕೆ ಸ್ಥಳಾವಕಾಶವನ್ನು ಒದಗಿಲು ಆಡಳಿತ ಮಂಡಳಿ ಸಹಕರಿಸಬೇಕು ಎಂದು ವಿನಂತಿಸಿದರು.

ಪ್ರಧಾನ ಅತಿಥಿಗಳಾಗಿದ್ದ ಓಮನ್ ವಾಯುಪಡೆಯ ನಿವೃತ್ತ ಕ್ಯಾಪ್ಟನ್ ಗೋಪಾಲಕೃಷ್ಣ, ಉದ್ಯಮಿ ಜಿತೇಂದ್ರ ಶೆಟ್ಟಿ ಉದ್ಯಾವರ, ಎಸ್‌ವಿಎಸ್ ಪ.ಪೂ. ಕಾಲೇಜಿನ ಪ್ರಾಂಶುಪಾಲ ಡಾ. ಕೆ. ದಯಾನಂದ ಪೈ ಶುಭ ಹಾರೈಸಿದರು. ನಿವೃತ್ತ ಉಪನ್ಯಾಸಕ ಭಾಸ್ಕರ್ ಕಾಮತ್, ನಿವೃತ್ತ ಮುಖ್ಯ ಶಿಕ್ಷಕಿ ಜಯಲಕ್ಷ್ಮೀ ಶಾನುಭಾಗ್, ಶಿಕ್ಷಕಿ ವಿಜಯಾ ಇವರನ್ನು ಹಾಗೂ ಸಂಘದ ನಿರ್ಗಮನ ಕಾರ್ಯದರ್ಶಿ ರಾಘವೇಂದ್ರ ರಾವ್ ಇವರನ್ನು ಸನ್ಮಾನಿಸಲಾಯಿತು. ಸನ್ಮಾನಿತರ ಪರವಾಗಿ ಉಪನ್ಯಾಸಕ ಭಾಸ್ಕರ್ ಕಾಮತ್ ಮಾತನಾಡಿದರು. ಹಳೆವಿದ್ಯಾರ್ಥಿ ಸಂಘದ ಅಧ್ಯಕ್ಷ ಪ್ರೇಮ್ ಕುಮಾರ್ ಸ್ವಾಗತಿಸಿದರು, ಕಾರ್ಯದರ್ಶಿ ರಾಘವೇಂದ್ರ ರಾವ್ ವರದಿ ವಾಚಿಸಿದರು. ಕಲಾ ಕಾರ್ಯದರ್ಶಿ ಪ್ರಶಾಂತ್ ಆರ್ ಎಸ್ ಬಹುಮಾನಿತರ ಪಟ್ಟಿ ವಾಚಿಸಿದರು. ಸಂಘದ ನಿಯೋಜಿತ ಕಾರ್ಯದರ್ಶಿ ಪ್ರಭಾ ಬಿ.ಶೆಟ್ಟಿ ವಂದಿಸಿದರು. ಜತೆ ಕಾರ್ಯದರ್ಶಿ ಎನ್. ಜಿ. ಸುಕುಮಾರ್ ನಿರೂಪಿಸಿದರು ಬಳಿಕ ಹಳೆ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು, ಹಳೆವಿದ್ಯಾರ್ಥಿಗಳು ಮತ್ತು ಅತಿಥಿ ಕಲಾವಿದರ ಕೂಡುವಿಕೆಯಿಂದ ತುಳು ಹಾಸ್ಯ ನಾಟಕ "ತಪ್ಪು ಎನ್ನಡೆ "-ಉಂದು ಸಂಸಾರದ ಸರಿಗಮ, ನಾಟಕ ಪ್ರದರ್ಶನಗೊಂಡಿತು.

ಕತಾರ್ ಭಾರತೀಯ ಸಾಂಸ್ಕೃತಿಕ ಕೇಂದ್ರಕ್ಕೆ ರಾಯಭಾರ ಕಚೇರಿ ಗೌರವ



ಕುಂದಾಪುರ: ಕತಾರ್‌ನಲ್ಲಿರುವ ಭಾರತೀಯ ಸಮುದಾಯಕ್ಕೆ ನೀಡಿದ ವಿಶಿಷ್ಟ ಮತ್ತು ನಿಸ್ವಾರ್ಥ ಸೇವೆಗಾಗಿ ಭಾರತೀಯ ಸಾಂಸ್ಕೃತಿಕ ಕೇಂದ್ರ (ಐಸಿಸಿ) 2023- 2024ರ ವ್ಯವಸ್ಥಾಪಕ ಸಮಿತಿಯನ್ನು ಭಾರತದ ರಾಯಭಾರ ಕಚೇರಿಯು ಐಸಿಸಿ ಅಶೋಕ ಸಭಾಂಗಣದಲ್ಲಿ ಭಾನುವಾರ ಸನ್ಮಾನಿಸಿ ಗೌರವಿಸಿತು.

ಭಾರತೀಯ ರಾಯಭಾರ ಕಚೇರಿಯ ಕೌನ್ಸಿಲರ್ (ಚಾನ್ಸರಿ ಮತ್ತು ಕಾನ್ಸುಲರ್ ಮುಖ್ಯಸ್ಥ) ಡಾ. ವೈಭವ್ ಎ. ತಂಡಲೆ ಅವರ ಸಮ್ಮುಖದಲ್ಲಿ ಕತಾರ್‌ಗೆ ಭಾರತದ ರಾಯಭಾರಿಯಾಗಿರುವ ವಿಪುಲ್, ಸುಬ್ರಹ್ಮಣ್ಯ ಹೆಬ್ಬಾಗಿಲು ಮತ್ತು ಐಸಿಸಿ ವ್ಯವಸ್ಥಾಪಕ ಸಮಿತಿಯ ಎಲ್ಲಾ ಸದಸ್ಯರಿಗೆ ಅವರ ಕೊಡುಗೆಗಳು ಮತ್ತು ಸೇವೆಯನ್ನು ಗುರುತಿಸಿ ಮೆಚ್ಚುಗೆಯ ಪ್ರಮಾಣಪತ್ರಗಳನ್ನು ಪ್ರದಾನ ಮಾಡಲಾಯಿತು. ಕತಾರ್‌ನ ದೋಹಾದಲ್ಲಿರುವ ಭಾರತೀಯ ರಾಯಭಾರ ಕಚೇರಿಯು ಸುಬ್ರಹ್ಮಣ್ಯ ಹೆಬ್ಬಾಗಿಲು ಅವರನ್ನು ಭಾರತೀಯ ಸಾಂಸ್ಕೃತಿಕ ಕೇಂದ್ರ ದೋಹಾದ ಉಪಾಧ್ಯಕ್ಷರಾಗಿದ್ದ ಅವಧಿಯಲ್ಲಿ ಭಾರತೀಯ ಸಮುದಾಯಕ್ಕೆ ನೀಡಿದ ವಿಶಿಷ್ಟ ಮತ್ತು ನಿಸ್ವಾರ್ಥ ಸೇವೆಗಾಗಿ ಸನ್ಮಾನಿಸಿ ಗೌರವಿಸಲಾಯಿತು. ಸುಬ್ರಹ್ಮಣ್ಯ ಹೆಬ್ಬಾಗಿಲು ಅವರು ದಕ್ಷಿಣ ಕರ್ನಾಟಕದ ಬೈಂದೂರು ಮೂಲದವರು. ಕಳೆದ 2 ದಶಕಗಳಿಂದ ಕತಾರ್‌ನಲ್ಲಿ ವಾಸಿಸುತ್ತಿರುವ ಅವರು, ಐಸಿಬಿಎಫ್ ಜಂಟಿ ಕಾರ್ಯದರ್ಶಿಯಾಗಿ, ಕರ್ನಾಟಕ ಸಂಘ ಕತಾರ್‌ನ ಉಪಾಧ್ಯಕ್ಷರಾಗಿ, ಭಾರತೀಯ ಸಾಂಸ್ಕೃತಿಕ ಕೇಂದ್ರದ ಉಪಾಧ್ಯಕ್ಷರಾಗಿ ಮತ್ತು ಪ್ರಸ್ತುತ ಕರ್ನಾಟಕ ಸಂಘ ಕತಾರ್‌ನ ಅಧ್ಯಕ್ಷರಾಗಿ ಭಾರತೀಯ ಸಮುದಾಯಕ್ಕೆ ವಿವಿಧ ಹುದ್ದೆಗಳಲ್ಲಿ ಸೇವೆಯಲ್ಲಿ ಸಲ್ಲಿಸುತ್ತಾ ಸಮಾಜ ಸೇವಾ ಕೈಂಕರ್ಯಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದಾರೆ.

ಪಡುಬಿದ್ರಿ ದೇವಸ್ಥಾನಕ್ಕೆ ವಿಹಿಂಪ ಪ್ರಾಂತ್ಯಾಧ್ಯಕ್ಷ ಎಂ.ಬಿ.ಪುರಾಣಿಕ್ ಭೇಟಿ



ಪಡುಬಿದ್ರಿ: ಸಮಗ್ರ ಜೀರ್ಣೋದ್ಧಾರಗೊಂಡು ಬ್ರಹ್ಮಕಲಶೋತ್ಸವದ ಬಳಿಕ ಈಗ ವರ್ಷಾವಧಿ ಜಾತ್ರಾ ಮಹೋತ್ಸವದ ಪರ್ವ ಕಾಲದಲ್ಲಿರುವ ಪಡುಬಿದ್ರಿಯ ಶ್ರೀ ಮಹಾಲಿಂಗೇಶ್ವರ ಮಹಾಗಣಪತಿ ದೇವಸ್ಥಾನಕ್ಕೆ ವಿಹಿಂಪ ಪ್ರಾಂತ್ಯಾಧ್ಯಕ್ಷ ಹಾಗೂ ಮಂಗಳೂರಿನ ಶಾರದಾ ವಿದ್ಯಾಲಯದ ಸಂಚಾಲಕ ಎಂ.ಬಿ. ಪುರಾಣಿಕ್ ದಂಪತಿ ಭೇಟಿಯಿತ್ತರು.

ದೇಗುಲ ದರ್ಶನವನ್ನುಗೈದ ಎಂ.ಬಿ. ಪುರಾಣಿಕ್ ದಂಪತಿಗೆ ಶ್ರೀ ದೇಗುಲದ ಅರ್ಚಕ ಎಚ್. ಪದ್ಮನಾಭ ಭಟ್ ಶ್ರೀ ದೇವರ ಪ್ರಸಾದವನ್ನಿತ್ತರು.

ಸಮಗ್ರ ಅಭಿವೃದ್ಧಿಗೆ ಸಂತಸವನ್ನು ವ್ಯಕ್ತಪಡಿಸಿದ ಪುರಾಣಿಕ್, ಹಿಂದು ಧರ್ಮದ ಉನ್ನತಿಗೆ ನಮ್ಮ ಉಭಯ ಜಿಲ್ಲೆಗಳ ದೇವಸ್ಥಾನಗಳು ಪ್ರಮುಖ ಕೊಡುಗೆಯನ್ನು ನೀಡುತ್ತಿರುವುದಾಗಿಯೂ, ಪಡುಬಿದ್ರಿ ದೇಗುಲವು ಕೇವಲ 11ತಿಂಗಳುಗಳಲ್ಲಿ ಪೂರ್ಣಗೊಂಡು ಟೆಂಪಲ್ ಟೂರಿಸಂ ತಾಣವಾಗಿ ಅತ್ಯಪೂರ್ವವಾಗಿ ಪರಿವರ್ತಿತವಾಗಿದೆ ಎಂದರು.

ಅನುವಂಶಿಕ ಮೊಕ್ತೇಸರ ಪಡುಬಿದ್ರಿ ಪೇಟೆಮನೆ ಭವಾನಿಶಂಕರ ಹೆಗ್ಡೆ ಅವರು ಎಂ. ಬಿ. ಪುರಾಣಿಕ್ ಅವರನ್ನು ಗೌರವಿಸಿದರು. ದೇಗುಲದ ಕಾರ್ಯನಿರ್ವಹಣಾಧಿಕಾರಿ ಕೆ. ರಾಜಗೋಪಾಲ ಉಪಾಧ್ಯಾಯ, ವಿಹಿಂಪ ಬಜರಂಗದಳ ಉಡುಪಿ ಜಿಲ್ಲಾಧ್ಯಕ್ಷ ವಿಷ್ಣುಮೂರ್ತಿ ಆಚಾರ್ಯ ಪಾದೆಬೆಟ್ಟು, ಬ್ರಹ್ಮಕಲಶೋತ್ಸವ ಸಮಿತಿಯ ಕಾರ್ಯದರ್ಶಿ ಮುರಳೀನಾಥ ಶೆಟ್ಟಿ, ಪೇಟೆಮನೆ ಪ್ರಕಾಶ್ ಶೆಟ್ಟಿ ಮುಂಬಯಿ, ಸುನಿಲ್ ಶೆಟ್ಟಿ ಮುಂಬಯಿ, ರಮಾಕಾಂತ ರಾವ್ ಮತ್ತಿತರರಿದ್ದರು.

ಮೂಡ್ಲಕಟ್ಟೆಯ ರೈಲು ನಿಲ್ದಾಣದ ಪರಿಸರದಲ್ಲಿ ಬೃಹತ್ ಸ್ವಚ್ಛತಾ ಕಾರ್ಯ

ಕುಂದಾಪುರ: ಮೂಡ್ಲಕಟ್ಟೆಯ ರೈಲು ನಿಲ್ದಾಣದ ಪರಿಸರದಲ್ಲಿ ಕ್ಲೀನ್ ಕುಂದಾಪುರ ತಂಡದ ನೇತೃತ್ವದಲ್ಲಿ ಗೀತಾನಂದ ಫೌಂಡೇಶನ್, ಟೀಮ್ ಆನಂದದ ಸೃಷ್ಟಿ ಕಂದಾವರ ಗ್ರಾಮ ಪಂಚಾಯತ್ ಹಾಗೂ ಕಾರ್ತಿಕೇಯ ಯುವಕ ಮಂಡಲದ ಸಹಯೋಗದಲ್ಲಿ ರವಿವಾರ ಬೃಹತ್ ಸ್ವಚ್ಛತಾ ಕಾರ್ಯಕ್ರಮ ನಡೆಯಿತು.



ಈ ಸಂದರ್ಭದಲ್ಲಿ ಸುಮಾರು ನೂರಕ್ಕೂ ಮಿಕ್ಕಿ ಗೋಣಿ ಚೀಲಗಳಲ್ಲಿ ಕಸ ಸಂಗ್ರಹವಾಗಿದ್ದು ಅವುಗಳನ್ನು ವಿಲೇವಾರಿ ಮಾಡಲಾಯಿತು.

ಕೊಂಕಣ್ ರೈಲ್ವೆ ಅಧಿಕಾರಿ ಎಸ್. ಕೆ.ಭಟ್, ಕುಂದಾಪುರದ ರೈಲು ಪ್ರಯಾಣಿಕರ ಹಿತರಕ್ಷಣಾ ಸಮಿತಿ ಅಧ್ಯಕ್ಷ ಗಣೇಶ್ ಪುತ್ರನ್, ಕಂದಾವರ ಗ್ರಾಮ ಪಂಚಾಯತ್ ಪಿಡಿಒ ಸುನಿಲ್, ಕಾರ್ಯದರ್ಶಿ ಸಂಜೀವ, ಕ್ಲೀನ್ ಕುಂದಾಪುರ ಹಾಗೂ ವಿವಿಧ ಸಂಘಟನೆಗಳ ಪ್ರಮುಖರಾದ ಶಿವರಾಮ ಶೆಟ್ಟಿ, ಭರತ್ ಬಂಗೇರ, ಭಾಸ್ಕರ ಪೂಜಾರಿ, ಸರಸ್ವತಿ ಪುತ್ರನ್, ಕಲ್ಪನಾ ಭಾಸ್ಕರ್, ಅರುಣ್ ಕುಮಾರ್, ವಿವೇಕ್ ನಾಯಕ್, ನಾಗರಾಜ್ ಆಚಾರ್, ರಾಘವೇಂದ್ರ ಶೇಟ್, ಸಂತೋಷ್ ಪೂಜಾರಿ ಕೋಡಿ, ವೆಂಕಟೇಶ್, ಆಶಾ ಶೆಟ್ಟಿ, ರವಿಕಿರಣ್, ಮತ್ತಿತರರು ಸ್ವಚ್ಛತಾ ಕಾರ್ಯದಲ್ಲಿ ಭಾಗಿಯಾದರು.

'ಸ್ವಚ್ಛ ಕಡಲ ತೀರ- ಹಸಿರು ಕೋಡಿ' 46ನೇ ಅಭಿಯಾನದ ಉದ್ಘಾಟನೆ



ಕುಂದಾಪುರ: ಕಡಲು ಕೇವಲ ಮೀನುಗಳಿರುವ ಜಾಗವಲ್ಲ, ಬದಲಾಗಿ ಅದು ನಮ್ಮ ಪ್ರಪಂಚದ ಅತಿ ಮುಖ್ಯವಾದ ಆಧಾರ ಸ್ತಂಭವಾಗಿದೆ. ನಮ್ಮ ಊರಿನ ಪರಿಸರವನ್ನು ಸ್ವಚ್ಛವಾಗಿಟ್ಟುಕೊಳ್ಳುವುದು ಒಂದು ಪುಣ್ಯದ ಕೆಲಸವಾಗಿದ್ದು, ಈ ನಿಟ್ಟಿನಲ್ಲಿ ಎಲ್ಲರೂ ಕೈಜೋಡಿಸಿರುವುದು ಶ್ಲಾಘನೀಯ ಎಂದು ಬ್ಯಾರೀಸ್ ಸಮೂಹ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷ ಹಾಜಿ ಕೆ. ಎಂ. ಅಬ್ದುಲ್ ರೆಹಮಾನ್ ಬ್ಯಾರಿ ಹೇಳಿದರು.

ಕೋಡಿಯ ಬ್ಯಾರೀಸ್ ಸಮೂಹ ಶಿಕ್ಷಣ ಸಂಸ್ಥೆಗಳ ವತಿಯಿಂದ ಭಾನುವಾರ ಆಯೋಜಿಸಲಾಗಿದ್ದ 'ಸ್ವಚ್ಛ ಕಡಲ ತೀರ- ಹಸಿರು ಕೋಡಿ' ಇದರ 46ನೇ ಅಭಿಯಾನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಅಭಿಯಾನದಲ್ಲಿ ಬ್ಯಾರೀಸ್ ಸಮೂಹ ಶಿಕ್ಷಣ ಸಂಸ್ಥೆಗಳ ವಿಶ್ವಸ್ಥ ಮಂಡಳಿಯ ಸದಸ್ಯ ಡಾ. ಆಸೀಫ್ ಬ್ಯಾರಿ, ಕೋಡಿ ಶ್ರೀ ಚಕ್ರೇಶ್ವರಿ ದೇವಸ್ಥಾನದ ಧರ್ಮದರ್ಶಿ ಗೋಪಾಲ ಪೂಜಾರಿ, ಶಾಲಾಭಿವೃದ್ಧಿ ಸಮಿತಿಯ ಸದಸ್ಯರಾದ ಪ್ರಭಾಕರ್ ಶೇರಿಗಾರ್, ಅಷ್ಫಾಕ್, ಬ್ಯಾರೀಸ್ ಸಮೂಹ ಶಿಕ್ಷಣ ಸಂಸ್ಥೆಗಳ ವಿವಿಧ ವಿಭಾಗಗಳ ಪ್ರಾಂಶುಪಾಲರು, ಉಪಪ್ರಾಂಶುಪಾಲರು, ಮುಖ್ಯಸ್ಥರು, ಸಂಸ್ಥೆಯ ಬೋಧಕ - ಬೋಧಕೇತರ ಸಿಬ್ಬಂದಿ ಮತ್ತು ಸಮೂಹ ಶಿಕ್ಷಣ ಸಂಸ್ಥೆಗಳ ವಿದ್ಯಾರ್ಥಿಗಳು ಅಭಿಯಾನವನ್ನು ಯಶಸ್ವಿಗೊಳಿಸಿದರು. ಕನ್ನಡ ಉಪನ್ಯಾಸಕಿ ಸುಮನ ನಿರೂಪಿಸಿದರು.


ನಾಳೆ ವಿದ್ಯುತ್ ವ್ಯತ್ಯಯ

ಉಡುಪಿ: ಮಣಿಪಾಲ ವಿದ್ಯುತ್ ಉಪಕೇಂದ್ರದಿಂದ ಹೊರಡುವ ಇಂದ್ರಾಳಿ, ಮೂಡುಬೆಳ್ಳೆ ಫೀಡರ್ ಮಾರ್ಗದಲ್ಲಿ ಹಾಗೂ ಹಿರಿಯಡ್ಕ ಫೀಡರ್ ಮಾರ್ಗದಲ್ಲಿ ನಿರ್ವಹಣೆ ಕಾಮಗಾರಿಯನ್ನು ಹಮ್ಮಿಕೊಂಡಿರುವುದರಿಂದ ಹಯಗ್ರೀವನಗರ, ಲಕ್ಷ್ಮೀಂದ್ರನಗರ, ಇಂದ್ರಾಳಿ ರೈಲ್ವೆ ನಿಲ್ದಾಣ, ಮಣಿಪುರ, ಮೂಡುಬೆಳ್ಳೆ, ಮರ್ಣೆ, ಕಟ್ಟಿಂಗೇರಿ, ಕೆಮ್ಮೂರು, ಪುತ್ತಿಗೆ ಪಕ್ಕಾಲು, ಪೆರ್ಡೂರು ಪೇಟೆ, ಮುತ್ತೂರ್ಮೆ, ಕುಕ್ಕೆಹಳ್ಳಿ, ಪಾಡಿಗಾರ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಮೇ 12ರಂದು ಬೆಳಿಗ್ಗೆ 9ರಿಂದ ಸಂಜೆ 5ರವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗುತ್ತದೆ ಎಂದು ಪ್ರಕಟಣೆ ತಿಳಿಸಿದೆ.

ಚರಂಡಿ ನಿರ್ಮಾಣ ಮಾಡದ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ | ನಾಗರಿಕರ ಆತಂಕ

ಹೆದ್ದಾರಿಯಿಂದ ಮನೆ ಅಂಗಳಕ್ಕೆ ನುಗ್ಗುತ್ತಿದೆ ಮಳೆ ನೀರು!

ಕಾರ್ಕಳ: ಕಳೆದ ಮೂರು ವರ್ಷಗಳಿಂದ ಸಾಣೂರು ಗ್ರಾಮ ಪಂಚಾಯತ್ ವ್ಯಾಪ್ತಿಯ ಹೆದ್ದಾರಿ ಕಾಮಗಾರಿ ಸಂದರ್ಭದಲ್ಲಿ ರಸ್ತೆ ನಿರ್ಮಾಣವಾದರೂ ರಸ್ತೆಯ ಬದಿಯಲ್ಲಿ ಮಳೆ ನೀರು ಹರಿಯಲು ಸೂಕ್ತ ವ್ಯವಸ್ಥೆ ಮಾಡಿಲ್ಲ. ಮಳೆ ನೀರು ತಗ್ಗು ಪ್ರದೇಶಗಳಿಗೆ ಹರಿದು ಮನೆ ಮತ್ತು ಅಂಗಡಿಗಳಿಗೆ ಹಾನಿ ಮಾಡುತ್ತಿರುವುದು ಪ್ರತಿ ವರ್ಷ ಮಳೆಗಾಲದಲ್ಲಿ ಮಾಧ್ಯಮಗಳಲ್ಲಿ ವರದಿಯಾಗುತ್ತಿದೆ.



ಈ ಬಗ್ಗೆ ಸಾರ್ವಜನಿಕರು ಹಲವಾರು ಬಾರಿ ಹೆದ್ದಾರಿ ಇಲಾಖೆ ಗುತ್ತಿಗೆದಾರರು ಮತ್ತು ಜನಪ್ರತಿನಿಧಿಗಳ ಗಮನ ಸೆಳೆದರೂ ಯಾವುದೇ ಬದಲಾವಣೆಯಾಗಿಲ್ಲ.

ಸಾಣೂರು ತೋಮಸ್ ಡಿ. ಸಿಲ್ವಾ ರವರ ಅಂಗಡಿ ಮುಂಭಾಗದ ಹೆದ್ದಾರಿ ಬದಿಯಲ್ಲಿ ಸಾಣೂರು ಸೇತುವೆವರೆಗೆ ಸರಿಯಾದ ಚರಂಡಿ ವ್ಯವಸ್ಥೆ ಇಲ್ಲದ ಕಾರಣ ಮಳೆ ನೀರು ರಸ್ತೆಯಲ್ಲಿ ಹರಿದು ಸಾಣೂರು ಸೇತುವೆ ಬಳಿ ನಿವಾಸಿ ಮೋಹನ್ ಶೆಟ್ಟಿ ಇವರ ಅಂಗಳಕ್ಕೆ ಸೇರುತ್ತಿದೆ.

> **ಕೂಡಲೇ ಸೂಕ್ತ ಕ್ರಮಕೈಗೊಳ್ಳಿ**
>
> **ಕೂಡಲೇ ಹೆದ್ದಾರಿ ಪ್ರಾಧಿಕಾರ ಎಚ್ಚೆತ್ತು, ಮಳೆ ನೀರಿನಿಂದ ಹಾನಿಗೊಳಗಾಗುತ್ತಿರುವ ಪ್ರದೇಶಗಳನ್ನು ಗುರುತಿಸಿ ಮಳೆ ನೀರು ಸರಿಯಾಗಿ ಹರಿದು ಹೋಗಲು ಸೂಕ್ತ ಚರಂಡಿ ವ್ಯವಸ್ಥೆಯನ್ನು ಕೂಡಲೇ ನಿರ್ಮಾಣ ಮಾಡಿಕೊಡಬೇಕು.**
>
> ● **ಸಾಣೂರು ಮೋಹನ ಶೆಟ್ಟಿ**, ಸಾಮಾಜಿಕ ಕಾರ್ಯಕರ್ತ

ರಾಷ್ಟ್ರೀಯ ಹೆದ್ದಾರಿ ಕಾಮಗಾರಿ ಆರಂಭಗೊಂಡ ಮಳೆಗಾಲದಿಂದಲೂ ಈ ಸಮಸ್ಯೆ ನಿರಂತರ ಬಾಧಿಸುತ್ತಿದೆ. ಸಾಣೂರು ಮೋಹನ್ ಶೆಟ್ಟಿಯವರು ಮನೆಗೆ ತೆರಳುವ ರಸ್ತೆಯನ್ನು ಸ್ವಂತ ಖರ್ಚಿನಿಂದ ಮಣ್ಣು ಹಾಕಿ ಸರಿಪಡಿಸಿದ್ದರು. ಅವೈಜ್ಞಾನಿಕ ರಾಷ್ಟ್ರೀಯ ಹೆದ್ದಾರಿ ಕಾಮಗಾರಿಯಿಂದ ಸರಿಯಾದ ಚರಂಡಿ ವ್ಯವಸ್ಥೆ ಇಲ್ಲದೆ ಇದ್ದುದರಿಂದ ಮಳೆ ನೀರು ಹರಿದು ರಸ್ತೆ ಮತ್ತು ಅಂಗಳ ಸಂಪೂರ್ಣ ಹಾನಿಗೊಂಡಿದೆ.

ಮೇ ತಿಂಗಳಲ್ಲಿ ಒಂದೆರಡು ಮಳೆ ಸುರಿದಿದೆ ಅಷ್ಟೇ. ಈಗಾಗಲೇ ಹೆದ್ದಾರಿ ಬದಿ ನೀರು ನೇರವಾಗಿ ಮನೆ ಅಂಗಳ ಸೇರುತಿದೆ. ಮುಂದಿನ ಒಂದೆರಡು ವಾರಗಳಲ್ಲಿ ಮುಂಗಾರು ಮಳೆ ಪ್ರಾರಂಭವಾಗಿ ಧಾರಾಕಾರವಾಗಿ ಮಳೆ ಸುರಿದಾಗ ಮಳೆ ನೀರು ಅಂಗಳ ಮತ್ತು ಮನೆಗೆ ನುಗ್ಗಿ ಅಪಾರ ಹಾನಿ ಸಂಭವಿಸುವ ಸಾಧ್ಯತೆ ಇದೆ.

ಕಾಸರಗೋಡು ಉಕ್ಕಿನಡ್ಕ ನರ್ಸಿಂಗ್ ಕಾಲೇಜು ವಿದ್ಯಾರ್ಥಿಗಳಿಂದ ಬೃಹತ್ ಪ್ರತಿಭಟನೆ
ಮೆಡಿಕಲ್ ಕಾಲೇಜಿಗೆ ಮೂಲ ಸೌಲಭ್ಯ ಕಲ್ಪಿಸಲು ಆಗ್ರಹ

ಕಾಸರಗೋಡು: ನರ್ಸಿಂಗ್ ಕಾಲೇಜು ವಿದ್ಯಾರ್ಥಿಗಳು ಮೆಡಿಕಲ್ ಕಾಲೇಜಿನ ಸೌಲಭ್ಯಗಳನ್ನು ಬಳಸುವಂತೆ ಕೇರಳ ಸರಕಾರವು ಸೂಚಿಸಿದೆ. ಅದರಂತೆ ರಾಜ್ಯದ ಇತರ ಜಿಲ್ಲೆಗಳ ಮೆಡಿಕಲ್ ಕಾಲೇಜುಗಳಲ್ಲಿ ನರ್ಸಿಂಗ್ ವಿದ್ಯಾರ್ಥಿಗಳಿಗೆ ಹಾಸ್ಟೆಲ್ ಸೌಕರ್ಯ ಒದಗಿಸಲಾಗಿದೆ. ಆದರೆ ಕಾಸರಗೋಡಿನ ಉಕ್ಕಿನಡ್ಕದಲ್ಲಿ ಮಾತ್ರ ಈ ಸೌಲಭ್ಯ ನೀಡುತ್ತಿಲ್ಲ ಎಂದು ಉಕ್ಕಿನಡ್ಕದ ಕಾಸರಗೋಡು ನರ್ಸಿಂಗ್ ಕಾಲೇಜು ವಿದ್ಯಾರ್ಥಿಗಳು ಪ್ರಶ್ನಿಸಿದ್ದಾರೆ.

ಉಕ್ಕಿನಡ್ಕದ ಮೆಡಿಕಲ್ ಕಾಲೇಜು ವಿದ್ಯಾರ್ಥಿಗಳಿಗೆ ನೀಡಲಾದ ಎಲ್ಲಾ ಮೂಲಭೂತ ಸೌಕರ್ಯಗಳನ್ನು ತಮಗೂ ಒದಗಿಸುವಂತೆ ಆಗ್ರಹಿಸಿ ನರ್ಸಿಂಗ್ ಕಾಲೇಜು ವಿದ್ಯಾರ್ಥಿಗಳು ಉಕ್ಕಿನಡ್ಕದಲ್ಲಿ ಬೃಹತ್ ಸೂಚನಾ ಪ್ರತಿಭಟನೆ ನಡೆಸಿ ಸಮಗ್ರ ನ್ಯಾಯ ಒದಗಿಸುವಂತೆ ಸಂಬಂಧಪಟ್ಟವರನ್ನು ಆಗ್ರಹಿಸಿದರು.

ಮೂರು ವರ್ಷಗಳ ಹಿಂದೆ ನರ್ಸಿಂಗ್ ಕಾಲೇಜು ತರಗತಿಗಳು ಆರಂಭವಾದರೂ ವಸತಿ ಸಹಿತ ಇನ್ನಿತರ ಸೌಲಭ್ಯಗಳನ್ನು ಒದಗಿಸಲಾಗಿಲ್ಲ. ಇದೀಗ ಅಂತಾರಾಜ್ಯ ಹೆದ್ದಾರಿ ಪರಿಸರದ ಖಾಸಗಿ



ಕ್ವಾರ್ಟರ್ಸ್‌ಗಳಲ್ಲಿ ಒಂಟಿಯಾಗಿ ವಾಸಿಸುವ ವಿದ್ಯಾರ್ಥಿನಿಯರಿಗೆ ಭದ್ರತಾ ಸಮಸ್ಯೆಯೂ ಕಾಡುತ್ತಿದೆ. ಅಲ್ಲದೆ ನರ್ಸಿಂಗ್ ಕಾಲೇಜಿನಲ್ಲಿ 18 ಮಂದಿ ಪ್ರಾಧ್ಯಾಪಕರ ಅಗತ್ಯವಿದ್ದರೂ ಕೇವಲ 4 ಮಂದಿ ಪ್ರಾಧ್ಯಾಪಕರನ್ನು ನೇಮಿಸಲಾಗಿದೆ. ಹಾಸ್ಟೆಲ್ ಇಲ್ಲದ ಕಾರಣ ಪ್ರಾಧ್ಯಾಪಕರು ವಿದ್ಯಾರ್ಥಿಗಳನ್ನು ನೇರವಾಗಿ ಭೇಟಿ ಮಾಡಿ ಸಮಸ್ಯೆಗಳನ್ನು ಪರಿಸಹರಿಸಲು ಸಾಧ್ಯವಾಗುತ್ತಿಲ್ಲ ಎಂದು ನರ್ಸಿಂಗ್

- ಮೂರು ವರ್ಷಗಳ ಹಿಂದೆ ನರ್ಸಿಂಗ್ ಕಾಲೇಜು ತರಗತಿಗಳು ಆರಂಭವಾದರೂ ವಸತಿ ಸಹಿತ ಯಾವುದೇ ಸೌಲಭ್ಯಗಳೂ ಇಲ್ಲ
- ಮೆಡಿಕಲ್ ಕಾಲೇಜು ಕಟ್ಟಡ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಹಾವು ಸಹಿತ ವಿಷಜಂತುಗಳು, ಕಾಡುಪ್ರಾಣಿಗಳ ಹಾವಳಿ ಹೆಚ್ಚಳದಿಂದ ಸಮಸ್ಯೆ

ಕಾಲೇಜು ವಿದ್ಯಾರ್ಥಿಗಳು ಪ್ರತಿಭಟನೆ ಸಂದರ್ಭದಲ್ಲಿ ನೋವು ತೋಡಿಕೊಂಡಿದ್ದಾರೆ.

ಮೆಡಿಕಲ್ ಕಾಲೇಜು ಕಟ್ಟಡ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಹಾವು ಸಹಿತ ವಿಷಜಂತುಗಳು, ಕಾಡುಪ್ರಾಣಿಗಳ ಭಯ ಆವರಿಸಿದೆ. ಈ ಭಾಗದಲ್ಲಿ ಪದೇ ಪದೇ ಉರಗಗಳು ಪ್ರತ್ಯಕ್ಷಗೊಳ್ಳುತ್ತವೆ. ಜೊತೆಗೆ ಕಾಡುಹಂದಿ ಸೇರಿದಂತೆ ವಿವಿಧ ಕಾಡುಪ್ರಾಣಿಗಳು ಗೋಚರಿಸುತ್ತವೆ. ಹಾಸ್ಟೆಲ್ ಸೌಲಭ್ಯ ಇಲ್ಲದ ಕಾರಣ ಆಹಾರ ವಸ್ತುಗಳ ಖರೀದಿಗೆ ಹೊರ ಹೋಗುವ ವಿದ್ಯಾರ್ಥಿಗಳಿಗೆ ಹಾವು ಕಡಿತಕ್ಕೊಳಗಾದ ಉದಾಹರಣೆಗಳಿವೆ ಎಂದು ವಿದ್ಯಾರ್ಥಿಗಳು ಆರೋಪಿಸಿದ್ದಾರೆ.

ಕಾಸರಗೋಡು ಮೆಡಿಕಲ್ ಕಾಲೇಜಿನ ಹೊಸ ವಿದ್ಯಾರ್ಥಿ ನಿಲಯವನ್ನು ಉದ್ಘಾಟಿಸುವ ನಿಟ್ಟಿನಲ್ಲಿ ಪ್ರಾಥಮಿಕ ಚಟುವಟಿಕೆಗಳು ನಡೆಯುತ್ತಿವೆ. ಈ ವಿದ್ಯಾರ್ಥಿ ನಿಲಯಕ್ಕೆ ತಮ್ಮನ್ನು ಪರಿಗಣಿಸದಿದ್ದರೆ ಅಧ್ಯಯನವನ್ನು ಸ್ಥಗಿತಗೊಳಿಸಿ ಅನಿರ್ದಿಷ್ಟಾವಧಿ ಪ್ರತಿಭಟನಾ ಮುಷ್ಕರ ನಡೆಸುವುದಾಗಿ ನರ್ಸಿಂಗ್ ವಿದ್ಯಾರ್ಥಿಗಳ ಜಂಟಿ ಮುಷ್ಕರ ಸಮಿತಿ ಪದಾಧಿಕಾರಿಗಳು ಘೋಷಿಸಿದ್ದಾರೆ.

ಕಾಲೇಜು ಯೂನಿಯನ್ ಅಧ್ಯಕ್ಷ ಜಿತಿನ್ ಸಜಿ, ಕೇರಳ ಬಿಎಸ್‌ಸಿ ನರ್ಸಿಂಗ್ ಸ್ಟೂಡೆಂಟ್ಸ್ ಅಸೋಸಿಯೇಶನ್ (ಕೆಬಿಎಸ್‌ಎಸ್‌ಎ) ಅಧ್ಯಕ್ಷ ಅಮ್ಜದ್ ಅಲಿ ಖಾನ್, ಕಾರ್ಯದರ್ಶಿ ಹಾನಿಯಾ, ಕೋಶಾಧಿಕಾರಿ ಅದೀನ, ಸ್ಟೂಡೆಂಟ್ ನರ್ಸಸ್ ಅಸೋಸಿಯೇಶನ್ (ಎಸ್‌ಎನ್‌ಎ) ಅಧ್ಯಕ್ಷ ಆದಿತ್ಯನ್ ಎಸ್.ಕುಮಾರ್, ಕಾರ್ಯದರ್ಶಿ ಸಾಂದ್ರಾ ಮತ್ತಿತರರು ಮಾತನಾಡಿದರು.

ಕಾಸರಗೋಡು ನರ್ಸಿಂಗ್ ವಿದ್ಯಾರ್ಥಿಗಳ ಕಡೆಗಣನೆ

ಉಕ್ಕಿನಡ್ಕದಲ್ಲಿರುವ ಕಾಸರಗೋಡು ನರ್ಸಿಂಗ್ ವಿದ್ಯಾರ್ಥಿಗಳನ್ನು ಯಾವ ಕಾರಣಕ್ಕೆ ಕಡೆಗಣಿಸಲಾಗುತ್ತಿದೆ ಎಂಬ ಕುರಿತು ಅಧಿಕಾರಿಗಳು ಸ್ಪಷ್ಟಪಡಿಸಬೇಕಾಗಿದೆ. ಇತ್ತೀಚೆಗೆ ಕಾಸರಗೋಡು ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ಅವರು ಕಾಲೇಜಿಗೆ ಭೇಟಿ ನೀಡಿದ್ದ ಸಂದರ್ಭದಲ್ಲೂ ನರ್ಸಿಂಗ್ ಕಾಲೇಜು ವಿದ್ಯಾರ್ಥಿಗಳ ಬೇಡಿಕೆಗಳನ್ನು ಪರಿಗಣಿಸುವುದಾಗಿ ಭರವಸೆ ನೀಡಿದ್ದರು. ಆದರೆ ಸಂಬಂಧಪಟ್ಟ ಅಧಿಕಾರಿಗಳು ಮಾತ್ರ ಈ ವಿಷಯದಲ್ಲಿ ಪೂರಕ ದೃಢ ನಿರ್ಧಾರವನ್ನು ತಳೆಯಬೇಕಾಗಿದೆ. ಇಲ್ಲದಿದ್ದಲ್ಲಿ ನರ್ಸಿಂಗ್ ವಿದ್ಯಾರ್ಥಿಗಳು ತರಗತಿಗಳನ್ನು ಬಹಿಷ್ಕರಿಸಿ ಪ್ರತಿಭಟನೆ ನಡೆಸಲಾಗುವುದು ಎಂದು ಎಚ್ಚರಿಕೆ ನೀಡಿದ್ದಾರೆ.

ಸುತ್ತಮುತ್ತ

ಮೇ 12ರಂದು ನೆಲ್ಲಿಕುಂಜೆ ದೇಗುಲಕ್ಕೆ ಶೃಂಗೇರಿ ಶ್ರೀ ಭೇಟಿ

ಪೆರ್ಲ: ನೆಲ್ಲಿಕುಂಜೆ ಶ್ರೀ ವಿಷ್ಣುಮೂರ್ತಿ ದೇವಸ್ಥಾನಕ್ಕೆ ವೈಶಾಖ ಕೃಷ್ಣ ದಶಮಿ ದಿನವಾದ ಮೇ 12ರಂದು ಶ್ರೀ ಜಗದ್ಗುರು ಶಂಕರಾಚಾರ್ಯ ಮಹಾಸಂಸ್ಥಾನ ದಕ್ಷಿಣಾಮ್ನಾಯ ಶ್ರೀ ಶೃಂಗೇರಿ ಶಾರದಾ ಪೀಠಾಧೀಶ್ವರ ಜಗದ್ಗುರು ಶ್ರೀ ಭಾರತೀ ತೀರ್ಥ ಮಹಾ ಸನ್ನಿಧಾನಂಗಳವರ ಕರಕಮಲ ಸಂಜಾತರಾದ ಜಗದ್ಗುರು ಶ್ರೀ ವಿಧುಶೇಖರ ಭಾರತೀ ಸ್ವಾಮೀಜಿ ಅವರು ಆಗಮಿಸಲಿದ್ದಾರೆ.

ಈ ಪ್ರಯುಕ್ತ ಗುರುಗಳ ಆಗಮನ ಕಾಲಕ್ಕೆ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಸಂಜೆ 4 ಗಂಟೆಗೆ ಗುರುಗಳ ಆಗಮನ, ದೇವಸ್ಥಾನದಲ್ಲಿ ಪೂರ್ಣಕುಂಭ ಸ್ವಾಗತ, ಹಾರ ಹಾಗೂ ಫಲ ಸಮರ್ಪಣೆ, ಸುಮಂಗಲಿಯರಿಂದ ಆರತಿ, ದೇವಸ್ಥಾನದ ಒಳಗೆ ಪ್ರದಕ್ಷಿಣೆ ಬಂದ ಮೇಲೆ ಅರ್ಚಕರಿಂದ ದೇವರಿಗೆ ಆರತಿ, ಗುರುಗಳಿಗೆ ಧೂಳೀಪಾದ ಪೂಜೆ ಇತ್ಯಾದಿ ನೆರವೇರಲಿದೆ. ಇದೇ ಸಂದರ್ಭ ನಡೆಯುವ ಸಭಾ ಕಾರ್ಯಕ್ರಮದಲ್ಲಿ ಶ್ರೀ ಗುರುಗಳು ಆಶೀರ್ವಚನ ನೀಡಲಿದ್ದಾರೆ. ನಂತರ ಗುರುಗಳಿಗೆ ಬೀಳ್ಕೊಡುಗೆ ಕಾರ್ಯಕ್ರಮ ಜರಗಲಿದೆ.

ಉಣುಪ್ಪುಂಕಲ್ಲು ರಸ್ತೆ ಡಾಮರೀಕರಣ ನಡೆದಿಲ್ಲ: ಡೀಸಿಗೆ ದೂರು

ಕಾಸರಗೋಡು: ರೀಬಿಲ್ಡ್ ಕೇರಳ ಯೋಜನೆಯಡಿ 5 ಕೋಟಿ ರೂ. ವೆಚ್ಚದಲ್ಲಿ ಉಣುಪ್ಪುಂಕಲ್ಲು – ಮುಳ್ಳಂಗೋಡಿನಲ್ಲಿ 1.8 ಕಿಲೋ. ಮೀಟರ್ ಉದ್ದದ 10 ಮೀಟರ್ ಅಗಲದ ರಸ್ತೆ ಅಭಿವೃದ್ಧಿ ಪಡಿಸಲು ಯೋಜನೆ ಸಿದ್ಧಪಡಿಸಲಾಗಿದ್ದು, ಮೂರು ವರ್ಷ ಕಳೆದರೂ ಡಾಮರೀಕರಣ ನಡೆಸದ ಕಾರಣ ಜನರು ತೀವ್ರ ತೊಂದರೆ ಅನುಭವಿಸುವಂತಾಗಿದೆ.

ಈ ಮಧ್ಯೆ ಹಲವಾರು ಪ್ರತಿಭಟನೆಗಳು ನಡೆಸಿದರೂ ಯಾವುದೇ ಪ್ರಯೋಜನವಾಗಲಿಲ್ಲ. ಜನರ ನೋವನ್ನು ಮನಗಂಡು ಕುಂಡುಚ್ಚಿ ಯಂಗ್ ಬ್ರದರ್ಸ್ ಕ್ಲಬ್‌ನ ಪದಾಧಿಕಾರಿಗಳು ಜಿಲ್ಲಾಧಿಕಾರಿಯವರಿಗೆ ದೂರು ನೀಡಲಾಗಿದೆ. ಜಿಲ್ಲಾಧಿಕಾರಿಗಳು ರೀಬಿಲ್ಡ್ ಕೇರಳ ಇನಿಶಿಯೇಟಿವ್ ಪ್ರಾಜೆಕ್ಟ್‌ನ ಇಂಪ್ಲಿಮೆಂಟೇಶನ್ ಯೂನಿಟ್‌ನ ಜಿಲ್ಲಾ ಮುಖ್ಯಸ್ಥರೂ ಆಗಿದ್ದಾರೆ. ದೂರನ್ನು ರಾಜ್ಯ ಯೋಜನಾ ನಿರ್ದೇಶಕರಿಗೂ ಕಳುಹಿಸಲಾಗಿದೆ ಎಂದು ಕ್ಲಬ್ ಪದಾಧಿಕಾರಿಗಳು ತಿಳಿಸಿದ್ದಾರೆ.

ಪದಾಧಿಕಾರಿಗಳ ಆಯ್ಕೆ





ಕಾಸರಗೋಡು: ಭಾರತೀಯ ಮಜ್ದೂರ್ ಸಂಘ (ಬಿಎಂಎಸ್)ದ ಅಂಗಸಂಸ್ಥೆಯಾದ ಪೆಟ್ರೋಲಿಯಂ ಮತ್ತು ಗ್ಯಾಸ್ ಮಜ್ದೂರ್ ಸಂಘದ ಕಾಸರಗೋಡು ಜಿಲ್ಲಾ ಸಮಿತಿಯ ನೂತನ ಪದಾಧಿಕಾರಿಗಳನ್ನು ಆರಿಸಲಾಗಿದೆ. ಅಧ್ಯಕ್ಷರಾಗಿ ಕೆ.ವಿ.ಬಾಬು ಮತ್ತು ಪ್ರಧಾನ ಕಾರ್ಯದರ್ಶಿಯಾಗಿ ಶ್ರೀಧರ ಚೇನಕ್ಕೋಡು ಅವರನ್ನು ಆಯ್ಕೆ ಮಾಡಲಾಯಿತು.

ಜ್ಯೂನಿಯರ್ ಗೋಲ್ ಶಾಟ್‌ಬಾಲ್‌ನಲ್ಲಿ ಸಾಧನೆ: ಖದೀಜಗೆ ಸ್ವಾಗತ

ಕಾಸರಗೋಡು: ಶ್ರೀಲಂಕಾದಲ್ಲಿ ನಡೆದ ಏಷ್ಯಾಕಪ್ ಜ್ಯೂನಿಯರ್ ಗೋಲ್ ಶಾಟ್‌ಬಾಲ್ ಚಾಂಪಿಯನ್‌ಶಿಪ್‌ನಲ್ಲಿ ಭಾರತೀಯ ತಂಡಕ್ಕಾಗಿ ಅತ್ಯುತ್ತಮ ಪ್ರದರ್ಶನ ನೀಡಿ ತಂಡವು ಜಯ ಗಳಿಸುವಲ್ಲಿ ನಿರ್ಣಾಯಕ ಪಾತ್ರ ವಹಿಸಿದ್ದ ಖದೀಜ ಸಾಖಿಯಾ ಅವರನ್ನು ಕಾಸರಗೋಡು ರೈಲು ನಿಲ್ದಾಣದಲ್ಲಿ ಸ್ವಾಗತಿಸಿ ಬರಮಾಡಿಕೊಳ್ಳಲಾಯಿತು.

ಕಾಸರಗೋಡು ನಗರಸಭಾ ಅಧ್ಯಕ್ಷೆ ಶಾಹಿನಾ ಸಲೀಂ, ಉಪಾಧ್ಯಕ್ಷ ಕೆ.ಎಂ.ಹನೀಫ್, ಎ.ಅಬ್ದುಲ್ ರಹಮಾನ್, ಸಮಿನ ಮುಜೀಬ್, ಜಾಫರ್ ಕಮಾಲ್, ವಿದ್ಯಾಶ್ರೀ, ಸುಮಯ್ಯ ಅಶ್ರಫ್, ಸಹೀರ್, ಆಸಿಫ್, ಖಾಲಿದ್ ಪಚ್ಚಕ್ಕಾಡು, ಜಲೀಲ್ ಕೊಲ್ಲಂಪಾಡಿ ಮುಂತಾದವರು ಉಪಸ್ಥಿತರಿದ್ದರು.

ಅಂಗನವಾಡಿ ಶಿಕ್ಷಕಿಗೆ ಬೀಳ್ಕೊಡುಗೆ

ಕಾಸರಗೋಡು: ನಾಲ್ಕು ದಶಕಗಳ ಕಾಲ ಕಳನಾಡು ವಾಣಿಯರ್‌ಮೂಲೆ ಅಂಗನವಾಡಿ ಶಿಕ್ಷಕಿಯಾಗಿ ಸೇವೆ ಸಲ್ಲಿಸಿ ನಿವೃತ್ತರಾದ ಬಾಲಮಣಿ ಟೀಚರ್ ಅವರಿಗೆ ನಾಗರಿಕರು ಬೀಳ್ಕೊಡುಗೆ ಸಮಾರಂಭವನ್ನು ಏರ್ಪಡಿಸಿದ್ದರು. 40 ವರ್ಷಗಳ ಹಿಂದೆ ಬಾಡಿಗೆ ಕೊಠಡಿಯಲ್ಲಿ ಆರಂಭಿಸಿದ ಈ ಅಂಗನವಾಡಿಯನ್ನು ಇಂದು ಅತ್ಯುತ್ತಮ ಕಟ್ಟಡದಲ್ಲಿ ಕಾರ್ಯಾಚರಿಸುವಲ್ಲಿ ಬಾಲಾಮಣಿ ಅವರು ನಿರ್ಣಾಯಕ ಪಾತ್ರ ವಹಿಸಿರುವುದನ್ನು ಸ್ಮರಿಸಲಾಯಿತು. ಅಂಗನವಾಡಿ ಶಿಕ್ಷಕಿ ಮಾತ್ರವಲ್ಲದೆ ಬೂತ್ ಮಟ್ಟದ ಅಧಿಕಾರಿ (ಬಿಎಲ್‌ಒ) ಆಗಿಯೂ ಅವರು ಉತ್ತಮ ಕಾರ್ಯನಿರ್ವಹಿಸಿದ್ದಾರೆ. ಬೀಳ್ಕೊಡುಗೆ ಕಾರ್ಯಕ್ರಮದ ಅಂಗವಾಗಿ ಮೆರವಣಿಗೆ, ಸಾರ್ವಜನಿಕ ಸಮ್ಮೇಳನ ನಡೆಯಿತು.

ಚೆಮ್ನಾಡು ಗ್ರಾ.ಪಂ. ಅಧ್ಯಕ್ಷೆ ಆಯಿಷಾ ಅಬೂಬಕ್ಕರ್ ಉದ್ಘಾಟಿಸಿದರು. ವಾರ್ಡ್ ಸದಸ್ಯ ಹಸನ್ ಕುಟ್ಟಿ ಅಧ್ಯಕ್ಷತೆ ವಹಿಸಿದ್ದರು. ಕೆ.ಕೃಷ್ಣನ್ ಕುಟ್ಟಿ, ಪಂಚಾಯತ್ ಉಪಾಧ್ಯಕ್ಷ ದಿಲೀಪ್ ಕುಮಾರ್, ಶಂಸುದ್ದೀನ್ ತೆಕ್ಕಿಲ್, ಸಕೀನ ನಜೀಬ್, ರಮಾ ಪೆರುಂಬಳ, ಮಿನಿ ಪೊಯನಾಚಿ, ಫೌಸಿಯ, ಜಾನಕಿ ಮಾಂಗಾಡ್, ಅಬ್ದುಲ್ ರಹಮಾನ್ ಕಳನಾಡು, ಸೂಪರ್‌ವೈಸರ್ ಸಾಜಿದ ಮಾತನಾಡಿದರು.

ವಿಜಯೋತ್ಸವ ಮೆರವಣಿಗೆ

ಕಾಸರಗೋಡು: ರಾಜ್ಯದಲ್ಲಿ ಯುಡಿಎಫ್ ಗೆಲುವಿಗೆ ಹರ್ಷ ವ್ಯಕ್ತಪಡಿಸಿ ಕೇರಳ ಗಜೆಟೆಡ್ ಆಫೀಸರ್ಸ್ ಯೂನಿಯನ್‌ನ ಕಾಸರಗೋಡು ಜಿಲ್ಲಾ ಸಮಿತಿ ವತಿಯಿಂದ ವಿದ್ಯಾನಗರದ ಸಿವಿಲ್ ಸ್ಟೇಷನ್ ಪರಿಸರ ದಲ್ಲಿ ವಿಜಯೋತ್ಸವ ಮೆರವಣಿಗೆ ಆಚರಿಸಲಾಯಿತು. ಸಂಘಟನೆ ಜಿಲ್ಲಾ ಅಧ್ಯಕ್ಷ ಡಾ.ಕೆ.ವಿ.ಪ್ರಮೋದ್ ಅಧ್ಯಕ್ಷತೆ ವಹಿಸಿದ್ದರು.

ಶಿಕ್ಷಣ ಇಲಾಖೆಯನ್ನು ಕಾಂಗ್ರೆಸ್‌ಗೆ ಬಿಟ್ಟುಕೊಡಲು ಮುಸ್ಲಿಂಲೀಗ್ ನಿರ್ಧಾರ



ಕಾಸರಗೋಡು: ಕೇರಳದಲ್ಲಿ ಈ ಹಿಂದೆ ಐಕ್ಯರಂಗ ಸರಕಾರವು ಅಧಿಕಾರಕ್ಕೇರಿದಾಗಲೆಲ್ಲಾ ಶಿಕ್ಷಣ ಖಾತೆಯನ್ನು ಮುಸ್ಲಿಂಲೀಗ್‌ಗೆ ನೀಡಲಾಗುತ್ತಿತ್ತು. ಆದರೆ ಶಿಕ್ಷಣ ಇಲಾಖೆಯನ್ನು ಶಾಶ್ವತವಾಗಿ ಮುಸ್ಲಿಂಲೀಗ್‌ಗೆ ವಹಿಸಿಕೊಡುವ ಹಾಗೂ ಆ ಖಾತೆಯನ್ನು ಮತೀಯವಾದದಡಿ ನಿರ್ವಹಿಸುವ ವಿಚಾರದಲ್ಲಿ ಮುಸ್ಲಿಂಲೀಗ್ ಅನುಸರಿಸುತ್ತಿರುವ ಧೋರಣೆಯ ಬಗ್ಗೆ ಇತ್ತೀಚೆಗಿನಿಂದ ಕೇಳಿಬರುತ್ತಿರುವ ವಿವಾದಗಳ ಹಿನ್ನೆಲೆಯಲ್ಲಿ ಆ ಖಾತೆಯನ್ನು ಕಾಂಗ್ರೆಸ್‌ಗೆ ಬಿಟ್ಟುಕೊಡಲು ಮುಸ್ಲಿಂಲೀಗ್ ತೀರ್ಮಾನಿಸಿರುವುದಾಗಿ ತಿಳಿದುಬಂದಿದೆ.

ಕೈಗಾರಿಕೆ, ಲೋಕೋಪಯೋಗಿ, ಸ್ಥಳೀಯಾಡಳಿತ ಇಲಾಖೆಗಳು ಸಾಮಾನ್ಯವಾಗಿ ಯುಡಿಎಫ್ ಸರಕಾರದ ಅವಧಿಯಲ್ಲಿ ಮುಸ್ಲಿಂಲೀಗ್‌ಗೆ ಲಭಿಸುತ್ತದೆ. ಇದೇ ಖಾತೆಗಳು ಮುಂದಿನ ಸಚಿವ ಸಂಪುಟದಲ್ಲಿ ದೊರಕುವ ನಿರೀಕ್ಷೆಯನ್ನು ಮುಸ್ಲಿಂಲೀಗ್ ಹೊಂದಿದೆ. ಈ ಬಾರಿ ಶಿಕ್ಷಣ ಖಾತೆಯನ್ನು ಮುಸ್ಲಿಂಲೀಗ್ ಬೇಡ ಎಂದಲ್ಲಿ ಅದಕ್ಕೆ ಪರ್ಯಾಯವಾಗಿ ಯಾವ ಖಾತೆ ನೀಡಬೇಕು ಎಂಬುದನ್ನು ಕಾಂಗ್ರೆಸ್ ಪಕ್ಷವು ತೀರ್ಮಾನಿಸಲಿದೆ.

ಸಿದ್ಧತೆ ನಡೆಸುತ್ತಿದೆ

ಶಿಕ್ಷಣ ಖಾತೆಯನ್ನು ಬಿಟ್ಟುಕೊಟ್ಟಲ್ಲಿ ಆರೋಗ್ಯ ಅಥವಾ ಕಂದಾಯ ಖಾತೆ ಬಗ್ಗೆ ಬೇಡಿಕೆಯಿರಿಸಲು ಮುಸ್ಲಿಂಲೀಗ್ ಸಿದ್ಧತೆ ನಡೆಸುತ್ತಿದೆ. ಈ ಬಾರಿ ಮುಸ್ಲಿಂಲೀಗ್‌ಗೆ ನಾಲ್ಕು ಸಚಿವ ಸ್ಥಾನ ನೀಡಲು ಯುಡಿಎಫ್ ನಿರ್ಧರಿಸಿದೆ. ಮುಖ್ಯಮಂತ್ರಿ ಯಾರಾಗಬೇಕೆಂಬ ಘೋಷಣೆಯನ್ನು ಕಾಂಗ್ರೆಸ್ ಪ್ರಕಟಿಸಿದ ಬೆನ್ನಲ್ಲೇ ಮುಸ್ಲಿಂಲೀಗ್ ಸಚಿವರ ಪಟ್ಟಿಯನ್ನು ವಿದ್ಯುಕ್ತವಾಗಿ ಹೊರಡಿಸಲಿದೆ.

ಕೇರಳ ಕೇಂದ್ರೀಯ ವಿವಿಯಲ್ಲಿ ಕಂಗಮಾ ಕಲಾ ಉತ್ಸವ: ಸ್ಕೂಲ್ ಆಫ್ ಎಜುಕೇಶನ್‌ಗೆ ಪ್ರಶಸ್ತಿ



ಕಾಸರಗೋಡು: ಪೆರಿಯದಲ್ಲಿರುವ ಕೇರಳ ಕೇಂದ್ರೀಯ ವಿಶ್ವವಿದ್ಯಾಲಯದಲ್ಲಿ ಕಲಾ ಉತ್ಸವವಾದ ಕಂಗಮಾ – 2026 ಜರಗಿತು. ಈ ಸ್ಪರ್ಧಾ ಕಾರ್ಯಕ್ರಮದಲ್ಲಿ ಸ್ಕೂಲ್ ಆಫ್ ಎಜುಕೇಶನ್ ಸಂಸ್ಥೆಯು ಕಲಾ ಪ್ರಶಸ್ತಿಯನ್ನು ಗೆದ್ದುಕೊಂಡಿತು. ಸ್ಕೂಲ್ ಆಫ್ ಎಜುಕೇಶನ್ 318 ಅಂಕಗಳೊಂದಿಗೆ ಪ್ರಥಮ ಸ್ಥಾನ ಪಡೆಯಿತು.

ಸ್ಕೂಲ್ ಆಫ್ ಸೋಶಿಯಲ್ ಸಯನ್ಸ್ 96 ಅಂಕಗಳೊಂದಿಗೆ ಎರಡನೇ ಸ್ಥಾನ ಮತ್ತು ಸ್ಕೂಲ್ ಆಫ್ ಬಯೋಲಾಜಿಕಲ್ ಸಯನ್ಸ್ 56 ಅಂಕಗಳೊಂದಿಗೆ ಮೂರನೇ ಸ್ಥಾನ ಗಳಿಸಿದೆ. ನಂದನ ಕೆ. (ಸ್ಕೂಲ್ ಆಫ್ ಅರ್ಥ್ ಸಯನ್ಸ್ ಸಿಸ್ಟಮ್ಸ್) ನಾನ್ ಸ್ಟೇಜ್ ವಿಭಾಗದಲ್ಲಿ ವೈಯಕ್ತಿಕ ಚಾಂಪಿಯನ್ ಗಳಿಸಿದರು. ಸರಿಗಾ ಆರ್. ಮತ್ತು ಸೌಮ್ಯ ಶೇಖರ್ (ಸ್ಕೂಲ್ ಆಫ್ ಎಜುಕೇಶನ್) ವೇದಿಕೆ ಸ್ಪರ್ಧೆಗಳಲ್ಲಿ ವೈಯಕ್ತಿಕ ಚಾಂಪಿಯನ್ ಪಡೆದುಕೊಂಡರು.

ಮೂರು ದಿನಗಳ ಕಾಲ ವಿವಿಧ ಸ್ಥಳಗಳಲ್ಲಿ ನಡೆದ ಸ್ಪರ್ಧೆಗಳನ್ನು ಪ್ರಭಾರ ಉಪಕುಲಪತಿ ಪ್ರೊ.ವಿನ್ಸೆಂಟ್ ಮ್ಯಾಥ್ಯೂ ಉದ್ಘಾಟಿಸಿ ಶುಭಕೋರಿದರು. ಚಲನಚಿತ್ರ ನಟ ಉಣ್ಣಿರಾಜ್ ಚೆರುವತ್ತೂರು ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಾತನಾಡಿದರು. ಗಾಯಕ ಅತುಲ್ ನರುಕರ ಸಮಾರೋಪ ಸಮಾರಂಭವನ್ನು ಉದ್ಘಾಟಿಸಿದರು.

ವಿದ್ಯಾರ್ಥಿ ಕಲ್ಯಾಣ ಇಲಾಖೆಯ ಡೀನ್ ಪ್ರೊ.ರಾಜೇಂದ್ರ ಪಿಲಾಂಕಟ್ಟೆ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಪ್ರಭಾರ ರಿಜಿಸ್ಟ್ರಾರ್ ಪ್ರೊ.ಸುಧೀಶ ಜೋಗಯ್ಯ, ಡೀನ್ ಅಕಾಡೆಮಿಕ್ ಪ್ರೊ.ಜೋಸೆಫ್ ಕೊಯಿಪಲ್ಲಿ, ಸಾಂಸ್ಕೃತಿಕ ಸಂಯೋಜಕ ಡಾ.ಕೆ.ಶ್ರವಣ, ವಿದ್ಯಾರ್ಥಿ ಪರಿಷತ್‌ನ ಅಧ್ಯಕ್ಷ ವಿವೇಕ್ ಎಂ.ಎಸ್., ಪ್ರಧಾನ ಕಾರ್ಯದರ್ಶಿ ಸಂಜಯ್, ಉಪಾಧ್ಯಕ್ಷ ಮೊಹಮ್ಮದ್ ಯಾಸೀನ್, ಲಲಿತಕಲಾ ಕಾರ್ಯ ದರ್ಶಿ ಮುರ್ಷಿದಾ ಪಿ.ಕೆ. ಮಾತನಾಡಿದರು.

ಕಲನಾಡಿನಲ್ಲಿ ರಾಜ್ಯಮಟ್ಟದ 12ನೇ ಕುಟುಂಬ ಪುನರ್ಮಿಲನ ಕಾರ್ಯಕ್ರಮ



ಕಾಸರಗೋಡು: ಆಲ್ ಕೇರಳ ವೆಲ್ಫೇರ್ ಅಸೋಸಿಯೇಶನ್ ಆಫ್ ಎಕ್ಸ್ ಆರ್ಮಿ ಏವಿಯೇಷನ್ ಟೆಕ್ಸ್‌ನ ರಾಜ್ಯಮಟ್ಟದ 12ನೇ ಕುಟುಂಬ ಪುನರ್ಮಿಲನ ಸಮಾರಂಭವನ್ನು ಉದುಮ ಕಲನಾಡು ಕೆಎಚ್ ರೆಸಿಡೆನ್ಸಿಯಲ್ಲಿ ಶನಿವಾರ ಹಮ್ಮಿಕೊಳ್ಳಲಾಗಿತ್ತು. ಸಂಸ್ಥೆಯ ರಾಜ್ಯ ಘಟಕದ ಅಧ್ಯಕ್ಷ ಕೆ.ಜೆ.ಥೋಮಸ್ ಕಾರ್ಯಕ್ರಮವನ್ನು ಉದ್ಘಾಟಿಸಿ ಸಂಘಟನೆಯ ಮೂಲಕ ಸಮಾಜದ ಅಭಿವೃದ್ಧಿ ಸಾಧ್ಯವಿದೆ ಎಂದರು. ಪೋಷಕರಾದ ವಕೀಲ ಪಿ.ಜೆ.ಜಾರ್ಜ್, ಚಂದ್ರಶೇಖರನ್ ಮತ್ತು ಮಹಿಳಾ ಕಾರ್ಯಕಾರಿ ಸಮಿತಿ ಸದಸ್ಯೆಯರಾದ ಬೀನಾ ಸಾಸಿ ಮತ್ತು ಬಿನ್ಸಿ ಮ್ಯಾಥ್ಯೂ ಉಪಸ್ಥಿತರಿದ್ದರು. ಸಂಘಟನೆ ಕಾರ್ಯದರ್ಶಿ ಎಂ.ಪಿ. ಜಯಕುಮಾರ್ ಸ್ವಾಗತಿಸಿದರು. ನಂತರ ಚಿಲಂಪೋಲಿಯ ಜಾನಪದ ಕಲೆಯನ್ನು ಪ್ರದರ್ಶಿಸಲಾಯಿತು.

ಮಲಯಾಟ್ಟುಕರ: ಕೋರೆ ಅನುಮತಿ ರದ್ದಿಗೆ ಒತ್ತಾಯಿಸಿ ಪ್ರತಿಭಟನಾ ಧರಣಿ


ಕಾಸರಗೋಡು: ಕೋಡೋಂಬೇಳೂರು ಗ್ರಾಮ ಪಂಚಾಯತ್‌ನ 15ನೇ ವಾರ್ಡ್‌ನಲ್ಲಿರುವ ವಸತಿ ಪ್ರದೇಶವಾದ ಮಲಯಾಟ್ಟುಕರದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಗ್ರಾನೈಟ್ ಕೋರೆಯ ಅನುಮತಿಯನ್ನು ರದ್ದುಗೊಳಿಸುವಂತೆ ಒತ್ತಾಯಿಸಿ ಜನಪರ ಸಮಿತಿ ನೇತೃತ್ವದಲ್ಲಿ ಪಂಚಾಯತ್ ಕಚೇರಿ ಎದುರು ಪ್ರತಿಭಟನಾ ಧರಣಿ ನಡೆಸಲಾಯಿತು.

ಅಟ್ಟೆಂಗಾನ ಪೇಟೆಯಿಂದ ಆರಂಭಗೊಂಡ ನೂರಾರು ಮಂದಿಯನ್ನೊಳಗೊಂಡ ಮೆರವಣಿಗೆಯಲ್ಲಿ ಪಂಚಾಯತ್ ಕಚೇರಿ ಗೇಟ್ ಮುಂದೆ ಪೊಲೀಸರು ತಡೆದರು.

ಧರಣಿಯನ್ನು ಜಿಲ್ಲಾ ಪರಿಸರ ಸಮಿತಿಯ ಜೊತೆಕಾರ್ಯದರ್ಶಿ ವಿ.ಕೆ. ವಿನಯಚಂದ್ರನ್ ಮಾಸ್ಟರ್ ಉದ್ಘಾಟಿಸಿದರು. ಪಂಚಾಯತ್ ಸದಸ್ಯ ಸಜಿತಾ ಶ್ರೀಕುಮಾರ್, ಪಂಚಾಯತ್ ಮಾಜಿ ಅಧ್ಯಕ್ಷ ಯು.ತಂಬಾನ್ ನಾಯರ್, ಮಧು ನಾರ್ಕಳ, ವಿ.ಕೆ.ರಾಜನ್, ಆರ್.ಸಿ.ತಾಯನ್ನೂರು, ಪಾಲಕ್ಕುಳಂ ಕ್ವಾರೆ ವಿರೋಧಿ ಸಮಿತಿಯ ಗೋಪಾಲಕೃಷ್ಣನ್, ಸಿ.ಎಂ.ಬಾಲನ್, ಚಂದ್ರನ್ ವೆಂಗಚೇರಿ, ರಾಜನ್ ಸಿ., ಚೂರಪ್ಪರವ್ ಶಿನ್ಸ್ ಜೋರ್ಜ್, ಟಿ.ಜಿ.ಶಾಲಿನ ಮಾತನಾಡಿದರು.

ಎಂ.ಡಿ.ರಾಜನ್, ನಾರಾಯಣನ್ ಕುಟ್ಟಿಯಡ್ಕ, ಬಿಜು ಕುಳಿಮಾವು, ಬಿನು ಥೋಮಸ್, ಸತೀಶನ್ ಮಲಯಾಟ್ಟುಕರ, ರಾಜೀವನ್ ಚೀರೋಲ್, ಶೀಬಾ ರಾಜೇಶ್, ರಣದಿವಾನ್ ಎನ್.ಕುಜಿಕೋಲ್, ಎ.ವಿ.ಕರುಣಾಕರನ್, ಶಶಿಕಲಾ ಉರುತ್ತಿಕುನ್ನು, ಟಿ.ರಾಜೇಶ್, ಬಿ.ಜೆ. ವರ್ಗೀಸ್, ಪಿ.ಕೆ.ಜಯದೇವನ್, ಸುನಿಲ್ ಕುಳಿಮಾವು, ರಜನಿ ಮೋಹನನ್, ಅಜೇಶ್ ಮಲಯಾಟ್ಟುಕರ ಮತ್ತಿತರರು ನೇತೃತ್ವ ವಹಿಸಿದ್ದರು.

ತಳಂಗರೆ ಪರಿಸರದಲ್ಲಿ ಅಪಾಯಕಾರಿ ಮರಗಳ ರೆಂಬೆ –ಕೊಂಬೆಗಳ ತೆರವು



ಕಾಸರಗೋಡು: ನಗರದ ತಳಂಗರೆ ಪರಿಸರದಲ್ಲಿ ರಸ್ತೆಗೆ ಬಾಗಿ ನಿಂತು ವಾಹನಗಳಿಗೆ ಹಾಗೂ ಪಾದಚಾರಿಗಳಿಗೆ ಆತಂಕ ಸೃಷ್ಟಿಸಿದ್ದ ಮರಗಳ ರೆಂಬೆ ಕೊಂಬೆಗಳನ್ನು ನಗರಸಭಾ ಕೌನ್ಸಿಲರ್ ಅಮೀನ್ ಪಳ್ಳಿಯಾನ್ ಅವರ ನೇತೃತ್ವದಲ್ಲಿ ನಾಗರಿಕರು ಹಾಗೂ ಅಧಿಕಾರಿಗಳು ಸೇರಿ ತೆರವುಗೊಳಿಸಿದ್ದಾರೆ.

ಸಮಸ್ಯೆ ಎದುರಾಗಿತ್ತು

ಮರಗಳ ಗೆಲ್ಲುಗಳು ಹೆಚ್ಚಿನವು ರಸ್ತೆಗೆ ಚಾಚಿ ನಿಂತಿರುವುದರಿಂದ ಪರಿಸರದ ಮನೆಗಳಿಗೆ ಮತ್ತು ನಾಗರಿಕರಿಗೆ ಅಪಾರ ಸಮಸ್ಯೆ ಎದುರಾಗಿತ್ತು. ಈ ಮಧ್ಯೆ ರೆಂಬೆ ಕೊಂಬೆಗಳ ನಡುವೆ ಹಾದುಹೋಗುವ ವಿದ್ಯುತ್ ತಂತಿಗಳ ಮೇಲೂ ಮರಗಳ ಗೆಲ್ಲುಗಳು ವ್ಯಾಪಿಸಿದ್ದ ಹಿನ್ನೆಲೆಯಲ್ಲಿ ಭಾರೀ ಅಪಾಯಕಾರಿ ಸನ್ನಿವೇಶಕ್ಕೂ ಕಾರಣವಾಗಿತ್ತು. ಅನೇಕ ಬಾರಿ ಸಾರ್ವಜನಿಕರು ಮತ್ತು ವಾರ್ಡ್ ಕೌನ್ಸಿಲರ್‌ಗಳು ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೆ ತಂದಿದ್ದರು.

ರೆಂಬೆ ಕೊಂಬೆಗಳ ತೆರವು

ಕೆಎಸ್‌ಇಬಿ ಅಧಿಕಾರಿಗಳು, ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳು ಹಾಗೂ ಸಾರ್ವಜನಿಕರು ಒಟ್ಟಾಗಿ ಸೇರಿ ತಳಂಗರೆ ಪ್ರದೇಶದಲ್ಲಿ ರಸ್ತೆಗೆ ಬಾಗಿ ನಿಂತಿದ್ದ ರೆಂಬೆ ಕೊಂಬೆಗಳನ್ನು ತೆರವುಗೊಳಿಸುವಲ್ಲಿ ಯಶಸ್ವಿಯಾದರು.

ಬಾಕ್ಸೈಟ್ ಗಣಿಗಾರಿಕೆಯ ವಿರುದ್ಧ ಕಾರಡ್ಕದಲ್ಲಿ ಬೃಹತ್ ಪ್ರತಿಭಟನೆ

ಮುಳ್ಳೇರಿಯ: ಬಾಕ್ಸೈಟ್ ಗಣಿಗಾರಿಕೆಯ ವಿರುದ್ಧ ಕಾರಡ್ಕದಲ್ಲಿ ಮಾನವ ಗೋಡೆ ನಿರ್ಮಿಸಿ ಸಿಪಿಎಂ ನೇತೃತ್ವದಲ್ಲಿ ಪ್ರತಿಭಟನೆಯನ್ನು ನಡೆಸಲಾಯಿತು.

ಜನವಸತಿ ವಲಯವಾದ ಕಾರಡ್ಕ ನಾರ್ಲದಲ್ಲಿ ಬಾಕ್ಸೈಟ್ ಗಣಿಗಾರಿಕೆಗೆ ಬಿಡಲಾರೆವು ಎಂದು ಘೋಷಿಸಿ ಕಾರಡ್ಕ ಹದಿಮೂರನೇ ಮೈಲು ಪರಿಸರದ ನಿರ್ದಿಷ್ಟ ಯೋಜನಾ ಪ್ರದೇಶದಲ್ಲಿ ಸಿಪಿಎಂ ನೇತೃತ್ವದಲ್ಲಿ ಮಾನವ ಗೋಡೆ ನಿರ್ಮಿಸಲಾಯಿತು.

ಹೋರಾಟ ಸಮಿತಿ ರಚನೆ ಹಾಗೂ ಮಾನವ ಗೋಡೆಯನ್ನು ಸಿಪಿಎಂ ಕಾಸರಗೋಡು ಜಿಲ್ಲಾ ಸೆಕ್ರೆಟರಿಯೇಟ್ ಸದಸ್ಯ ಸಿಜಿ ಮ್ಯಾಥ್ಯೂ ಉದ್ಘಾಟಿಸಿ ಮಾತನಾಡಿದರು. ಪ್ರತಿಭಟನೆಯಲ್ಲಿ ಎ.ವಿಜಯಕುಮಾರ್ ಅಧ್ಯಕ್ಷತೆ ವಹಿಸಿದ್ದರು.

ಕಾರಡ್ಕ ಬ್ಲಾಕ್ ಪಂಚಾಯತ್ ಅಧ್ಯಕ್ಷ ಸಿ.ಬಾಲನ್, ಸಿಪಿಎಂ ಕಾರಡ್ಕ ಏರಿಯಾ ಕಾರ್ಯದರ್ಶಿ ಎಂ.ಮಾಧವನ್, ಜನಪ್ರತಿನಿಧಿಗಳಾದ ಇ.ಮೋಹನನ್, ಸಿ.ಕೆ. ವಿಜಯಕುಮಾರ್, ಮೋಹನನ್ ಕಾರಡ್ಕ, ಎಸ್.ಆರ್.ಸತ್ಯವತಿ, ಪ್ರಮುಖರಾದ ಪಿ.ಬಾಲಕೃಷ್ಣನ್, ಬಿ.ಕೆ.ನಾರಾಯಣನ್, ಕೆ.ಶಂಕರನ್, ಕೆ.ನಾಸರ್, ಕೆ.ಪಿ.ಸುಜಲಾ, ಕೆ.ವಿ.ನವೀನ್, ಪಿ.ಪಿ.ಶ್ಯಾಮಲಾದೇವಿ, ಕೆ.ಪಿ.ರಜೀಶ್, ರಜಿತ್ ಕಾರಡ್ಕ, ಕೆ.ಜಯನ್ ಮುಂತಾದವರು ಮಾತನಾಡಿದರು.



- 13ನೇ ಮೈಲಿನಿಂದ ಆರಂಭಿಸಿ ಚಾಯಿತ್ತಲವರೆಗೆ ಬಾಕ್ಸೈಟ್ ಗಣಿಗಾರಿಕೆಗೆ ಗುರುತಿಸಿದ ಜಾಲ್ಸೂರು - ಚೆರ್ಕಳ ಅಂತಾರಾಜ್ಯ ರಸ್ತೆ ಬದಿಯಲ್ಲಿ ಮಾನವ ಗೋಡೆ ನಿರ್ಮಿಸಿ ಪ್ರತಿಭಟನೆ
- ಜನವಸತಿ ವಲಯವಾದ ಕಾರಡ್ಕ ನಾರ್ಲದಲ್ಲಿ ಬಾಕ್ಸೈಟ್ ಗಣಿಗಾರಿಕೆಗೆ ಬಿಡಲಾರೆವು ಘೋಷಣೆ
- ಮಹಿಳೆಯರು, ಮಕ್ಕಳು ಸೇರಿದಂತೆ ನೂರಾರು ಮಂದಿ ಭಾಗವಹಿಸುವಿಕೆ



ಕಾಸರಗೋಡು ಸಮೀಪದ ಕಾಳ್ಯಂಗಾಡು ಶ್ರೀ ಮೂಕಾಂಬಿಕಾ ದೇವಸ್ಥಾನದಲ್ಲಿ ಬ್ರಹ್ಮಕಲಶದ ಪ್ರಯುಕ್ತ ಸುಧಾಕರ ಕೋಟೆಕುಂಜತ್ತಾಯ ಅವರಿಂದ ಗಜಗೌರಿ ವ್ರತ ಎಂಬ ಹರಿಕಥಾ ಸತ್ಸಂಗ ಜರಗಿತು.

ಚೆರ್ಕಳ-ಕಲ್ಲಡ್ಕ ಅಂತರ ರಾಜ್ಯ ಸಂಪರ್ಕ ರಸ್ತೆ ಪಳ್ಳತ್ತಡ್ಕದ ದುಃಸ್ಥಿತಿ
ಬೇಸಿಗೆ ಮಳೆಗೆ ಹೊಂಡಗುಂಡಿ ರಸ್ತೆಯಲ್ಲಿ ತುಂಬಿದ ನೀರು!

ಬದಿಯಡ್ಕ: ಚೆರ್ಕಳ-ಕಲ್ಲಡ್ಕ ಅಂತರ ರಾಜ್ಯ ಸಂಪರ್ಕ ರಸ್ತೆಯ ಪಳ್ಳತ್ತಡ್ಕದಲ್ಲಿ ಬೇಸಿಗೆಯ ಮಳೆಯಿಂದ ರಸ್ತೆಯ ಗುಂಡಿಗಳಲ್ಲಿ ನೀರು ಸಂಗ್ರಹವಾಗಿ ಪ್ರಯಾಣ ಸಂಕಷ್ಟವಾಗಿದೆ. ಅಭಿವೃದ್ಧಿಯು ಮರೀಚಿಕೆಯಾಗಿರುವ ಈ ರಸ್ತೆಯಲ್ಲಿ ಬೇಸಿಗೆ ಮಳೆಗೆ ರಸ್ತೆಯ ಗುಂಡಿಗಳು ನೀರಿನಿಂದ ತುಂಬಿವೆ. ಇದರಿಂದಾಗಿ ಪ್ರಯಾಣ ದುಸ್ತರವಾಗಿದೆ. ವರ್ಷಗಳಿಂದ ಶಿಥಿಲಗೊಂಡು ದೊಡ್ಡ ದೊಡ್ಡ ಹೊಂಡ ಬಿದ್ದಿರುವ ರಸ್ತೆಯನ್ನು ದುರಸ್ತಿಗೊಳಿಸಬೇಕೆಂದು ಒತ್ತಾಯಿಸಿ ವಿವಿಧ ರಾಜಕೀಯ ಪಕ್ಷಗಳು ಮತ್ತು ಸಂಘಟನೆಗಳು ಪ್ರತಿಭಟನಾ ಸಭೆಗಳನ್ನು ನಡೆಸಿದ್ದರೂ, ಇಲ್ಲಿಯವರೆಗೆ



ಯಾವುದೇ ಕ್ರಮ ಕೈಗೊಂಡಿಲ್ಲ. ಈ ಸಮಸ್ಯೆಯನ್ನು ಹಿಂದಿನ ಶಾಸಕ ಎನ್.ಎ.ನೆಲ್ಲಿಕುನ್ನು ಅವರ ಮುಂದಿಟ್ಟಾಗ ಶೀಘ್ರದಲ್ಲೇ ಅಭಿವೃದ್ಧಿಗೊಳಿಸಲಾಗುವುದು ಎಂಬ ಪೊಳ್ಳು ಭರವಸೆ ನೀಡಿದ್ದಾರೆ. ಇದೀಗ ಚುನಾಯಿತರಾಗಿ ಬಂದ ನೂತನ ಶಾಸಕ ಹಾಗೂ ಸರಕಾರದ ಮೇಲೆ ಭರವಸೆ ನಿರೀಕ್ಷಿಸಲಾಗಿದೆ.


ದುರಸ್ತಿ ಕಾರ್ಯ ಕೈಗೊಳ್ಳಿ

ಪ್ರಯಾಣಿಕರು ಮತ್ತು ಸ್ಥಳೀಯರ ನಿರಂತರ ಬೇಡಿಕೆಗಳ ಹೊರತಾಗಿ , ರಸ್ತೆಯ ಗುಂಡಿಗಳನ್ನು ಮುಚ್ಚಲು 39 ಕೋಟಿ ರೂ.ಗಳನ್ನು ನಿಗದಿಪಡಿಸಿ ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡಿದೆ, ಆದರೆ ಯಾವುದೇ ಮುಂದಿನ ಕ್ರಮ ಕೈಗೊಳ್ಳಲಾಗಿಲ್ಲ, ಮಳೆಗಾಲ ಪ್ರಾರಂಭ ವಾಗುವ ಮೊದಲು ರಸ್ತೆ ಗುಂಡಿಗಳನ್ನು ತುಂಬಿ ದುರಸ್ತಿ ಕೆಲಸ ಕೈಗೊಳ್ಳಬೇಕು, ಈ ರಸ್ತೆಯಲ್ಲಿ ಪ್ರಯಾಣ ಸಂಪೂರ್ಣ ಅಸ್ತವ್ಯಸ್ತ ವಾಗಲಿದೆ ಎಂದು ಸ್ಥಳೀಯರು ಆತಂಕ ವ್ಯಕ್ತಪಡಿಸಿದ್ದಾರೆ.

ವೈಶಾಖ ನಟನಂ ರಾಷ್ಟ್ರೀಯ ನೃತ್ಯೋತ್ಸವದಲ್ಲಿ ಆಂಧ್ರ ಪ್ರದೇಶದ ಕಲಾತಂಡಗಳ ನೃತ್ಯ ಸೇವೆ

ಕಾಸರಗೋಡು: ಪೆರಿಯ ಬೇಕಲ ಗೋಕುಲಂ ಗೋಶಾಲೆಯ ಪರಂಪರಾ ವಿದ್ಯಾಪೀಠದ ಆಶ್ರಯದಲ್ಲಿ ಜರಗುತ್ತಿರುವ ವೈಶಾಖ ನಟನಂ ರಾಷ್ಟ್ರೀಯ ನೃತ್ಯೋತ್ಸವದಲ್ಲಿ ಆಂಧ್ರ ಪ್ರದೇಶದ ನೃತ್ಯ ತಂಡಗಳು ಪ್ರದರ್ಶಿಸಿದ ಕುಚಿಪುಡಿ ನೃತ್ಯವು ಕಲಾ ರಸಿಕರನ್ನು ಭಕ್ತಿ ಮತ್ತು ಆನಂದದ ಪರಾಕಾಷ್ಠೆಗೆ ಕೊಂಡೊಯ್ದವು.

ಹೈದರಾಬಾದ್‌ನ ಶಂಕರಿ ನಾಟ್ಯಶಾಲೆ, ಮೆಹರ್ ಪ್ರಭಾಕರ್ ಮತ್ತು ತಂಡ ಹಾಗೂ ತಿರುಪತಿಯ ರೇಖಾ ಸತೀಶ್ ಅವರ ತಂಡಗಳು ಈ ಪವಿತ್ರ ವೇದಿಕೆಯಲ್ಲಿ ಈಗಾಗಲೇ ನೃತ್ಯ ಸಮರ್ಪಣೆ ಮಾಡಿವೆ. ಅಮೃತವರ್ಷಿಣಿ ರಾಗದ ಲಯಕ್ಕೆ ತಕ್ಕಂತೆ ಹೆಜ್ಜೆ ಹಾಕಿದ ಅಮೃತವರ್ಷಿಣಿ ನೃತ್ಯ ವಿದ್ಯಾಲಯದ ಚಿಪ್ಪಿ ಪಿಳ್ಳೆ ಮತ್ತು ತಂಡದ ಪ್ರದರ್ಶನವು ಪ್ರೇಕ್ಷಕರಲ್ಲಿ ಧನ್ಯತಾ ಭಾವ ಮೂಡಿಸಿತು. ಪ್ರಕೃತಿ ಸ್ಪಂದಿಸುವಂತೆ ನೃತ್ಯ ಪ್ರದರ್ಶನದ ವೇಳೆ ಬೀಸಿದ ಮಾರುತ ಮತ್ತು ಮಳೆಹನಿಗಳು ಕಾರ್ಯಕ್ರಮಕ್ಕೆ ದೈವಿಕ ಮೆರುಗನ್ನು ನೀಡಿದವು.



ಆಂಧ್ರ ಪ್ರದೇಶದ ಆರು ವರ್ಷದ ಬಾಲಕಿ ಆದ್ಯಲಕ್ಷ್ಮಿ ಅವರ ಕುಚಿಪುಡಿ ನೃತ್ಯವು ಪ್ರೇಕ್ಷಕರ ವಿಶೇಷ ಗಮನ ಸೆಳೆಯಿತು. ಈ ಬಾರಿಯ ವೈಶಾಖ ನಟನಂ ಉತ್ಸವದ ಅತ್ಯಂತ ಕಿರಿಯ ವಯಸ್ಸಿನ ನೃತ್ಯ ಕಲಾವಿದೆ ಎಂಬ ಕೀರ್ತಿಗೆ ಆದ್ಯಲಕ್ಷ್ಮಿ ಭಾಜನರಾಗಿದ್ದಾರೆ.

ಬಡಗು ಶಬರಿಮಲೆ

ಉಬ್ರಂಗಳ ಶ್ರೀ ಮಹಾದೇವ ಪಾರ್ವತಿ ಶ್ರೀ ಶಾಸ್ತಾರ ದೇವಸ್ಥಾನ, ಕುಂಬ್ಡಾಜೆ, ಬದಿಯಡ್ಕ , ಕಾಸರಗೋಡು

2026 ಮೇ 11 ಸೋಮವಾರ

ಸಂಜೆ 5ರಿಂದ



ದಕ್ಷಿಣಾಮ್ನಾಯ ಶೃಂಗೇರಿ ಶ್ರೀ ಶಾರದಾ ಪೀಠಾಧೀಶರಾದ ಜಗದ್ಗುರು ಶಂಕರಾಚಾರ್ಯ ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳ ಕರಕಮಲಸಂಜಾತರಾದ ಜಗದ್ಗುರು ಶಂಕರಾಚಾರ್ಯ ಶ್ರೀ ಶ್ರೀ ವಿಧುಶೇಖರಭಾರತೀ ಮಹಾಸ್ವಾಮಿಗಳು


ಶ್ರೀ ಶ್ರೀ ಶ್ರೀ ಸಚ್ಚಿದಾನಂದ ಭಾರತೀ ಸ್ವಾಮೀಜಿ ಎಡನೀರು ಮಠ

ಬ್ರಹ್ಮಶ್ರೀ ದೇಲಂಪಾಡಿ ಗಣೇಶ ತಂತ್ರಿಗಳು

ಬ್ರಹ್ಮಶ್ರೀ ಕುಂಟಾರು ರವೀಶ ತಂತ್ರಿಗಳು

ಶ್ರೀ ನಾರಾಯಣ ವರ್ಮ ಪಂದಳಂ ಕೊಟ್ಟಾರಂ, ಶಬರಿಮಲೆ

ಇಂದು 101 ಚೆಂಡೆ ವಾದ್ಯಗಳೊಂದಿಗೆ ಹಿತ್ತಾಳೆ ಕವಚದ 18 ಮೆಟ್ಟಿಲುಗಳ ಲೋಕಾರ್ಪಣೆ



ಶ್ರೀ ದೇವರ ಭವ್ಯ ಮಹೋತ್ಸವ

ದೈವಿಕ ಹಿನ್ನೆಲೆ ಮತ್ತು ಪರಶುರಾಮರ ತಪಸ್ಸು

ಕೇರಳದ ಕಾಸರಗೋಡು ಸಮೀಪವಿರುವ ಉಬ್ರಂಗಳದ ಈ ದೇವಸ್ಥಾನವು ಸುಮಾರು 2,100 ವರ್ಷಗಳ ಇತಿಹಾಸವನ್ನು ಹೊಂದಿದೆ. ಪುರಾಣಗಳ ಪ್ರಕಾರ, ದ್ವಾಪರ ಯುಗದ ಅಂತ್ಯದಲ್ಲಿ ಪರಶುರಾಮರು ಇಲ್ಲಿನ ದಟ್ಟಾರಣ್ಯದಲ್ಲಿ ಘೋರ ತಪಸ್ಸು ಮಾಡಿದರು. ಅವರ ಭಕ್ತಿಗೆ ಮೆಚ್ಚಿ ಶ್ರೀ ಮಹಾವಿಷ್ಣು ದಿವ್ಯ ಜ್ಯೋತಿಯ ರೂಪದಲ್ಲಿ ಕಾಣಿಸಿಕೊಂಡರು. ತದನಂತರ ಆ ಜ್ಯೋತಿಯಿಂದಲೇ ಶ್ರೀ ಶಾಸ್ತಾರ, ಪಾರ್ವತಿ ದೇವಿ, ಮಹಾದೇವ ಆವಿರ್ಭವಿಸಿದರು. ಪರಶುರಾಮರ ಪ್ರಾರ್ಥನೆಯಂತೆ, ಭಕ್ತರನ್ನು ಆಶೀರ್ವದಿಸಲು ಶಿವನು ಅಲ್ಲಿಯೇ 'ಸ್ವಯಂಭೂಲಿಂಗ'ವಾಗಿ ನೆಲೆ ನಿಂತನು.

ಬೇಡನ ದರ್ಶನ ಮತ್ತು "ಉಬ್ರಂಗಳ" ಹೆಸರಿನ ಉಗಮ

ದಟ್ಟಾರಣ್ಯದಲ್ಲಿದ್ದ ಈ ಪವಿತ್ರ ಸ್ಥಳವನ್ನು ಸಾಮಾನ್ಯ ಜನರಿಗೆ ಪರಿಚಯಿಸಲು ಶಿವನು ಒಂದು ಲೀಲೆಯನ್ನು ನಡೆಸಿದನು. ಒಂದು ದೈವಿಕ ಮೊಲವು ಬೇಡನಿಗೆ ಕಾಣಿಸಿಕೊಂಡು, ಅವನನ್ನು ಕಾಡಿನ ಆಳಕ್ಕೆ ಕರೆದೊಯ್ದು ಲಿಂಗವಿದ್ದ ಜಾಗದಲ್ಲಿ ಅದೃಶ್ಯವಾಯಿತು. ಅಲ್ಲಿ ಬೇಡನಿಗೆ ಪಾರ್ವತಿ ದೇವಿಯು ನವರತ್ನದ ತೊಟ್ಟಿಲಲ್ಲಿ ಕುಳಿತಿರುವ ಮತ್ತು ದೊಡ್ಡ ಸರ್ಪವೊಂದು ಹೆಡೆಯೆತ್ತಿ ರಕ್ಷಿಸುತ್ತಿರುವ ದಿವ್ಯ ದೃಶ್ಯ ಕಂಡಿತು. ಇದರಿಂದ ಗಾಬರಿಗೊಂಡು ತನ್ನ ಊರಿಗೆ ಓಡಿ ಬಂದ ಬೇಡನು, ತಾನು ಕಂಡದ್ದನ್ನು ವಿವರಿಸಲು ಹೊರಟಾಗ ಭಯದಿಂದ "ಉ...ಬ್ರಂ...ಗೋ...ಲ..." ಎಂದು ತೊದಲಿದನು. ಇದೇ ಕಾರಣದಿಂದ ಈ ಗ್ರಾಮಕ್ಕೆ 'ಉಬ್ರಂಗಳ' ಎಂಬ ಹೆಸರು ಬಂದಿತು ಎಂದು ಹೇಳಲಾಗುತ್ತದೆ.

ದೇವಸ್ಥಾನ ನಿರ್ಮಾಣ

ವಿಷಯ ತಿಳಿದ, ಸ್ಥಳೀಯ ರಾಜನು ಮಂತ್ರಿಗಳು, ಧರ್ಮಶಾಸ್ತ್ರ ಪಂಡಿತರು, ಜ್ಯೋತಿಷಿಗಳು ಮತ್ತು ತಾಂತ್ರಿಕಾಚಾರ್ಯರೊಂದಿಗೆ ಸಮಾಲೋಚಿಸಿ, ಆ ದಿವ್ಯ ಸಾನ್ನಿಧ್ಯವನ್ನು ಅನ್ವೇಷಿಸಲು ನಿರ್ಧರಿಸಿದನು. ತ್ರಿವೇಣಿ ಸಂಗಮದಲ್ಲಿ ಪವಿತ್ರ ಸ್ನಾನ ಮಾಡಿ, ಅಭಿಷೇಕ ಜಲ ಹಿಡಿದು, ಆ ಬೇಡನ ಮುಂದಾಳತ್ವದಲ್ಲಿ ಅವರೆಲ್ಲರೂ ಆ ಸ್ಥಳಕ್ಕೆ ತೆರಳಿದರು. ಆ ದಿನ ಕುಂಭ ಮಾಸದ ಪವಿತ್ರ ಶಿವರಾತ್ರಿಯಾಗಿತ್ತು (ಜ್ಯೋತಿಷ್ಯ ಲೆಕ್ಕಾಚಾರದ ಪ್ರಕಾರ ಇದು ಕ್ರಿ.ಪೂ. 62 ಸಾಲಿಗೆ ಸೇರಿದ ಘಟನೆ). ಆದರೆ ಬೇಡನು ವಿವರಿಸಿದ ದೃಶ್ಯ ಕಾಣದೆ ಎಲ್ಲರೂ ನಿರಾಶರಾದರು. ಎಲ್ಲರೂ ಶಿವನಿಗೆ ಪ್ರಾರ್ಥಿಸಲು, ಒಂದು ಸರ್ಪ ಪ್ರಕಟವಾಯಿತು ಮತ್ತು ನಂತರ ಸ್ವಯಂಭೂ ಶಿವಲಿಂಗ ದರ್ಶನ ದೊರಕಿತು. ತೀರ್ಥ ಜಲಾಭಿಷೇಕ ಮಾಡಿ, ತುಪ್ಪದ ದೀಪ ಬೆಳಗಿ, ಆಚಾರ್ಯರು ದೇವರಿಗೆ ಪೂಜೆ ಸಲ್ಲಿಸಿದರು. ಗಹನ ಅರಣ್ಯ ಕಡಿದು ಸ್ವಚ್ಛ ಮಾಡಿ ಅಲ್ಲಿ ದೇವಸ್ಥಾನ ನಿರ್ಮಿಸಲಾಯಿತು.

ಈ ಪವಿತ್ರ ಸ್ಥಳದ ಪ್ರಧಾನ ದೇವರಾಗಿ ಶ್ರೀ ಮಹಾದೇವನು ನೆಲೆಗೊಳ್ಳಲಿ ಎಂದು ಶ್ರೀ ಪಾರ್ವತಿಯು ಬಯಸಿ, ಸ್ವಯಂ ಸ್ವಯಂಭೂಲಿಂಗದ ಹಿಂದೆ ಪಶ್ಚಿಮಾಭಿಮುಖಿಯಾಗಿ ಕುಳಿತಳು. ಜ್ಯೋತಿಷ್ಯ ಲೆಕ್ಕಾಚಾರದ ಪ್ರಕಾರ ಈ ಸ್ಥಳದ ಒಟ್ಟು ಸಾನಿಧ್ಯ ಶಕ್ತಿಯ ಮುಕ್ಕಾಲು ಭಾಗ ಶ್ರೀ ಪಾರ್ವತಿಗೆ ಸೇರಿದ್ದು ಎಂದು ತಿಳಿದುಬಂದ ಕಾರಣ, ದೇವಿಯ 'ದಾರು ಬಿಂಬ'ವನ್ನು (ಮರದ ವಿಗ್ರಹ) ಪಶ್ಚಿಮಾಭಿಮುಖಿಯಾಗಿ ಪ್ರತಿಷ್ಠಾಪಿಸಲಾಯಿತು. ಇಲ್ಲಿನ ಶ್ರೀ ಮಹಾದೇವನು ವಿಶೇಷ ಉತ್ಸವ ದಿನಗಳಂದು ಮೂಲ ತ್ರಿವೇಣಿ ಸಂಗಮದ ತೀರ್ಥಾಭಿಷೇಕ ಮತ್ತು ಅವನಿಗೆ ಪ್ರಕಟವಾದ ಸಂದರ್ಭದಲ್ಲಿ ಸಲ್ಲಿಸಿದ ತುಪ್ಪದ ದೀಪ – ಈ ಎರಡನ್ನೂ ಬಹಳ ಇಷ್ಟಪಡುತ್ತಾನೆ ಎಂದು ನಂಬಲಾಗಿದೆ. ಪೂರ್ವದಲ್ಲಿ ಈ ದೇವಸ್ಥಾನದಲ್ಲಿ 12 ದಿನಗಳ ಉತ್ಸವ ನಡೆಯುತ್ತಿತ್ತು; ಕೊನೆಯ ದಿನ ತ್ರಿವೇಣಿ ಸಂಗಮದಲ್ಲಿ 'ಅವಭೃತ ಸ್ನಾನ' ನೆರವೇರುತ್ತಿತ್ತು. ಈ ತ್ರಿವೇಣಿ ಸಂಗಮದ ದಡದಲ್ಲಿ ಮುನಿಗಳು ವಾಸಿಸುತ್ತಿದ್ದರು ಎಂದು ಹೇಳಲಾಗುತ್ತದೆ – ಇಂದಿಗೂ ಆ ಭಾಗದಲ್ಲಿ 'ಮುನಿಯೂರು' (ಮುನಿಗಳ ವಾಸಸ್ಥಾನ) ಎಂಬ ಹೆಸರಿನ ಊರಿದೆ. ಅವರು ದೇವಸ್ಥಾನ ಮತ್ತು ಶಾಸ್ತಾರ ಮೂಲಸ್ಥಾನ (ಕಾಟುನೂಜಿ) ನಡುವೆ ಭೂಗತ ಸುರಂಗಗಳ ಮೂಲಕ ಓಡಾಡುತ್ತಿದ್ದರು ಎಂದು ನಂಬಲಾಗಿದೆ (ದೇವಸ್ಥಾನ ಆವರಣದ ಸುತ್ತ ಕೆಲವು ಆಳವಾದ ಸುರಂಗಗಳು ದೊರೆತಿವೆ). ದೇವಸ್ಥಾನದಲ್ಲಿ ಶ್ರೀ ಮಹಾದೇವ, ಶ್ರೀ ಪಾರ್ವತಿ, ಶ್ರೀ ಶಾಸ್ತಾರ, ಶ್ರೀ ಸುಬ್ರಹ್ಮಣ್ಯ, ಶ್ರೀ ಗಣಪತಿ ಮತ್ತು ಶ್ರೀ ಪರಶುರಾಮ ದೇವತೆಗಳನ್ನು ಆರಾಧಿಸಲಾಗುತ್ತದೆ. ಸನಿಹದಲ್ಲೇ ಶ್ರೀ ನಾಗಬನ ಹಾಗೂ ಶ್ರೀ ಧೂಮಾವತಿ ದೈವಸ್ಥಾನಗಳಿವೆ. ಶ್ರೀ ಶಾಸ್ತಾರನಿಗಾಗಿ 'ಪಾಟು' ಎಂಬ ವಿಶೇಷ ವಾರ್ಷಿಕ ಉತ್ಸವ ಮತ್ತು ಶ್ರೀ ಮಹಾದೇವನಿಗೆ 'ಭೂತ ಬಲಿ ಉತ್ಸವ' ಆಚರಿಸಲಾಗುತ್ತದೆ. ಪ್ರತಿದಿನ ದೇವಸ್ಥಾನ ಪೂಜೆಯ ನಂತರ ಅರ್ಚಕರು ಸುಮಾರು ಒಂದೂವರೆ ಕಿ.ಮೀ. ದೂರದ ಬೆಟ್ಟದ ಮೇಲಿರುವ ಶಾಸ್ತಾರ ಮೂಲಸ್ಥಾನ ಕಾಟುನೂಜಿಗೆ ತೆರಳಿ ಪೂಜೆ ಸಲ್ಲಿಸುತ್ತಾರೆ.

ಸುಮಾರು 400 ವರ್ಷಗಳ ಹಿಂದೆ ಹೊರಗಿನವರ ದಾಳಿಯ ಸಂದರ್ಭದಲ್ಲಿ ಉಂಟಾದ ಅಗ್ನಿ ಅನಾಹುತದಿಂದ ದೇವಸ್ಥಾನ ತೀವ್ರ ಹಾನಿಗೊಂಡಿತು. ಶ್ರೀ ಪಾರ್ವತಿಯ 'ದಾರು ಬಿಂಬ' ಅಗ್ನಿಗೆ ಆಹುತಿಯಾಯಿತು. 1982 ರ ಜೀರ್ಣೋದ್ಧಾರ ಮತ್ತು ಬ್ರಹ್ಮಕಲಶ ಸಂದರ್ಭದಲ್ಲಿ ಮಾತ್ರ ಶ್ರೀ ಪಾರ್ವತಿಯ ವಿಗ್ರಹ ಪುನಃ ಪ್ರತಿಷ್ಠಾಪಿಸಲ್ಪಟ್ಟು ಪೂಜೆ ಮರು ಶುರುವಾಯಿತು. ಶ್ರೀ ಪಾರ್ವತಿ ತನ್ನ ದಿವ್ಯ ಕೃಪೆಯಿಂದ ಜನರನ್ನು ಅನುಗ್ರಹಿಸುತ್ತಿದ್ದಾಳೆ. 'ಉಬರಂಗಳ' ಹೆಸರಿನ ಮತ್ತೊಂದು ಸಂಭಾವ್ಯ ಮೂಲವೆಂದರೆ: ಆವರಣದ ಪೂರ್ವ ಭಾಗದಲ್ಲಿರುವ ಒಂದು ಕೊಳ (ಕೋಲ)ದಲ್ಲಿ ಶಕ್ತಿಶಾಲಿ 'ಒರವು' (ತನ್ನಿಂತಾನೆ ಉಕ್ಕುವ ಜಲ) ಇದ್ದು, ಆದರಿಂದ 'ಒರಂಕೋಲ' 'ಒರಂಗೋಲ'....'ಉಬರಂಗಳ' ಎಂಬ ಹೆಸರು ಬಂದಿರಬಹುದು ಎಂದೂ ಅಭಿಪ್ರಾಯಪಡಲಾಗಿದೆ. ಉಬರಂಗಳ ದೇವಸ್ಥಾನವು ಭತ್ತದ ಗದ್ದೆಗಳು ಮತ್ತು ಅಡಿಕೆ ತೋಟಗಳ ನಡುವಿನ ಒಂದು ರಮಣೀಯ ಎತ್ತರದ ವೇದಿಕೆಯ ಮೇಲೆ ನೆಲೆಗೊಂಡಿದ್ದು ದೇವಸ್ಥಾನದ ಮುಂದೆ ಒಂದು ತೊರೆ ಹರಿಯುತ್ತದೆ. ಒಳಾಂಗಣ ಪ್ರಾಂಗಣ (ಅಂಗಳ) ಪ್ರವೇಶಿಸಲು 18 ಮೆಟ್ಟಿಲು ಹತ್ತಬೇಕು. ಈ ದೇವಸ್ಥಾನದ ಕೀರ್ತಿ ದೂರ-ದೂರದವರೆಗೂ ಹರಡಿದೆ. ಕೇರಳದ ಮಲಬಾರ್ ಪ್ರದೇಶದಲ್ಲಿ ಅಥವಾ ತುಳುನಾಡಿನಲ್ಲಿ ಎಲ್ಲಿ ವಿಷ್ಣುಮೂರ್ತಿ ಭೂತಕೋಲ ನಡೆದರೂ, ಆ ಭೂತ ಮಲಯಾಳಂನಲ್ಲಿ 'ಒರಂಗಳತ್ತೆ ಶಾಸ್ತಾವಿಂಡೆ ಮಂತ್ರವಾದಿ' (ಒರಂಗಳ/ಉಬರಂಗಳ ಶಾಸ್ತಾ ದೇವರ ಮಂತ್ರವಾದಿ) ಎಂದು ಕರೆ ಕೊಡುತ್ತದೆ. 'ಪಾಟು' ಕೇರಳದ ಕೆಲವೇ ಕೆಲವು ದೇವಸ್ಥಾನಗಳಲ್ಲಿ ಮಾತ್ರ ಶ್ರೀ ಶಾಸ್ತಾರನಿಗಾಗಿ ಆಚರಿಸಲ್ಪಡುವ ವಿಶಿಷ್ಟ ಉತ್ಸವ. ಹಿತ್ತಾಳೆ ಕವಚದ 18 ಮೆಟ್ಟಿಲುಗಳ ನಿರ್ಮಾಣದೊಂದಿಗೆ ಇಂದು ಲೋಕಾರ್ಪಣೆಗೆ ಸರ್ವ ಸನ್ನದ್ಧಗೊಂಡು ನಿಂತಿದೆ.

:: ಉದ್ಘಾಟನೆ ಮತ್ತು ಆಶೀರ್ವಚನ ::

ದಕ್ಷಿಣಾಮ್ನಾಯ ಶೃಂಗೇರಿ ಶ್ರೀ ಶಾರದಾ ಪೀಠಾಧೀಶರಾದ ಜಗದ್ಗುರು ಶಂಕರಾಚಾರ್ಯ ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳ ಕರಕಮಲಸಂಜಾತರಾದ ಜಗದ್ಗುರು ಶಂಕರಾಚಾರ್ಯ ಶ್ರೀ ಶ್ರೀ ವಿಧುಶೇಖರಭಾರತೀ ಮಹಾಸ್ವಾಮಿಗಳಿಂದ ಹಾಗೂ ಜಗದ್ಗುರು ಶ್ರೀ ಶಂಕರಾಚಾರ್ಯ ಸಂಸ್ಥಾನ ಎಡನೀರು ಮಠಾಧೀಶರಾದ ಶ್ರೀ ಶ್ರೀ ಸಚ್ಚಿದಾನಂದ ಭಾರತಿ ಶ್ರೀಪಾದಂಗಳವರಿಂದ

:: ಘನ ಉಪಸ್ಥಿತಿ ::

ಬ್ರಹ್ಮಶ್ರೀ ದೇಲಂಪಾಡಿ ಗಣೇಶ ತಂತ್ರಿ (ಶ್ರೀ ಕ್ಷೇತ್ರದ ತಂತ್ರಿಗಳು) ಬ್ರಹ್ಮಶ್ರೀ ಕುಂಟಾರು ರವೀಶ ತಂತ್ರಿ (ಶ್ರೀ ಕ್ಷೇತ್ರದ ಗೌರವ ಸಲಹೆಗಾರರು) ಶ್ರೀ ನಾರಾಯಣ ವರ್ಮ ಪಂದಳಂ ಕೊಟ್ಟಾರಂ, ಶಬರಿಮಲೆ, ಶ್ರೀ ಕೆ. ಸಿ. ನಾಗೇಂದ್ರ ಭಾರದ್ವಾಜ್, ಸುರತ್ಕಲ್ (ಶ್ರೀ ಕ್ಷೇತ್ರದ ದೈವಜ್ಞರು) ಶ್ರೀ ರಾಮಗುರು ಸ್ವಾಮಿ ಉದಯಗಿರಿ (ಹಿರಿಯ ಗುರು ಸ್ವಾಮಿಗಳು) ಶ್ರೀಮತಿ ತಾಳಿಪಾಡಿ ಜಾಹ್ನವಿ ಶಾಸ್ತ್ರೀ, ಬೆಂಗಳೂರು (ದಾನಿಗಳು) ಜಗದೀಶ್ ಎಸ್. (ತಾಂತ್ರಿಕ ನಿರ್ದೇಶಕರು, ಹೆಸ್ಕಾಂ, ಧಾರವಾಡ) ಡಾ|| ಕಿಶೋರ್ ಕುಮಾರ್ ಕುಣಿಕುಳ್ಳಾಯ (ಶ್ರೀ ಕ್ಷೇತ್ರದ ಆಡಳಿತ ಮೊಕ್ತೇಸರರು)

ಕಾರ್ಯಕ್ರಮಗಳು

ಸಂಜೆ 5:00ಕ್ಕೆ : ಧಾರ್ಮಿಕ ಸಭೆ

ಸಂಜೆ 6:30ಕ್ಕೆ : 18 ಮೆಟ್ಟಿಲುಗಳ ದ್ವಾರ ಪೂಜೆ ಹಾಗೂ ಲೋಕಾರ್ಪಣೆ

ರಾತ್ರಿ 8:00ಕ್ಕೆ : ಶ್ರೀ ದೇವರ ಭವ್ಯ ಮಹೋತ್ಸವ ಹಾಗೂ ಭೋಜನ ಪ್ರಸಾದ

ಸಂಜೆ 5.30ಕ್ಕೆ: ಕಲಾ ಮಂಡಳಿ ರತೀಶ್ ತ್ರಿಶೂರ್ ಇವರ ಬಳಗದವರಿಂದ

101 ಚೆಂಡೆ ವಾದ್ಯಗಳೊಂದಿಗೆ ಚೆಂಡೆ ಮೇಳ

ಸರ್ವರಿಗೂ ಆದರದ ಸ್ವಾಗತ

• ಸಹಕಾರ : ರಾಜೇಶ್ ಮಾಸ್ಟರ್ ಅಗಲ್ಪಾಡಿ

ಶ್ರೀ ಕ್ಷೇತ್ರದಲ್ಲಿ ಹಿತ್ತಾಳೆ ಕವಚದ 18 ಮೆಟ್ಟಿಲುಗಳ ಲೋಕಾರ್ಪಣೆ ಕಾರ್ಯಕ್ರಮ ಹಾಗೂ ಶ್ರೀ ದೇವರ ಭವ್ಯ ಮಹೋತ್ಸವಕ್ಕೆ ಶುಭ ಕೋರುವ



ಶ್ರೀ ಕಿಶೋರ್ ಕುಮಾರ್ ಕುಣಿಕುಳ್ಳಾಯ
ಆಡಳಿತ ಮೊಕ್ತೇಸರರು, ಶ್ರೀ ಕ್ಷೇತ್ರ, ಉಬ್ರಂಗಳ
ಮತ್ತು ಕುಣಿಕುಳ್ಳಾಯ ಕುಟುಂಬಸ್ಥರು ಉಬ್ರಂಗಳ



ಹರಿನಾರಾಯಣ ಮಾಸ್ಟರ್, ಶಿರಂತಡ್ಕ
ಅಧ್ಯಕ್ಷರು, ಮಹೋತ್ಸವ ಸಮಿತಿ, ಉಬ್ರಂಗಳ



ಮಧುಸೂದನ ಆಯರ್
ಉಪಾಧ್ಯಕ್ಷರು
ಮಹೋತ್ಸವ ಸಮಿತಿ, ಉಬ್ರಂಗಳ




ಡಾ. ಯು. ಬಿ. ಕುಣಿಕುಳ್ಳಾಯ ಉಬ್ರಂಗಳ ಮತ್ತು ಡಾ. ಕೃಷ್ಣ ಕುಮಾರಿ ಯು. ಉಬ್ರಂಗಳ
ಮತ್ತು ಕುಟುಂಬಸ್ಥರು



SURESH
Bhagavathi Nagar
Uliyathadka



ಶಿವಪ್ರಸಾದ ಕುಣಿಕುಳ್ಳಾಯ, ಗಾಯತ್ರಿ, ಶಿವಪ್ರಸಾದ, ಅಮೃತ್ ಕುಣಿಕುಳ್ಳಾಯ ಉಬ್ರಂಗಳ



ಶ್ರೀ ರಾಜೇಶ್ ಮಾಸ್ಟರ್ ಅಗಲ್ಪಾಡಿ
ಅಧ್ಯಕ್ಷರು, ಪ್ರಚಾರ ಸಮಿತಿ,
ಮಹೋತ್ಸವ ಸಮಿತಿ, ಶ್ರೀ ಕ್ಷೇತ್ರ ಉಬ್ರಂಗಳ



ಯಶೋಧಾ
ಅಧ್ಯಕ್ಷರು
ಕುಂಬ್ಡಾಜೆ ಗ್ರಾಮ ಪಂಚಾಯತ್



ಶ್ರೀ ರವೀಂದ್ರ ರೈ ಗೋಸಾಡ
ಉಪಾಧ್ಯಕ್ಷರು,
ಕುಂಬ್ಡಾಜೆ ಗ್ರಾಮ ಪಂಚಾಯತ್



ಶ್ರೀ ರಾಘವೇಂದ್ರ ಚಡಗ ಮತ್ತು ಫ್ಯಾಮಿಲಿ, ಗೋಸಾಡ



ಶ್ರೀ ರಾಜೇಶ್ ಮಾಸ್ಟರ್ ಉಬ್ರಂಗಳ



ಉದಯಕುಮಾರ್, ಕಲ್ಲಕ್ಕಟ್ಟ
ಕಾರ್ಯದರ್ಶಿ, ಮಹೋತ್ಸವ ಸಮಿತಿ, ಉಬ್ರಂಗಳ